ಪ್ರಭಸಿಮ್ರನ್ ಮಿಂಚು

ಭಾರತ ಎ ತಂಡದ ಪ್ರಭಸಿಮ್ರನ್ ಸಿಂಗ್ (84;69ಎ) ಅವರು ತ್ರಿಕೋನ ಏಕದಿನ ಸರಣಿಯ ಪಂದ್ಯದಲ್ಲಿ ಅಫ್ಗಾನಿಸ್ತಾನ ಎ ತಂಡದ ವಿರುದ್ಧ ಅಮೋಘ ಆಟವಾಡಿದರು

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 73,832 | ನಿಫ್ಟಿ 23,161 | $/₹ 95.85 | ಚಿನ್ನ (Std. 10g) ₹1.50 ಲಕ್ಷ (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,48,200 (ಬೆಂಗಳೂರು)

ಕುಟುಂಬಕ್ಕಾಗಿ ಶ್ರಮಿಸುವ ಮಹಿಳೆಯರು ರಾಷ್ಟ್ರ ನಿರ್ಮಾತೃಗಳು

ಗೃಹಿಣಿ ಸಾವು ತಿಂಗಳಿಗೆ ₹30,000 ಪರಿಹಾರ ನೀಡಿ 'ಸುಪ್ರೀಂ' ಆದೇಶ

ನವದೆಹಲಿ (ಪಿಟಿಐ): ಮಹಿಳೆಯರ ಮನೆಕೆಲಸ–ಆರೈಕೆ ಸೇವೆಗಳ ಮೌಲ್ಯವನ್ನು ಮಾಸಿಕವಾಗಿ ಕನಿಷ್ಠ ₹30,000 ಎಂದು ಪರಿಗಣಿಸಬೇಕೆಂದು ಸುಪ್ರೀಂ ಕೋರ್ಟ್ ಗುರುವಾರ ಮಾನದಂಡ ರೂಪಿಸಿದೆ.

ಮನೆ ಮತ್ತು ಕುಟುಂಬಕ್ಕಾಗಿ ಶ್ರಮಿಸುವ ಮಹಿಳೆಯರನ್ನು ಬರೀ 'ಗೃಹಿಣಿಯರು' ಎನ್ನದೇ 'ರಾಷ್ಟ್ರ ನಿರ್ಮಾತೃಗಳು' ಎಂದು ಗುರುತಿಸಬೇಕು ಎಂದು ನ್ಯಾಯಮೂರ್ತಿಗಳಾದ ಸಂಜಯ್ ಕರೋಲ್ ಮತ್ತು ಎನ್.ಕೆ.ಸಿಂಗ್ ಅವರ ಪೀಠ ಅಭಿಪ್ರಾಯಪಟ್ಟಿದೆ.

ವಾಹನ ಅಪಘಾತವೊಂದರಲ್ಲಿ ಪತ್ನಿಯನ್ನು ಕಳೆದುಕೊಂಡ ವ್ಯಕ್ತಿಯೊಬ್ಬರು ಹೆಚ್ಚುವರಿ ಪರಿಹಾರ ಕೋರಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ನ್ಯಾಯಪೀಠ ನಡೆಸಿತು. 'ಮನುಷ್ಯನ ವ್ಯಕ್ತಿಗತ ಬೆಳವಣಿಗೆ ಮತ್ತು ರಾಷ್ಟ್ರದ ಬೆಳವಣಿಗೆ ಎರಡಕ್ಕೂ ಕೊಡುಗೆ ನೀಡುವ ಮೂಲಕ ಗೃಹಿಣಿಯರು ರಾಷ್ಟ್ರ ನಿರ್ಮಾತೃಗಳಾಗಿರುತ್ತಾರೆ. ಹೀಗಾಗಿ ಗೃಹಿಣಿಯರ ಆಕಸ್ಮಿಕ ಸಾವಿಗೆ ಪರಿಹಾರ ನಿರ್ಧರಿಸುವ ಸಂದರ್ಭದಲ್ಲಿ ಮನೆಯ ಆರೈಕೆ ಕಾರ್ಯದ ನಷ್ಟವನ್ನು ತಿಂಗಳಿಗೆ ಕನಿಷ್ಠ ₹30 ಸಾವಿರ ಎಂದು ಪರಿಗಣಿಸಬೇಕೆಂದು ನಾವು ಮಾನದಂಡ ರೂಪಿಸುತ್ತಿದ್ದೇವೆ' ಎಂದು ಪೀಠ ಹೇಳಿದೆ.

'ಮನೆಯ ಕಾರ್ಯವು ಗೃಹಿಣಿಯನ್ನೇ ಅವಲಂಬಿಸಿರುವಾಗ, ಕುಟುಂಬದಲ್ಲಿ ಸಂಪಾದನೆ ಮಾಡುವ ಸದಸ್ಯರ ಮೇಲೆ ಅವಲಂಬಿತಳಾದವಳು ಎಂದು ಆಕೆಯ ಕುರಿತು ಹೇಳುವುದೇ ವಿಪರ್ಯಾಸ. ಕುಟುಂಬದಲ್ಲಿ ಸಂಪಾದಿಸುವ ವ್ಯಕ್ತಿಗಳೆಲ್ಲರೂ ಎಲ್ಲದಕ್ಕೂ ಗೃಹಿಣಿಯ ಮೇಲೆ ಅವಲಂಬಿತರಾಗಿರುತ್ತಾರೆ. ಆದರೂ ಆಕೆಯ ಸೇವೆಗೆ ಸಿಗಬೇಕಾದ ಮನ್ನಣೆ ಸಿಗುತ್ತಿಲ್ಲ' ಎಂದೂ ಪೀಠ ಬೇಸರ ವ್ಯಕ್ತಪಡಿಸಿದೆ.

'ಮುಂದಿನ ದಿನಗಳಲ್ಲಾದರೂ 'ಗೃಹಿಣಿ' ಎಂಬ ಪದದ ಬದಲಿಗೆ 'ರಾಷ್ಟ್ರ ನಿರ್ಮಾತೃ' ಎಂಬ ಪದದಿಂದ ಆಕೆಯನ್ನು ಗುರುತಿಸಬೇಕು ಎಂಬುದು ನಮ್ಮ ನಂಬಿಕೆ' ಎಂದೂ ನ್ಯಾಯಪೀಠ ತಿಳಿಸಿದೆ. ಅಪಘಾತ ಪ್ರಕರಣದಲ್ಲಿ ಪರಿಹಾರ ನೀಡುವಲ್ಲಿ ಆಗಿರುವ ವಿಳಂಬದ ಬಗ್ಗೆಯೂ ಸುಪ್ರೀಂ ಕೋರ್ಟ್ ಕಳವಳ ವ್ಯಕ್ತಪಡಿಸಿದ್ದು, ಇಂಥ ಪ್ರಕರಣ ವರ್ಷದೊಳಗೇ ಇತ್ಯರ್ಥವಾಗಬೇಕು ಎಂದಿದೆ.

ಏನಿದು ಪ್ರಕರಣ?: ಪಂಜಾಬ್‌ನ ವ್ಯಕ್ತಿಯೊಬ್ಬರು 2001ರ ನವೆಂಬರ್ 25ರಂದು ನಡೆದ ಅಪಘಾತದಲ್ಲಿ ತಮ್ಮ ಪತ್ನಿಯನ್ನು ಕಳೆದುಕೊಂಡರು. ದಂಪತಿಗೆ ಮೂವರು ಮಕ್ಕಳಿದ್ದು, ತಮ್ಮ ಪತ್ನಿ ಸಾವಿಗೆ ಪರಿಹಾರ ಕೋರಿ ಪತಿ ಮೋಟಾರು ಅಪಘಾತ ಪರಿಹಾರ (ಕ್ಲೇಮ್) ನ್ಯಾಯಮಂಡಳಿಯ ಮೆಟ್ಟಿಲೇರಿದ್ದರು.

ನ್ಯಾಯಮಂಡಳಿಯು ಕುಟುಂಬಕ್ಕೆ 2.42 ಲಕ್ಷ ಪರಿಹಾರ ನೀಡಿತ್ತು. ಇದರಿಂದ ನೊಂದ ಪತಿ, ಹೆಚ್ಚಿನ ಪರಿಹಾರ ಕೋರಿ ಹೈಕೋರ್ಟ್ ಮೊರೆಹೋಗಿದ್ದರು. ಶೇ 7.5ರ ಬಡ್ಡಿದರದಲ್ಲಿ ಒಟ್ಟು ₹8.43 ಲಕ್ಷ ಪರಿಹಾರಕ್ಕೆ ಹೈಕೋರ್ಟ್ ಆದೇಶಿಸಿತ್ತು. ಆದಾಗ್ಯೂ ಮತ್ತಷ್ಟು ಹೆಚ್ಚಿನ ಪರಿಹಾರ ಕೋರಿ ಮಹಿಳೆಯ ಪತಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು.

ರಾಜ್ಯಸಭೆ: ನಾಲ್ವರೂ ಅವಿರೋಧ ಆಯ್ಕೆ

ಬೆಂಗಳೂರು: ರಾಜ್ಯಸಭೆಯ ದ್ವೈವಾರ್ಷಿಕ ಚುನಾವಣೆಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಕರ್ನಾಟಕ ವಿಧಾನಸಭೆಯಿಂದ ಪುನರಾಯ್ಕೆ ಆಗಿದ್ದಾರೆ.

ದೆಹಲಿಯವರಾದ ಎಐಸಿಸಿ ವಕ್ತಾರ ಪವನ್ ಖೇರ ಹಾಗೂ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಮನ್ಸೂರ್ ಅಲಿ ಖಾನ್ ಕಾಂಗ್ರೆಸ್‌ನಿಂದ ಆಯ್ಕೆಯಾದವರು. ಮತ್ತೊಂದು ಸ್ಥಾನಕ್ಕೆ ಬಿಜೆಪಿಯ ಪ್ರೊ. ಎಂ. ನಾಗರಾಜ್ ಆಯ್ಕೆಯಾಗಿದ್ದಾರೆ.

ಯಾರೂ ನಾಮಪತ್ರ ಹಿಂಪಡೆಯದ ಕಾರಣಕ್ಕೆ ನಾಲ್ವರೂ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಎಂ.ಕೆ.ವಿಶಾಲಾಕ್ಷಿ ಘೋಷಿಸಿದರು. ಪವನ್ ಖೇರ ಹೊರತುಪಡಿಸಿ, ಉಳಿದ ಮೂವರು ಕರ್ನಾಟಕದವರು.

ಚಿನಕುರುಳಿ ಪ್ರಕಾಶ್ ಶೆಟ್ಟಿ

ಗೃಹಲಕ್ಷ್ಮಿಗೆ ಸತ್ತವರ ನೆರಳು

1.08 ಲಕ್ಷ ಮೃತ ಫಲಾನುಭವಿಗಳ ಖಾತೆಗೆ ಹಣ: ಅನರ್ಹರಿಗೆ ₹65 ಕೋಟಿ ಪಾವತಿ ಶಂಕೆ • ವಸೂಲಿಗೆ ಮುಂದಾದ ಇಲಾಖೆ

• ಜಯಸಿಂಹ ಆರ್.

ಬೆಂಗಳೂರು: ಪ್ರತಿಮನೆಯ ಯಜಮಾನಿಗೂ ತಿಂಗಳಿಗೆ ₹2 ಸಾವಿರ ನೀಡುವ 'ಗೃಹಲಕ್ಷ್ಮಿ' ಯೋಜನೆಯ ಪರಿಷ್ಕರಣೆಗೆ ಮುಂದಾಗಿರುವ ರಾಜ್ಯ ಸರ್ಕಾರ 1.08 ಲಕ್ಷ ಮೃತ ಫಲಾನುಭವಿಗಳ ಖಾತೆಗೆ ಹಣ ಜಮೆಯಾಗಿರುವುದನ್ನು ಪತ್ತೆ ಮಾಡಿದೆ.

ಅರ್ಹ ಫಲಾನುಭವಿಗಳನ್ನು ಗುರುತಿಸಲು ಮುಂದಾದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮೃತರ ಹೆಸರಿನಲ್ಲಿ ಹಣ ಪಾವತಿಯಾಗುತ್ತಿರುವುದನ್ನು ಪತ್ತೆ ಮಾಡಿದೆ. ಈ ಖಾತೆಗಳಿಗೆ ಜಮೆಯಾಗಿರುವ ಹಣವನ್ನು ವಸೂಲಿ ಮಾಡಲೂ ಕ್ರಮ ತೆಗೆದುಕೊಂಡಿದೆ.

'ಅನರ್ಹ ಫಲಾನುಭವಿಗಳು ಗೃಹಲಕ್ಷ್ಮಿ ಯೋಜನೆಯ ಹಣ ಪಡೆದುಕೊಳ್ಳುತ್ತಿದ್ದು, ಇದರಿಂದ ಸರ್ಕಾರದ ₹150 ಕೋಟಿಗೂ ಹೆಚ್ಚು ಹಣ ದುರುಪಯೋಗವಾಗಿದೆ. ಹೀಗಾಗಿ ಯೋಜನೆಯ ಫಲಾನುಭವಿಗಳ ಪಟ್ಟಿಯ ಪರಿಷ್ಕರಣೆ ಅನಿವಾರ್ಯ' ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು, ತಾವು ಉಪ ಮುಖ್ಯಮಂತ್ರಿ ಆಗಿದ್ದಾಗ ಹೇಳಿದ್ದರು.

ಸರ್ಕಾರವು ಈ ಬಗ್ಗೆ ಅಧಿಕೃತ ಪ್ರಕಟಣೆ ನೀಡಿಲ್ಲದೇ ಇದ್ದರೂ ಇಲಾಖಾ ಮಟ್ಟದಲ್ಲಿ ಅನರ್ಹ ಫಲಾನುಭವಿಗಳನ್ನು ಗುರುತಿಸಲು ಆದೇಶಿಸಿತ್ತು. ಆದೇಶದ ಪ್ರತಿ ಮತ್ತು ನಂತರದ ಇಲಾಖಾ ಟಿಪ್ಪಣಿ 'ಪ್ರಜಾವಾಣಿ'ಗೆ ಲಭ್ಯವಾಗಿದೆ.

ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಮೇ 5ರಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಿಲ್ಲಾ ಉಪನಿರ್ದೇಶಕರ ಸಭೆ ನಡೆಸಿ, ಮೃತ ಫಲಾನುಭವಿಗಳ ಮಾಹಿತಿ ಸಂಗ್ರಹಿಸುವಂತೆ ಸೂಚಿಸಿದ್ದರು. ಅದರಂತೆ ಅಂಗನವಾಡಿ ಕಾರ್ಯಕರ್ತೆಯರ ಮೂಲಕ, ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳ ಮನೆ–ಮನೆಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಲಾಗಿತ್ತು.

4B

ಅಂಕಿ ಅಂಶಗಳು

- **1.30 ಕೋಟಿ** ಗೃಹಲಕ್ಷ್ಮಿ ಯೋಜನೆಗೆ ನೋಂದಣಿ ಮಾಡಿಕೊಂಡವರು
- **₹72,000 ಕೋಟಿ** ಯೋಜನೆಯಡಿ ಫಲಾನುಭವಿಗಳಿಗೆ ಈವರೆಗೆ ಜಮೆಯಾಗಿರುವ ಹಣ
- **2.88 ಲಕ್ಷ** ಮೃತ ಫಲಾನುಭವಿಗಳ ಸಂಖ್ಯೆ

ಅನರ್ಹರ ಪತ್ತೆಗೆ ಕ್ಷಿಪ್ರ ಕಾರ್ಯಾಚರಣೆ

ಯೋಜನೆ ಅನುಷ್ಠಾನದಲ್ಲಿ ಭಾರಿ ಅಕ್ರಮ ನಡೆದಿರುವುದನ್ನೂ ಇಲಾಖೆಯು ಗುರುತಿಸಿದೆ. ಒಬ್ಬರೇ ಫಲಾನುಭವಿಯು ಐದಾರು ಬ್ಯಾಂಕ್ ಖಾತೆಗಳನ್ನು ಹೊಂದಿದ್ದು, ಆ ಎಲ್ಲ ಖಾತೆಗಳಿಗೂ ಗೃಹಲಕ್ಷ್ಮಿ ಹಣ ಜಮೆಯಾಗಿರುವುದು ಪತ್ತೆಯಾಗಿದೆ. ಈ ಬಗ್ಗೆ ತಾಲ್ಲೂಕುವಾರು ಮಾಹಿತಿ ಸಂಗ್ರಹಿಸಲು ಇಲಾಖೆ ಸೂಚಿಸಿದೆ.

ಜತೆಗೆ ಏಳು–ಎಂಟು ಫಲಾನುಭವಿಗಳ ಬ್ಯಾಂಕ್ ಖಾತೆ ಒಂದೇ ಇದ್ದು, ಅಷ್ಟೂ ಫಲಾನುಭವಿಗಳ ಹಣ ಒಂದೇ ಖಾತೆಗೆ ಜಮೆಯಾಗಿದೆ. ಬೆಂಗಳೂರು ನಗರ ಜಿಲ್ಲೆ ಒಂದರಲ್ಲೇ 892 ಖಾತೆಗಳನ್ನು ಈವರೆಗೆ ಗುರುತಿಸಲಾಗಿದೆ ಎಂದು ಗೊತ್ತಾಗಿದೆ. ಜತೆಗೆ 1.45 ಲಕ್ಷದಷ್ಟು ಫಲಾನುಭವಿಗಳು ಆದಾಯ ತೆರಿಗೆ, ಜಿಎಸ್‌ಟಿ ಪಾವತಿದಾರರಾಗಿದ್ದಾರೆ. ಅವರನ್ನು ಯೋಜನೆಯಿಂದ ಕೈಬಿಡಬೇಕೇ ಅಥವಾ ಇಲ್ಲವೇ ಎಂಬುದು ಇನ್ನೂ ನಿರ್ಧಾರವಾಗಿಲ್ಲ ಎಂದು ಇಲಾಖೆಯ ಮೂಲಗಳು ತಿಳಿಸಿವೆ.

ಇಂತಹ ಖಾತೆ ಮತ್ತು ಫಲಾನುಭವಿಗಳನ್ನು ಗುರುತಿಸಲು 'ಕುಟುಂಬ್' ಪೋರ್ಟಲ್, ಆಧಾರ್ ದತ್ತಾಂಶಗಳನ್ನು ಪರಿಶೀಲಿಸಲಾಗುತ್ತಿದೆ. ಈ ಕೆಲಸ ಸಮರೋಪಾದಿಯಲ್ಲಿ ನಡೆಯುತ್ತಿದ್ದು, ಶೀಘ್ರವೇ ಇಂತಹ ಫಲಾನುಭವಿಗಳ ಸಂಪೂರ್ಣ ಮಾಹಿತಿ ಲಭ್ಯವಾಗಲಿದೆ. ಇಂತಹ ಫಲಾನುಭವಿಗಳ ವಿರುದ್ಧ ಯಾವ ಕ್ರಮ ತೆಗೆದುಕೊಳ್ಳಬೇಕು ಎಂಬುದರ ಬಗ್ಗೆ ಆನಂತರವಷ್ಟೇ ನಿರ್ಧಾರ ತೆಗೆದುಕೊಳ್ಳಲಾಗುತ್ತದೆ ಎಂದು ಹೇಳಿವೆ.

'ಅರ್ಹರಿಗೆ ಭಯ ಬೇಡ'

ಗೃಹಲಕ್ಷ್ಮಿ ಯೋಜನೆಯ ದುರುಪಯೋಗ ತಡೆದು, ಅರ್ಹರಿಗೆ ಮಾತ್ರ ತಲುಪಿಸಲು ಯೋಜನೆ ಪರಿಷ್ಕರಣೆ ನಡೆಯುತ್ತಿದೆಯೇ ಹೊರತು, ಯೋಜನೆಯನ್ನು ನಿಲ್ಲಿಸುವ ಯಾವುದೇ ಉದ್ದೇಶ ಸರ್ಕಾರಕ್ಕಿಲ್ಲ. 1.95 ಲಕ್ಷ ಫಲಾನುಭವಿಗಳು ಮೃತಪಟ್ಟಿರುವ ಮಾಹಿತಿ ಇದೆ. ಅವರನ್ನು ಫಲಾನುಭವಿಗಳ ಪಟ್ಟಿಯಿಂದ ಕೈಬಿಡಬೇಕಿದೆ. ಇದಕ್ಕಾಗಿ, ಜೀವಂತವಾಗಿರುವ ಫಲಾನುಭವಿಗಳು ಒಂದು ಬಾರಿ ಬಯೋಮೆಟ್ರಿಕ್ ದತ್ತಾಂಶ ನೀಡುವ ನೀಡುವ ತಮ್ಮ ಇರುವಿಕೆಯನ್ನು ಖಾತರಿಪಡಿಸಬೇಕಿದೆ. ಯಾವುದೇ ಕಾರಣಕ್ಕೂ ಒಬ್ಬ ಅರ್ಹ ಫಲಾನುಭವಿಯನ್ನೂ ಯೋಜನೆಯಿಂದ ಕೈಬಿಡುವುದಿಲ್ಲ.

ದಿನೇಶ್ ಗೂಳಿಗೌಡ, ಉಪಾಧ್ಯಕ್ಷ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ

ಹಡಗಿನ ಮೇಲೆ ಅಮೆರಿಕ ದಾಳಿ ಮೂವರು ಭಾರತೀಯರ ಸಾವು

ದುಬೈ (ಪಿಟಿಐ/ಎಪಿ): ಒಮಾನ್ ಕರಾವಳಿಯಲ್ಲಿ ಭಾರತೀಯ ಸಿಬ್ಬಂದಿ ಇರುವ ತೈಲ ಹಡಗುಗಳ ಮೇಲೆ ಅಮೆರಿಕದ ದಾಳಿ ಮುಂದುವರಿದಿದ್ದು, ಗುರುವಾರವೂ ಭಾರತೀಯರಿದ್ದ ಗಿನಿ–ಬಿಸ್ಸಾವ್ ದೇಶದ ಧ್ವಜ ಹೊಂದಿದ್ದ 'ಜಲವೀರ್' ಎಂಬ ಹಡಗಿನ ಮೇಲೆ ಅಮೆರಿಕ ದಾಳಿ ನಡೆಸಿದೆ.

ಭಾರತೀಯ ಸಿಬ್ಬಂದಿ ಇರುವ ಹಡಗುಗಳ ಮೇಲೆ ಇದುವರೆಗೆ ನಡೆದ ದಾಳಿಗಳಲ್ಲಿ ಮೂವರು ಮೃತಪಟ್ಟಿದ್ದಾರೆ.

'ಜಲವೀರ್' ಮೇಲೆ ದಾಳಿ ನಡೆದಿರುವುದನ್ನು ಮಸ್ಕತ್ ನಲ್ಲಿರುವ ಭಾರತೀಯ ರಾಯಭಾರ ಕಚೇರಿ ದೃಢಪಡಿಸಿದ್ದು, ಹಡಗಿನಲ್ಲಿದ್ದ 20 ಭಾರತೀಯರನ್ನು ಒಮಾನ್ ನೌಕಾಪಡೆಯ ಸಹಾಯದೊಂದಿಗೆ ರಕ್ಷಿಸಲಾಗಿದೆ ಎಂದು ಹೇಳಿದೆ. ಒಂದೇ ವಾರದಲ್ಲಿ ಭಾರತೀಯ ಸಿಬ್ಬಂದಿ ಇದ್ದ ಮೂರು ಹಡಗುಗಳ ಮೇಲೆ, ಒಮಾನ್ ಕರಾವಳಿಯಲ್ಲಿ ಅಮೆರಿಕದ ಸೇನೆ ದಾಳಿ ನಡೆಸಿರುವುದು ಉದ್ವಿಗ್ನತೆ ಹೆಚ್ಚಿಸಿದೆ.

ಭಾರತದಲ್ಲಿನ ಅಮೆರಿಕದ ರಾಯಭಾರಿಯನ್ನು ಕರೆಸಿಕೊಂಡು ವಿದೇಶಾಂಗ ಇಲಾಖೆ ಈಗಾಗಲೇ ಪ್ರತಿಭಟನೆ ದಾಖಲಿಸಿದೆ. ಭಾರತದ ಸಿಬ್ಬಂದಿ ಇದ್ದ ಹಡಗಿನ ಮೇಲೆ ನಡೆದ ದಾಳಿಗೆ ಸಂಬಂಧಿಸಿದಂತೆ ಅಮೆರಿಕ ಇದುವರೆಗೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. 'ಇರಾನ್ ಬಂದರಿನ ಮೇಲೆ ಹೇರಿರುವ ದಿಗ್ಬಂಧನ ಉಲ್ಲಂಘಿಸಿ, ಅಲ್ಲಿಂದ ತೈಲ ಸಾಗಿಸುವುದನ್ನು ತಡೆಯಲು ಹಡಗುಗಳ ಮೇಲೆ ದಾಳಿ ನಡೆಸಲಾಗಿದೆ' ಎಂದು ಅಮೆರಿಕದ ಸೇನೆ ಸಮರ್ಥಿಸಿಕೊಂಡಿದೆ.

10

ಇರಾನ್ ಮೇಲೆ ದಾಳಿ ಇಲ್ಲ: ಟ್ರಂಪ್

ಇರಾನ್ ಮೇಲೆ ಹೊಸದಾಗಿ ದಾಳಿ ನಡೆಸುವ ನಿರ್ಧಾರವನ್ನು ವಾಪಸ್ ತೆಗೆದುಕೊಂಡಿರುವುದಾಗಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಗುರುವಾರ ಹೇಳಿದ್ದಾರೆ.

'ಅಂತಿಮ ಒಪ್ಪಂದ ಪ್ರಸ್ತಾವವು ಇರಾನ್‌ನ ಉನ್ನತ ನಾಯಕತ್ವದ ಮುಂದಿದ್ದು, ಅವರು ಒಪ್ಪಂದಕ್ಕೆ ಸಮ್ಮತಿ ಸೂಚಿಸಿದ್ದಾರೆ ಎಂಬ ಅಂಶವನ್ನು ಆಧರಿಸಿ ಈ ನಿರ್ಧಾರ ತೆಗೆದುಕೊಂಡಿದ್ದೇವೆ' ಎಂದು ಟ್ರಂಪ್, ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

'ಇರಾನ್ ಮೇಲೆ ಭೀಕರ ದಾಳಿ ನಡೆಸಿ ಅಲ್ಲಿನ ತೈಲ ಸಂಪತ್ತಿನ ಮೇಲೆ ಹಿಡಿತ ಸಾಧಿಸಲಾಗುವುದು' ಎಂದು ಟ್ರಂಪ್ ಬುಧವಾರ ಎಚ್ಚರಿಕೆ ನೀಡಿದ್ದರು.

ಆನಂದ್, ನಾಗಾಭರಣ, ಕೆರೆಮನೆಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಸಂಸ್ಕೃತಿ ಇಲಾಖೆಯು ಸಂಗೀತ ನಾಟಕ ಅಕಾಡೆಮಿ ಫೆಲೋಷಿಪ್ (ಅಕಾಡೆಮಿ ರತ್ನ), 2024 ಮತ್ತು 2025ನೇ ಸಾಲಿನ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ (ಅಕಾಡೆಮಿ ಪುರಸ್ಕಾರ) ಹಾಗೂ 'ಉಸ್ತಾದ್ ಬಿಸ್ಮಿಲ್ಲಾ ಖಾನ್ ಯುವ ಪುರಸ್ಕಾರ'ವನ್ನು ಪ್ರಕಟಿಸಿದೆ.

ರಾಜ್ಯದ ಹಿರಿಯ ಮೃದಂಗ ಕಲಾವಿದ ಎ.ವಿ.ಆನಂದ್ ಸೇರಿದಂತೆ ಏಳು ಜನರಿಗೆ 'ಅಕಾಡೆಮಿ ರತ್ನ' ಪ್ರಶಸ್ತಿ ಸಂದಿದೆ. ಅಲ್ಲದೆ ನಿರ್ದೇಶಕ ಟಿ.ಎಸ್.ನಾಗಾಭರಣ, ಯಕ್ಷಗಾನ ಕಲಾವಿದ ಕೆರೆಮನೆ ಶಿವಾನಂದ ಹೆಗಡೆ ಅವರು 2024ನೇ ಸಾಲಿನ 'ಅಕಾಡೆಮಿ ಪುರಸ್ಕಾರ'ಕ್ಕೆ ಭಾಜನರಾಗಿದ್ದಾರೆ.

'ಉಸ್ತಾದ್ ಬಿಸ್ಮಿಲ್ಲಾ ಖಾನ್ ಯುವ ಪುರಸ್ಕಾರ'ಕ್ಕೆ ಹಿಂದೂಸ್ತಾನಿ ಗಾಯಕಿ ಮಹಾಲಕ್ಷ್ಮಿ ಶೆಣೈ, ಸುಗಮ ಸಂಗೀತಗಾರ್ತಿ ಶಿವಶ್ರೀ ಸ್ಕಂದಪ್ರಸಾದ್ (ಇಬ್ಬರೂ 2024 ಸಾಲಿಗೆ) ಮತ್ತು ಭರತನಾಟ್ಯ ನೃತ್ಯ ಕಲಾವಿದೆ ಶಿಲ್ಪಾ ನಂಜಪ್ಪ (2025ನೇ ಸಾಲಿಗೆ) ಆಯ್ಕೆಯಾಗಿದ್ದಾರೆ.

4

ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ

ಶ್ರೀ ಡಿ.ಕೆ. ಶಿವಕುಮಾರ್
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಕರ್ನಾಟಕದ ಅಭಿವೃದ್ಧಿಗೆ ಹೊಸ ಸೇತು ಸಂಪರ್ಕ

ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ರಸ್ತೆಗಳಿಗೆ ಭವಿಷ್ಯದ ಬಲಿಷ್ಠ ಅಡಿಪಾಯ

ಡಾ. ಜಿ. ಪರಮೇಶ್ವರ
ಸನ್ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಕರುನಾಡಿನ ಪ್ರಗತಿಗೆ ವೇಗ ತುಂಬಲು, ಸುರಕ್ಷಿತ ಮತ್ತು ಸುಗಮ ಸಂಚಾರಕ್ಕಾಗಿ ರಾಜ್ಯಾದ್ಯಂತ ಹೊಸ ಸೇತುವೆಗಳ ನಿರ್ಮಾಣಕ್ಕೆ ಚಾಲನೆ

ಅಭಿವೃದ್ಧಿಯ ದಾರಿಯಲ್ಲಿ ಐತಿಹಾಸಿಕ ಹೆಜ್ಜೆ

- ಉತ್ತಮ ರಸ್ತೆ ಜಾಲವೇ ಅಭಿವೃದ್ಧಿಯ ಹೃದಯ. ಸಮಗ್ರ ರಾಜ್ಯಾಭಿವೃದ್ಧಿಗೆ ಸುಗಮ ಸಂಪರ್ಕ ವ್ಯವಸ್ಥೆ ಅನಿವಾರ್ಯ. ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳಲ್ಲಿ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ವಾಹನ ಸಂಚಾರದ ಹಿನ್ನೆಲೆ, ಜನರಿಗೆ ಸುರಕ್ಷಿತ, ವೇಗವಾದ ಮತ್ತು ವಿಶ್ವಾಸಾರ್ಹ ಸಂಪರ್ಕ ಒದಗಿಸಲು ಸರ್ಕಾರ ದಿಟ್ಟ ನಿರ್ಧಾರ ಕೈಗೊಂಡಿದೆ.
- **27814.45 ಕಿಮೀ ರಾಜ್ಯ ಹೆದ್ದಾರಿಗಳು** ಹಾಗೂ **56165.48 ಕಿಮೀ ಜಿಲ್ಲಾ ಮುಖ್ಯ ರಸ್ತೆಗಳು** ಹೊಂದಿರುವ ವಿಶಾಲ ಜಾಲದಲ್ಲಿ, ರಾಷ್ಟ್ರೀಯ ಹೆದ್ದಾರಿಗಳ ನಂತರ ಅತೀ ಹೆಚ್ಚು ವಾಹನ ಸಂಚಾರ ನಡೆಯುತ್ತಿದೆ.
- ಈ ಅಗತ್ಯತೆಯನ್ನು ಮನಗಂಡು, ಸಾರ್ವಜನಿಕರಿಗೆ ಗುಣಮಟ್ಟದ ಸಂಪರ್ಕ ನೀಡುವ ಮಹತ್ವದ ಯೋಜನೆಗೆ ಚಾಲನೆ ನೀಡಲಾಗಿದೆ.

ಹಳೆಯ ಸೇತುವೆಗಳ ನವೀಕರಣ

ರೂ. 109.79 ಕೋಟಿ ವೆಚ್ಚದಲ್ಲಿ 271 ಸೇತುವೆಗಳ ದುರಸ್ತಿ ಮತ್ತು ಪುನಶ್ಚೇತನ ಕಾರ್ಯ ಪ್ರಗತಿಯಲ್ಲಿದೆ

ಗ್ರಾಮೀಣ ಭಾಗಗಳಿಗೆ ವಿಶೇಷ ಆದ್ಯತೆ

ಮಲೆನಾಡು ಮತ್ತು ಕರಾವಳಿ ಭಾಗಗಳ ಸಂಪರ್ಕ ರಹಿತ ಪ್ರದೇಶಗಳನ್ನು ಮುಖ್ಯ ಪ್ರವಾಹಕ್ಕೆ ತರಲು **"ಕಾಲು ಸಂಕ"** ನಿರ್ಮಾಣ ಕಾರ್ಯ ವೇಗವಾಗಿ ನಡೆಯುತ್ತಿದೆ.

- **622 ಕಾಲುಸಂಕಗಳು – 3 ವರ್ಷಗಳಲ್ಲಿ ಬಹುತೇಕ ಪೂರ್ಣ**
- **ಹೆಚ್ಚುವರಿ 300 ಕಾಲುಸಂಕಗಳಿಗೆ ಅನುಮೋದನೆ**



2025-26ನೇ ಆಯವ್ಯಯದ 1ನೇ ಹಂತದ ಯೋಜನೆಗಳಿಗೆ ₹2000 ಕೋಟಿ ಅನುದಾನ

- **ರಾಜ್ಯವ್ಯಾಪಿ ಮಹತ್ವದ ಸೇತುವೆ ನಿರ್ಮಾಣ ಯೋಜನೆ**
- **237 ಸಣ್ಣ ಸೇತುವೆಗಳು ₹ 660.97 ಕೋಟಿ ಮೊತ್ತ**
- **ನಗರದ 20 ವಿಧಾನಸಭಾ ಕ್ಷೇತ್ರಗಳಿಗೆ ₹ 204 ಕೋಟಿ**

ಸನ್ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಮಾನ್ಯ ಲೋಕೋಪಯೋಗಿ ಸಚಿವರಾದ **ಶ್ರೀ ಸತೀಶ ಜಾರಕಿಹೊಳಿ**

ಕೇಂದ್ರ ವಲಯದಲ್ಲಿ ಕೈಗೊಂಡ ಬೃಹತ್ ಸೇತುವೆಗಳ 1 ನೇ ಹಂತದ ಕಾಮಗಾರಿ ವಿವರ (ರೂ. ಲಕ್ಷಗಳಲ್ಲಿ)

ಕ್ರ. ಸಂ.	ಕಾಮಗಾರಿಗಳ ವಿವರ	ಅಂದಾಜು ಮೊತ್ತ
1	ಮಂಗಳೂರು ಚರ್ವತ್ತೂರು-ಕರಾವಳಿ (ಕೋಟಿಪುರದಿಂದ ಬೋಳಾರವರೆಗೆ) ನೇತ್ರಾವತಿ ನದಿಗೆ ನಿರ್ಮಿಸುತ್ತಿರುವ ಸೇತುವೆಯ ಕಾಮಗಾರಿಗೆ ನಬಾರ್ಡ್ ಯೋಜನೆಯಡಿ ರೂ.200.00 ಕೋಟಿ ಅನುದಾನ ಒದಗಿಸಿದ್ದು , ಕಾಮಗಾರಿ ಪೂರ್ಣಗೊಳಿಸಲು ಬಾಕಿ ಅನುದಾನ ಒದಗಿಸಲಾಗಿದೆ.	5000
2	ಜಗಳೂರು ತಾಲ್ಲೂಕಿನ ಬಿಳಿಚೋಡು ಗ್ರಾಮದಲ್ಲಿ ಸೇತುವೆ ನಿರ್ಮಾಣ ಕಾಮಗಾರಿ	1000
3	ತುಮಕೂರು-ಹೊನ್ನಾವರ ಮಾರ್ಗದಲ್ಲಿ KSRTC ಬಸ್ ನಿಲ್ದಾಣದಿಂದ ವೀರಾಪುರ ತಾಲ್ಲೂಕಿನ ಸೇತುವೆಗಳ ಪುನರ್ ನಿರ್ಮಾಣ (ಭದ್ರಾ ಸೇತು)	4200
4	ಹೊಸದುರ್ಗ ತಾಲ್ಲೂಕು, ಮಾರಿಕಣಿವೆ ಹತ್ತಿರ, ವೇದಾವತಿ ನದಿಗೆ (waste weir of Vanivilas Dam) ಸೇತುವೆ ನಿರ್ಮಾಣ	2500
5	ಮಂಗಳೂರು-ಅತ್ರಾಡಿಯಲ್ಲಿ ಮರವೂರು ಸೇತುವೆ ನಿರ್ಮಾಣ ಕಾಮಗಾರಿ	4000
6	ಮಂಗಳೂರು - ಅತ್ರಾಡಿಯಲ್ಲಿ ಕಟೀಲು ಸೇತುವೆ ನಿರ್ಮಾಣ	3300
7	ಕುಂದಾಪುರ ತಾಲ್ಲೂಕು ತೀರ್ಥಹಳ್ಳಿ-ಕುಂದಾಪುರದಲ್ಲಿ (ಕಂಡೂರು) ಸೇತುವೆ	5500

ಈಶಾನ್ಯ ವಲಯದಲ್ಲಿ ಕೈಗೊಂಡ ಬೃಹತ್ ಸೇತುವೆಗಳ 1 ನೇ ಹಂತದ ಕಾಮಗಾರಿ ವಿವರ (ರೂ. ಲಕ್ಷಗಳಲ್ಲಿ)

ಕ್ರ. ಸಂ.	ಕಾಮಗಾರಿಗಳ ವಿವರ	ಅಂದಾಜು ಮೊತ್ತ
1	ಬಳ್ಳಾರಿಯ ಕಂಪ್ಲಿ ಪಟ್ಟಣ ವ್ಯಾಪ್ತಿಯ ತುಂಗಭದ್ರಾ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣ ಕಾಮಗಾರಿ.	10000
2	ವಿಜಯನಗರ ಜಿಲ್ಲೆ, ಹರಪನಹಳ್ಳಿ ತಾಲ್ಲೂಕಿನ ಚಿಕ್ಕೋಬನಹಳ್ಳಿ-ಯಲ್ಲಾಪುರ-ಟಿ.ಹೊನ್ನಟ್ಟಿಯಲ್ಲಿ (ಹಲುವಾಗಲು ಗ್ರಾಮದ ಹತ್ತಿರ) (ಗರ್ಭಗುಡಿ ಗ್ರಾಮದ ಹತ್ತಿರ) ಸೇತುವೆ ನಿರ್ಮಾಣ	1200
3	ಮಾನವಿ ತಾಲ್ಲೂಕಿನ ಮುನ್ನೂರು ಗ್ರಾಮದ ಹತ್ತಿರದ ನಾಲಾ ಮೇಲೆ ನಿರ್ಮಿಸಿರುವ ಸೇತುವೆ ಕಾಮಗಾರಿ	1100
4	ಭಾಲ್ಕಿ ತಾಲ್ಲೂಕಿನ ಔರಾದ್-ಸದಾಶಿವಘಡ್ ದಲ್ಲಿ(ದಾಡಗಿ) ಇರುವ ಸೇತುವೆ ಕಾಮಗಾರಿ	2000
5	ಪ್ರಿಯದರ್ಶಿನಿ ಜುರಾಲಾ ಯೋಜನೆಯ ಸಹಯೋಗದಲ್ಲಿ ಬೂರದಿಪಾಡ್ ಗ್ರಾಮದ ಹತ್ತಿರ ಕೃಷ್ಣಾ ನದಿಗೆ ಅಡ್ಡಲಾಗಿ ನಾದರಗಡ್ಡೆ ದ್ವೀಪಕ್ಕೆ ಸಂಪರ್ಕ ಕಲ್ಪಿಸುವ ಸೇತುವೆ ನಿರ್ಮಾಣ ಕಾಮಗಾರಿ	2000
6	ಗುದೂರು ತಾಂಡಾ (SH-155) ಇಂದ ಗೌಡಗಾನ್ ಕ್ರಾಸ್, ಚೆನೇಜ್‌ನಲ್ಲಿ, ಅಫಝಲ್ಪುರ ತಾಲೂಕು, ಕೊಗನೂರು ಗ್ರಾಮದ ಸಮೀಪ ಅಮರ್ಜಾ ನದಿಗೆ ಮೇಲೆ ಸೇತುವೆ ನಿರ್ಮಾಣ.	1000

ದಕ್ಷಿಣ ವಲಯದಲ್ಲಿ ಕೈಗೊಂಡ ಬೃಹತ್ ಸೇತುವೆಗಳ 1 ನೇ ಹಂತದ ಕಾಮಗಾರಿ ವಿವರ (ರೂ. ಲಕ್ಷಗಳಲ್ಲಿ)

ಕ್ರ. ಸಂ.	ಕಾಮಗಾರಿಗಳ ವಿವರ	ಅಂದಾಜು ಮೊತ್ತ
1	ಬೇಲೂರು ಪಟ್ಟಣದ ಬೀದಿಗೆ ಯಗಚಿ ಹೊಳೆಗೆ ಅಡ್ಡಲಾಗಿ ಸೇತುವೆಯ ನಿರ್ಮಾಣ	5000
2	ಚಾಮರಾಜನಗರದ ಹನೂರು ತಾಲ್ಲೂಕು ಆಲಂಬಾಡಿ - ಹೊಗೇನಕಲ್ ಫಾಲ್ಸ್ ನಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ಹೊಸ ಸೇತುವೆ ನಿರ್ಮಾಣ	5000
3	ಹೆಚ್.ಡಿ.ಕೋಟೆಯ ಲಕ್ಷ್ಮೀಪುರ ಜಂಕ್ಷನ್-ತಾರಕಾ ಮುಖ್ಯ ರಸ್ತೆಯಲ್ಲಿ ಸೇತುವೆ ನಿರ್ಮಾಣ	1000
4	ಗುಬ್ಬಿ ತಾಲ್ಲೂಕಿನ ತುರುವೇಕೆರೆ ಗಡಿ ಸೇರುವ ರಸ್ತೆ ಮಾರ್ಗ ವೆಂಕಟೇಗೌಡನ ಪಾಳ್ಯ, ಹುರುಳುಗೆರೆ, ಯರಗಹಟ್ಟಿ ರಸ್ತೆಯಲ್ಲಿ ಸೇತುವೆ ನಿರ್ಮಾಣ	1000
5	ಅರಕಲಗೂಡಿನಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ಕೊಣನೂರು ಕಟ್ಟೆಪುರ ಸಂಪರ್ಕಿಸುವ ಸೇತುವೆ ನಿರ್ಮಾಣ	4521

ಉತ್ತರ ವಲಯದಲ್ಲಿ ಕೈಗೊಂಡ ಬೃಹತ್ ಸೇತುವೆಗಳ 1 ನೇ ಹಂತದ ಕಾಮಗಾರಿ ವಿವರ (ರೂ. ಲಕ್ಷಗಳಲ್ಲಿ)

ಕ್ರ. ಸಂ.	ಕಾಮಗಾರಿಗಳ ವಿವರ	ಅಂದಾಜು ಮೊತ್ತ
1	ಕೃಷ್ಣಾ ಕಿತ್ತೂರ-ಖೇಮಲಾಪೂರ (ಕೃಷ್ಣಾ ನದಿಗೆ) ಸೇತುವೆ ನಿರ್ಮಾಣ	7000
2	ಬೆಳಗಾವಿ ನಗರದಲ್ಲಿ ಎಲಿವೇಟೆಡ್ ಕಾರಿಡಾರ್ / ಗ್ರೇಡ್ ಸೆಪರೇಟರ್ ನಿರ್ಮಾಣ	27553
3	ಧಾರವಾಡ ನವಲಗುಂದ ತಾಲೂಕಿನ ಶಲವಡಿ ಯಲ್ಲಿ ಬೆಣ್ಣೆಹಳ್ಳಕ್ಕೆ ಸೇತುವೆ ನಿರ್ಮಾಣ	8000
4	ವಿಜಯಪುರದ ಇಂಡಿ ತಾಲ್ಲೂಕಿನ ಪಡನೂರು ಮತ್ತು ಮಹಾರಾಷ್ಟ್ರದ ಅಂಕಲಗಿ ಮಧ್ಯೆ ಭೀಮಾ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣ	6540
5	ಬೆಳಗಾವಿಯ ಗೋಕಾಕ್ ತಾಲ್ಲೂಕಿನ ಅಂಕಲಗಿ ಗ್ರಾಮದ ಬಳಿ ಬಳ್ಳಾರಿ ನಾಲೆಗೆ ಅಡ್ಡಲಾಗಿ ಸೇತುವೆ ನಿರ್ಮಾಣ	1210
6	ಉ.ಕನ್ನಡದ ಹೊನ್ನಾವರ ತಾಲ್ಲೂಕಿನ ಜಲವಳಕರ್ಕಿ ಇಂಡಗುಂಜಿ ಗ್ರಾಮಗಳ ನಡುವೆ ಶರಾವತಿ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣ	6300
7	ಬಾಗಲಕೋಟೆಯಲ್ಲಿ ಕೃಷ್ಣಾ ನದಿಯ ಮೇಲೆ ನಿರ್ಮಾಣವಾಗುತ್ತಿರುವ ಮಹೇಶ್ವಾಡಗಿ ಸೇತುವೆಗೆ ಸಂಬಂಧಿಸಿದಂತೆ ಆರ್‌ಸಿಸಿ ಬಹುಕೋಶ ಬಾಕ್ಸ್ ಕಲ್ವರ್ಟ್‌ಗಳ ನಿರ್ಮಾಣ ಮತ್ತು ಸೇವಾ ರಸ್ತೆಗಳು/ರ್ಯಾಂಪ್‌ಗಳ ನಿರ್ಮಾಣ.	1000
8	ಬಾಗಲಕೋಟೆಯ ಮುಧೋಳ ತಾಲ್ಲೂಕಿನ ಯರಗಟ್ಟಿ-ಬಬಲೇಶ್ವರದಲ್ಲಿ ಘಟಪ್ರಭಾ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣ	2800
9	ಬೆಳಗಾವಿಯ ಖಾನಾಪೂರದ ನಾಗರಗಾಳಿ-ಕಟಕೋಳದಲ್ಲಿ ಮಲಪ್ರಭಾ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣ	1500
10	ಬಸವನಬಾಗೇವಾಡಿ ಮಸಬಿನಾಳ ಡೋಣೂರ-ನೇಗಿನಾಳದ ಡೋಣಿ ನದಿಗೆ ಸೇತುವೆ ನಿರ್ಮಾಣ	2500
11	ಹಾವೇರಿಯ ಶಿಗ್ಗಾಂವ ತಾಲ್ಲೂಕಿನ ಕುಮಟಾ - ತಡಸ ಹಳ್ಳಕ್ಕೆ ಸೇತುವೆ ನಿರ್ಮಾಣ	1000
12	ಸಿಂಧಗಿ ತಾಲ್ಲೂಕಿನ ನಾಗರಾಣ-ರಾಂಪೂರ ರಸ್ತೆ ವ್ಯಾಯಾ ಹುಣಶ್ಯಾಳ-ಹಿಟ್ನಳ್ಳಿ ಕಡೇವಾಡ-ಚಾಂದಕವಠ ರಸ್ತೆಯಲ್ಲಿ ಸೇತುವೆ ನಿರ್ಮಾಣ	1000

2026-27ನೇ ಆಯವ್ಯಯದ 2ನೇ ಹಂತದಲ್ಲಿ ಮತ್ತೆ ₹2000 ಕೋಟಿಯ ಅನುದಾನ ಘೋಷಣೆ

2026-27ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ ಸಂಖ್ಯೆ 327ರಲ್ಲಿ ಪುನ: ಹೊಸದಾಗಿ ₹2000 ಕೋಟಿ ಮೊತ್ತದ ಸೇತುವೆಗಳನ್ನು ಎರಡು ವರ್ಷಗಳಲ್ಲಿ ನಿರ್ಮಾಣ ಮಾಡಲಾಗುವುದು.

ಈ ಘೋಷಣೆಯನ್ನು ಸಾಕಾರಗೊಳಿಸಲು ಸರ್ಕಾರವು ಬದ್ಧವಾಗಿದ್ದು, ಲೋಕೋಪಯೋಗಿ ಇಲಾಖೆಯ ಮೂಲಕ ರೂ.2000 ಕೋಟಿ ಮೊತ್ತದ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಲಾಗಿದೆ. ಈ ಯೋಜನೆಯನ್ನು ಲೋಕೋಪಯೋಗಿ ಸಚಿವರಾದ ಸತೀಶ ಜಾರಕಿಹೊಳಿ ಅವರ ಮಾರ್ಗದರ್ಶನದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

ಇದಲ್ಲದೆ, ಯಾವ ಕ್ಷೇತ್ರಗಳಿಗೆ ಇದುವರೆಗೆ ಸಮರ್ಪಕ ಅನುದಾನ ಸಿಕ್ಕಿಲ್ಲವೋ, ಆ ಕ್ಷೇತ್ರಗಳ ಮೇಲೂ ವಿಶೇಷ ಗಮನ ಹರಿಸಿ, ಅವುಗಳ ಸಮಗ್ರ ಅಭಿವೃದ್ಧಿಗೆ ಆದ್ಯತೆ ನೀಡಲಾಗುತ್ತದೆ. ಸಮಾನ ಅಭಿವೃದ್ಧಿಯ ದೃಷ್ಟಿಯಿಂದ ಎಲ್ಲಾ ಪ್ರದೇಶಗಳಿಗೂ ಸಮರ್ಪಕ ಸೌಲಭ್ಯಗಳನ್ನು ಒದಗಿಸುವುದು ಸರ್ಕಾರದ ಪ್ರಮುಖ ಉದ್ದೇಶವಾಗಿದೆ.

"ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು" ಪ್ರತಿಯೊಬ್ಬ ಭಾರತೀಯನ ಮೂಲಭೂತ ಕರ್ತವ್ಯ

ಸಂಪರ್ಕವೇ ಸಮೃದ್ಧಿಯ ಸಂಕೇತ - ಸುರಕ್ಷಿತ ಸಂಚಾರ • ವೇಗವಾದ ಸಂಪರ್ಕ • ಸಮಗ್ರ ಅಭಿವೃದ್ಧಿ

ಹವಾಮಾನ ಮುನ್ಸೂಚನೆ: ನಗರದಲ್ಲಿ ಇಂದು ಮೋಡ ಕವಿದ ವಾತಾವರಣ ಇರಲಿದ್ದು, ಸಾಧಾರಣ ಮಳೆಯಾಗಲಿದೆ.

ಪ್ರವೇಶಾತಿ ಆರಂಭ

ಬೆಂಗಳೂರು: ನಗರದ ಡಾ.ಬಿ.ಆರ್.ಅಂಬೇಡ್ಕರ್ ವೀದಿಯಲ್ಲಿರುವ ಸರ್ಕಾರಿ ಕಲಾ ಕಾಲೇಜಿನಲ್ಲಿ 2026–27ನೇ ಸಾಲಿನ ಪ್ರವೇಶಾತಿ ಆರಂಭವಾಗಿದೆ. ಪಿಯು ಪರೀಕ್ಷೆಯಲ್ಲಿ ಉತ್ತೀರ್ಣರಾದವರು ಬಿ.ಎ, ಬಿ.ಕಾಂ, ಬಿಬಿಎ ಮತ್ತು ಬಿಸಿಎ ಪದವಿಗೆ ಪ್ರವೇಶಾತಿ ಪಡೆಯಬಹುದಾಗಿದ್ದು, ಅಂಕಪಟ್ಟಿ, ಜಾತಿ ಪ್ರಮಾಣ ಪತ್ರ, ಆಧಾರ್‌ಕಾರ್ಡ್ ಹಾಗೂ ಇತರ ದಾಖಲಾತಿಗಳೊಂದಿಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ ದೂ.080–22211115 ಸಂಪರ್ಕಿಸಬಹುದು ಎಂದು ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೆಟ್ರೊ: ಕಾರ್ಯನಿರ್ವಹಿಸದ ಎನ್‌ಸಿಎಂಸಿ ಕಾರ್ಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಮ್ಮ ಮೆಟ್ರೊದಲ್ಲಿ ಗುರುವಾರ ಮಧ್ಯಾಹ್ನದ ಬಳಿಕ ರಾಷ್ಟ್ರೀಯ ಸಾಮಾನ್ಯ ಸಂಚಾರ ಕಾರ್ಡ್ (ಎನ್‌ಸಿಎಂಸಿ) ಕಾರ್ಯ ನಿರ್ವಹಿಸದೇ ಪ್ರಯಾಣಿಕರು ಪರದಾಡುವಂತಾಯಿತು. ಕಾರ್ಡ್ ಇದ್ದರೂ ಟೋಕನ್ ಪಡೆಯಲು ಸರತಿ ಸಾಲಿನಲ್ಲಿ ನಿಲ್ಲುವಂತಾಯಿತು.

ಅನಿರೀಕ್ಷಿತ ತಾಂತ್ರಿಕ ಸಮಸ್ಯೆಯಿಂದಾಗಿ ರಾಷ್ಟ್ರೀಯ ಸಾಮಾನ್ಯ ಸಂಚಾರ ಕಾರ್ಡ್‌ಗಳ ಟಾಪ್-ಅಪ್/ರೀಚಾರ್ಜ್ ಸೌಲಭ್ಯವು ತಾತ್ಕಾಲಿಕವಾಗಿ ಸ್ಥಗಿತಗೊಂಡಿದೆ. ಸೇವೆಯನ್ನು ಶೀಘ್ರದಲ್ಲೇ ಪುನಃರಾರಂಭಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಎನ್‌ಸಿಎಂಸಿ ಕಾರ್ಡ್ ಬಳಸುವ ಪ್ರಯಾಣಿಕರು ಕಾರ್ಡ್‌ಗಳನ್ನು ರೀಚಾರ್ಜ್ ಮಾಡಲು ಅಥವಾ ಬಳಸಲು ಸಾಧ್ಯವಾಗದಿದ್ದಲ್ಲಿ ಕ್ಯೂಆರ್ ಟಿಕೆಟ್‌ಗಳು ಅಥವಾ ಟೋಕನ್‌ಗಳನ್ನು ಖರೀದಿಸಿ ಪ್ರಯಾಣಿಸಬಹುದು ಎಂದು ಹೇಳಿದ್ದಾರೆ.

‘ಬಿಎಂಆರ್‌ಸಿಎಲ್‌ನ ಸಂಪರ್ಕಜಾಲದಲ್ಲಿ ಯಾವುದೇ ಸಮಸ್ಯೆ ಕಾಣಿಸಿಕೊಂಡಿಲ್ಲ. ಬ್ಯಾಂಕ್‌ಗಳ ಸಂಪರ್ಕಜಾಲದಲ್ಲಿ ಸಮಸ್ಯೆ ಉಂಟಾಗಿದ್ದು, ಶೀಘ್ರದಲ್ಲೇ ಪರಿಹರಿಸಲಾಗುವುದು’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಣ್ಣಿನ ಉಚಿತ ತಪಾಸಣೆ

ಬೆಂಗಳೂರು: ಅತ್ತಿಬೆಲೆಯ ಕಲಾ-ಸಂಗಮದಲ್ಲಿ ಸ್ನೇಹ ಸಮ್ಮಿಲನ ಫೌಂಡೇಷನ್, ನಾರಾಯಣ ನೇತ್ರಾಲಯದ ಸಹಯೋಗದಲ್ಲಿ ಜೂನ್ 14ರಂದು ಬೆಳಿಗ್ಗೆ 8.30ರಿಂದ ಮಧ್ಯಾಹ್ನ 12.30ರ ವರೆಗೆ ಕಣ್ಣಿನ ಉಚಿತ ತಪಾಸಣೆ, ಶಸ್ತ್ರ ಚಿಕಿತ್ಸೆ ಹಾಗೂ ಕನ್ನಡಕ ವಿತರಣಾ ಶಿಬಿರ ಆಯೋಜಿಸಿದೆ. ಚಿಕಿತ್ಸೆಗೆ ಬರುವವರು ಕಡ್ಡಾಯವಾಗಿ ಕುಟುಂಬದ ದೂರವಾಣಿ ಸಂಖ್ಯೆ ನೀಡಬೇಕು. ಅನುಮತಿ ಪಡೆದಿರಬೇಕು. ಆಧಾರ್ ಕಾರ್ಡ್ ಇಲ್ಲವೇ ಪಡಿತರ ಚೀಟಿಯ ನಕಲು ಪ್ರತಿ ತರಬೇಕು ಎಂದು ಪ್ರಕಟಣೆ ತಿಳಿಸಿದೆ. ಮಾಹಿತಿಗೆ ಮೊ.97423 63334, 98459 19905 ಸಂಪರ್ಕಿಸಬಹುದು.



ಹೈಕೋರ್ಟ್ ಕಟ್ಟಡಕ್ಕೆ ಟರ್ಫ್ ಕ್ಲಬ್ ಜಾಗ

‘ಜಮೀನು ಶೀಘ್ರ ಮಂಜೂರು ಕುರಿತು ಸರ್ಕಾರ ಚಿಂತನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನೂತನ ಹೈಕೋರ್ಟ್ ಕಟ್ಟಡ ನಿರ್ಮಾಣಕ್ಕಾಗಿ ನಗರದ ಹೃದಯಭಾಗದಲ್ಲಿರುವ ಟರ್ಫ್ ಕ್ಲಬ್ ಜಮೀನನ್ನು ಆದಷ್ಟು ಶೀಘ್ರವೇ ಮಂಜೂರು ಮಾಡುವ ಬಗ್ಗೆ ಗಂಭೀರ ಚಿಂತನೆ ನಡೆದಿದೆ’ ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

ಈ ಕುರಿತು ಅಫಜಲಪುರದ ಶರಣ ದೇಸಾಯಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ರಾಜ್ಯ ಸರ್ಕಾರದ ಪರ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಅವರು, ‘ಹೊಸ ಹೈಕೋರ್ಟ್ ಕಟ್ಟಡ ನಿರ್ಮಾಣಕ್ಕಾಗಿ ಬೆಂಗಳೂರಿನ ಟರ್ಫ್ ಕ್ಲಬ್ ಜಮೀನನ್ನು ಆದಷ್ಟು ಶೀಘ್ರ ಮಂಜೂರು ಮಾಡುವ ಇಚ್ಛೆ ಹೊಂದಿದೆ. ಈ ಕುರಿತಂತೆ ಟರ್ಫ್ ಕ್ಲಬ್ ಆಡಳಿತ ಮಂಡಳಿಯೊಂದಿಗೆ ಸಭೆ ನಡೆಸಲಾಗುವುದು’ ಎಂದು ವಿವರಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ಹೊಸ ಕಟ್ಟಡವು ಭವಿಷ್ಯದಲ್ಲಿ 30 ರಿಂದ 50 ವರ್ಷಗಳ ಅಗತ್ಯಗಳನ್ನು ಪೂರೈಸುವ ರೀತಿಯಲ್ಲಿ ನಿರ್ಮಾಣವಾಗುವಂತಿರಲಿ’ ಎಂಬ ಆಶಯವನ್ನು ಮೌಖಿಕವಾಗಿ ವ್ಯಕ್ತಪಡಿಸಿತು. ಇದಕ್ಕೆ ಶಶಿಕಿರಣ ಶೆಟ್ಟಿ, ‘ಪ್ರಸ್ತುತ, ಸ್ಥಳಾವಕಾಶ ಮತ್ತು ಭವಿಷ್ಯದ ಅಗತ್ಯಗಳನ್ನು ಪರಿಗಣಿಸಲಾಗುವುದು. ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ಫ್ಲೋರ್ ಏರಿಯಾ ರೇಷಿಯೊ (ಎಫ್‌ಎಆರ್) ವಿನಾಯಿತಿ ಸೇರಿ ಹಲವು ಕಾನೂನು ಅಡೆತಡೆಗಳ ಬಗ್ಗೆಯೂ ಪರಿಶೀಲನೆ ನಡೆಯುತ್ತಿದೆ’ ಎಂದರು.

‘ಹೆಚ್ಚಿನ ವಿವರಗಳನ್ನು ತಿಳಿಸಲು ಒಂದು ವಾರ ಅಥವಾ ಹತ್ತು ದಿನಗಳ ಕಾಲಾವಕಾಶ ನೀಡಬೇಕು’ ಎಂದು ಕೋರಿದರು. ಇದನ್ನು ಪರಿಗಣಿಸಿದ ನ್ಯಾಯಪೀಠ, ವಿಚಾರಣೆಯನ್ನು ಜುಲೈ 13ಕ್ಕೆ ಮುಂದೂಡಿತು.

ಕೋರಿಕೆ: ‘ಹೈಕೋರ್ಟ್ ಕಟ್ಟಡದ ನೂತನ ಸಂಕೀರ್ಣ ನಿರ್ಮಾಣಕ್ಕಾಗಿ ಬೆಂಗಳೂರಿನ ಹೃದಯ ಭಾಗದಲ್ಲಿ 30 ಎಕರೆ ಅಥವಾ ಅದಕ್ಕಿಂತ ಹೆಚ್ಚಿನ ಭೂಮಿಯನ್ನು ನೀಡಲು ನಿರ್ದೇಶನ ನೀಡಬೇಕು’ ಎಂದು ಅರ್ಜಿದಾರರು ಕೋರಿದ್ದಾರೆ.

ಉಲ್ಲೇಖ: ‘ಕಬ್ಬನ್ ಪಾರ್ಕ್‌ನಲ್ಲಿ 2025ರ ಅಕ್ಟೋಬರ್ 26ರಂದು ನಡೆದ ‘ವಾಕ್ ವಿಥ್ ಬೆಂಗಳೂರು’ ನಾಗರಿಕ ಸಂಪರ್ಕ ಕಾರ್ಯಕ್ರಮದಲ್ಲಿ ಅಂದಿನ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡುತ್ತಾ, ‘ಕರ್ನಾಟಕ ಹೈಕೋರ್ಟ್‌ನ ಈಗಿರುವ ಕಟ್ಟಡ, ಸ್ಥಳಾವಕಾಶದ ಕೊರತೆ ಎದುರಿಸುತ್ತಿದೆ. ಹಾಗಾಗಿ, ಈ ಕಟ್ಟಡವನ್ನು ನಗರದ ಪ್ರಮುಖ ಭಾಗದಲ್ಲಿನ ಹೊಸ ಮತ್ತು ವಿಶಾಲವಾದ ಜಾಗಕ್ಕೆ ಸ್ಥಳಾಂತರಿಸುವ ಸಾಧ್ಯತೆಯನ್ನು ಸರ್ಕಾರ ಪರಿಶೀಲಿಸುತ್ತಿದೆ’ ಎಂಬ ವರದಿಯನ್ನು ಅರ್ಜಿದಾರರು ಉಲ್ಲೇಖಿಸಿದ್ದಾರೆ.

14ರಂದು ರಕ್ತದಾನ ಶಿಬಿರ

ಬೆಂಗಳೂರು: ನಗರದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಜೂನ್ 14ರಂದು ಬೆಳಿಗ್ಗೆ 9ರಿಂದ ಮಧ್ಯಾಹ್ನ 2ರ ವರೆಗೆ ಹುಬ್ಬಳ್ಳಿಯ ಅಭಿಜಿತ್ ಬೆಂಗೇರಿ ಫೌಂಡೇಶನ್ ರಕ್ತದಾನ ಶಿಬಿರ ಆಯೋಜಿಸಿದೆ. ಕೆಎಸ್‌ಸಿಎ ಸಹಯೋಗದಲ್ಲಿ ನಡೆಯುವ ಶಿಬಿರದಲ್ಲಿ ದಾನಿಗಳು ಪಾಲ್ಗೊಳ್ಳಬಹುದು. ಮಾಹಿತಿಗೆ ಮೊ.70227 67354 ಸಂಪರ್ಕಿಸಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

CONNECT ಕ್ಲಾಸಿಫೈಡ್ಸ್

5ನೇ ವರ್ಷದ ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳು

ಹಯವದನ್ .ಆರ್

ನಿನ್ನ ಜೀವನವು ಯಾವಾಗಲೂ ಸಂತೋಷ, ಉತ್ತಮ ಆರೋಗ್ಯ, ಯಶಸ್ಸು ಮತ್ತು ಅಸಂಖ್ಯಾತ ಆಶೀರ್ವಾದಗಳಿಂದ ತುಂಬಿರಲಿ.

ಶುಭ ಕೋರುವವರು
ತಂದೆ: ರವಿಕುಮಾರ್.ಹೆಚ್.ಕೆ
ತಾಯಿ: ದೀಪಿಕಾ.ಹೆಚ್.ವಿ
ಹಾಗೂ
ಹಾಲು ಕೊಂಡಪ್ಪನವರು ಮತ್ತು ಸಕುಟುಂಬದವರು, ಹಿರಂಡಹಳ್ಳಿ, ಬೆಂಗಳೂರು–560049

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

JOB OPPORTUNITIES

Teachers/ Professors

LR-CAMBRIDGE SCHOOL, Wilson Garden, Mobile:9663355532 WANTED NURSERY ENGLISH HIGHER PRIMARY TEACHERS ADMIN, ACCOUNTANT

Wanted

SALES OFFICERS required for reputed Agro Food Products company based in Mangalore to appoint dealers across Karnataka. Contact: 9880564474

Graphic Designers

REQUIRED GRAPHIC Designer- Photoshop/ Corel Draw/ Illustrator Experience 1 Year or above in around Rajajinagar. Contact: 9108458798/ 9845579620

BUSINESS

Business to Business

Finance

WE ARRANGE LOANS for Mortgage of Site, Buildings, Construction, Completion, Takeover of Loans in Co-op Banks and NBFC. Contact: 9353705002.

REAL ESTATE SELLING

Sites

Bannerghatta Road

KHB Sites Near India 2nd International Cricket Stadium
Jigani, Electronic city, Bommasandra, Ready for Registration, SBI Bank loan avbl, Land owner Sites Call: 70260 13388

RENTAL PROPERTIES

Accommodation Available

Commercial

FOR RENT Commercial corner east facing 2200 sqft. Available on Sheshadripuram 1st main road immediate occupancy. Contact:- 9535385777 / 9448190344.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

SOCIAL SERVICES

Old Age Home

SUKHSHANTHI LUXURY Retirement Home, near Sarjapura Bangalore Rs. 22,575/- monthly Rs. 1,500 per day furnished accommodation. 3 Meals, 24X7 Nurse, Ambulance. Call: 9341289357

PERSONAL

Change of Name

CHANGE OF NAME
I, **ANKITA AHUJA,** residing at Flat No. B-902, NCC Ivory Heights, Sathya Sai Layout, B.Narayanapura, Mahadevapura, Bengaluru- 560016 have changed my name to **ANKITA BHARGAVA** vide affidavit dated 11-06-2026 sworn before notary K.Venkateshan, Bengaluru. Henceforth I shall be called as **ANKITA BHARGAVA** only.

I SOMESH S/O, Shivasharanappa Gobbur R/o H No 4-601/20/390 Ii Nd Cross, Sedam Road, Near Kgb Bank, M B Nagar, Gulbarga, Po: Gb M.b.nagar, Dist: Gulbarga, Karnataka, 585105 have changed my name to Somesh S Gobbur.

CHANGE OF NAME
I, **UMA MALLAPPA SAJJANAR** Residing at No. 1370, 10th Cross, 2nd Stage, K S Town, Bengaluru-560060, have changed my name to **UMA SAJJANAR** vide affidavit dated 11.06.2026 before Notary Ravi, Bengaluru. Henceforth I shall be known as **UMA SAJJANAR** only.

I, KEKA MUKERJEE spouse of 656434N Rank Ex-Sgt GOPAL MUKHERJEE resident of No.12, 1st Main Ayyappa Nagar Kodigehalli Bengaluru-560036 Karnataka Have corrected my Date of Birth from 06-01-1969 to 03-01-1969 vide affidavit dated 09-06-2026 and notary Mr.Manjunath.T (20053)Bengaluru.

I SOMESH S/O, Shivasharanappa Gobbur R/o H No 4-601/20/390 Ii Nd Cross, Sedam Road, Near Kgb Bank, M B Nagar, Gulbarga, Po: Gb M.b.nagar, Dist: Gulbarga, Karnataka, 585105 have changed my name to Somesh S Gobbur.

Lost

DOCUMENT LOST
I, **NAGARAJARADHYA BASAVARADHYA,** R/at # 4, Palace Cross Road, 1st Cross, Chakravarthy Layout, Bangalore-560020, hereby state and declare that I have lost my **Original Share Certificate of Hindustan Lever Limited. Identification No. 5158413-250 While in transit: Finders Please Contact: 7899238816**

DH DECCAN HERALD
To Place your ad in Deccan Herald & Prajavani Classifieds
For details contact :
9845114560 : 9731810277
080 - 45557163 / 164

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

PUBLIC NOTICE

Publics are hereby informed that my client **M/s DS-Max Properties Pvt. Ltd.**, Having its Office at No. # 1794, 14th Main, 30th Cross, HBR Layout, 1st Stage, 5th Block, Bangalore-560 043 have intend to enter into **Absolute Sale Deed** with the Owners **Smt D.Menaka** d/o Late M.S.Devaraj w/o Sri Ravi Shanakar.S is the absolute owner of site property bearing **Municipal No-16**, old **314**, **PID No.99-14-16,** situated at 15th cross, Palace Orchards, Sadashivanagar, Bangalore, New Ward No.35 of **Northern Half Portion**, measuring East to West: **61 feet.**, and North to South : **20 feet.**, which measuring **1,220 Sq. Ft** of schedule property **Item No. I**.

WHEREAS Smt D.Swarnalakshmi d/o Late M.S.Devaraj w/o Sri Santhosh Chigateri is the absolute owner of site property bearing **Municipal No-16**, old **314**, **PID No.99-14-16**, situated at 15th cross, Palace Orchards, Sadashivanagar, Bangalore, New Ward No.35 of **Southern Half Portion**, measuring East to West: **61 feet.**, and North to South : **20 feet.**, which measuring **1,220 Sq. Ft**, of schedule property **Item No. II**.

which total measuring of **Item No. I & II = 1,220 + 1,220 = 2,440 sq.ft** and commonly bounded on: **E:** Site No.302 & 303, **W:** Road, **N:** Site No.313, **S:** Site No.315 and referred to as **“composite schedule property”**.

Any family members or Any legal heir's of family members or Any person connecting to the family claims having any asserting right, title, interest and claims to oppose for Absolute Sale Deed of property and further having any manner of right, title, claims etc., and may lodge their objections, claims over the property along with relevant papers in support of their claims, right to the below address within **15** days from the date of this notice, if any objections fails to comply from any family members or any legal heir's claims and my client shall take further steps and shall be entering into Absolute Sale Deed of property.

LINGARAJ. S. NADAGOUDA., ADVOCATE
No.1854, 17th Main, 30th 'B' Cross, HBR Layout, 1st Stage, 5th Block, Bangalore - 560 043.
Mob : 96204 74780 , 94481 35970

ರೈಲು ಗಾಲಿ ಕಾರ್ಖಾನೆ

ಯಲಹಂಕ, ಬೆಂಗಳೂರು–560 064
ವೆಬ್‌ಸೈಟ್: www.rwf.indianrailways.gov.in

ಇ-ಹರಾಜು ಪ್ರಕಟಣೆ ಸಂಖ್ಯೆ: ಆರ್‌ಡಬ್ಲ್ಯೂಎಫ್/ಜಿಎಸ್‌ಡಿ/ಡಬ್ಲ್ಯೂಡಿ-30/2026-2027/02 ದಿನಾಂಕ: 06.06.2026

ಭಾರತದ ರಾಷ್ಟ್ರಪತಿಗಳ ಪರವಾಗಿ ಪ್ರಧಾನ ಮುಖ್ಯ ಸಾಮಗ್ರಿ ಪ್ರಬಂಧಕರು, ರೈಲು ಗಾಲಿ ಕಾರ್ಖಾನೆ, ಯಲಹಂಕ, ಸ್ಕ್ರ್ಯಾಪ್ ವಸ್ತುಗಳನ್ನು (ಫೆರಸ್/ನಾನ್ ಫೆರಸ್/ ಇತರ ಮತ್ತು ಇನ್ನಿತರ) ಮಾರಾಟ ಮಾಡಲು ವೆಬ್‌ಸೈಟ್ www.ireps.gov.in ಆನ್‌ಲೈನ್ ಮೂಲಕ ಇ-ಹರಾಜನ್ನು ಆಹ್ವಾನಿಸಿದ್ದಾರೆ.

ಇ-ಹರಾಜು ದಿನಾಂಕಗಳು
ಜುಲೈ- 07.07.2026, 17.07.2026, 28.07.2026
ಆಗಸ್ಟ್- 06.08.2026, 18.08.2026, 27.08.2026
ಸೆಪ್ಟೆಂಬರ್- 08.09.2026, 17.09.2026, 29.09.2026

ಇ-ಹರಾಜು ಪಟ್ಟಿಯಲ್ಲಿ ಸೂಚಿಸಲಾದ ಪ್ರಮಾಣವು ಅಂದಾಜು ಮಾತ್ರ, ಇ-ಹರಾಜು ಪಟ್ಟಿಯನ್ನು ನಮ್ಮ ವೆಬ್‌ಸೈಟ್ www.rwf.indianrailways.gov.in ಅಥವಾ www.ireps.gov.in ನಲ್ಲಿ ಇ-ಹರಾಜಿನ ದಿನಾಂಕದಿಂದ 7 ದಿನಗಳ ಮೊದಲು (ಏಳು ದಿನಗಳು) ವೀಕ್ಷಿಸಬಹುದು.

ಉಪ ಮುಖ್ಯ ಸಾಮಗ್ರಿ ಪ್ರಬಂಧಕರು-ಡಿಪೋ

ನೈಋತ್ಯ ರೈಲ್ವೆ

ಟೆಂಡರು ಸೂಚನೆ ಸಂ. 03/2027/SBC, ದಿನಾಂಕ: 05.06.2026

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಕೇವಲ ಐಆರ್‌ಇಪಿಎಸ್ ಪೋರ್ಟಲ್ ಮೂಲಕ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಟೆಂಡರು ಸಂ.	ಸಂಕ್ಷಿಪ್ತವಾದ ವಿವರಣೆ	ಟೆಂಡರು ಕೊನೆಯ ದಿನಾಂಕ
ಎಲ್8265988	ಸಿಎಎಂಸಿ ನಿರ್ಬಂಧಗಳೊಂದಿಗೆ ಡಿಜಿಟಲ್ ರೇಡಿಯೋಗ್ರಾಫಿ ಸಿಸ್ಟಮ್. (ಪರಿಮಾಣ: 01 ಸಂ.)	29.06.2026, 10:30 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

PUB/199/AAF/PRB/SWR/2026-27 — ವರಿಷ್ಠ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು, ಬೆಂಗಳೂರು

ಸುಲಭ ಟಿಕೆಟ್ ಬುಕಿಂಗ್, PNR ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ **RailOne** ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | SWRAILWAYHQ | sw_railways

ನೈಋತ್ಯ ರೈಲ್ವೆ

ಓಪನ್ ಟೆಂಡರು ಸೂಚನೆ ಸಂ.: BE-29-2026-27-OT-03 (ಇ–ಟೆಂಡರಿಂಗ್ ಮೂಲಕ)

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಟೆಂಡರು ಸಂ.	ಕಾಮಗಾರಿಯ ವಿವರ	ಅಂದಾಜು ಮೌಲ್ಯ	ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ
BE-29-2026-27-OT-03	1) **ಬೆಂಗಳೂರು–ತುಮಕೂರು –ಸಂಪಿಗೆ ರೋಡ್ ವಿಭಾಗ:** ಕಿಮೀ. 85/700–800 ರಲ್ಲಿ ಎಲ್‌ಸಿ ನಂ. 50 ನಲ್ಲಿ ಪ್ರಸ್ತಾವನೆಯಂತೆ ಆರ್‌ಒಬಿ ಯ ನಿರ್ಮಾಣ – 42 ಮೀ. ಕಾಂಪೋಸಿಟ್ ಗಿರ್ಡರ್. 2) ಸಹಾಯಕ ವಿಭಾಗೀಯ ಇಂಜಿನಿಯರ್/ಯಶವಂತಪುರ ಉಪವಿಭಾಗದಲ್ಲಿ ಮಲ್ಲಸಂದ್ರ ಮತ್ತು ಗುಬ್ಬಿ ನಿಲ್ದಾಣಗಳ ನಡುವೆ ಕಿಮೀ. 81/500–600 ರಲ್ಲಿ ಎಲ್‌ಸಿ ಗೇಟ್ ಸಂ. 48 ರಲ್ಲಿ ಪ್ರಸ್ತಾವನೆಯಂತೆ ಆರ್‌ಯುಬಿಯ ನಿರ್ಮಾಣ. 3) **ಬೆಂಗಳೂರು–ತುಮಕೂರು: ಸಂಪಿಗೆ ರೋಡ್ ವಿಭಾಗ:** ಕಿಮೀ. 73/000–100 ರ ಹಳೆಯ ಎಲ್‌ಸಿ ನಂ. 43 ರಲ್ಲಿ ರೋಲಿಂಗ್/ಲಾಂಚಿಂಗ್ ವಿಧಾನದಿಂದ 1 x 5 x 2.25 ಗಾತ್ರದ ಆರ್‌ಸಿಸಿ ಬಾಕ್ಸ್ ಮೂಲಕ ಪ್ರಸ್ತಾವಿತ ಸೀಮಿತ ಎತ್ತರದ ಸಬ್‌ವೇಯ (ಕಿಮೀ. 73/000–100 ರಲ್ಲಿ ಭೀಮಸಂದ್ರ ಬಳಿ, ಆರ್‌ಯುಬಿ ನಂ. 297ಬಿ ರಲ್ಲಿ) ನಿರ್ಮಾಣ. 4) **ಯಶವಂತಪುರ–ಸಂಪಿಗೆ ರೋಡ್ ವಿಭಾಗ:** ಹಳೆಯ ಶೆಟ್ಟಿಹಳ್ಳಿ ಗೇಟ್, ಕಿಮೀ. 67/700–800 ನಲ್ಲಿ, 1 x 4 x 2.25 ಗಾತ್ರದ ಆರ್‌ಸಿಸಿ ಬಾಕ್ಸ್ ಮೂಲಕ ರೋಲಿಂಗ್/ಲಾಂಚಿಂಗ್ ವಿಧಾನದಿಂದ ಪ್ರಸ್ತಾವಿತ ಸಬ್‌ವೇಯ (ಸೇತುವೆ ಸಂ. 308–ಡಿ) ನಿರ್ಮಾಣ. 5) ಗೌರಿಬಿದನೂರು ರೈಲ್ವೆ ನಿಲ್ದಾಣದ ಪಿಎಫ್–1 & ಪಿಎಫ್–2 & 3 ರಲ್ಲಿ ಲಿಫ್ಟ್‌ಗಳನ್ನು ಒದಗಿಸುವುದು. 6) ಕೆಂಗೇರಿ ರೈಲು ನಿಲ್ದಾಣದ ಪಿಎಫ್–1 & ಪಿಎಫ್–2&3 ನಲ್ಲಿ ಎರಡು ಎಸ್ಕಲೇಟರ್‌ಗಳನ್ನು (ಕೆಳಗಿನ ದಿಕ್ಕಿನಲ್ಲಿ) ಒದಗಿಸುವುದು. 7) **ಜೋಲಾರಪೇಟೆ–ಬೆಂಗಳೂರು ವಿಭಾಗ:** ವಿವಿಧ ಸ್ಥಳಗಳಲ್ಲಿ ಜಾನುವಾರುಗಳು, ಪಾದಚಾರಿಗಳು ಮತ್ತು ಸಣ್ಣ ವಾಹನಗಳು ರೈಲ್ವೆ ಜೋಡಣೆಯನ್ನು ದಾಟಲು ಅನುಕೂಲವಾಗುವಂತೆ 1 x 5 ಮೀ. x 2.65 ಮೀ. ಗಾತ್ರದ ಆರ್‌ಸಿಸಿ ಬಾಕ್ಸ್ ಮೂಲಕ (ಬ್ಯಾರೆಲ್ ಉದ್ದ = 18.36 ಮೀ) ಪಾದಚಾರಿಗಳ ಸಬ್‌ವೇ ಯ ನಿರ್ಮಾಣ. 8) **ಬೆಂಗಳೂರು–ಸಂಪಿಗೆ ರೋಡ್ ವಿಭಾಗ:** ವಿವಿಧ ಸ್ಥಳಗಳಲ್ಲಿ ಜಾನುವಾರುಗಳು, ಪಾದಚಾರಿಗಳು ಮತ್ತು ಸಣ್ಣ ವಾಹನಗಳು ರೈಲ್ವೆ ಜೋಡಣೆಯನ್ನು ದಾಟಲು ಅನುಕೂಲವಾಗುವಂತೆ 1 x 5 ಮೀ x 2.65 ಮೀ ಗಾತ್ರದ ಆರ್‌ಸಿಸಿ ಬಾಕ್ಸ್ (ಬ್ಯಾರೆಲ್ ಉದ್ದ = 18.36 ಮೀ) ರೋಲಿಂಗ್/ಲಾಂಚಿಂಗ್ ವಿಧಾನದ ಮೂಲಕ ಪ್ರಸ್ತಾವಿತ ಪಾದಚಾರಿ ಸಬ್‌ವೇಗಳು (ಒಟ್ಟು 11 ಸಂಖ್ಯೆಗಳು). 9) **ಯಶವಂತಪುರ–ಯಲಹಂಕ ವಿಭಾಗ:** ಸಹಾಯಕ ವಿಭಾಗೀಯ ಇಂಜಿನಿಯರ್/ಯಶವಂತಪುರ ಉಪ-ವಿಭಾಗದಲ್ಲಿ ಎನ್‌ಟಿಐ ಲೇಔಟ್ ಬಳಿಯ ಕಿ.ಮೀ 13/200–300 ರಲ್ಲಿ ಸಹಕಾರ ನಗರದಲ್ಲಿ ರೋಲಿಂಗ್/ಲಾಂಚಿಂಗ್ ವಿಧಾನದ ಮೂಲಕ 1 x 4 x 2.25 ಗಾತ್ರದ ಆರ್‌ಸಿಸಿ ಬಾಕ್ಸ್ ಉಪಯೋಗಿಸಿ ಪ್ರಸ್ತಾವಿತ ಪಾದಚಾರಿ ರೈಲು ಸುರಂಗಮಾರ್ಗ. 10) ಬೆಂಗಳೂರು ವಿಭಾಗದ ಮೇಲೆ ರನ್ನಿಂಗ್ ರೂಮ್‌ಗಳು ಮತ್ತು ಸಿಬ್ಬಂದಿ ವಿಶ್ರಾಂತಿ ಕೊಠಡಿಗಳಲ್ಲಿ ಡಿಜಿ ಸೆಟ್‌ಗಳನ್ನು ಒದಗಿಸುವುದು. 11) ಕಿಮೀ. 42/750 – 43/350 ರಲ್ಲಿ ಟಿಎಸ್‌ಎ ಬಳಿ ಸುರಂಗದಲ್ಲಿ (600 ಮೀ ಉದ್ದ) ಬೆಳಕಿನ ಸುಧಾರಣೆ – ವಿದ್ಯುತ್ ವ್ಯವಸ್ಥೆ 12) **ಬೆಂಗಳೂರು–ಸಂಪಿಗೆ ರೋಡ್ ವಿಭಾಗ:** ನಿಡವಂದ ನಿಲ್ದಾಣದಲ್ಲಿ ರಸ್ತೆ–1ಎ ಮೆಟ್ಟಿಲು ಮತ್ತು ಲಿಫ್ಟ್‌ನೊಂದಿಗೆ ಹೊಂದಿಕೊಳ್ಳುವಂತೆ ಪ್ರಸ್ತಾವನೆಯಂತೆ ಎಫ್‌ಒಬಿಯ ವಿಸ್ತರಣೆ. 13) ಬೆಂಗಳೂರು ವಿಭಾಗದಲ್ಲಿ 30 ಸ್ಥಳಗಳಲ್ಲಿ ಹೂಡಿಕೆ ದರ್ಜೆಯ ಇಂಧನ ಲೆಕ್ಕಪರಿಶೋಧನೆ (ಐಜಿಇಎ) ಶಿಫಾರಸುಗಳ ಅನುಷ್ಠಾನ.	ರೂ. 1,52,42,705.54	24.06.2026, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ. ಕೊನೆಯ ದಿನಾಂಕದವರೆಗೆ ಯಾವುದಾದರೂ ತಿದ್ದುಪಡಿ ಇದ್ದಲ್ಲಿ ವೆಬ್‌ಸೈಟ್‌ಅನ್ನು ನೋಡುತ್ತಲೇ ಇರ್ರಿ

PUB/197/AAF/PRB/SWR/2026-27 — ವರಿಷ್ಠ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್/ಸಾಮಾನ್ಯ/ಬೆಂಗಳೂರು

ಸುಲಭ ಟಿಕೆಟ್ ಬುಕಿಂಗ್, **PNR** ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ **RailOne** ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | SWRAILWAYHQ | sw_railways

ಬೆಂಗಳೂರು ಉತ್ತರ ನಗರ ಪಾಲಿಕೆ

ಮುಖ್ಯ ಪಶುವೈದ್ಯಾಧಿಕಾರಿಗಳು ಹಾಗೂ ಮುಖ್ಯಸ್ಥರು (ಪಶುಪಾಲನಾ) ಕಚೇರಿ, ಅಮೃತಹಳ್ಳಿ ಮುಖ್ಯ ರಸ್ತೆ, ಬ್ಯಾಟರಾಯನಪುರ, ಬೆಂಗಳೂರು – 560092.

ಸಂಖ್ಯೆ: ಬೆಂಉನಪಾ/ಮುಪಅ&ಮು(ಪಪಾ)/ಟೆಂಡರ್/01/26–27 ದಿನಾಂಕ:11–06–2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(ದ್ವಿಲಕೋಟೆ ಪದ್ಧತಿ)

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಮುಖ್ಯ ಪಶುವೈದ್ಯಾಧಿಕಾರಿಗಳು ಹಾಗೂ ಮುಖ್ಯಸ್ಥರು (ಪಶುಪಾಲನಾ ಇಲಾಖೆ) ಬೆಂಗಳೂರು ಉತ್ತರ ನಗರ ಪಾಲಿಕೆ (ಬೆಂಉನಪಾ) ಇವರು ಆಯುಕ್ತರು ಬೆಂಗಳೂರು ಉತ್ತರ ನಗರ ಪಾಲಿಕೆ (ಬೆಂಉನಪಾ) ಇವರ ಪರವಾಗಿ (ಬೆಂಉನಪಾ) ವ್ಯಾಪ್ತಿಗಳಲ್ಲಿ ಈ ಕೆಳಕಂಡ ಕಾಮಗಾರಿಗಳಿಗೆ ಸಾಂಸ್ಥಿಕ ಶ್ವಾನಗಳ ಹಿಡಿಯುವಿಕೆ ಮತ್ತು ತಂಗುದಾಣ ನಿರ್ವಹಣೆಯ ಕಾಮಗಾರಿಗಳನ್ನು ನಿರ್ವಹಿಸಿ ಅನುಭವ ಹೊಂದಿರುವ ಆಸಕ್ತ ವ್ಯಕ್ತಿಗಳು/ಸಂಸ್ಥೆಗಳಿಂದ ಪ್ರಸ್ತಾವನೆ ಕೋರಿಕೆಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಯ ಹೆಸರು
1.	ಬೆಂಗಳೂರು ಉತ್ತರ ನಗರ ಪಾಲಿಕೆ (ಬೆಂಉನಪಾ) ಸಾಂಸ್ಥಿಕ ಶ್ವಾನಗಳ (Institutional Dogs) ಹಿಡಿಯುವಿಕೆ ಮತ್ತು ತಂಗುದಾಣ ನಿರ್ವಹಣೆಯ ಕಾಮಗಾರಿಗೆ ಸಮಾಲೋಚಕ ಸೇವೆಗಳನ್ನು ಒದಗಿಸುವುದು. (2ನೇ ಕರೆ) **ಯೋಜನೆಯ ಮೊತ್ತ ₹.183.60 ಲಕ್ಷಗಳು, ಇಎಂಡಿ ಮೊತ್ತ ₹.2,75,400.00**

<u>ಟೆಂಡರ್ ವೇಳಾಪಟ್ಟಿ:</u> (1) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ: **12–06–2026** ಸಂಜೆ **4:00** ಗಂಟೆಗೆ ನಡೆಸಲಾಗುವುದು. (2) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: **18–06–2026**ರ ಸಂಜೆ **5:30** ಗಂಟೆಯವರೆಗೆ. (3) ತಾಂತ್ರಿಕ ಬಿಡ್‌ಗಳನ್ನು ದಿನಾಂಕ **20–06–2026**ರ ಬೆಳಿಗ್ಗೆ **11:00** ಗಂಟೆಗೆ ತೆರೆಯಲಾಗುವುದು.

ಸಹಿ/– ಮುಖ್ಯ ಪಶುವೈದ್ಯಾಧಿಕಾರಿಗಳು ಹಾಗೂ ಮುಖ್ಯಸ್ಥರು (ಪಶುಪಾಲನಾ) ಇಲಾಖೆ, ಬೆಂಗಳೂರು ಉತ್ತರ ನಗರ ಪಾಲಿಕೆ

ನಗರಸಭಾ ಕಾರ್ಯಾಲಯ ಮಾದನಾಯಕನಹಳ್ಳಿ

ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ–562123
ದೂರವಾಣಿ ಸಂಖ್ಯೆ: 080–23718487
ಇ–ಮೇಲ್: itstaff_ulb_mnhalli@yahoo.com

ಸಂಖ್ಯೆ: ಮಾ.ನ.ಕಾ/ತಾ.ಶಾ/06/2026–27 ದಿನಾಂಕ: 10/06/2026

ದರ ಕೊಟೇಷನ್ ಪ್ರಕಟಣೆ

ಮಾದನಾಯಕನಹಳ್ಳಿ ನಗರಸಭೆಯ ಕಚೇರಿ ಕೆಲಸಕ್ಕೆ ಹಾಗೂ ನೀರು ಸರಬರಾಜು ವಿಭಾಗಕ್ಕೆ ಅವಶ್ಯಕವಿರುವ ಕಂಪ್ಯೂಟರ್, ಪ್ರಿಂಟರ್, ಸ್ಕ್ಯಾನರ್, ಕಾಟ್ರಿಡ್ಜ್ ರೀಫಿಲ್ಲಿಂಗ್, ಹೊಸ ಕಾಟ್ರಿಡ್ಜ್, ಸಿಸಿ ಕ್ಯಾಮೆರಾ, ಅನ್ ಸೈಜ್ ಪಂಪ್, ಮೋಟರ್ ಪೈಪ್ ಹಾಗೂ ಇತ್ಯಾದಿ ಅವಶ್ಯಕವಿರುವ ಸಾಮಾಗ್ರಿಗಳಿಗೆ ತಾಂತ್ರಿಕ ಶಾಖೆಯಿಂದ ಟೆಂಡರ್ ಕರೆಯಬೇಕಿದ್ದು, ಸದರಿ ಸಾಮಾಗ್ರಿಗಳ ದರ ನಿಗಧಿಪಡಿಸಲು ಅಧಿಕೃತ ಸರಬರಾಜು ಸಂಸ್ಥೆಗಳಿಂದ / ಅಧಿಕೃತ ಗುತ್ತಿಗೆದಾರರಿಂದ ಮಾರುಕಟ್ಟೆ ದರ ಕೊಟೇಷನ್ ಆಹ್ವಾನಿಸಲಾಗಿದ್ದು, ಈ ಕೆಳಗೆ ಸಹಿ ಮಾಡಿರುವವರ ಹೆಸರಿಗೆ ಸೀಲು ಮಾಡಿದ ಲಕೋಟೆಯೊಂದಿಗೆ ದಿನಾಂಕ: 19–06–2026 ರ ಸಂಜೆ 5.00 ಗಂಟೆಯೊಳಗಾಗಿ ಸಲ್ಲಿಸಲು ಕೋರಿದೆ. ಅವಧಿ ಮೀರಿದ ಕೊಟೇಷನ್‌ಗಳನ್ನು ತಿರಸ್ಕರಿಸಲಾಗುವುದು. ದರ ಕೊಟೇಷನ್ ವಿವರ ಈ ಕೆಳಕಂಡಂತಿರುತ್ತದೆ.

1. ಮಾದನಾಯಕನಹಳ್ಳಿ ನಗರಸಭೆಯ ಕಚೇರಿ ಕೆಲಸಕ್ಕೆ ಹಾಗೂ ನೀರು ಸರಬರಾಜು ವಿಭಾಗಕ್ಕೆ ಅವಶ್ಯಕವಿರುವ ಕಂಪ್ಯೂಟರ್, ಪ್ರಿಂಟರ್, ಸ್ಕ್ಯಾನರ್, ಕಾಟ್ರಿಡ್ಜ್ ರೀಫಿಲ್ಲಿಂಗ್, ಹೊಸ ಕಾಟ್ರಿಡ್ಜ್, ಸಿಸಿ ಕ್ಯಾಮೆರಾ, ಅನ್ ಸೈಜ್ ಪಂಪ್ ಮೋಟರ್, ಫಿಲ್ಟರ್ ಬಾವಿ ಕೊರೆಯಲು ಹಾಗೂ ಇತ್ಯಾದಿ ಅವಶ್ಯಕವಿರುವ ಕಾಮಗಾರಿ ನಿರ್ವಹಿಸಲು.

ಮೇಲ್ಕಂಡ ಸೇವೆಗಳನ್ನು / ಕಾಮಗಾರಿಗಳನ್ನು ನಿರ್ವಹಿಸಲು ಅನುಕೂಲವಾಗುವಂತೆ ದರ ಕೊಟೇಷನ್ ವಿವರಗಳು ಮತ್ತು ತಾಂತ್ರಿಕ ವಿವರಣೆಯನ್ನು (Technical Specification) ಕಛೇರಿ ಸಮಯದಲ್ಲಿ ತಾಂತ್ರಿಕ ಶಾಖೆಯಿಂದ ಪಡೆಯುವುದು ಮತ್ತು ದರ ಕೊಟೇಷನ್‌ಗಳನ್ನು ಕಾಮಗಾರಿಗಳಿಗೆ ಪ್ರತ್ಯೇಕವಾಗಿ ಸಲ್ಲಿಸುವುದು.

ಸಹಿ/– ಪೌರಾಯುಕ್ತರು,
ನಗರಸಭೆ, ಮಾದನಾಯಕನಹಳ್ಳಿ

ವಾಸಾಸಂಇ/ವಾಪ್ರ/ಸ್ಪ್ಯಾನ್/1122/2026–27

*₹ 10.99 lakh for e VITARA Delta. Battery EMI: *₹ 3.99/km (subject to financier terms). Taxes and statutory charges are extra. Applicable T&C available at the dealership. | **As certified by Kantar I MRB for an OEM platform for end-to-end usage as on November 28, 2025. | #543 km range: Certified range; actual results may vary by driving conditions and usage. | ADAS features are for driver assistance only. Driver is responsible for safe and attentive driving. | Always wear your seatbelt. | Mentioned ownership plan is for e VITARA Delta variant. Calculation is done assuming vehicle is running 60 km per day, excluding charging cost. Assured buyback plan is available on payment basis with the option of 3 years/45 000 km or 4 years/60 000 km ownership plans (whichever is earlier). The program is offered through an insurance company. e VITARA comes with standard warranty of 3 years/1 00 000 km with an option of extending the same on payment basis to 5 years/1 40 000 km and service activated coverage for 6th to 8th year for EV related components.

‘ನನ್ನ ವಿರುದ್ಧವೇ ಜಮೀರ್ ಅಹಮ್ಮದ್ ಕೆಲಸ’

ತಮ್ಮ ಬೆಂಬಲಿಗರ ಮುಂದೆಯೇ ಸಿಟ್ಟಿನಿಂದ ಹೇಳಿದ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಸಿದ್ದರಾಮಯ್ಯ


ಜಮೀರ್

ಬೆಂಗಳೂರು: ‘ಜಮೀರ್ ಅಹಮದ್ ಖಾನ್ ನನ್ನ ಆಪ್ತ ಎಂದು ನೀವೆಲ್ಲ ಹೇಳುತ್ತೀರಾ. ಆಪ್ತ ಎಂದಾದರೆ ಆತ ನನ್ನ ವಿರುದ್ಧವೇ ಕೆಲಸ ಮಾಡಬಹುದಾ’ ಎಂದು ನಿಕಟ ಪೂರ್ವ ಮುಖ್ಯಮಂತ್ರಿ ಸಿದ್ದರಾಮಯ್ಯ ಏರು ಧ್ವನಿಯಲ್ಲೇ, ಜಮೀರ್ ಅಭಿಮಾನಿಗಳನ್ನು ಪ್ರಶ್ನಿಸಿದರು.

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಂಪುಟದಲ್ಲಿ ಜಮೀರ್ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಮನವಿ ಸಲ್ಲಿಸಲು ಅವರ ಬೆಂಬಲಿಗರು ಸಿದ್ದರಾಮಯ್ಯ ಅವರನ್ನು ಬುಧವಾರ ಭೇಟಿ ಮಾಡಿದ್ದರು. ಈ ವೇಳೆ, ಜಮೀರ್ ಪರ ಫಲಕ ಹಿಡಿದಿದ್ದ ಬೆಂಬಲಿಗರು, ನಿಮ್ಮ ಆಪ್ತರಾದ ಜಮೀರ್ ಅವರಿಗೆ ನೀವೇ ಬುದ್ಧಿ ಹೇಳಿ, ಅವರಿಗೆ ಸಚಿವ ಸ್ಥಾನ ಕೊಡಿಸಬೇಕು ಎಂದು ಆಗ್ರಹಿಸಿದರು.

ಈ ವೇಳೆ, ತುಸು ಆಕ್ರೋಶಗೊಂಡ ಸಿದ್ದರಾಮಯ್ಯ, ‘ಆತ ದಾವಣಗೆರೆ ಉಪಚುನಾವಣೆಯಲ್ಲಿ ನನ್ನ ವಿರುದ್ಧವೇ ಕೆಲಸ ಮಾಡಿದ್ದಾನೆ’ ಎಂದು ಜಮೀರ್ ಅಭಿಮಾನಿಗಳನ್ನು ಗದರಿಸಿದರು.

ಸಿದ್ದರಾಮಯ್ಯನವರು ವಾಸವಾಗಿರುವ ‘ಕಾವೇರಿ’ ನಿವಾಸದ ಎದುರು ಜಮೀರ್ ಅಹಮದ್ ಅವರ ಬೆಂಬಲಿಗರು ಫಲಕ ಹಿಡಿದು ನಿಂತಿದ್ದರು. ಸಿದ್ದರಾಮಯ್ಯನವರನ್ನು ಭೇಟಿ ಮಾಡಿದ ಹೊರಬಂದ ಅರಸೀಕೆರೆ ಶಾಸಕ ಕೆ.ಎಂ. ಶಿವಲಿಂಗೇಗೌಡರನ್ನು ಕೂಗಿ ಕರೆದ ಅಭಿಮಾನಿಗಳು ಭಿತ್ತಿಚಿತ್ರ ಹಿಡಿದು ಬೆಂಬಲಿಸುವಂತೆ ಕೋರಿದರು.

ಅದೆಲ್ಲ ಬೇಡ ಎಂದು ಫಲಕ ತಳ್ಳಿದ ಶಿವಲಿಂಗೇಗೌಡ ಅವರು, ‘ನೀವು ಹೀಗೆಲ್ಲ ಮಾಡಿಯೇ ಆಗುವ ಕೆಲಸವನ್ನು ಆಗದಂತೆ ಮಾಡುತ್ತೀರಿ. ಹೀಗೆಲ್ಲ ಮಾಡಿದರೆ ಸಚಿವ ಸ್ಥಾನ ಸಿಗುವುದಿಲ್ಲ. ಇಲ್ಲಿಂದ ಎಲ್ಲರೂ ಹೋಗಿ’ ಎಂದು ಸಲಹೆಯನ್ನೂ ನೀಡಿದರು.

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಮುಸ್ಲಿಂ ಅಭ್ಯರ್ಥಿಗೆ ಟಿಕೆಟ್ ನೀಡಲಿಲ್ಲವೆಂಬ ಕಾರಣಕ್ಕೆ ಚುನಾವಣಾ ಪ್ರಚಾರದಿಂದ ಜಮೀರ್ ಅಂತರ ಕಾಯ್ದುಕೊಂಡಿದ್ದರು. ಸಂಧಾನ ಪ್ರಯತ್ನ ನಡೆದರೂ ಸಕ್ರಿಯವಾಗಿ ಚುನಾವಣಾ ಪ್ರಚಾರದಲ್ಲಿ ಭಾಗವಹಿಸಿರಲಿಲ್ಲ ಎಂದು ದೂರಲಾಗಿತ್ತು. ಹೀಗಿದ್ದರೂ ಕಾಂಗ್ರೆಸ್ ಅಭ್ಯರ್ಥಿ ಸಮರ್ಥ ಶಾಮನೂರು ಜಯಗಳಿಸಿದ್ದರು. ಫಲಿತಾಂಶ ಪ್ರಕಟವಾಗುವ ಮುನ್ನವೇ, ಕಾಂಗ್ರೆಸ್‌ನ ಮುಸ್ಲಿಂ ನಾಯಕರ ನಡುವೆ ಭಿನ್ನಾಭಿಪ್ರಾಯವೂ ಸ್ಫೋಟಗೊಂಡಿತ್ತು. ಈ ಮಧ್ಯೆ, ದಾವಣಗೆರೆ ಉಪ ಚುನಾವಣೆ ವೇಳೆ ಪಕ್ಷ ವಿರೋಧಿ ಚಟುವಟಿಕೆ ಆರೋಪಕ್ಕೆ ಸಂಬಂಧಿಸಿ ಜಮೀರ್ ಅವರದ್ದು ಎನ್ನಲಾದ ಆಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು. ಇದೇ ಕಾರಣಕ್ಕೆ ಸಿದ್ದರಾಮಯ್ಯ ಅಸಮಾಧಾನಗೊಂಡಿದ್ದಾರೆ ಎನ್ನಲಾಗಿದೆ.

‘ಸಚಿವ ಸ್ಥಾನ ಸಿಗುವ ವಿಶ್ವಾಸ’


ಪ್ರಸಾದ್ ಅಬ್ಬಯ್ಯ

ಬೆಂಗಳೂರು: ‘ಇದೇ ತಿಂಗಳ 20ರ ನಂತರ ಸಚಿವ ಸಂಪುಟ ವಿಸ್ತರಣೆ ಆಗಲಿದೆ. ಈ ಬಾರಿ ಖಂಡಿತವಾಗಿ ಸಚಿವ ಸ್ಥಾನ ಸಿಗುವ ವಿಶ್ವಾಸವಿದೆ’ ಎಂದು ಶಾಸಕ ಪ್ರಸಾದ್ ಅಬ್ಬಯ್ಯ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಸಚಿವ ಸಂಪುಟದಲ್ಲಿ ಮುಂಬೈ-ಕರ್ನಾಟಕ ಭಾಗಕ್ಕೆ ಪ್ರಾತಿನಿಧ್ಯ ಸಿಕ್ಕಿಲ್ಲ. ಇದು ಬಿಜೆಪಿ ಪ್ರಭಾವ ಇರುವ ಭಾಗ. ಹೀಗಾಗಿ ಅಲ್ಲಿಗೆ ಒಂದು ಸಚಿವ ಸ್ಥಾನ ನೀಡಬೇಕು’ ಎಂದು ಆಗ್ರಹಿಸಿದರು.

‘ಉತ್ತರ ಕರ್ನಾಟಕಕ್ಕೆ ಅನ್ಯಾಯ ಆಗುತ್ತಿದೆ’ ಎಂಬ ಮಠಾಧಿಪತಿಗಳ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘ಉತ್ತರ ಕರ್ನಾಟಕಕ್ಕೆ ಪ್ರತಿ ಬಾರಿ ಅನ್ಯಾಯ ಆಗುತ್ತಿದೆ. ಅಲ್ಲಿಗೆ ಹೆಚ್ಚಿನ ಪ್ರಾತಿನಿಧ್ಯ ಸಿಗುವಂತಾಗಬೇಕು’ ಎಂದರು.

‘ಎಲ್ಲವೂ ಒಂದೇ ಕಡೆ ಕೇಂದ್ರೀಕೃತ ಆಗಬಾರದು. ಎಲ್ಲ ಭಾಗಕ್ಕೂ ಪ್ರಾತಿನಿಧ್ಯ ಸಿಗುವಂತಾಗಬೇಕು. ಹೈಕಮಾಂಡ್ ನಾಯಕರ ಮೇಲೆ ವಿಶ್ವಾಸವಿದೆ, ಹೊಸಬರಿಗೆ ಅವಕಾಶ ಸಿಗಲಿದೆ’ ಎಂದರು.

ನಾನು ಕೂಡ ಪ್ರಬಲ ಆಕಾಂಕ್ಷಿ: ‘ನಾನು ಕೂಡ ಸಚಿವ ಸ್ಥಾನದ ಪ್ರಬಲ ಆಕಾಂಕ್ಷಿ’ ಎಂದು ಶಾಸಕ ಕೆ.ಎಸ್. ಬಸವಂತಪ್ಪ ಹೇಳಿದರು.

‘ನಮ್ಮ ಸಮುದಾಯದಿಂದ (ದಲಿತ ಎಡಗೈ) ಐವರು ಶಾಸಕರು ಇದ್ದೇವೆ. ನಮ್ಮ ಹಿರಿಯ ನಾಯಕರಾದ ಕೆ.ಎಚ್. ಮುನಿಯಪ್ಪ ಅವರಿಗೆ ಸಚಿವ ಸ್ಥಾನ ನೀಡಲಾಗಿದೆ. ಆರ್.ಬಿ. ತಿಮ್ಮಾಪುರ ಕೂಡ ನಮ್ಮ ನಾಯಕರು. ನಾನು ಜಿಲ್ಲಾ ಪಂಚಾಯಿತಿ ಸದಸ್ಯನಾಗಿದ್ದವನು. ತಿಮ್ಮಾಪುರ ಅವರನ್ನು ಬಿಟ್ಟರೆ ನಾನೇ ಹಿರಿಯವನು’ ಎಂದರು.

‘ನಾನು ಎರಡು ಬಾರಿ ಚುನಾವಣೆಗೆ ನಿಂತಿದ್ದೆ. ಒಂದು ಬಾರಿ ಸೋತಿದ್ದೇನೆ. ಹೊಸಬರಿಗೆ ಅವಕಾಶ ಕೊಡಿ ಎಂದು ಕೇಳಿದ್ದೆವು. ನಮ್ಮ ಸಮುದಾಯದಲ್ಲಿ ಯಾರಿಗಾದರೂ ಹೊಸಬರಿಗೆ ಅವಕಾಶ ಕೊಡಲಿ’ ಎಂದು ಆಗ್ರಹಿಸಿದರು.

ಸಂಪುಟದಲ್ಲಿ ಯುವಕರಿಗೆ ಆದ್ಯತೆ: ಹೈಕಮಾಂಡ್‌ಗೆ ಒತ್ತಡ

ನವದೆಹಲಿ: ಸಚಿವ ಸಂಪುಟ ವಿಸ್ತರಣೆ ಸಂದರ್ಭದಲ್ಲಿ ಯುವ ಮುಖಗಳಿಗೆ ಆದ್ಯತೆ ನೀಡಬೇಕು ಎಂದು ಒತ್ತಾಯಿಸಿ ಹಲವು ಶಾಸಕರು ಹೈಕಮಾಂಡ್ ಮೇಲೆ ಒತ್ತಡ ಹೇರಿದ್ದಾರೆ.

ಸಚಿವ ಕೃಷ್ಣ ಬೈರೇಗೌಡ, ಶಾಸಕ ರಿಜ್ವಾನ್ ಅರ್ಷದ್ ಅವರು ಹೈಕಮಾಂಡ್ ನಾಯಕರನ್ನು ಭೇಟಿ ಮಾಡಿ ಈ ಬಗ್ಗೆ ಮನವಿ ಸಲ್ಲಿಸಿದ್ದಾರೆ.

ಈವರೆಗೂ ಅವಕಾಶ ಸಿಗದ ಹಿರಿಯ ಶಾಸಕರ ಜೊತೆಗೆ ಒಂದೆರಡು ಬಾರಿ ಶಾಸಕರಾದ ನಾಯಕರಿಗೂ ಆದ್ಯತೆ ನೀಡಬೇಕು. ಮುಂಬರುವ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಕನಿಷ್ಠ 10-12 ಹೊಸ ಮುಖಗಳಿಗೆ ಮಣೆ ಹಾಕಬೇಕು ಎಂದು ಪ್ರತಿಪಾದಿಸಿದ್ದಾರೆ.

ಬಳ್ಳಾರಿ ಜಿಲ್ಲೆಯಲ್ಲಿ ಹೊಸಬರಿಗೆ ಅವಕಾಶ ನೀಡಬೇಕು ಎಂದು ಒತ್ತಾಯಿಸಿ ಬಳ್ಳಾರಿ ಶಾಸಕ ನಾರಾ ಭರತ್ ರೆಡ್ಡಿ ಹಾಗೂ ಕಂಪ್ಲಿ ಶಾಸಕ ಜೆ.ಎನ್. ಗಣೇಶ ಅವರು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಮನವಿ ಮಾಡಿದ್ದಾರೆ.

‘ಸಂಪುಟದಲ್ಲಿ ಯುವಕರಿಗೆ ಆದ್ಯತೆ ನೀಡಿ ಎಂದು ರಾಹುಲ್ ಗಾಂಧಿ ಹೇಳಿದ್ದಾರೆ. ಯಾರಿಗೆ ಕೊಟ್ಟರೂ ಅಭ್ಯಂತರವಿಲ್ಲ. ಆದರೆ, ಬಳ್ಳಾರಿಗೆ ಸಚಿವ ಸ್ಥಾನ ನೀಡಬೇಕು ಎಂದು ಮನವಿ ಮಾಡಿದ್ದೇವೆ’ ಎಂದು ನಾರಾ ಭರತ್ ರೆಡ್ಡಿ ಸುದ್ದಿಗಾರರಿಗೆ ತಿಳಿಸಿದರು.

‘ಬಳ್ಳಾರಿಯಂತಹ ಜಿಲ್ಲೆಯಲ್ಲಿ ಗೆಲ್ಲುವುದು ಸುಲಭದ ಮಾತಲ್ಲ. ಜಿಲ್ಲೆಯಲ್ಲಿ ಐದು ಮಂದಿ ಶಾಸಕರಿದ್ದೇವೆ. ಹೊಸಬರಿಗೆ ಅವಕಾಶ ನೀಡುವಂತೆ ಕೋರಿದ್ದೇವೆ. ಭವಿಷ್ಯದ ರಾಜಕೀಯಕ್ಕೆ ಯುವ ನಾಯಕತ್ವಕ್ಕೆ ಆದ್ಯತೆ ನೀಡುವುದು ಮುಖ್ಯ. ಹೀಗಾಗಿ, ನಾವು ಎಲ್ಲರನ್ನೂ ಭೇಟಿಯಾಗಿ ಅವಕಾಶ ಕೇಳಿದ್ದೇವೆ’ ಎಂದು ಗಣೇಶ್ ತಿಳಿಸಿದರು.

ಸುದ್ದಿ 2 ನಿಮಿಷ

ಕೃಷ್ಣಗೆ ಪೂರ್ಣ ಹೊಣೆ ಕೊಡಲಿ: ಶಾಸಕ ದಿನೇಶ್

ಬೆಂಗಳೂರು: ‘ಬೆಂಗಳೂರು ಅಭಿವೃದ್ಧಿ ಖಾತೆ ವಿಚಾರದಲ್ಲಿ ಸಚಿವ ಕೃಷ್ಣ ಬೈರೇಗೌಡ ಹೇಳುತ್ತಿರುವುದು ಸರಿಯಿದೆ. ಒಂದೇ ಖಾತೆಗೆ ಇಬ್ಬರು, ಮೂವರು ಮುಖ್ಯಸ್ಥರಾದರೆ ನಿಭಾಯಿಸುವುದು ಕಷ್ಟ’ ಎಂದು ಕಾಂಗ್ರೆಸ್ ಶಾಸಕ ದಿನೇಶ್ ಗುಂಡೂರಾವ್ ಅಭಿಪ್ರಾಯಪಟ್ಟರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಖಾತೆಯ ಅರ್ಧ ಒಬ್ಬರ ಬಳಿ ಇದ್ದರೆ ಅಧಿಕಾರಿಗಳಲ್ಲೂ ಗೊಂದಲ. ಖಾತೆ ನಿಭಾಯಿಸುವವರಿಗೂ ತೊಂದರೆ. ಈ ಬಗ್ಗೆ ಒಂದು ತೀರ್ಮಾನಕ್ಕೆ ಬರಬೇಕಾಗಿದೆ’ ಎಂದರು.

‘ಕೃಷ್ಣ ಬೈರೇಗೌಡರಿಗೆ ಖಾತೆಯ ಸಂಪೂರ್ಣ ಜವಾಬ್ದಾರಿ ನೀಡಬೇಕು. ಇಲ್ಲದಿದ್ದರೆ ಯಾರಿಗೆ ಕೊಡುತ್ತಾರೊ ಅವರಿಗೇ ಸಂಪೂರ್ಣ ಜವಾಬ್ದಾರಿ ಕೊಡಲಿ. ಮುಖ್ಯಮಂತ್ರಿ ತಮ್ಮ ಬಳಿ ಇಟ್ಟುಕೊಂಡರೂ ಇಡೀ ಖಾತೆಯನ್ನು ನಿಭಾಯಿಸಲಿ’ ಎಂದರು.

ಪಕ್ಷದ ವರಿಷ್ಠರಿಗೆ ಸೇರಿದ್ದು: ‘ನನಗೆ ಸಚಿವ ಸ್ಥಾನ ಕೊಡುವುದು ಪಕ್ಷದ ವರಿಷ್ಠರಿಗೆ ಸೇರಿದ್ದು. ಮೂರು ವರ್ಷ ಆರೋಗ್ಯ ಇಲಾಖೆಯಲ್ಲಿ ಪಾರದರ್ಶಕವಾಗಿ ಕೆಲಸ ಮಾಡಿದ್ದೇನೆ. ಇಲಾಖೆಯಲ್ಲಿ ಹೊಸ ಬದಲಾವಣೆಗಳನ್ನು ತಂದಿದ್ದೇನೆ. ಎಲ್ಲರಿಗೂ ನನ್ನ ಕೆಲಸದ ಬಗ್ಗೆ ಮೆಚ್ಚುಗೆಯೂ ಇದೆ’ ಎಂದರು.

‘ಸಂಪುಟ ವಿಸ್ತರಣೆ ವೇಳೆ ಹೊಸಬರಿಗೂ ಅವಕಾಶ ಕೊಡಬೇಕಾಗುತ್ತದೆ. ಜಾತಿ ಹೆಸರಿನಲ್ಲಿ ಸಚಿವ ಸ್ಥಾನ ಸಿಗಬೇಕು ಎಂದೇನೂ ಇಲ್ಲ. ನಮ್ಮ ಅರ್ಹತೆ, ಕೆಲಸ ಕಾರ್ಯಗಳ ಮೇಲೆ ಗುರುತಿಸಬೇಕು. ಅರ್ಹತೆಗೆ ಜಾತಿಯೊಂದೆ ಮಾನದಂಡ ಆಗಬಾರದು’ ಎಂದರು.

ಕೃಷ್ಣ ಮನವೊಲಿಕೆಗೆ ಸಿ.ಎಂ ಡಿಕೆಶಿ ಯತ್ನ

ನವದೆಹಲಿ: ರಾಜಧಾನಿಯ ಎಲ್ಲ ಪ್ರಾಧಿಕಾರ ಹಾಗೂ ಸಂಸ್ಥೆಗಳನ್ನು ಒಳಗೊಳ್ಳದ ಬೆಂಗಳೂರು ಅಭಿವೃದ್ಧಿ ಖಾತೆ ವಹಿಸಿಕೊಳ್ಳಲು ಹಿಂದೇಟು ಹಾಕಿರುವ ಕೃಷ್ಣ ಬೈರೇಗೌಡ ಅವರ ಮನವೊಲಿಸಲು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಯತ್ನಿಸಿದ್ದಾರೆ.

ಕಳೆದ ಮೂರು ದಿನಗಳಿಂದ ನವದೆಹಲಿಯಲ್ಲಿ ಮೊಕ್ಕಾಂ ಹೂಡಿರುವ ಕೃಷ್ಣ ಬೈರೇಗೌಡ ಅವರನ್ನು ಕರ್ನಾಟಕ ಭವನಕ್ಕೆ ಬುಧವಾರ ರಾತ್ರಿ ಕರೆಸಿಕೊಂಡು ಮುಖ್ಯಮಂತ್ರಿ ಸಮಾಲೋಚಿಸಿದ್ದಾರೆ. ‘ಖಾತೆ ಹಂಚಿಕೆಯಲ್ಲಿ ಸಣ್ಣಪುಟ್ಟ ಸಮಸ್ಯೆ ಆಗಿದೆ. ಈ ವಿಷಯವನ್ನು ಮುಂದಿಟ್ಟುಕೊಂಡು ಹೈಕಮಾಂಡ್ ನಾಯಕರನ್ನು ಭೇಟಿ ಮಾಡುವುದು ಬೇಡ. ಈ ಬಿಕ್ಕಟ್ಟನ್ನು ನಾನೇ ಬಗೆಹರಿಸುತ್ತೇನೆ. ಬೆಂಗಳೂರಿಗೆ ತೆರಳಿದ ಬಳಿಕ ಮತ್ತೊಂದು ಸುತ್ತು ಮಾತುಕತೆ ನಡೆಸಿ ಸಮಸ್ಯೆ ಬಗೆಹರಿಸುತ್ತೇನೆ’ ಎಂದು ಶಿವಕುಮಾರ್ ಭರವಸೆ ನೀಡಿದ್ದಾರೆ ಎಂದು ಗೊತ್ತಾಗಿದೆ.

ಆ ಬಳಿಕ ಮುನಿಸು ಮರೆತ ಕೃಷ್ಣ ಬೈರೇಗೌಡ ಅವರು ಅಧಿಕಾರಿಗಳ ಸೌಹಾರ್ದ ಕೂಟದಲ್ಲಿ ಭಾಗಿಯಾದರು. ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಶಿವಕುಮಾರ್ ಗುರುವಾರ ಸಂಜೆ ಭೇಟಿ ಮಾಡಿ ಅಹವಾಲು ಸಲ್ಲಿಸಿದರು. ಈ ವೇಳೆ, ಕೃಷ್ಣ ಬೈರೇಗೌಡ ಜತೆಗಿದ್ದರು.

ಬೆಂಗಳೂರು ಅಭಿವೃದ್ಧಿ ಖಾತೆಯ ಮೇಲೆ ಕಣ್ಣಿಟ್ಟಿದ್ದ ರಾಮಲಿಂಗಾ ರೆಡ್ಡಿ ಅವರನ್ನು ಡಿ.ಕೆ. ಶಿವಕುಮಾರ್ ಮತ್ತು ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಮನವೊಲಿಸಿದ್ದರು. ಆದರೆ, ಕೃಷ್ಣ ಬೈರೇಗೌಡ ಅವರು ತಮಗೆ ಹಂಚಿಕೆಯಾಗಿರುವ ಖಾತೆಯ ಬಗ್ಗೆ ಸ್ಪಷ್ಟತೆ ಸಿಗುವವರೆಗೂ ವಹಿಸಿಕೊಳ್ಳದೇ ಇರಲು ನಿರ್ಧರಿಸಿದ್ದರು. ಶಾಸಕ ರಿಜ್ವಾನ್ ಅರ್ಷದ್ ಮತ್ತು ಮಾಜಿ ಸಚಿವ ಎನ್.ಎಸ್. ಬೋಸರಾಜು ಪುತ್ರ ರವಿ ಬೋಸರಾಜು ಜೊತೆಗೆ ದೆಹಲಿಗೆ ದೌಡಾಯಿಸಿದ್ದರು. ರಾಷ್ಟ್ರ ರಾಜಧಾನಿಯಲ್ಲಿ ಹೈಕಮಾಂಡ್ ನಾಯಕರ ಭೇಟಿಗೂ ಪ್ರಯತ್ನಿಸಿದ್ದರು.

ಕ್ರೀಡಾ ಖಾತೆಗೂ ಬೇಡಿಕೆ ಇಟ್ಟಿದ್ದೆ : ಸಚಿವ ಜಾರಕಿಹೊಳಿ

ಪ್ರಜಾವಾಣಿ ವಾರ್ತೆ

ಸತೀಶ ಜಾರಕಿಹೊಳಿ

ಬೆಂಗಳೂರು: ‘ಯಾರಿಗಾದರೂ ಅಸಮಾಧಾನ ಇದ್ದರೆ ಸರಿಪಡಿಸಬೇಕು. ಆಡಳಿತ ಚುರುಕುಗೊಳ್ಳಲು ಸಮಯಬೇಕು. ಹೆಚ್ಚುವರಿ ಖಾತೆಗೆ ನಾನೂ ಬೇಡಿಕೆ ಇಟ್ಟಿದ್ದೆ’ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, ‘ಕ್ರೀಡಾ ಖಾತೆ ಕೇಳಿದ್ದೆ. ಅದನ್ನು ಬೇರೆಯವರಿಗೆ ಕೊಟ್ಟಿದ್ದಾರೆ. ಕ್ರೀಡಾ ಖಾತೆ ಕೊಟ್ಟಿದ್ದರೆ ಕ್ರಾಂತಿ ಮಾಡುತ್ತಿದ್ದೆ. ಧರಂ ಸಿಂಗ್ ಅವಧಿಯಲ್ಲಿಯೂ ಕ್ರೀಡಾ ಖಾತೆ ಕೇಳಿದ್ದೆ. ಈಗ ಪರಮೇಶ್ವರ ಅವರಿಗೆ ಕೊಟ್ಟಿದ್ದಾರೆ. ಅವರಿಗೆ ಕ್ರೀಡೆ ಬಗ್ಗೆ ಒಲವಿದೆ. ಅದಕ್ಕೆ ಕೇಳಿ ಪಡೆದಿರಬಹುದು’ ಎಂದರು.

‘ಸಿದ್ದರಾಮಯ್ಯ ಮತ್ತು ಸತೀಶ ಜಾರಕಿಹೊಳಿ ನಡುವೆ ಯಾವುದೇ ಅಸಮಾಧಾನ ಇಲ್ಲ’ ಎಂದು ಯತೀಂದ್ರ ಸಿದ್ದರಾಮಯ್ಯ ನೀಡಿದ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿದ ಸತೀಶ, ‘ಇದನ್ನು ನಾನು ಮೊದಲೇ ಹೇಳಿದ್ದೆ. ಕಾಂಗ್ರೆಸ್‌ನಲ್ಲಿ ಶಕ್ತಿ ಕುಗ್ಗಿಸುವ ಪ್ರಯತ್ನ ನಡೆಸಲಾಯಿತು. ಐಟಿ ಸೆಲ್‌ನಿಂದ ಅಪಪ್ರಚಾರ ನಡೆಯಿತು’ ಎಂದರು.

‘ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೂ ಮುಖ್ಯಮಂತ್ರಿ ಸ್ಥಾನಕ್ಕೂ ಸಂಬಂಧ ಇಲ್ಲ. ಅಧ್ಯಕ್ಷ ಆಗಿಯೇ ಪಕ್ಷದ ಕೆಲಸ ಮಾಡಬೇಕು ಎಂದೇನೂ ನಿಯಮವಿಲ್ಲ. ದುಡಿದರೆ ಕೂಲಿ ಸಿಕ್ಕಿಯೇ ಸಿಗುತ್ತದೆ. ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ಕೆಲಸ ಮಾಡಿದ್ದೇವೆಂದು ಅವರಿಗೆ ಅಧಿಕಾರ ಕೊಟ್ಟರು. ಯಾರು ಪಕ್ಷಕ್ಕೆ ದುಡಿಯುತ್ತಾರೊ ಅವರಿಗೆ ಅಧಿಕಾರ ಸಿಗಲೇಬೇಕು’ ಎಂದರು.

‘2028ರ ವಿಧಾನಸಭೆ ಚುನಾವಣೆಯ ಬಗ್ಗೆ ಈಗಲೇ ಚರ್ಚೆ ಯಾಕೆ? ನನಗೂ ಕೂಲಿ ಸಿಕ್ಕಿದೆ, ಮಂತ್ರಿ ಮಾಡಿದ್ದಾರೆ. ಕೆಲಸ ಮಾಡುವವರಿಗೆ ಹುದ್ದೆ ಅವಶ್ಯ ಇಲ್ಲ. 2028ರ ಚುನಾವಣೆಗೆ ಪಕ್ಷ ಕಟ್ಟುತ್ತೇವೆ. ಕೆಲಸ ಮಾಡಿದರೆ ಕೂಲಿ ಸಿಗುತ್ತದೆ. ಅಹಿಂದ ಸಂಘಟನೆ ಬಲಪಡಿಸುವ ಕೆಲಸ ಮಾಡುತ್ತೇನೆ. ಅಹಿಂದ ಸಂಘಟನೆ ಮಾಡಲು ನಾವಿದ್ದೇವೆ. ಬೇರೆಯವರೂ ಇದ್ದಾರೆ’ ಎಂದರು.

ವಿಶೇಷ ಅನುದಾನ: ಪ್ರಧಾನಿಗೆ ಮೊರೆ

ಮೇಕೆದಾಟು ಯೋಜನೆಗೂ ಅನುಮತಿ ಕೊಡಿ: ಮುಖ್ಯಮಂತ್ರಿ ಡಿಕೆಶಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನಲ್ಲಿ ಮೂಲಸೌಕರ್ಯ ಅಭಿವೃದ್ಧಿಪಡಿಸಲು ₹26 ಸಾವಿರ ಕೋಟಿ ವಿಶೇಷ ಅನುದಾನ ನೀಡಬೇಕು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಪ್ರಧಾನಿ ನರೇಂದ್ರ ಮೋದಿ ಅವರಲ್ಲಿ ಒತ್ತಾಯಿಸಿದ್ದಾರೆ.

ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಮೊದಲ ಬಾರಿಗೆ ಪ್ರಧಾನಿ ಅವರನ್ನು ಗುರುವಾರ ಇಲ್ಲಿ ಭೇಟಿ ಮಾಡಿದ ಶಿವಕುಮಾರ್ ಅವರು ರಾಜ್ಯದ ಸಮಗ್ರ ಅಭಿವೃದ್ಧಿಗೆ ಕೇಂದ್ರದ ಸಹಕಾರ ಕೋರಿದ್ದಾರೆ.

ದೇಶದಲ್ಲಿ ನವೀಕರಿಸಬಹುದಾದ ಇಂಧನದ ಗುರಿಗಳನ್ನು ತಲುಪುವ ದಿಸೆಯಿಂದ ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಗೆ ಕೇಂದ್ರ ಅರಣ್ಯ ಸಚಿವಾಲಯದಿಂದ ಶೀಘ್ರ ಅನುಮೋದನೆ ಕೊಡಿಸಬೇಕು. ಇದು ರಾಷ್ಟ್ರೀಯ ಅಗತ್ಯದ ಇಂಧನ ಯೋಜನೆ ಎಂದು ಮುಖ್ಯಮಂತ್ರಿ ಪ್ರತಿಪಾದಿಸಿದ್ದಾರೆ.

ರಾಷ್ಟ್ರಪತಿ ಭವನದಲ್ಲಿ ನರೇಂದ್ರ ಮೋದಿ ಅವರಿಗೆ ಡಿ.ಕೆ. ಶಿವಕುಮಾರ್ ಅವರು ಬಸವಣ್ಣ ಮೂರ್ತಿ ನೀಡಿದರು

ಮುಖ್ಯಮಂತ್ರಿ ಬೇಡಿಕೆಗಳು:

- ಮೇಕೆದಾಟು ಯೋಜನೆಗೆ ಕೇಂದ್ರ ಜಲ ಆಯೋಗದಿಂದ ಶೀಘ್ರ ಅನುಮೋದನೆ ಕೊಡಿಸಬೇಕು.
- ಕೃಷ್ಣಾ ಮೇಲ್ದಂಡೆ ಯೋಜನೆಯ ತ್ವರಿತ ಅನುಷ್ಠಾನಕ್ಕೆ ಕೇಂದ್ರ ಸರ್ಕಾರ ಕೂಡಲೇ ಗೆಜೆಟ್ ಅಧಿಸೂಚನೆ ಹೊರಡಿಸಬೇಕು.
- ಭದ್ರಾ ಮೇಲ್ದಂಡೆ ಯೋಜನೆಗೆ ಕೇಂದ್ರ ಬಜೆಟ್‌ನಲ್ಲಿ ಘೋಷಿಸಿರುವ ₹5300 ಕೋಟಿ ಅನುದಾನ ಬಿಡುಗಡೆ ಮಾಡಬೇಕು.
- ಮಹದಾಯಿ ಯೋಜನೆಗೆ ಅನುಮತಿ ನೀಡಲು ಕೇಂದ್ರ ಅರಣ್ಯ ಸಚಿವಾಲಯ ಸತಾಯಿಸುತ್ತಿದೆ. ಇದರಿಂದಾಗಿ, ನ್ಯಾಯಮಂಡಳಿ ಹಂಚಿಕೆ ಮಾಡಿರುವ ನೀರನ್ನು ಬಳಸಲು ಸಾಧ್ಯವಾಗುತ್ತಿಲ್ಲ. ಯೋಜನೆಗೆ ಅನುಮತಿ ನೀಡುವಂತೆ ಕೇಂದ್ರ ಅರಣ್ಯ ಸಚಿವಾಲಯಕ್ಕೆ ನಿರ್ದೇಶನ ನೀಡಬೇಕು.
- ಕೃಷಿ ಸಿಂಚಾಯಿ ಯೋಜನೆಯಡಿ ರಾಜ್ಯದ ವಿವಿಧ ಯೋಜನೆಗಳಿಗೆ ₹11,122 ಕೋಟಿ ಅನುದಾನ ಬಿಡುಗಡೆಗೆ ಕ್ರಮ ಕೈಗೊಳ್ಳಬೇಕು.
- ಗೋದಾವರಿ–ಕಾವೇರಿ ಹಾಗೂ ಬೇಡ್ತಿ–ವರದಾ ನದಿಗಳ ಜೋಡಣೆ ಸಂದರ್ಭದಲ್ಲಿ ರಾಜ್ಯಕ್ಕೆ ಕನಿಷ್ಠ 45 ಟಿಎಂಸಿ ಅಡಿ ನೀರು ಹಂಚಿಕೆ ಮಾಡಬೇಕು.
- ರಾಯಚೂರಿಗೆ ಏಮ್ಸ್ ಮಂಜೂರು ಮಾಡಬೇಕು.
- ಕೇಂದ್ರ ವಿಧಿಸಿದ್ದ ಎಲ್ಲ ಷರತ್ತುಗಳನ್ನು ಪಾಲಿಸಿದರೂ 15ನೇ ಹಣಕಾಸು ಆಯೋಗವು ರಾಜ್ಯದ ಗ್ರಾಮ ಪಂಚಾಯಿತಿಗಳಿಗೆ ಹಂಚಿಕೆ ಮಾಡಿದ್ದ ₹2800 ಕೋಟಿ ಅನುದಾನ ಇಲ್ಲಿಯವರೆಗೂ ಬಿಡುಗಡೆ ಆಗಿಲ್ಲ. ಈ ಅನುದಾನ ಬಿಡುಗಡೆ ಮಾಡಬೇಕು.
- ಬೆಂಗಳೂರಿನ ಎಸ್‌ಟಿಆರ್‌ಆರ್ ಯೋಜನೆಗೆ ಕೇಂದ್ರ ಸಚಿವ ಸಂಪುಟದ ಅನುಮೋದನೆ ಬಾಕಿ ಇದೆ. ಅನುಮೋದನೆ ಸಿಗಬಹುದು ಎಂಬ ನಿರೀಕ್ಷೆಯಲ್ಲಿ ಯೋಜನೆಯ ಟೆಂಡರ್ ಕರೆಯಲಾಗಿದೆ. ಒಪ್ಪಿಗೆ ಸಿಗದ ಕಾರಣ ಯೋಜನೆ ನನೆಗುದಿಗೆ ಬಿದ್ದಿದೆ.
- ಬೆಂಗಳೂರು ಉಪನಗರ ರೈಲು ಯೋಜನೆಗೆ ಅನುದಾನ ಬಿಡುಗಡೆ ಮಾಡಬೇಕು. ಬೆಂಗಳೂರು–ಮುಂಬೈ ನಡುವೆ ಹೈಸ್ಪೀಡ್ ರೈಲು ಕಾರಿಡಾರ್ ಯೋಜನೆ ಆರಂಭಿಸಬೇಕು.

ರಾಜ್ಯದ ವಿವಿಧೆಡೆ ಭಾರಿ ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಶುಕ್ರವಾರದಿಂದ ನಾಲ್ಕು ದಿನ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕರಾವಳಿಯ ಉತ್ತರ ಕನ್ನಡ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗೆ ‘ಆರೆಂಜ್ ಅಲರ್ಟ್’ ನೀಡಲಾಗಿದ್ದು, ಈ ಜಿಲ್ಲೆಗಳಲ್ಲಿ ಗಂಟೆಗೆ 30ರಿಂದ 40 ಕಿ.ಮೀ. ವೇಗದಲ್ಲಿ ಗಾಳಿಯೊಂದಿಗೆ ಧಾರಾಕಾರ ಮಳೆಯಾಗುವ ಸಾಧ್ಯತೆಯಿದೆ. ಉತ್ತರ ಒಳನಾಡಿನ 11 ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’ ಘೋಷಿಸಲಾಗಿದೆ. ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಯಲ್ಲಿ ಬಿರುಗಾಳಿಯೊಂದಿಗೆ ಭಾರಿ ಮಳೆಯಾಗುವ ಸಂಭವವಿದೆ.

ಬಾಗಲಕೋಟೆ, ಬೆಳಗಾವಿ, ಬೀದರ್, ಕಲಬುರಗಿ, ಕೊಪ್ಪಳ, ರಾಯಚೂರು, ವಿಜಯಪುರ ಮತ್ತು ಯಾದಗಿರಿ ಜಿಲ್ಲೆಯಲ್ಲಿ ಗಾಳಿಯೊಂದಿಗೆ ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ.

ಕೇಂಬ್ರಿಡ್ಜ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ನಾರ್ತ್ ಕ್ಯಾಂಪಸ್ ಸಹಯೋಗ

ರೀಲ್ಸ್ ಸ್ಪರ್ಧೆ: ಧೀರಜ್ ಬಳ್ಳಾರೆ ಪ್ರಥಮ

ಪ್ರಜಾವಾಣಿ ವಾರ್ತೆ

ಧೀರಜ್


ಸ್ನೇಹಾ ಶಂಕರ್

ಪ್ರವೀಣ್ ನಾಯಕ್

CAMBRIDGE INSTITUTE OF TECHNOLOGY NORTH CAMPUS

ಬೆಂಗಳೂರು: ವ್ಯಾಲೆಂಟೈನ್ಸ್ ಡೇ ಅಂಗವಾಗಿ ಕೇಂಬ್ರಿಡ್ಜ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ನಾರ್ತ್ ಕ್ಯಾಂಪಸ್ ಸಹಯೋಗದೊಂದಿಗೆ ಪ್ರಜಾವಾಣಿ ಡಿಜಿಟಲ್ (prajavani.net) ಆಯೋಜಿಸಿದ್ದ ರೀಲ್ಸ್ ಸ್ಪರ್ಧೆಯ ಫಲಿತಾಂಶ ಪ್ರಕಟವಾಗಿದೆ. ಧೀರಜ್ ಬಳ್ಳಾರೆ, ಪ್ರದೀಪ್ ನಾಯಕ್ ಹಾಗೂ ಸ್ನೇಹಾ ಶಂಕರ್ ಶೇಟ್ ಕ್ರಮವಾಗಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಬಹುಮಾನ ಪಡೆದಿದ್ದಾರೆ.

ಕಳೆದ ಫೆಬ್ರುವರಿಯಲ್ಲಿ ರೀಲ್ಸ್ ಸ್ಪರ್ಧೆಗೆ ಪ್ರವೇಶ ಆಹ್ವಾನಿಸಲಾಗಿತ್ತು. ಬಂದಿದ್ದ ಎರಡು ಸಾವಿರಕ್ಕೂ ಅಧಿಕ ರೀಲ್‌ಗಳನ್ನು ಬಾಹ್ಯ ತೀರ್ಪುಗಾರರ ಸಹಿತ ಮೂರು ಹಂತಗಳಲ್ಲಿ ವಿಶ್ಲೇಷಿಸಿ ಅಂತಿಮ ವಿಜೇತರ ಹೆಸರುಗಳನ್ನು ಪ್ರಕಟಿಸಲಾಗಿದೆ.

ಪ್ರೀತಿ, ಸ್ನೇಹ, ನಂಬಿಕೆ, ಸಂಬಂಧಗಳು, ಬದುಕಿನ ಮೌಲ್ಯ ಹಾಗೂ ಜೀವನ ಸೌಂದರ್ಯವನ್ನು ಪ್ರತಿಬಿಂಬಿಸುವ ಸೃಜನಾತ್ಮಕ ರೀಲ್‌ಗಳನ್ನು ಆಹ್ವಾನಿಸಲಾಗಿತ್ತು. ಇದಕ್ಕೆ ಅಭೂತಪೂರ್ವ ಪ್ರತಿಕ್ರಿಯೆ ಓದುಗರಿಂದ ವ್ಯಕ್ತವಾಗಿದ್ದವು.

ಈ ಪೈಕಿ ಜ್ಯೂರಿಗಳು ಅತ್ಯುತ್ತಮ ಎಂದು ತೀರ್ಮಾನಿಸಿದ 13 ರೀಲ್‌ಗಳನ್ನು ಬಹುಮಾನಕ್ಕೆ ಆಯ್ಕೆ ಮಾಡಲಾಗಿದೆ. ಉಡುಪಿ ಜಿಲ್ಲೆಯ ಕಟಪಾಡಿಯ ಕನ್ನಡ ಪ್ರಾಧ್ಯಾಪಕ ಧೀರಜ್ ಬೆಳ್ಳಾರೆ ಪ್ರಥಮ ಸ್ಥಾನದೊಂದಿಗೆ ₹25 ಸಾವಿರ ನಗದು ಬಹುಮಾನ ಪಡೆಯಲಿದ್ದಾರೆ. ದ್ವಿತೀಯ ಸ್ಥಾನವನ್ನು ಮಂಗಳೂರಿನ ಬಿ.ಸಿ. ರೋಡ್‌ನವರಾದ ಛಾಯಾಗ್ರಾಹಕ ಪ್ರದೀಪ್ ನಾಯಕ್ ಪಡೆದಿದ್ದು, ₹20 ಸಾವಿರ ನಗದು ಹಾಗೂ ತೃತೀಯ ಬಹುಮಾನಕ್ಕೆ ಆಯ್ಕೆಯಾಗಿರುವ ಉತ್ತರ ಕನ್ನಡ ಜಿಲ್ಲೆಯ ಶಿರಸಿಯ ಸ್ನೇಹಾ ಶಂಕರ್ ಶೇಟ್ ₹15 ಸಾವಿರ ನಗದು ಗಳಿಸಲಿದ್ದಾರೆ.

ಉಳಿದಂತೆ ಡಾ. ನಂದೀಶ್ ವೈ.ಡಿ., ರಂಜಿತ್ ನೀರಮಾರ್ಗ, ಮೇಘಾ ವಾದಿರಾಜ್, ಅಕ್ಷಯ್ ಕುಮಾರ್, ಹರ್ಷ ಕುಮಾರ್, ದೀಕ್ಷಿತ್ ಕುಮಾರ್ ಬಿ., ವಿದ್ಯಾ ಮಂಜುನಾಥ್ ಬಡಿಗೇರ್, ಪುನೀತ್ ಶಿವಕುಮಾರ್, ಅಭಿಲಾಷ್ ಮತ್ತು ಹರ್ಷಿತಾ, ಪ್ರದೀಪ್‌ರಾಜ್ ಬಿ.ಕೆ. ಇವರುಗಳು ಸಮಾಧಾನಕರ ಬಹುಮಾನಕ್ಕೆ ಭಾಜನರಾಗಿದ್ದಾರೆ.

ಪ್ರಶಸ್ತಿ ಪುರಸ್ಕಾರ ಕಾರ್ಯಕ್ರಮ ಬೆಂಗಳೂರಿನಲ್ಲಿ ಶೀಘ್ರದಲ್ಲೇ ನಡೆಯಲಿದ್ದು, ವಿಜೇತರನ್ನು ವೈಯಕ್ತಿಕವಾಗಿ ಸಂಪರ್ಕಿಸಿ ಮಾಹಿತಿ ನೀಡಲಾಗುವುದು.

ಪ್ರಶಸ್ತಿಗಳಿಗೆ ಭಾಜನರಾದ ಸಾಧಕರು

ನಿರ್ದೇಶಕ ನಾಗಾಭರಣ

ನಾಲ್ಕು ದಶಕಗಳಿಗೂ ಹೆಚ್ಚು ಅವಧಿ ಕನ್ನಡ ರಂಗಭೂಮಿ ಮತ್ತು ಸಿನಿಮಾ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿರುವ ಟಿ.ಎಸ್. ನಾಗಾಭರಣ ಅವರು ಮೈಸೂರು ಜಿಲ್ಲೆಯ ತಲಕಾಡಿನವರು. ನಟನೆ, ನಿರ್ದೇಶನ ಎರಡರಲ್ಲೂ ರಾಜ್ಯ, ರಾಷ್ಟ್ರ ಮಟ್ಟದ ಹಲವು ಪ್ರಶಸ್ತಿ ಪುರಸ್ಕಾರಗಳನ್ನು ಪಡೆದಿದ್ದಾರೆ. ಅವರ ನಿರ್ದೇಶನದ ‘ಮೈಸೂರು ಮಲ್ಲಿಗೆ’, ‘ಚಿಗುರಿದ ಕನಸು’, ‘ನಾಗಮಂಡಲ’ ಸಿನಿಮಾಗಳು ಹಿಂದಿ ಸಿನಿಮಾಗಳಿಗೂ ಪ್ರೇರಣೆಯಾಗಿವೆ.

ಯಕ್ಷಗಾನ ಕಲಾವಿದ ಶಿವಾನಂದ



ಯಕ್ಷಗಾನ ಕಲಾವಿದ ಕೆರೆಮನೆ ಶಿವಾನಂದ ಹೆಗಡೆ ಅವರು ಉತ್ತರ ಕನ್ನಡ ಜಿಲ್ಲೆ ಹೊನ್ನಾವರ ತಾಲ್ಲೂಕಿನ ಗುಣವಂತೆಯವರು. ಈವರೆಗೆ ಸಾವಿರಕ್ಕೂ ಹೆಚ್ಚು ಯಕ್ಷಗಾನಗಳಲ್ಲಿ ಪಾತ್ರ ಮಾಡಿದ್ದಾರೆ. ಯಕ್ಷಗಾನದ ಜೊತೆಗೆ ಕಥಕ್, ಸರೈಕಲಾಛಾವ್, ಮಣಿಪುರಿ ಯುದ್ಧನೃತ್ಯ ಸಹಿತ ಜನಪದ ನೃತ್ಯಗಳನ್ನು ಕರಗತ ಮಾಡಿಕೊಂಡಿದ್ದಾರೆ. ಯಕ್ಷಗಾನದಲ್ಲಿ ಪುರುಷ ಮತ್ತು ಸ್ತ್ರೀ ಪಾತ್ರಗಳೆರಡನ್ನೂ ಯಶಸ್ವಿಯಾಗಿ ನಿಭಾಯಿಸಬಲ್ಲ ಕಲಾವಿದರಾಗಿ ಹೆಸರು ಮಾಡಿದ್ದಾರೆ.

ಗಾಯಕಿ ಮಹಾಲಕ್ಷ್ಮಿ ಶೆಣೈ

ಹಿಂದೂಸ್ತಾನಿ ಗಾಯಕಿ ವಿದುಷಿ ಮಹಾಲಕ್ಷ್ಮಿ ಶೆಣೈ ಅವರು ಉಡುಪಿ ಜಿಲ್ಲೆಯ ಕಾರ್ಕಳದವರು. ಡಾ. ಪ್ರಕಾಶ್ ಶೆಣೈ ಮತ್ತು ಭಾರತಿ ಶೆಣೈ ದಂಪತಿ ಪುತ್ರಿ. ಅವರು 20 ರಾಜ್ಯಗಳಲ್ಲಿ 1500ಕ್ಕೂ ಹೆಚ್ಚು ಸಂಗೀತ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಅವರು, ಗ್ರ್ಯಾಮಿ ಪ್ರಶಸ್ತಿ ವಿಜೇತ ಹಿಂದೂಸ್ತಾನಿ ಸಂಗೀತ ವಿದ್ವಾಂಸ ಪಂಡಿತ್ ವಿಶ್ವಮೋಹನ್ ಭಟ್ ಅವರ ಶಿಷ್ಯೆ.

ನಾಟ್ಯ ಕಲಾವಿದೆ ಶಿಲ್ಪಾ ನಂಜಪ್ಪ

ಭರತನಾಟ್ಯ ಕಲಾವಿದೆ ಶಿಲ್ಪಾ ನಂಜಪ್ಪ ಅವರು ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕಿನ ಕಾಂಡನಕೊಲ್ಲಿ ಗ್ರಾಮದವರು. ಪತಿ ಮುಕ್ಕಾಟಿರ ನಂಜಪ್ಪ. ಅಲ್ಲಾರಂಡ ಉತ್ತಪ್ಪ ಮತ್ತು ಕಾವೇರಿಯಮ್ಮ ದಂಪತಿ ಪುತ್ರಿ. ದೂರದರ್ಶನದಲ್ಲಿ ‘ಎ’ ಶ್ರೇಣಿ ಕಲಾವಿದೆ. ದೇಶ–ವಿದೇಶಗಳಲ್ಲಿ 300ಕ್ಕೂ ಅಧಿಕ ಏಕವ್ಯಕ್ತಿ ಭರತನಾಟ್ಯ ಪ್ರದರ್ಶನ ನೀಡಿದ್ದಾರೆ.

ಗಾಯಕಿ ಶಿವಶ್ರೀ ಸ್ಕಂದಪ್ರಸಾದ್

ಶಿವಶ್ರೀ ಸ್ಕಂದಪ್ರಸಾದ್ ಅವರು ಕರ್ನಾಟಕ ಸಂಗೀತ ಕೃತಿಗಳು, ಭಜನೆಗಳು ಮತ್ತು ಅಭಂಗಗಳ ಭಾವಪೂರ್ಣ ಗಾಯನದ ಮೂಲಕ ಪ್ರಪಂಚದಾದ್ಯಂತ ಗಮನ ಸೆಳೆದ ಕಲಾವಿದೆ. ದೇಶದ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಸಮಕಾಲೀನ ಪ್ರೇಕ್ಷಕರಿಗೆ ತಲುಪಿಸುವಲ್ಲಿ ತಮ್ಮನ್ನು ಗಂಭೀರವಾಗಿ ತೊಡಗಿಸಿಕೊಂಡಿದ್ದಾರೆ. ಇವರು ಸಂಸದ ತೇಜಸ್ವಿ ಸೂರ್ಯ ಅವರ ಪತ್ನಿ.

ಮೃದಂಗ ವಿದ್ವಾನ್ ಎ.ವಿ. ಆನಂದ್

ಮೃದಂಗ ವಿದ್ವಾನ್ ಎ.ವಿ. ಆನಂದ್ ಅವರು ಹಾಸನದವರು. ಮೈಸೂರು ಸಂಸ್ಥಾನದ ಆಸ್ಥಾನ ವಿದ್ವಾನ್ ಆಗಿದ್ದ ಪಿಟೀಲು ಚೌಡಯ್ಯ ಅವರೊಂದಿಗೆ 11ನೇ ವಯಸ್ಸಿನಲ್ಲೇ ಸಂಗೀತ ಕಛೇರಿ ನೀಡಿದ್ದ ಹೆಗ್ಗಳಿಕೆ ಅವರದು. ನಂತರವೂ ಅವರೊಂದಿಗೆ ಹಲವು ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದರು. ಮೂರ್ನಾಲ್ಕು ತಲೆಮಾರಿನ ವಿದ್ವಾನರಿಗೆ ಮೃದಂಗ ಸಹಕಾರ ನೀಡಿದ್ದಾರೆ. ಆಕಾಶವಾಣಿಯ ‘ಎ’ ಗ್ರೇಡ್ ಕಲಾವಿದರಾಗಿದ್ದ ಅವರು ‘ಕರ್ನಾಟಕ ಕಲಾಶ್ರೀ’, ‘ಲಯಭೂಷಣ’ ಸೇರಿ ಹಲವು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

ಆನಂದ್, ನಾಗಾಭರಣ, ಕೆರೆಮನೆಗೆ ಪ್ರಶಸ್ತಿ

ಒಂದನೇ ಪುಟದಿಂದ...

ಅಲ್ಲದೆ ಸಂಗೀತ, ನೃತ್ಯ, ರಂಗಭೂಮಿ, ಜಾನಪದ, ಗೊಂಬೆಯಾಟ ಮತ್ತು ಪ್ರದರ್ಶನ ಕಲೆ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿರುವ ದೇಶದ 108 ಕಲಾವಿದರಿಗೆ ‘ಅಕಾಡೆಮಿ ಪುರಸ್ಕಾರ’ ಮತ್ತು 106 ಯುವ ಕಲಾವಿದರಿಗೆ ‘ಉಸ್ತಾದ್ ಬಿಸ್ಮಿಲ್ಲಾ ಖಾನ್ ಯುವ ಪುರಸ್ಕಾರ’ಕ್ಕೆ ಆಯ್ಕೆ ಮಾಡಲಾಗಿದೆ ಎಂದು ಸಚಿವಾಲಯದ ಪ್ರಕಟಣೆ ತಿಳಿಸಿದೆ.

‘ಅಕಾಡೆಮಿ ರತ್ನ’ ಪ್ರಶಸ್ತಿಯು ₹3 ಲಕ್ಷ ನಗದು, ‘ಅಕಾಡೆಮಿ ಪುರಸ್ಕಾರ’ ₹1 ಲಕ್ಷ ನಗದು, ಯುವ ಪುರಸ್ಕಾರ ₹25,000 ನಗದು, ತಾಮ್ರಪತ್ರ ಮತ್ತು ಅಂಗವಸ್ತ್ರಗಳನ್ನು ಒಳಗೊಂಡಿರುತ್ತದೆ ಎಂದು ಪ್ರಕಟಣೆ ಹೇಳಿದೆ. ಈ ಪ್ರಶಸ್ತಿಗಳನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಪ್ರದಾನ ಮಾಡಲಿದ್ದಾರೆ.

ಅಕಾಡೆಮಿ ರತ್ನ: ಕಲಾವಿದರಾದ ರಾಮಲಾಲ್ ಬರೆತ್, ರೀಟಾ ಗಂಗೂಲಿ, ಪುರು ದಧೀಚ, ಚಿತ್ತರಂಜನ್ ಜ್ಯೋತಿಷಿ, ಪಸುಮಾರ್ಥಿ ರತ್ತಯ್ಯ ಶರ್ಮ, ಸುಧಾರಾಣಿ ರಘುಪತಿ ಅವರು ಅಕಾಡೆಮಿ ಫೆಲೋಷಿಪ್ (ಅಕಾಡೆಮಿ ರತ್ನ) ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಆರೋಗ್ಯ ಸೌಲಭ್ಯ ಕಲ್ಪಿಸಲು ತಯಾರಿ: ಮುರಳಿ ಅಶೋಕ್ ಸಾಲಪ್ಪ

ರಾಜ್ಯದಲ್ಲಿ 7,483 ಶೌಚಗುಂಡಿ ಕಾರ್ಮಿಕರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಗುರುತಿಸಲಾಗಿರುವ 7,483 ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ (ಶೌಚಗುಂಡಿ ಕಾರ್ಮಿಕರು) ಆರೋಗ್ಯ ವಿಮೆ ಸೌಲಭ್ಯ ಕಲ್ಪಿಸಲು ಪ್ರಸ್ತಾವ ಸಿದ್ಧಪಡಿಸಲಾಗಿದೆ’ ಎಂದು ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುರಳಿ ಅಶೋಕ್ ಸಾಲಪ್ಪ ತಿಳಿಸಿದರು.

ಗುರುವಾರ ಇಲ್ಲಿ ಆರಂಭವಾದ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ರಾಜ್ಯಮಟ್ಟದ ಎರಡು ದಿನಗಳ ಜಾಗೃತಿ ಕಾರ್ಯಾಗಾರವನ್ನು ಅವರು ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು, ‘ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ನೇರ ಸಾಲ ಸೌಲಭ್ಯವನ್ನು ಕಡಿಮೆ ಮಾಡಿ, ಜೀವನೋಪಾಯಕ್ಕೆ ಬೇಕಾದ ರೀತಿಯಲ್ಲಿ ಸಾಮಗ್ರಿ–ಸಹಾಯಧನ ದೊರಕಿಸಲು ಉದ್ದೇಶಿಸಲಾಗಿದೆ’ ಎಂದು ತಿಳಿಸಿದರು.

ಬೆಂಗಳೂರಿನಲ್ಲಿ ಗುರುವಾರದಿಂದ ಆರಂಭವಾದ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ರಾಜ್ಯಮಟ್ಟದ ಎರಡು ದಿನಗಳ ಜಾಗೃತಿ ಕಾರ್ಯಾಗಾರವನ್ನು ಉದ್ಘಾಟಿಸಿ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ ಮುರಳಿ ಅಶೋಕ್ ಸಾಲಪ್ಪ ಮಾತನಾಡಿದರು

‘ಸಫಾಯಿ ಕರ್ಮಚಾರಿಗಳು ಮತ್ತು ಮ್ಯಾನುಯಲ್ ಸ್ಕ್ಯಾವೆಂಜರ್‌ಗಳ ಮಕ್ಕಳು ಸಾಂಪ್ರದಾಯಿಕ ಕೆಲಸಕ್ಕೆ ಜೋತು ಬೀಳದೆ ಹೊಸ ಕೆಲಸಗಳನ್ನು ಹುಡುಕಿಕೊಂಡಿದ್ದಾರೆ. ಸಾಮಾಜಿಕ ಮಾಧ್ಯಮಗಳಲ್ಲಿ ಸಕ್ರಿಯರಾಗಿದ್ದಾರೆ. ಮಲ್ಟಿಜಿಮ್‌ಗಳನ್ನು ತೆರೆದಿದ್ದಾರೆ. ಇಂಥ ಉದ್ಯೋಗ ನಡೆಸಲು ನಿಗಮವು ಸೌಲಭ್ಯ ಕಲ್ಪಿಸಲಿದೆ’ ಎಂದರು.

‘ಸಮುದಾಯದ ಯುವಜನ ಮುಂದೆ ಬಂದರೆ, ಮ್ಯಾರೇಜ್ ಈವೆಂಟ್ಸ್ ಸಂಘಟಿಸುವ ಉದ್ದಿಮೆ ಸ್ಥಾಪಿಸಲು, ನಂದಿನಿ ಹಾಲು ಮಾರಾಟ ಕೇಂದ್ರ ತೆರೆಯಲು ನಿಗಮವು ನೆರವಾಗಲಿದೆ. ಇಂಥ ನೂತನ ಪ್ರಸ್ತಾವನೆಗಳು ಸಿದ್ಧವಾಗಿದ್ದು, ಸಮಾಜ ಕಲ್ಯಾಣ ಇಲಾಖೆಯ ಕಾರ್ಯದರ್ಶಿಯೊಂದಿಗೂ ಈ ಬಗ್ಗೆ ಚರ್ಚಿಸಲಾಗಿದೆ’ ಎಂದು ಮಾಹಿತಿ ನೀಡಿದರು.

‘ಸಮುದಾಯದ ಮಕ್ಕಳು ಅರ್ಧಕ್ಕೇ ಶಾಲೆ ಬಿಡುವುದರಿಂದಲೂ ಸ್ವಚ್ಛತಾ ಕಾರ್ಯವನ್ನು ಅನಿವಾರ್ಯವಾಗಿ ಮಾಡಬೇಕಾದ ಪರಿಸ್ಥಿತಿ ಇದೆ. ಹೀಗಾಗಿ ರಾಜ್ಯದ ಆಯ್ದ ಜಿಲ್ಲೆಗಳಲ್ಲಿ ರಾತ್ರಿ ಶಾಲೆಗಳನ್ನು ತೆರೆಯಲಾಗುವುದು’ ಎಂದು ತಿಳಿಸಿದರು.

‘ಸಫಾಯಿ ಕರ್ಮಚಾರಿಗಳು ಹಾಗೂ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಮಕ್ಕಳ ಉನ್ನತ ಶಿಕ್ಷಣಕ್ಕೆ ₹ 30 ಲಕ್ಷದವರೆಗೂ ಸಾಲ ಸೌಲಭ್ಯ ನೀಡಲಾಗುವುದು. ಭೂ ಒಡೆತನ ಯೋಜನೆ ಅಡಿ ಜಮೀನು ಹೊಂದಲು ಇದ್ದ, ನಗರ ಪ್ರದೇಶದ 10 ಕಿ.ಮೀ ಪರಿಮಿತಿಯನ್ನು ಸಡಿಲಗೊಳಿಸಲಾಗಿದೆ. ಹೀಗಾಗಿ ಎಲ್ಲಿಯೇ ಆದರೂ ಜಮೀನು ಖರೀದಿಸಿ ಕೃಷಿ ಆರಂಭಿಸಬಹುದು’ ಎಂದರು.

> ರಾಜ್ಯದಲ್ಲಿ ಗುರುತಿಸಲಾದ ಎಲ್ಲ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೂ ಸೌಲಭ್ಯ ನೀಡಬೇಕೆಂಬ ಮನವಿಗೆ ರಾಷ್ಟ್ರೀಯ ಸಫಾಯಿ ಕರ್ಮಚಾರಿಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮ ಸ್ಪಂದಿಸಿಲ್ಲ
>
> **ಕುಮಾರ್,** ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದ ಸಲಹೆಗಾರ

ನಿಗಮದ ಸಲಹೆಗಾರ ಕುಮಾರ್ ಮಾತನಾಡಿ, ‘ಪ್ರಸಕ್ತ ವರ್ಷ ₹120 ಕೋಟಿ ವೆಚ್ಚ ಕ್ರಿಯಾಯೋಜನೆಯನ್ನು ಸಿದ್ಧಪಡಿಸಿದ್ದು, ₹ 90 ಕೋಟಿಯನ್ನು ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಮೀಸಲಿಡಲಾಗಿದೆ. ಉಳಿದ ₹ 30 ಕೋಟಿಯನ್ನು ಸಫಾಯಿ ಕರ್ಮಚಾರಿಗಳಿಗೆ ಮೀಸಲಿಡಲಾಗಿದೆ’ ಎಂದು ತಿಳಿಸಿದರು.

> ರಾಜ್ಯದ 21 ಜಿಲ್ಲೆಗಳಲ್ಲಷ್ಟೇ ಮ್ಯಾನುಯಲ್ ಸ್ಕ್ಯಾವೆಂಜರ್ ಗಳಿದ್ದಾರೆಂದು ಸರ್ಕಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ. ಆದರೆ ಉಳಿದ ಜಿಲ್ಲೆಗಳಲ್ಲೂ ಸ್ಕ್ಯಾವೆಂಜರ್‌ಗಳಿದ್ದಾರೆ. ಆ ಬಗ್ಗೆ ಸಮೀಕ್ಷೆ ನಡೆಯಬೇಕು
>
> **ಆರ್.ವಿ.ಚಂದ್ರಶೇಖರ್**, ಸಾಮಾಜಿಕ ಒಳಗೊಳ್ಳುವಿಕೆ ಅಧ್ಯಯನ ಕೇಂದ್ರ

ರಾಷ್ಟ್ರೀಯ ಕಾನೂನು ಶಾಲೆಯ ಸಾಮಾಜಿಕ ಒಳಗೊಳ್ಳುವಿಕೆ ಅಧ್ಯಯನ ಕೇಂದ್ರ, ಬಾಬು ಜಗಜೀವನ ರಾಮ್ ಸಂಶೋಧನಾ ಸಂಸ್ಥೆ ಹಾಗೂ ಸಫಾಯಿ ಕರ್ಮಚಾರಿ ಕಾವಲು ಸಮಿತಿ ಜಂಟಿಯಾಗಿ ಏರ್ಪಡಿಸಿರುವ ಕಾರ್ಯಾಗಾರದಲ್ಲಿ ಕಾರ್ಯಾಗಾರ ಸಂಯೋಜಕ ಆರ್.ವಿ.ಚಂದ್ರಶೇಖರ್, ಕಾವಲು ಸಮಿತಿ ರಾಜ್ಯ ಸಂಚಾಲಕ ಕೆ.ಬಿ. ಓಬಳೇಶ್, ರಾಜ್ಯ ಮೇಲ್ವಿಚಾರಣಾ ಸಮಿತಿ ಸದಸ್ಯೆ ಪದ್ಮಾ ಪಾಲ್ಗೊಂಡಿದ್ದರು.

ರೈತನನ್ನು ಹೊತ್ತೊಯ್ದ ಅಧಿಕಾರಿಗಳು

ಒತ್ತುವರಿ ಆರೋಪ: ಅರಣ್ಯ ಇಲಾಖೆ ಸಿಬ್ಬಂದಿ – ರೈತರ ನಡುವೆ ಜಟಾಪಟಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಬಿತ್ತನೆಗಾಗಿ ಜಮೀನು ಹದಗೊಳಿಸುತ್ತಿದ್ದಾಗ ಘಟನೆ
- ಬಂಕಾಪುರ ಪೊಲೀಸರ ಮಧ್ಯಪ್ರವೇಶದಿಂದ ಪರಿಸ್ಥಿತಿ ತಿಳಿ

ಹಾವೇರಿ: ಜಿಲ್ಲೆಯ ಶಿಗ್ಗಾವಿ ತಾಲ್ಲೂಕಿನ ಶಿವಪುರ ತಾಂಡಾ ಬಳಿ ಕೃಷಿ ಭೂಮಿ ವಿಷಯದಲ್ಲಿ ಬುಧವಾರ (ಜೂನ್ 10) ರೈತರು ಮತ್ತು ಅರಣ್ಯ ಇಲಾಖೆ ಅಧಿಕಾರಿಗಳ ನಡುವೆ ಜಟಾಪಟಿ ನಡೆದಿದೆ.

ಈ ಸಂದರ್ಭದಲ್ಲಿ ಬಿತ್ತನೆಗಾಗಿ ಜಮೀನು ಹದಗೊಳಿಸುತ್ತಿದ್ದ ರೈತರೊಬ್ಬರನ್ನು ಅಧಿಕಾರಿಗಳು ಹೊತ್ತುಕೊಂಡು ಹೋಗಿ ಎಳೆದಾಡಿದ್ದಾರೆ. ಈ ವರ್ತನೆಯನ್ನು ರೈತರು ಖಂಡಿಸಿದ್ದಾರೆ. ಇದರ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ. ಬಂಕಾಪುರ ಠಾಣೆ ಪೊಲೀಸರ ಮಧ್ಯಪ್ರವೇಶದಿಂದ, ಪರಿಸ್ಥಿತಿ ತಿಳಿಗೊಂಡಿದೆ. ಆದರೆ, ಘಟನೆ ಬಗ್ಗೆ ಪ್ರಕರಣ ದಾಖಲಾಗಿಲ್ಲ.

ಘಟನೆ ವಿವರ: ಶಿಗ್ಗಾವಿ ತಾಲ್ಲೂಕಿನ ನೀರಲಕಟ್ಟಿ, ಶಿವಪುರ ತಾಂಡಾ ಹಾಗೂ ಸುತ್ತಮುತ್ತ 87 ಎಕರೆ 20 ಗುಂಟೆ ಡಿಮ್ಡ್ ಅರಣ್ಯ ಪ್ರದೇಶವಿದೆ. ಇದಕ್ಕೆ ಹೊಂದಿಕೊಂಡು ಕಂದಾಯ ಇಲಾಖೆ ಮತ್ತು ವಾಸಕ್ಕೆ ಮೀಸಲಿಟ್ಟ ಜಾಗವಿದೆ. ಇಲ್ಲೇ ಈರಪ್ಪ ಸೇರಿ 36 ರೈತರು ಉಳುಮೆ ಮಾಡುತ್ತಾರೆ.

‘ಅರಣ್ಯ ಇಲಾಖೆಗೆ ಸೇರಿದ ಜಮೀನಿನಲ್ಲಿ ಕೃಷಿ ಮಾಡುತ್ತಿರುವ ರೈತರು, ಪ್ರತಿ ವರ್ಷ ಮರಗಳನ್ನು ಕಡಿದು ಅರಣ್ಯ ಜಾಗವನ್ನು ಒತ್ತುವರಿ ಮಾಡುತ್ತಾರೆ. ಇದರಿಂದ ಅರಣ್ಯ ನಾಶವಾಗುತ್ತಿದೆ’ ಎಂದು ಆರೋಪಿಸಿ ಅರಣ್ಯ ಇಲಾಖೆ ಅಧಿಕಾರಿಗಳು, ಕಾವಲಿಗೆ ಸಿಬ್ಬಂದಿ ನಿಯೋಜಿಸಿದ್ದರು.

ಮಂಗಳವಾರ ಹಾಗೂ ಬುಧವಾರ ಕೆಲ ರೈತರು, ಅರಣ್ಯ ಪ್ರದೇಶದ ಮರಗಳನ್ನು ಕಡಿದು ಹಾಕಿದ್ದರು. ಇದನ್ನು ಗಮನಿಸಿದ್ದ ಅಧಿಕಾರಿಗಳು, ಎರಡು ಎಫ್ಐಆರ್ ದಾಖಲಿಸಿಕೊಂಡಿದ್ದರು. ಒತ್ತುವರಿ ತೆರವು ಮಾಡಲು ಸ್ಥಳಕ್ಕೆ ಹೋಗಿದ್ದರು.

ಸ್ಥಳದಲ್ಲಿದ್ದ ಈರಪ್ಪ ಹಾಗೂ ಅಧಿಕಾರಿಗಳ ನಡುವೆ ಮಾತಿನ ಚಕಮಕಿ ನಡೆದಿತ್ತು. ‘45 ಎಕರೆಯಷ್ಟು ಜಮೀನು ಒತ್ತುವರಿಯಾಗಿದೆ. ಈ ಜಮೀನಿನಲ್ಲಿ ಉಳುಮೆ ಮಾಡಲು ಬಿಡುವುದಿಲ್ಲ’ ಎಂದು ಅಧಿಕಾರಿಗಳು ಹೇಳಿದ್ದರು.

ಹಾವೇರಿ ಜಿಲ್ಲೆಯ ಶಿಗ್ಗಾವಿ ತಾಲ್ಲೂಕಿನ ಶಿವಪುರ ತಾಂಡಾ ಬಳಿ ರೈತರೊಬ್ಬರನ್ನು ಹೊತ್ತೊಯ್ದ ಅರಣ್ಯ ಇಲಾಖೆ ಅಧಿಕಾರಿಗಳು

> **ಉಳುಮೆ ಮಾಡುತ್ತಿರುವ ಜಮೀನು ನಮ್ಮದು. ಅರಣ್ಯ ಇಲಾಖೆಯವರು ಏಕಾಏಕಿ ಬಂದು, ಜಮೀನು ಒತ್ತುವರಿ ಆಗಿರುವುದಾಗಿ ಹೇಳುತ್ತಿದ್ದಾರೆ. ದಬ್ಬಾಳಿಕೆ ಮಾಡುತ್ತಿದ್ದಾರೆ. ಬಡವರಾದ ನಾವು ಏನು ಮಾಡಬೇಕು**
> **ಈರಪ್ಪ ಲಮಾಣಿ,** ರೈತ

> **ಜಂಟಿ ಸಮೀಕ್ಷೆ ಮಾಡಿ, ಅರಣ್ಯ ಜಾಗ ಗುರುತಿಸಲಾಗಿದೆ. ಒತ್ತುವರಿ ತೆರವಿಗೆ ಮುಂದಾಗಿದ್ದಕ್ಕೆ ರೈತರು ಸುಖಾಸುಮ್ಮನೇ ಆರೋಪಿಸುತ್ತಾರೆ**
> **ಪ್ರಕಾಶಕರ ಅಕ್ಷಯ್ ಅಶೋಕ,**
> ಹಾವೇರಿ ಪ್ರಾದೇಶಿಕ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ

ಇದರಿಂದ ಆತಂಕಗೊಂಡ ರೈತರು, ‘ಹಲವು ವರ್ಷಗಳಿಂದ ಉಳುಮೆ ಮಾಡುತ್ತಿರುವ ಜಮೀನು, ಹೇಗೆ ಒತ್ತುವರಿ ಆಗುತ್ತದೆ’ ಎಂದು ಪ್ರಶ್ನಿಸಿದ್ದರು.

‘ನನ್ನ ಜಮೀನು ಬಿಟ್ಟು ಹೋಗುವುದಿಲ್ಲ’ ಎಂದು ರೈತ ಈರಪ್ಪ ಸ್ಥಳದಲ್ಲೇ ಕೂತಿದ್ದರು. ಆಗ ಐದಾರು ಅಧಿಕಾರಿಗಳು, ಈರಪ್ಪ ಅವರ ಕೈ-ಕಾಲುಗಳನ್ನು ಹಿಡಿದು ಹೊತ್ತುಕೊಂಡು ಹೋಗಿದ್ದರು. ಎಳೆದಾಡಿ ಅವಮಾನಿಸಿದ್ದರು. ಜೀಪಿನಲ್ಲಿ ಕೂರಿಸಲು ಯತ್ನಿಸಿದ್ದರು. ಇದರ ನಡುವೆಯೇ ರೈತ ಕುಟುಂಬದ ಮಹಿಳೆಯರು, ಅಧಿಕಾರಿಗಳನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ ಮಣ್ಣು ತೂರಿದ್ದಾರೆ. ಈ ಎಲ್ಲ ದೃಶ್ಯಗಳು ವಿಡಿಯೊದಲ್ಲಿದೆ.

ವಚನಾನಂದ ಸ್ವಾಮೀಜಿ ವಿರುದ್ಧ ದಾಖಲಾದ ಪೋಕ್ಸೊ ಪ್ರಕರಣ

ದೋಷಾರೋಪ ಪಟ್ಟಿ ಸಲ್ಲಿಸಿದ ಪೊಲೀಸರು

ಪ್ರಜಾವಾಣಿ ವಾರ್ತೆ

ವಚನಾನಂದ ಸ್ವಾಮೀಜಿ

ದಾವಣಗೆರೆ: ಬಾಲಕನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದಡಿ ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠಾಧ್ಯಕ್ಷ ವಚನಾನಂದ ಸ್ವಾಮೀಜಿ ವಿರುದ್ಧ ದಾಖಲಾಗಿರುವ ಪೋಕ್ಸೊ ಪ್ರಕರಣದ ತನಿಖೆ ಪೂರ್ಣಗೊಳಿಸಿದ ಪೊಲೀಸರು ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ.

ಪ್ರಕರಣ ದಾಖಲಾದ ತಿಂಗಳಲ್ಲೇ ತನಿಖೆ ಪೂರ್ಣಗೊಂಡಿದ್ದು, 100ಕ್ಕೂ ಹೆಚ್ಚು ಪುಟಗಳ ದೋಷಾರೋಪ ಪಟ್ಟಿ ಜಿಲ್ಲಾ ವಿಶೇಷ ಪೋಕ್ಸೊ ನ್ಯಾಯಾಲಯಕ್ಕೆ ಜೂ.6ರಂದು ಸಲ್ಲಿಕೆಯಾಗಿದೆ. ಸಾಕ್ಷ್ಯಗಳು, ಸಂತ್ರಸ್ತ ಬಾಲಕ, ಆತನ ಸಹಪಾಠಿಗಳು ಸೇರಿದಂತೆ ಹಲವರ ಹೇಳಿಕೆ ಕೂಡ ದೋಷಾರೋಪ ಪಟ್ಟಿಯಲ್ಲಿದೆ.

ವಸತಿ ನಿಲಯದ ಬಾಲಕರನ್ನು ದುರ್ಬಳಕೆ ಮಾಡಿಕೊಂಡು ದೌರ್ಜನ್ಯ ನಡೆಸಿದ ಆರೋಪಕ್ಕೆ ಸಂಬಂಧಿಸಿದಂತೆ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ (ಸಿಡಬ್ಲ್ಯುಸಿ) ಸಿದ್ಧಪಡಿಸಿದ ವರದಿ ದೋಷಾರೋಪ ಪಟ್ಟಿಯಲ್ಲಿದೆ. ಕೆಲ ವೈದ್ಯಕೀಯ ಹಾಗೂ ವಿಧಿವಿಜ್ಞಾನ ಪ್ರಯೋಗಾಲಯದ ವರದಿಗಳು ಮಾತ್ರ ಬಾಕಿ ಇವೆ ಎಂದು ಮೂಲಗಳು ಮಾಹಿತಿ ನೀಡಿವೆ.

16 ವರ್ಷದ ಸಂತ್ರಸ್ತ ಬಾಲಕನ ತಾಯಿಯೊಬ್ಬರು ಗದಗ ಜಿಲ್ಲೆಯ ಲಕ್ಷ್ಮೇಶ್ವರ ಠಾಣೆಯಲ್ಲಿ ಮೇ 5ರಂದು ವಚನಾನಂದ ಸ್ವಾಮೀಜಿ ವಿರುದ್ಧ ಪೋಕ್ಸೊ ಪ್ರಕರಣ ದಾಖಲಿಸಿದ್ದರು. ಕೃತ್ಯ ನಡೆದ ಸ್ಥಳದ ವ್ಯಾಪ್ತಿಯ ಹರಿಹರ ಗ್ರಾಮಾಂತರ ಠಾಣೆಗೆ ಪ್ರಕರಣ ವರ್ಗಾವಣೆ ಆಗುತ್ತಿದ್ದಂತೆಯೇ ಪೊಲೀಸರು ತನಿಖೆ ಚುರುಕುಗೊಳಿಸಿದ್ದರು. ನಿರೀಕ್ಷಣಾ ಜಾಮೀನು ಪಡೆದಿದ್ದ ಸ್ವಾಮೀಜಿಯನ್ನು ಠಾಣೆಗೆ ಕರೆಸಿ ಹಲವು ಬಾರಿ ವಿಚಾರಣೆಗೆ ಒಳಪಡಿಸಿದ್ದರು.

‘ಪೋಕ್ಸೊ ಗಂಭೀರ ಪ್ರಕರಣವಾಗಿದ್ದು, ಪೊಲೀಸರು ವಿಸ್ತೃತ ತನಿಖೆ ಮಾಡಬೇಕಿತ್ತು. ಆದರೆ, ಎಫ್ಐಆರ್ ದಾಖಲಾದ ಮೂರು ವಾರಗಳಲ್ಲಿ ತನಿಖೆಯನ್ನು ಪೂರ್ಣಗೊಳಿಸಲಾಗಿದೆ. ಅವಸರದಲ್ಲಿ ದೋಷಾರೋಪ ಪಟ್ಟಿ ಸಲ್ಲಿಸಿದ್ದು ಅನುಮಾನ ಮೂಡಿಸಿದೆ. ಬಾಹ್ಯ ಒತ್ತಡಕ್ಕೆ ಮಣಿದಿರುವ ಪೊಲೀಸರು, ಸ್ವಾಮೀಜಿ ಅವರನ್ನು ಪ್ರಕರಣದಲ್ಲಿ ಸಿಲುಕಿಸುವ ದುರುದ್ದೇಶ ಹೊಂದಿದ್ದಾರೆ’ ಎಂದು ಸ್ವಾಮೀಜಿ ಪರ ವಕೀಲ ಎಸ್.ವಿ. ಪಾಟೀಲ ಸುದ್ದಿಗಾರರ ಬಳಿ ಅಸಮಾಧಾನ ವ್ಯಕ್ತಪಡಿಸಿದರು.

18ಕ್ಕೆ ಆದೇಶ ಕಾಯ್ದಿರಿಸಿದ ನ್ಯಾಯಾಲಯ

ವಚನಾನಂದ ಸ್ವಾಮೀಜಿ ಅವರಿಗೆ ಪೋಕ್ಸೊ ಪ್ರಕರಣದಲ್ಲಿ ನೀಡಿರುವ ನಿರೀಕ್ಷಣಾ ಜಾಮೀನು ರದ್ದುಗೊಳಿಸುವಂತೆ ಕೋರಿ ಪೊಲೀಸರು ಸಲ್ಲಿಸಿದ ಅರ್ಜಿಯ ವಿಚಾರಣೆಯನ್ನು ಗುರುವಾರ ನಡೆಸಿದ ಜಿಲ್ಲಾ ವಿಶೇಷ ಪೋಕ್ಸೊ ನ್ಯಾಯಾಲಯ ಆದೇಶವನ್ನು ಜೂನ್ 18ಕ್ಕೆ ಕಾಯ್ದಿರಿಸಿದೆ.

ಪ್ರಕರಣ ದಾಖಲಾಗುವುದಕ್ಕೂ ಮುನ್ನವೇ ಪಡೆದಿರುವ ನಿರೀಕ್ಷಣಾ ಜಾಮೀನು ರದ್ದು ಮಾಡುವಂತೆ ಹರಿಹರ ಗ್ರಾಮಾಂತರ ಠಾಣೆಯ ಪೊಲೀಸರು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ವಾದ–ಪ್ರತಿವಾದ ಆಲಿಸಿದ ನ್ಯಾಯಾಲಯ, ಸಂತ್ರಸ್ತ ಬಾಲಕನ ಹೇಳಿಕೆಯನ್ನೂ ಆಲಿಸಿ ಆದೇಶ ಕಾಯ್ದಿರಿಸಿತು.

ಸಮುದಾಯ ಭವನ, ವಿದ್ಯಾರ್ಥಿ ನಿಲಯ ನಿರ್ಮಾಣಕ್ಕೆ ಸರ್ಕಾರದ ನೆರವು

ಅನುದಾನ: ಕುರುಬ ಸಂಘಗಳಿಗೆ ಸಿಂಹಪಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು ಇದೇ 3ರಂದು 156 ಜಾತಿ ಸಮುದಾಯ ಸಂಘಗಳಿಗೆ ವಿದ್ಯಾರ್ಥಿನಿಲಯ, ವಸತಿ ನಿಲಯ, ಸಮುದಾಯ ಭವನ ಮತ್ತು ದೇವಾಲಯ ನಿರ್ಮಾಣಕ್ಕೆ ಹಣ ಮಂಜೂರು ಮಾಡಿದ್ದು, ಈ ಪೈಕಿ ಕುರುಬ ಸಂಬಂಧಿತ ಜಾತಿ ಸಮುದಾಯಗಳ ಸಂಘಗಳ ಸಂಖ್ಯೆಯೇ 75ರಷ್ಟಿದೆ.

2026-27ನೇ ಸಾಲಿನ ಬಜೆಟ್‌ನಲ್ಲಿ ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ವಿವಿಧ ಜಾತಿ–ಸಮುದಾಯಗಳಿಗೆ ಅನುದಾನ ನೀಡುವುದಾಗಿ ಘೋಷಿಸಿದ್ದರು. ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವ ಮೊದಲು, ಅವರ ಉಸ್ತುವಾರಿಯಲ್ಲಿಯೇ ಇದ್ದ ಹಣಕಾಸು ಇಲಾಖೆ ಈ ಅನುದಾನ ಬಿಡುಗಡೆಗೆ ಒಪ್ಪಿಗೆ ನೀಡಿದೆ.

ಅನುದಾನಕ್ಕೆ ಸಂಬಂಧಿಸಿದಂತೆ 2026ರ ಏಪ್ರಿಲ್ 10ರಂದು ಆರ್ಥಿಕ ಇಲಾಖೆ ಸಲಹೆ ನೀಡಿತ್ತು. 2026ರ ಜೂನ್ 2ರಂದು ಆರ್ಥಿಕ ಇಲಾಖೆಯು ನೀಡಿದ್ದ ಟಿಪ್ಪಣಿಯ ಆಧಾರದಲ್ಲಿ ಜೂನ್ 3ರಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು ಫಲಾನುಭವಿ ಸಂಘಗಳ ಪಟ್ಟಿಯನ್ನು ಬಿಡುಗಡೆ ಮಾಡಿದೆ.

2026-27ನೇ ಸಾಲಿನ ಬಜೆಟ್‌ನಲ್ಲಿ ಘೋಷಿಸಿದ್ದಂತೆ ವಿವಿಧ ಜಾತಿ ಸಂಘಗಳು ನಿರ್ಮಿಸುತ್ತಿರುವ ವಿದ್ಯಾರ್ಥಿನಿಲಯ, ವಸತಿನಿಲಯ ಮತ್ತು ಸಮುದಾಯ ಭವನಗಳ ನಿರ್ಮಾಣ ಮತ್ತು ಈಗಾಗಲೇ ಆರಂಭವಾಗಿರುವ ಕಾಮಗಾರಿಗಳ ಮುಂದುವರಿಕೆಗೆ ನೆರವು ನೀಡಲು ₹71.85 ಕೋಟಿಯನ್ನು ಸರ್ಕಾರ ಮಂಜೂರು ಮಾಡಿದೆ. ಈ ಪೈಕಿ ಕುರುಬ ಸಮುದಾಯದ ಸಂಘಗಳಿಗೆ ₹57.15 ಕೋಟಿ ಅನುದಾನ ಮಂಜೂರಾಗಿದೆ.

ಕುರುಬ ಸಮುದಾಯದ 75 ಸಂಘ–ಸಂಸ್ಥೆಗಳಿಗೆ ಹಣ ಬಿಡುಗಡೆಯಾಗಿದ್ದು, ಇದರಲ್ಲಿ 4 ಮಾತ್ರವೇ ವಿದ್ಯಾರ್ಥಿನಿಲಯ ನಿರ್ಮಾಣದ ಉದ್ದೇಶದ ಕಾರ್ಯಕ್ರಮಗಳಾಗಿವೆ. ಉಳಿದೆಲ್ಲವೂ ಸಮುದಾಯ ಭವನ ಮತ್ತು ಕನಕ ಭವನಗಳ ನಿರ್ಮಾಣದ ಯೋಜನೆಗಳಾಗಿವೆ.

ವೀರಶೈವ–ಲಿಂಗಾಯತರ ಎಂಟು, ಮಡಿವಾಳರ ಎಂಟು, ಒಕ್ಕಲಿಗರ ಎರಡು, ಉಪ್ಪಾರರ ಎರಡು, ಯಾದವ/ಗೊಲ್ಲರ ಎರಡು, ಅಂಬಿಗರ ಎರಡು, ಜೆಟ್ಟಿಮತ, ಹಾಲಕ್ಕಿ, ಹೆಳವ, ಸವಿತಾ, ಗಾಣಿಗ, ಕುಂಬಾರ ಸಮುದಾಯದ ತಲಾ ಒಂದು ಸಂಘಗಳಿಗೆ ಹಣ ಮಂಜೂರು ಮಾಡಲಾಗಿದೆ.

ರಾಕೇಶ್ ಹೆಸರಿನ ಟ್ರಸ್ಟ್‌ಗೆ ₹50 ಲಕ್ಷ: ಗದಗ ಜಿಲ್ಲೆಯ ‘ರಾಕೇಶ್ ಸಿದ್ದರಾಮಯ್ಯ ಟ್ರಸ್ಟ್’ ವಿದ್ಯಾರ್ಥಿ ನಿಲಯ ನಿರ್ಮಿಸುತ್ತಿದ್ದು, ಇದಕ್ಕೆ ಇಲಾಖೆಯು ₹50 ಲಕ್ಷ ಅನುದಾನವನ್ನು ಮಂಜೂರು ಮಾಡಿದೆ.

> **ಸಿದ್ದರಾಮಯ್ಯ ಅವರಂತಹ ಹಿರಿಯ ಮತ್ತು ಅನುಭವಿ ರಾಜಕಾರಣಿ ಇಂತಹ ಅನ್ಯಾಯ ಮಾಡಬಾರದು. ಬೇರೆ ಸಮುದಾಯದವರಿಗೂ ಹೆಚ್ಚಿನ ಹಣ ನೀಡಬೇಕಿತ್ತು**
> **ಛಲವಾದಿ ನಾರಾಯಣಸ್ವಾಮಿ,**
> ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ

> **ಯಾವುದೇ ಜಾತಿ ಸಮುದಾಯಕ್ಕೆ ಮಣೆಹಾಕಿಲ್ಲ. ಮುಖ್ಯಮಂತ್ರಿ ಕಚೇರಿಯಿಂದ ಬಂದ ಪಟ್ಟಿಯಲ್ಲಿದ್ದ ಸಂಘಗಳಿಗೆ ಹಣ ಮಂಜೂರು ಮಾಡಲಾಗಿದೆ**
> **ತುಳಸಿ ಮದ್ದಿನೇನಿ,** ಕಾರ್ಯದರ್ಶಿ,
> ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

‘ಅನ್ಯಾಯ ಮಾಡಿಲ್ಲ’

‘ಇಲಾಖೆಗೆ ಸಲ್ಲಿಕೆಯಾಗಿರುವ ಮನವಿಗಳಲ್ಲಿ ಕುರುಬ ಸಮುದಾಯದ ಮನವಿಗಳ ಸಂಖ್ಯೆ ಹೆಚ್ಚು. ಹೀಗಾಗಿಯೆ, ಕುರುಬ ಸಮುದಾಯದ ಸಂಘಗಳಿಗೆ ಹೆಚ್ಚಿನ ಅನುದಾನ ಬಿಡುಗಡೆಯಾಗಿದೆ. ಇದು ಉದ್ದೇಶಪೂರ್ವಕ ಅಲ್ಲ’ ಎಂದು ಸಿದ್ದರಾಮಯ್ಯ ಅವರು ‘ಎಕ್ಸ್’ ಮಾಡಿದ್ದಾರೆ.

‘ಉಳಿದ ಸಮುದಾಯಗಳಿಗೆ ಅನ್ಯಾಯ ಮಾಡುವುದಿಲ್ಲ. ಇದೇನೂ ಅಂತಿಮ ಪಟ್ಟಿಯಲ್ಲ. ಬೇರೆ ಬೇರೆ ಹಿಂದುಳಿದ ಜಾತಿಗಳು ನೀಡಿರುವ ಮನವಿಗಳನ್ನು ಪರಿಶೀಲಿಸಿ ಮುಂದಿನ ದಿನಗಳಲ್ಲಿ ಅನುದಾನ ಬಿಡುಗಡೆ ಮಾಡಲಾಗುವುದು’ ಎಂದಿದ್ದಾರೆ

ಗಂಗಾವತಿ ತಾಲ್ಲೂಕಿನಲ್ಲಿ ನಡೆದ ಕೊಲೆ ಪ್ರಕರಣ: ಬಾಲಕನ ಹೇಳಿಕೆ ದಾಖಲು

ಒಲ್ಲದ ಕೋರ್ಸ್: ಜೀವ ತೆಗೆದ ಬಾಲಕ

● ಪ್ರಮೋದ ಕುಲಕರ್ಣಿ

ಅಪರಾಧ ಸುದ್ದಿ

ಕೊಪ್ಪಳ: ಜಿಲ್ಲೆಯ ಗ್ರಾಮವೊಂದರಲ್ಲಿ ಬಾಲಕನೊಬ್ಬ ತನ್ನ ಅಪ್ಪ ಹಾಗೂ ಅಕ್ಕನನ್ನು ಕೊಲೆ ಮಾಡಲು, ಆತ ಎಸ್.ಎಸ್.ಎಲ್.ಸಿ.ಯಲ್ಲಿ ಶೇ. 90ಕ್ಕಿಂತ ಹೆಚ್ಚು ಅಂಕ ಪಡೆದರೂ, ಅವರು ತನ್ನ ಆಸಕ್ತಿಗೆ ವಿರುದ್ಧವಾದ ಕೋರ್ಸ್‌ಗೆ ಸೇರಿಸಿದ್ದೇ ಕಾರಣ ಎಂಬುದು ಪೊಲೀಸರ ತನಿಖೆಯಿಂದ ಗೊತ್ತಾಗಿದೆ.

ಜೂನ್ 6ರಂದು ಗಂಗಾವತಿ ತಾಲ್ಲೂಕಿನ ಗ್ರಾಮದಲ್ಲಿ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕ ತನ್ನ ತಂದೆ, ಅಕ್ಕನನ್ನು ಚಾಕುವಿನಿಂದ ಇರಿದು ಕೊಲೆ ಮಾಡಿದ್ದ. ತಾಯಿಗೂ ಚಾಕುವಿನಿಂದ ಇರಿದಿದ್ದು ಬಳ್ಳಾರಿಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಬಾಲಕನಿಗೆ ಪಿಯುಸಿಯಲ್ಲಿ ಜೀವ ವಿಜ್ಞಾನ (ಬಯಾಲಜಿ) ಕೋರ್ಸ್ ಓದಬೇಕೆಂಬ ಆಸಕ್ತಿಯಿತ್ತು. ಕುಟುಂಬದವರು ಬಲವಂತದಿಂದ ಕಂಪ್ಯೂಟರ್ ಸೈನ್ಸ್ ಕೋರ್ಸ್ ಓದುವಂತೆ ಒತ್ತಡ ಹೇರಿದ್ದರು ಎನ್ನುವುದು ಪೊಲೀಸರ ಮುಂದೆ ಬಾಲಕ ನೀಡಿದ ಹೇಳಿಕೆಯಿಂದ ಗೊತ್ತಾಗಿದೆ. ಮಗ ಚೆನ್ನಾಗಿ ಓದಲೆಂದು ಪೋಷಕರು ಹಾಸ್ಟೆಲ್ ಸೌಲಭ್ಯ ಮಾಡಿಕೊಟ್ಟಿದ್ದರು. ಇದೇ ವರ್ಷದ ಜನವರಿ ತನಕ ಮಾತ್ರ ಹಾಸ್ಟೆಲ್‌ನಲ್ಲಿದ್ದ ಬಾಲಕ ಬಳಿಕ ನಿತ್ಯ ಊರಿನಿಂದ ಕಾಲೇಜಿಗೆ ಬಂದು ಹೋಗುತ್ತಿದ್ದ.

ಪ್ರಥಮ ಪಿಯುಸಿಯಲ್ಲಿ ತನ್ನ ಇಚ್ಛೆಗೆ ವಿರುದ್ಧವಾದ ಕಂಪ್ಯೂಟರ್ ಸೈನ್ಸ್‌ನಲ್ಲಿ ಶೇ 40ರಷ್ಟು ಮಾತ್ರ ಫಲಿತಾಂಶ ಬಂದಿದ್ದರಿಂದ ಬಾಲಕ ಆಕ್ರೋಶಗೊಂಡಿದ್ದ. ಇದು ಕುಟುಂಬದವರಿಗೆ ಗೊತ್ತಾದರೆ ಮತ್ತೆ ತನಗಿಷ್ಟವಿಲ್ಲದ ಅದೇ ಕೋರ್ಸ್ ಓದುವಂತೆ ಒತ್ತಡ ಹೇರುತ್ತಾರೆ ಎಂದುಕೊಂಡಿದ್ದ ಬಾಲಕನು, ಕೊಲೆ ಮಾಡುವ ಸಲುವಾಗಿ ಹೊಸ ಚಾಕು ಖರೀದಿಸಿದ್ದ’ ಎಂದು ಪೊಲೀಸ್ ಮೂಲಗಳು ಖಚಿತಪಡಿಸಿವೆ.

‘ಇಷ್ಟವಿಲ್ಲದ ಕೋರ್ಸ್ ಓದಿದ್ದರಿಂದ ನನಗೆ ಕಡಿಮೆ ಅಂಕ ಬಂದಿತ್ತು. ನಾವು ಬಡವರಿದ್ದೇವೆ. ನಿನ್ನ ಓದಿಗಾಗಿ ಹಗಲಿರುಳು ದುಡಿದು ಹಣ ಖರ್ಚು ಮಾಡಿದರೂ ಕಿಮ್ಮತ್ತು ಕೊಡುತ್ತಿಲ್ಲ ಎಂದು ಪೋಷಕರು ಪದೇಪದೇ ಬೈಯ್ಯುತ್ತಿದ್ದರು ಎಂದು ಬಾಲಕನು ತನಿಖೆ ವೇಳೆ ಹೇಳಿಕೆ ನೀಡಿದ್ದಾನೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಜೀವವಿಜ್ಞಾನ ವಿಷಯವನ್ನೂ ಓದಿ ತಿಳಿದುಕೊಂಡಿದ್ದ ಬಾಲಕ, ಕೊಲೆ ಮಾಡುವಾಗಲೂ ಸಾಕಷ್ಟು ಎಚ್ಚರಿಕೆ ವಹಿಸಿದ್ದಾನೆ. ರಾತ್ರಿ ಮನೆಯಲ್ಲಿ ಊಟ ಮಾಡಿ ಮಲಗಿದ ಕೆಲ ಹೊತ್ತಿನಲ್ಲಿ ಕರೆಂಟ್ ಸಂಪೂರ್ಣ ಬಂದ್ ಮಾಡಿ ಕತ್ತಲಲ್ಲಿ ಮೊದಲು ಅಕ್ಕನ ಕುತ್ತಿಗೆಗೆ ಚಾಕುವಿನಿಂದ ಇರಿದ್ದು, ಆಕೆ ಸ್ಥಳದಲ್ಲಿಯೇ ಚೀರಾಡಿ ಮೃತಪಟ್ಟಿದ್ದಾಳೆ. ಮಗಳು ಅರಚುವುದನ್ನು ಕೇಳಿ ಬಂದ ಪೋಷಕರು ತಲೆಬಗ್ಗಿಸಿ ನೋಡುವಾಗ ಬಾಲಕ ಹಿಂದಿನಿಂದ ಬಂದು ಅವರಿಬ್ಬರ ಕುತ್ತಿಗೆಯ ಭಾಗಕ್ಕೆ ಚಾಕುವಿನಿಂದ ಇರಿದಿದ್ದಾನೆ.

‘ಕುತ್ತಿಗೆಯ ಭಾಗ ಸೂಕ್ಷ್ಮವಾಗಿದ್ದು ಅಲ್ಲಿ ಪೆಟ್ಟು ಬಿದ್ದರೆ ಬೇಗ ಜೀವ ಹೋಗುತ್ತದೆ ಎನ್ನುವುದನ್ನು ಓದಿ ತಿಳಿದುಕೊಂಡಿದ್ದೆ. ಅದಕ್ಕೆ ಎಲ್ಲರಿಗೂ ಕುತ್ತಿಗೆಗೆ ಚಾಕುವಿನಿಂದ ಇರಿದಿದ್ದೇನೆ’ ಎಂದು ಬಾಲಕ ನೀಡಿದ ಹೇಳಿಕೆ ಪೊಲೀಸರನ್ನೇ ಬೆಚ್ಚಿಬೀಳಿಸಿದೆ.

ಮೊಬೈಲ್‌ನಲ್ಲಿ ಆನ್‌ಲೈನ್ ಗೇಮ್ ಆಡುವುದನ್ನು ವ್ಯಸನ ಮಾಡಿಕೊಂಡಿದ್ದರಿಂದ ಈ ಕೊಲೆ ಮಾಡಿದ್ದ ಎಂಬುದು ಆರಂಭದಲ್ಲಿ ಗೊತ್ತಾಗಿತ್ತು. ಈಗ ಬಾಲಕನ ಹೇಳಿಕೆಯಿಂದಾಗಿ ಪ್ರಕರಣ ಹೊಸರೂಪ ಪಡೆದುಕೊಂಡಿದೆ.

> **ಬಾಲಕನ ಹೇಳಿಕೆ ಪಡೆಯಲಾಗಿದೆ. ಕೌನ್ಸೆಲಿಂಗ್ ಮಾಡಿದ ಬಳಿಕ ಮತ್ತೊಮ್ಮೆ ಹೇಳಿಕೆ ದಾಖಲಿಸಿ ಮುಂದಿನ ಕಾನೂನು ಕ್ರಮ ಜರುಗಿಸಲಾಗುವುದು**
> **ಡಾ. ರಾಮ್ ಎಲ್. ಅರಸಿದ್ಧಿ,** ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಕೊಪ್ಪಳ

‘ಅಭಿಷೇಕ್ ಬೇಕೋ, ನಾನು ಬೇಕೋ?’

ಮಮತಾಗೆ ಹಿರಿಯ ನಾಯಕ ಕಲ್ಯಾಣ್ ಬ್ಯಾನರ್ಜಿ ಖಡಕ್ ಸಂದೇಶ

ಕೋಲ್ಕತ್ತ (ಪಿಟಿಐ): ‘ರಕ್ತ ಸಂಬಂಧಿ ಅಭಿಷೇಕ್ ಬ್ಯಾನರ್ಜಿ ಅಥವಾ ನನ್ನಂತಹ ಹಿರಿಯ... ಇಬ್ಬರಲ್ಲಿ ಒಬ್ಬರನ್ನು ಆಯ್ಕೆ ಮಾಡಿಕೊಳ್ಳಿ’ ಎಂದು ಪಕ್ಷದ ನಾಯಕಿ ಮಮತಾ ಬ್ಯಾನರ್ಜಿ ಅವರಿಗೆ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಹಿರಿಯ ನಾಯಕ, ಸಂಸದ ಕಲ್ಯಾಣ್ ಬ್ಯಾನರ್ಜಿ ಗುರುವಾರ ಖಡಕ್ ಸಂದೇಶ ರವಾನೆ ಮಾಡಿದ್ದಾರೆ.



ಕಲ್ಯಾಣ್ ಬ್ಯಾನರ್ಜಿ

‘ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ದುರಹಂಕಾರ ಮತ್ತು ಚಂಚಲ ಮನಃಸ್ಥಿತಿ ಹೊಂದಿದ್ದಾರೆ’ ಎಂದು ಕಲ್ಯಾಣ್ ಬ್ಯಾನರ್ಜಿ ಆರೋಪಿಸಿದ್ದಾರೆ.

‘ಬಾಸ್ ರೀತಿ ವರ್ತಿಸುವ ಅಭಿಷೇಕ್ ಅವರನ್ನು ಪಕ್ಷದ ನಾಯಕತ್ವ ಸ್ಥಾನಗಳಿಂದ ತೆರವು ಮಾಡಿ, ಸಾಮಾನ್ಯ ಕಾರ್ಯಕರ್ತರನ್ನಾಗಿ ಮಾಡಬೇಕು. ಆಗ ಮಾತ್ರ ನಾನು ಪಕ್ಷದಲ್ಲಿ ಉಳಿಯುವೆ. ಪಕ್ಷಕ್ಕೆ ತಮ್ಮ ರಕ್ತಸಂಬಂಧಿ ಬೇಕೋ, ನನ್ನಂತಹ ಕಾರ್ಯಕರ್ತ ಬೇಕೋ ಎಂಬ ಬಗ್ಗೆ ದೀದಿ ಅಂತಿಮ ತೀರ್ಮಾನ ಮಾಡಲಿ’ ಎಂದು ಕಲ್ಯಾಣ್ ಬ್ಯಾನರ್ಜಿ ಪತ್ರಕರ್ತರಿಗೆ ತಿಳಿಸಿದ್ದಾರೆ.

ನನ್ನ ಬೆಂಬಲ ಮಮತಾಗೆ: ಸಿನ್ಹಾ

ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಅವರನ್ನು ಕಠಿಣ ಸಮಯದಲ್ಲಿ ಕೈಬಿಡುವುದಿಲ್ಲ ಎಂದು ನಟ ಹಾಗೂ ಟಿಎಂಸಿ ಸಂಸದ ಶತ್ರುಘ್ನ ಸಿನ್ಹಾ ಗುರುವಾರ ಹೇಳಿದರು.

‘ನನ್ನ ರಾಜಕೀಯ ಜೀವನ ಸವಾಲಿನ ಹಂತದಲ್ಲಿದ್ದಾಗ ಮಮತಾ ಅವರು ನನ್ನ ಬೆಂಬಲಕ್ಕೆ ನಿಂತಿದ್ದರು. ಹೀಗಾಗಿ ನಾನು ಅವರನ್ನೇ ಬೆಂಬಲಿಸುವೆ’ ಎಂದು ಅವರು ಪಿಟಿಐಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದರು.

ಒಡಕು ಮೂಡಿದ್ದೇಕೆ?: ಕಲ್ಯಾಣ್–ಅಭಿಷೇಕ್ ನಡುವಿನ ಒಡಕಿಗೆ ಪ್ರಕರಣವೊಂದರ ಮೇಲ್ಮನವಿ ಕಾರಣವಾಗಿದೆ.

ಮಮತಾ ಬ್ಯಾನರ್ಜಿ ಅವರ ನಿವಾಸದಲ್ಲಿರುವ ಟಿಎಂಸಿ ಕಚೇರಿ ಮತ್ತು ಅಭಿಷೇಕ್ ಬ್ಯಾನರ್ಜಿ ಅವರ ಕಚೇರಿ ಮೇಲೆ ತನಿಖಾ ಸಂಸ್ಥೆ ನಡೆಸಿದ ದಾಳಿಗೆ ಸಂಬಂಧಿಸಿ ಅಭಿಷೇಕ್ ಪ್ರತ್ಯೇಕ ಮೇಲ್ಮನವಿ ಸಲ್ಲಿಸಿದ್ದರು.

ಸಿಐಡಿ ತನಿಖೆ ನಡೆಸುತ್ತಿರುವ ನಕಲಿ ಸಹಿ ಪ್ರಕರಣದಲ್ಲಿ ಅಭಿಷೇಕ್ ಬ್ಯಾನರ್ಜಿ ಪರವಾಗಿ ವಕೀಲರೂ ಆಗಿರುವ ಕಲ್ಯಾಣ್ ಬ್ಯಾನರ್ಜಿ ಅವರು ಕೋಲ್ಕತ್ತ ಹೈಕೋರ್ಟ್‌ನಲ್ಲಿ ವಾದ ಮಾಡುತ್ತಿದ್ದರು.

‘ನಾನು ಸಿಐಡಿ ಪ್ರಕರಣದಲ್ಲಿ ದಾಳಿ ಬಗ್ಗೆ ಉಲ್ಲೇಖಿಸಿದ್ದರೂ ನನ್ನ ಗಮನಕ್ಕೆ ತರದೆ ಪ್ರತ್ಯೇಕ ಅರ್ಜಿ ಸಲ್ಲಿಸಲಾಗಿದೆ. 45 ವರ್ಷದ ನನ್ನ ವೃತ್ತಿ ಅನುಭವಕ್ಕೆ ತೋರಿದ ಅಗೌರವ ಇದು. ನಾನು ಅವರ ಮನೆಯ ಆಳಲ್ಲ’ ಎಂದು ಕಲ್ಯಾಣ್ ಬ್ಯಾನರ್ಜಿ ಪತ್ರಕರ್ತರ ಬಳಿ ಅಸಮಾಧಾನ ಹೊರಹಾಕಿದ್ದಾರೆ.

ವಿಚಾರಣೆಗೆ ಹಾಜರು: ಅಭಿಷೇಕ್ ಬ್ಯಾನರ್ಜಿ ಅವರು ನಕಲಿ ಸಹಿ ಪ್ರಕರಣಕ್ಕೆ ಸಂಬಂಧಿಸಿದಂತೆ ಗುರುವಾರ ಸಿಐಡಿ ಎದುರು ವಿಚಾರಣೆಗೆ ಹಾಜರಾದರು.

ಟಿಎಂಸಿಯ ಮತ್ತೊಬ್ಬ ಸಂಸದ ರಾಜೀನಾಮೆ

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳದ ಟಿಎಂಸಿ ಬಿಕ್ಕಟ್ಟು ಮುಂದುವರಿದಿದ್ದು, ಅದರ ಮತ್ತೊಬ್ಬ ರಾಜ್ಯಸಭಾ ಸದಸ್ಯ ಪ್ರಕಾಶ್ ಚಿಕ್ ಬಡಾಯಿಕ್ ಅವರು ಸಂಸತ್ತಿನ ಸದಸ್ಯತ್ವ ಮತ್ತು ಪಕ್ಷಕ್ಕೆ ಗುರುವಾರ ರಾಜೀನಾಮೆ ನೀಡಿದ್ದಾರೆ.

ನಾಯಕರಾದ ಸುಖೇಂದು ಶೇಖರ್ ರಾಯ್ ಮತ್ತು ಸುಷ್ಮಿತಾ ದೇವ್ ಅವರ ನಂತರ ರಾಜೀನಾಮೆ ನೀಡಿದ ಟಿಎಂಸಿಯ ಮೂರನೇ ಸಂಸದರಿವರು. ರಾಜ್ಯಸಭಾ ಸಭಾಪತಿ ಸಿ.ಪಿ.ರಾಧಾಕೃಷ್ಣನ್ ಅವರನ್ನು ಭೇಟಿ ಮಾಡಿ ರಾಜೀನಾಮೆ ಸಲ್ಲಿಸಿದ ಅವರು, ತಕ್ಷಣವೇ ಅಂಗೀಕರಿಸುವಂತೆ ಕೋರಿದ್ದಾರೆ.

ನಂತರ ಬಿಜೆಪಿ ನಾಯಕ ನಿಶಿಕಾಂತ್ ದುಬೆ ಅವರ ನಿವಾಸದ ಹೊರಗೆ ಸುದ್ದಿಗಾರರ ಜತೆ ಮಾತನಾಡಿದ ಬಡಾಯಿಕ್, ‘ಪಶ್ಚಿಮ ಬಂಗಾಳದ ಜನರು ಬಿಜೆಪಿಗೆ ಜನಾದೇಶ ನೀಡಿದ್ದಾರೆ. ಟಿಎಂಸಿಯನ್ನು ಗೆಲ್ಲಿಸಲಿಲ್ಲ. ಜನರ ಈ ಆದೇಶವನ್ನು ಗಮನಿಸಿ ನಾನು ರಾಜೀನಾಮೆ ನೀಡಿದ್ದೇನೆ’ ಎಂದು ಪ್ರತಿಕ್ರಿಯಿಸಿದರು.

ಪಶ್ಚಿಮ ಬಂಗಾಳದ ಬುಡಕಟ್ಟು ನಾಯಕರಾದ ಅವರು, ಗ್ರಾಹಕ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣೆಯ ಸಂಸದೀಯ ಸ್ಥಾಯಿ ಸಮಿತಿ ಮತ್ತು ಬುಡಕಟ್ಟು ವ್ಯವಹಾರಗಳ ಸಮಾಲೋಚನಾ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.

ವಾರದಲ್ಲಿ ಮೂವರ ನಿರ್ಗಮನ: ಟಿಎಂಸಿ ನಾಯಕರ ಸರಣಿ ನಿರ್ಗಮನದ ಬೆನ್ನಲ್ಲೇ ಈ ಬೆಳವಣಿಗೆಯೂ ನಡೆದಿದೆ. ಬಡಾಯಿಕ್ ಅವರ ರಾಜೀನಾಮೆಯಿಂದ ಟಿಎಂಸಿ ವಾರದಲ್ಲಿಯೇ ಮೂವರು ರಾಜ್ಯಸಭಾ ಸದಸ್ಯರನ್ನು ಕಳೆದುಕೊಂಡಂತಾಗಿದೆ. ಇದು ವಿಧಾನಸಭಾ ಚುನಾವಣೆಯ ಸೋಲಿನ ಬಳಿಕ ಮಮತಾ ಬ್ಯಾನರ್ಜಿ ನೇತೃತ್ವದ ಪಕ್ಷಕ್ಕೆ ಮತ್ತೊಂದು ಆಘಾತ ನೀಡಿದೆ.

ನಾಮಪತ್ರ ತಿರಸ್ಕೃತ: ‘ಸುಪ್ರೀಂ’ ವಿಚಾರಣೆ ಇಂದು

ಪ್ರಜಾವಾಣಿ ವಾರ್ತೆ

ನವದೆಹಲಿ (ಪಿಟಿಐ): ಮಧ್ಯಪ್ರದೇಶದಿಂದ ರಾಜ್ಯಸಭಾ ಚುನಾವಣೆಗೆ ಸ್ಪರ್ಧಿಸಿದ್ದ ಕಾಂಗ್ರೆಸ್ ನಾಯಕಿ ಮೀನಾಕ್ಷಿ ನಟರಾಜನ್ ಅವರ ನಾಮಪತ್ರ ತಿರಸ್ಕರಿಸಿದ್ದ ಚುನಾವಣಾ ಅಧಿಕಾರಿಯ ಆದೇಶವನ್ನು ಕಾಂಗ್ರೆಸ್ ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿದ್ದು, ಶುಕ್ರವಾರ ವಿಚಾರಣೆ ನಡೆಯಲಿದೆ.

‘ಚುನಾವಣಾ ಪ್ರಕ್ರಿಯೆ ನಡೆಯುತ್ತಿರುವಾಗ ಅರ್ಜಿಯನ್ನು ಹೇಗೆ ಸಮರ್ಥಿಸಿಕೊಳ್ಳುತ್ತೀರಿ’ ಎಂದು ನ್ಯಾಯಮೂರ್ತಿಗಳಾದ ಪ್ರಶಾಂತ್ ಕುಮಾರ್ ಮಿಶ್ರಾ ಮತ್ತು ಎ.ಎಸ್. ಚಂದೂರ್ಕರ್ ಅವರ ಪೀಠ ಪ್ರಶ್ನಿಸಿತು.

ಪ್ರಜಾಪ್ರಾತಿನಿಧ್ಯ ಕಾಯ್ದೆಯಡಿ ಕ್ರಿಮಿನಲ್ ಪ್ರಕರಣದ ಮಾಹಿತಿಯನ್ನು ಬಹಿರಂಗಪಡಿಸದಿರುವ ಆರೋಪದ ಮೇಲೆ ಚುನಾವಣಾ ಅಧಿಕಾರಿಯು ಕಾಂಗ್ರೆಸ್ ಅಭ್ಯರ್ಥಿಯ ನಾಮಪತ್ರವನ್ನು ತಪ್ಪಾಗಿ ತಿರಸ್ಕರಿಸಿದ್ದಾರೆ ಎಂದು ಮೀನಾಕ್ಷಿ ಅವರ ಪರ ಹಾಜರಾದ ಹಿರಿಯ ವಕೀಲ ಅಭಿಷೇಕ್ ಸಿಂಘ್ವಿ ಪ್ರತಿಪಾದಿಸಿದರು.

ಎರಡು ವರ್ಷಗಳಿಗಿಂತ ಹೆಚ್ಚು ಶಿಕ್ಷೆ ವಿಧಿಸಬಹುದಾದ ಕ್ರಿಮಿನಲ್ ಪ್ರಕರಣವನ್ನು ಅಭ್ಯರ್ಥಿ ಬಹಿರಂಗಪಡಿಸಬಹುದು. ಆದರೆ ಈ ಪ್ರಕರಣದಲ್ಲಿ ಅಭ್ಯರ್ಥಿಗೆ ಸಮನ್ಸ್ ಅಷ್ಟೇ ಜಾರಿಯಾಗಿದೆ ಎಂದು ಅವರು ತಿಳಿಸಿದರು. ವಿಚಾರಣೆಯನ್ನು ಶುಕ್ರವಾರ ನಡೆಸುವುದಾಗಿ ಪೀಠ ತಿಳಿಸಿತು.

ಕುಲ್ತುಹ್ ಚರ್ಚ್‌ನ ಮುಖ್ಯ ಧರ್ಮಾಧಿಕಾರಿಯ ಹತ್ಯೆ

ಬಂಡುಕೋರರ ದಾಳಿ: ಇಬ್ಬರ ಸಾವು

ಇಂಫಾಲ್ (ಪಿಟಿಐ): ಮಣಿಪುರದ ಕಾಮ್‌ಜೋಂಗ್ ಜಿಲ್ಲೆಯ ಗ್ರಾಮವೊಂದರ ಮೇಲೆ ಬಂಡುಕೋರರು ಗುರುವಾರ ಗುಂಡಿನ ದಾಳಿ ನಡೆಸಿದ್ದು, ಇಬ್ಬರು ಮೃತಪಟ್ಟಿದ್ದಾರೆ ಮತ್ತು ಹಲವು ಮನೆಗಳನ್ನು ಸುಟ್ಟು ಹಾಕಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಕುಲ್ತುಹ್ ಕುಕಿ ಎಂಬ ಸಣ್ಣ ಹಳ್ಳಿಯಲ್ಲಿ ಬೆಳಿಗ್ಗೆ 4.55ರ ಸುಮಾರಿಗೆ ಶಂಕಿತ ಬಂಡುಕೋರರು ದಾಳಿ ನಡೆಸಿದ್ದಾರೆ. ಮ್ಯಾನ್ಮಾರ್ ಗಡಿ ಪ್ರದೇಶದ ಬಳಿ ಸಮೀಪದ 30 ಮನೆಗಳು ಸುಟ್ಟು ಹೋಗಿವೆ ಎಂದು ಅಧಿಕಾರಿಗಳು ತಿಳಿಸಿದರು. ಘಟನಾ ಸ್ಥಳಕ್ಕೆ ಭದ್ರತಾ ಪಡೆಗಳು ಭೇಟಿ ನೀಡಿದ್ದು, ಆರೋಪಿಗಳ ಸುಳಿವು ಪತ್ತೆಯಾಗಿಲ್ಲ.

‘ಕುಕಿ ಬ್ಯಾಪ್ಟಿಸ್ಟ್ ಕನ್ವೆನ್ಷನ್’ ಈ ಹತ್ಯೆಯನ್ನು ಖಂಡಿಸಿದೆ ಮತ್ತು ನಾಗರಿಕ ರಕ್ಷಣೆಯನ್ನು ಖಚಿತಪಡಿಸಿಕೊಳ್ಳಲು ಸೂಕ್ತ ಕ್ರಮಗಳನ್ನು ಕೈಗೊಳ್ಳುವಂತೆ ಅಧಿಕಾರಿಗಳಿಗೆ ಒತ್ತಾಯಿಸಿದೆ.

ಕುಲ್ತುಹ್ ಚರ್ಚ್‌ನ ಮುಖ್ಯ ಧರ್ಮಾಧಿಕಾರಿ ಮತ್ತು ಯುವ ವಿಭಾಗದ ಅಧ್ಯಕ್ಷರನ್ನು ಹತ್ಯೆ ಮಾಡಲಾಗಿದೆ ಎಂದು ಕಾಂಗ್ರೆಸ್ ನಾಯಕಿ ಡಾ. ಲ್ಯಾಮ್ಟಿಂಗ್‌ಥಾಂಗ್ ಹಾವೋಕಿಪ್ ತಿಳಿಸಿದ್ದಾರೆ. ಪರಿಸ್ಥಿತಿಯನ್ನು ನಿಯಂತ್ರಿಸುವಲ್ಲಿ ಸರ್ಕಾರದ ವೈಫಲ್ಯ ಮಿತಿ ಮೀರಿದೆ ಎಂದು ಆರೋಪಿಸಿದ್ದಾರೆ.

ಬಂಡುಕೋರರು ಅಪಹರಿಸಿದ್ದ ನಾಗಾ ಬುಡಕಟ್ಟು ಸಮುದಾಯದ 6 ಮಂದಿಯ ಮೃತದೇಹಗಳು ಪತ್ತೆಯಾದ ಮರುದಿನವೇ ಈ ಘಟನೆ ನಡೆದಿದೆ.

‘ಸರ್ಕಾರ ಮೂಕ ಪ್ರೇಕ್ಷಕನಾಗುವುದಿಲ್ಲ’

ದೌರ್ಜನ್ಯಗಳನ್ನು ನೋಡಿ ಮಣಿಪುರ ಸರ್ಕಾರ ಮೂಕಪ್ರೇಕ್ಷಕನಾಗಿ ಉಳಿಯುವುದಿಲ್ಲ ಎಂದು ರಾಜ್ಯದ ಮುಖ್ಯಮಂತ್ರಿ ವೈ.ಖೇಮಚಂದ್ ಸಿಂಗ್ ಗುರುವಾರ ಹೇಳಿದ್ದಾರೆ.

ಕಾಂಗ್‌ಪೋಕ್ಪಿ ಜಿಲ್ಲೆಯಲ್ಲಿ ಸಶಸ್ತ್ರ ಗುಂಪುಗಳು ಅಪಹರಿಸಿದ್ದ ನಾಗಾ ಸಮುದಾಯದ ಜನರದ್ದೆಂದು ಶಂಕಿಸಲಾದ ಆರು ಜನರ ಮೃತದೇಹಗಳನ್ನು ಪೊಲೀಸರು ಪತ್ತೆಹಚ್ಚಿದ ನಂತರ ಮುಖ್ಯಮಂತ್ರಿ ಹೇಳಿಕೆ ನೀಡಿದ್ದಾರೆ.

ಮೇ 13ರಂದು ಕಾಂಗ್‌ಪೋಕ್ಪಿ ಜಿಲ್ಲೆಯ ಲೈಲಾನ್ ವೈಫೆಯಿ ಗ್ರಾಮದಿಂದ ನಾಗಾ ಸಮುದಾಯದ ಆರು ಜನರನ್ನು ಅಪಹರಿಸಲಾಗಿತ್ತು.

ಮುಖ್ಯಮಂತ್ರಿ ನೀಡಿದ ಅಧಿಕೃತ ಹೇಳಿಕೆಯಲ್ಲಿ, ‘ರಾಜ್ಯ ಸರ್ಕಾರ ಇಂತಹ ಹಿಂಸಾಚಾರವನ್ನು ಸಹಿಸುವುದಿಲ್ಲ. ಕೊಲೆಗೆ ಕಾರಣರಾದ ಅಪರಾಧಿಗಳನ್ನು ಬಂಧಿಸಿ ಕಾನೂನಿನ ಪ್ರಕಾರ ಶಿಕ್ಷಿಸಲಾಗುವುದು’ ಎಂದು ಹೇಳಿದ್ದಾರೆ.

> ನಾಗಾ ಜನರ ಹತ್ಯೆಯ ಬಗ್ಗೆ ತ್ವರಿತ, ನಿಷ್ಪಕ್ಷಪಾತ ಮತ್ತು ಪಾರದರ್ಶಕ ತನಿಖೆ ನಡೆಸಬೇಕು
>
> **ಗೌರವ್ ಗೊಗೊಯ್,** ಲೋಕಸಭೆಯ ವಿರೋಧ ಪಕ್ಷದ ಉಪ ನಾಯಕ

ಗೃಹಲಕ್ಷ್ಮಿಗೆ ‘ಸತ್ತವರ ನೆರಳು’

ಒಂದನೇ ಪುಟದಿಂದ...

ಮೇ ಅಂತ್ಯದವರೆಗೂ ಈ ಕಾರ್ಯ ನಡೆದಿದ್ದು, 1.30 ಕೋಟಿ ಫಲಾನುಭವಿಗಳ ಪೈಕಿ 2.88 ಲಕ್ಷ ಮಂದಿ ಮೃತಪಟ್ಟಿರುವುದು ಪತ್ತೆಯಾಗಿತ್ತು. ಇದರಲ್ಲಿ 1,08,755 ಫಲಾನುಭವಿಗಳು ಮೃತಪಟ್ಟ ನಂತರವೂ ಅವರು ಖಾತೆಗಳಿಗೆ ಯೋಜನೆಯ ಹಣ ಜಮೆಯಾಗಿದೆ ಎಂಬ ದತ್ತಾಂಶವನ್ನು ಇಲಾಖೆಯು ಕ್ರೋಡೀಕರಿಸಿದೆ.

ಈ 1.08 ಲಕ್ಷ ಫಲಾನುಭವಿಗಳ ಖಾತೆಗೆ ಜಮೆಯಾಗಿರುವ ಹಣವನ್ನು ಸರ್ಕಾರಕ್ಕೆ ವಾಪಸ್ ಮಾಡಬೇಕಿದೆ. ಹೀಗಾಗಿ, ಫಲಾನುಭವಿಗಳ ಬ್ಯಾಂಕ್ ಅಥವಾ ಅಂಚೆ ಉಳಿತಾಯ ಖಾತೆ ಸಂಖ್ಯೆ, ಫಲಾನುಭವಿ ಮೃತಪಟ್ಟ ದಿನಾಂಕ, ಆನಂತರ ಅವರ ಖಾತೆಗೆ ಜಮೆಯಾಗಿರುವ ಹಣ, ಮರಣದ ನಂತರ ಅವರ ಖಾತೆಯನ್ನು ಸ್ಥಗಿತಗೊಳಿಸಿದ್ದರೆ (ಫ್ರೀಝ್) ಅದರಲ್ಲಿರುವ ಹಣ, ಫಲಾನುಭವಿಗಳು ಮೃತಪಟ್ಟ ನಂತರವೂ ಅವರ ಖಾತೆಯಿಂದ ಕುಟುಂಬದವರು ಹಣ ಡ್ರಾ ಮಾಡಿರುವ ಮಾಹಿತಿಗಳನ್ನು ಸಂಗ್ರಹಿಸಿ ಎಂದು ಇಲಾಖಾ ನಿರ್ದೇಶಕರು, ಜಿಲ್ಲಾ ಉಪನಿರ್ದೇಶಕರಿಗೆ ಸೂಚಿಸಿದ್ದಾರೆ.

‘ಈವರೆಗಿನ ಮಾಹಿತಿ ಪ್ರಕಾರ ಸುಮಾರು ₹65 ಕೋಟಿ, ಇಂತಹ ಖಾತೆಗಳಿಗೆ ಹೋಗಿರುವ ಮಾಹಿತಿ ಲಭ್ಯವಾಗಿದೆ. ಪೂರ್ಣ ದತ್ತಾಂಶ ಲಭ್ಯವಾದ ನಂತರ ಮುಖ್ಯ ಕಾರ್ಯದರ್ಶಿಗೆ ಮತ್ತು ಹಣಕಾಸು ಇಲಾಖೆಗೆ ಸಲ್ಲಿಸಲಾಗುತ್ತದೆ. ಹಣವನ್ನು ವಸೂಲಿ ಮಾಡುವ ಬಗ್ಗೆ ಮತ್ತು ಅನರ್ಹರನ್ನು ಪಟ್ಟಿಯಿಂದ ಕೈಬಿಡುವ ಬಗ್ಗೆ ಆನಂತರವಷ್ಟೇ ನಿರ್ಧಾರ ತೆಗೆದುಕೊಳ್ಳಲಾಗುತ್ತದೆ’ ಎಂದು ಇಲಾಖೆಯ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

‘ಸಿಜೆಪಿಯಿಂದ ಶೈಕ್ಷಣಿಕ ಪ್ರಣಾಳಿಕೆ’

ಪುಣೆ (ಪಿಟಿಐ): ಪರೀಕ್ಷಾ ಅಕ್ರಮಗಳ ವಿರುದ್ಧ ಮತ್ತು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರ ರಾಜೀನಾಮೆಗೆ ಒತ್ತಾಯಿಸಿ ದೇಶದಾದ್ಯಂತ ಪ್ರತಿಭಟನೆ ಆರಂಭಿಸುವುದರೊಂದಿಗೆ, ಶಿಕ್ಷಣ ಪ್ರಣಾಳಿಕೆಯನ್ನು ಬಿಡುಗಡೆ ಮಾಡುವುದಾಗಿ ಕಾಕ್ರೋಚ್ ಜನತಾ ಪಾರ್ಟಿಯ (ಸಿಜೆಪಿ) ಸಂಸ್ಥಾಪಕ ಅಭಿಜೀತ್ ದೀಪ್ಕೆ ಗುರುವಾರ ಹೇಳಿದರು.

ಸಾವಿತ್ರಿಬಾಯಿ ಫುಲೆ ಪುಣೆ ವಿಶ್ವವಿದ್ಯಾಲಯದ (ಎಸ್‌ಪಿಪಿಯು) ಆವರಣದಲ್ಲಿ ಪ್ರತಿಭಟನೆ ನಡೆಯಿತು. ‘ಜೂನ್ 20ರಂದು ನವದೆಹಲಿಯ ಜಂತರ್ ಮಂತರ್‌ನಲ್ಲಿ ಸಭೆ ಸೇರುವ ಮೊದಲು ಬೆಂಗಳೂರು, ಜೈಪುರ, ಲಖನೌ ಸೇರಿದಂತೆ ವಿವಿಧ ನಗರಗಳಿಗೆ ಚಳವಳಿಯನ್ನು ಕೊಂಡೊಯ್ಯಲಾಗುವುದು’ ಎಂದು ದೀಪ್ಕೆ ತಿಳಿಸಿದರು.

ಸಂಚಾರಕ್ಕೆ ಅಡಚಣೆ

ಪಿಟಿಐ ಚಿತ್ರ

ಕೊಚ್ಚಿಯಲ್ಲಿರುವ ಕುಂಡನ್ನೂರ್–ತೇವರ ಸೇತುವೆಯ ತಡೆಗೋಡೆಗೆ ಗುರುವಾರ ಲಾರಿಯೊಂದು ಡಿಕ್ಕಿಯಾದ ಪರಿಣಾಮ ಸಂಚಾರಕ್ಕೆ ಅಡಚಣೆ ಉಂಟಾಗಿತ್ತು

ವಯನಾಡ್‌ನಲ್ಲಿ ಸೋಂಕಿತರ ಸಂಖ್ಯೆ 9ಕ್ಕೆ ಏರಿಕೆ

ಕೇರಳಂ: ಮತ್ತೊಂದು ಶಿಗೆಲ್ಲಾ ಪ್ರಕರಣ

ವಯನಾಡ್ (ಪಿಟಿಐ): ಕೇರಳಂನ ವಯನಾಡ್ ಜಿಲ್ಲೆಯಲ್ಲಿ ಗುರುವಾರ ಶಿಗೆಲ್ಲಾ ಸೋಂಕಿನ ಮತ್ತೊಂದು ಪ್ರಕರಣ ದೃಢಪಟ್ಟಿದೆ.

‘ಶಾಲೆಯೊಂದರ ವಿದ್ಯಾರ್ಥಿಗಳಲ್ಲಿ ಮತ್ತೊಬ್ಬರಿಗೆ ಸೋಂಕು ದೃಢಪಟ್ಟಿದ್ದು, ಈ ಮೂಲಕ ಜಿಲ್ಲೆಯಲ್ಲಿ ಸೋಂಕಿತರ ಸಂಖ್ಯೆ ಒಂಬತ್ತಕ್ಕೆ ಏರಿಕೆಯಾಗಿದೆ. ಐವರ ಪರೀಕ್ಷಾ ವರದಿಗೆ ನಿರೀಕ್ಷಿಸಲಾಗುತ್ತಿದೆ’ ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಶಿಗೆಲ್ಲಾ ಸೋಂಕು ಪತ್ತೆಯಾದ ಪ್ರದೇಶದ ಸುತ್ತಮುತ್ತಲ ಶಾಲಾ–ಕಾಲೇಜುಗಳಿಗೆ ಇದೇ 14ರವರೆಗೂ ಜಿಲ್ಲಾಧಿಕಾರಿ ರಜೆ ಘೋಷಣೆ ಮಾಡಿದ್ದಾರೆ.

ಪರಿಸ್ಥಿತಿ ನಿಯಂತ್ರಣದಲ್ಲಿದೆ: ‘ರಾಜ್ಯದ ವಿವಿಧೆಡೆ ಶಿಗೆಲ್ಲಾ ಸೋಂಕಿನ ಪ್ರಕರಣಗಳು ವರದಿಯಾಗಿವೆ. 578 ಮಂದಿಯಲ್ಲಿ ಲಕ್ಷಣಗಳು ಕಾಣಿಸಿಕೊಂಡಿವೆ. 55 ಮಂದಿ ಆಸ್ಪತ್ರೆ ಸೇರಿದ್ದು, ಪರಿಸ್ಥಿತಿ ನಿಯಂತ್ರಣದಲ್ಲಿದೆ’ ಎಂದು ಕೇರಳಂ ಆರೋಗ್ಯ ಸಚಿವ ಕೆ.ಮುರಳೀಧರನ್ ತಿಳಿಸಿದ್ದಾರೆ.

‘ತಿರುವನಂತಪುರದಲ್ಲಿ ಆರು, ಕೊಲ್ಲಂನಲ್ಲಿ ಇಬ್ಬರು ಮತ್ತು ಕೋಯಿಕೋಡ್‌ನಲ್ಲಿ ಮೂವರ ವರದಿಯಲ್ಲಿ ಪಾಸಿಟಿವ್ ಬಂದಿದೆ. ವಯನಾಡ್‌ನ ಶಾಲೆಯ ಕೊಳವೆಬಾವಿಯ ನೀರಿನಲ್ಲಿ ರೋಗಕಾರಕ ಬ್ಯಾಕ್ಟೀರಿಯಾ ಪತ್ತೆಯಾಗಿಲ್ಲ’ ಎಂದು ತಿಳಿಸಿದ್ದಾರೆ.

ಕೋಯಿಕ್ಕೋಡ್: ನಿಫಾ ವೈರಸ್ ಪತ್ತೆ

ಕೋಯಿಕ್ಕೋಡ್ (ಪಿಟಿಐ): ಇಲ್ಲಿನ ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ಚಿಕಿತ್ಸೆಗೆ ದಾಖಲಾಗಿದ್ದ 43 ವರ್ಷದ ವ್ಯಕ್ತಿಯೊಬ್ಬರಲ್ಲಿ ನಿಫಾ ವೈರಸ್ ಸೋಂಕು ದೃಢಪಟ್ಟಿದ್ದು, ಕೇರಳದಲ್ಲಿ ಕಟ್ಟೆಚ್ಚರ ವಹಿಸಲಾಗಿದೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದರು.

ರೋಗಿಯ ಸಂಪರ್ಕದಲ್ಲಿದ್ದ ವ್ಯಕ್ತಿಗಳ ಪತ್ತೆ ಮತ್ತು ಪ್ರತ್ಯೇಕ ವಾಸಕ್ಕೆ ಆರೋಗ್ಯ ಇಲಾಖೆ ಕ್ರಮಗಳನ್ನು ಕೈಗೊಂಡಿದೆ ಎಂದು ಅವರು ಹೇಳಿದರು.

‘ಪ್ರಾಥಮಿಕ ತನಿಖೆಯಿಂದ ರೋಗಿಯಲ್ಲಿ ನಿಫಾ ವೈರಸ್ ಇರುವುದು ಪತ್ತೆಯಾಗಿದೆ. ಅಂತಿಮ ದೃಢೀಕರಣಕ್ಕಾಗಿ ಮಾದರಿಗಳನ್ನು ಪುಣೆಯ ರಾಷ್ಟ್ರೀಯ ವೈರಾಣು ಸಂಸ್ಥೆಗೆ ಕಳುಹಿಸಲಾಗಿದೆ. ಶೀಘ್ರದಲ್ಲೇ ಫಲಿತಾಂಶ ಬರುವ ನಿರೀಕ್ಷೆಯಿದೆ. ಕೋಯಿಕ್ಕೋಡ್‌ನ ಆರೋಗ್ಯ ಅಧಿಕಾರಿಗಳು ಜಾಗರೂಕರಾಗಿರಲು, ರೋಗಿಯ ಸಂಪರ್ಕಕ್ಕೆ ಬಂದ ಅಧಿಕಾರಿಗಳು ಪ್ರತ್ಯೇಕವಾಗಿ ವಾಸಿಸುವಂತೆ ನಿರ್ದೇಶಿಸಲಾಗಿದೆ’ ಎಂದು ಆರೋಗ್ಯ ಸಚಿವ ಮುರಳೀಧರನ್ ತಿಳಿಸಿದರು.

ಸೋಂಕಿತ ವ್ಯಕ್ತಿಯ ಸಂಪರ್ಕಕ್ಕೆ 77 ಮಂದಿ ಬಂದಿದ್ದು, ಅದರಲ್ಲಿ 58 ಮಂದಿ ಆರೋಗ್ಯ ಕಾರ್ಯಕರ್ತರು, 14 ಮಂದಿ ಕುಟುಂಬಸ್ಥರು ಮತ್ತು ಐವರು ಸ್ನೇಹಿತರಿದ್ದಾರೆ. ಇವರಲ್ಲಿ ಯಾರೊಬ್ಬರಿಗೂ ಇಲ್ಲಿಯವರೆಗೆ ರೋಗಲಕ್ಷಣಗಳು ಕಂಡುಬಂದಿಲ್ಲ ಎಂದು ಅಧಿಕಾರಿಗಳು ತಿಳಿಸಿದರು.

ಕಾಮಗಾರಿಗಳಿಗೆ ಮ್ಯಾಪಿಂಗ್ ಕಡ್ಡಾಯ

'ಕಾಮಗಾರಿ ಮಾಹಿತಿ: ಜಿಐಎಸ್ ಮ್ಯಾಪಿಂಗ್ ಮಾಡಿದ ನಂತರವಷ್ಟೇ ಬಿಲ್ ಪಾವತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಬಿಎ ವ್ಯಾಪ್ತಿಯಲ್ಲಿ ವಿವಿಧ ವಿಭಾಗಗಳಿಂದ ನಡೆಯುತ್ತಿರುವ ಕಾಮಗಾರಿಗಳನ್ನು ಜಿಐಎಸ್ ಮ್ಯಾಪಿಂಗ್ ಮೂಲಕ ಏಕೀಕರಣಗೊಳಿಸುವಂತೆ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಎಲ್ಲಾ ನಗರ ಪಾಲಿಕೆಗಳು, ಇಲಾಖೆಗಳು/ಸಂಸ್ಥೆಗಳು ಕೈಗೊಳ್ಳುತ್ತಿರುವ ಮತ್ತು ಕೈಗೊಳ್ಳಲಿರುವ ಯೋಜನೆಗಳನ್ನು ಒಂದೇ ವೇದಿಕೆಗೆ ತರಲು ಜಿಐಎಸ್ ಮ್ಯಾಪ್‌ನಲ್ಲಿ ಅಪ್‌ಲೋಡ್ ಮಾಡುವ ವ್ಯವಸ್ಥೆ ಕಲ್ಪಿಸಬೇಕು. ಇದರಿಂದ ವಿವಿಧ ಇಲಾಖೆಗಳ ನಡುವೆ ಸಮನ್ವಯ ಸಾಧಿಸಿ, ಕಾಮಗಾರಿಗಳನ್ನು ಏಕಕಾಲದಲ್ಲಿ ಪರಿಣಾಮಕಾರಿಯಾಗಿ ನಿರ್ವಹಿಸಲು ಅನುಕೂಲವಾಗಲಿದೆ ಎಂದರು.

ಜಿಐಎಸ್ ಮ್ಯಾಪಿಂಗ್ ಕಾರ್ಯಕ್ಕಾಗಿ ಎಲ್ಲಾ ನಗರ ಪಾಲಿಕೆಗಳು, ಜಲಮಂಡಳಿ, ಬೆಸ್ಕಾಂ, ಕೆಪಿಟಿಸಿಎಲ್, ಮೆಟ್ರೊ, ಕೆ-ರೈಡ್ ಸೇರಿದಂತೆ ಇತರೆ ಇಲಾಖೆಗಳು ಕ್ರಿಯಾ ಯೋಜನೆಗಳನ್ನು ಜಿಬಿಎಗೆ ಸಲ್ಲಿಸಬೇಕು. ನಗರ ಪಾಲಿಕೆಗಳಲ್ಲಿ ಜಿಐಎಸ್ ಮ್ಯಾಪ್‌ನಲ್ಲಿ ಕಾಮಗಾರಿಗಳ ಮಾಹಿತಿಯನ್ನು ಅಪ್‌ಡೇಟ್ ಮಾಡಿದ ನಂತರವೇ ಬಿಲ್ ಪಾವತಿಸುವ ವ್ಯವಸ್ಥೆಯನ್ನು ಜಾರಿಗೆ ತರಲು ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಹೆಬ್ಬಾಳ ಜಂಕ್ಷನ್‌ನಲ್ಲಿ ಪಾದಚಾರಿಗಳ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ರೂಪಿಸುತ್ತಿರುವ ವಿನ್ಯಾಸವನ್ನು ಶೀಘ್ರದಲ್ಲೇ ಅಂತಿಮಗೊಳಿಸಬೇಕು. ಮಳೆಗಾಲದಲ್ಲಿ ರಸ್ತೆಗಳಲ್ಲಿ ನೀರು ನಿಲ್ಲುವುದರಿಂದ ಸಂಚಾರ ದಟ್ಟಣೆ ಉಂಟಾಗುತ್ತದೆ. ಆದ್ದರಿಂದ ಹೆಚ್ಚು ನೀರು ನಿಲ್ಲುವ ಪ್ರದೇಶಗಳನ್ನು ಗುರುತಿಸಿ, ಮಳೆನೀರು ರಸ್ತೆಗಳಲ್ಲಿ ನಿಲ್ಲದಂತೆ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವಂತೆ ಅಧಿಕಾರಿಗಳಿಗೆ ನಿರ್ದೇಶಿಸಿದರು.

ಸಭೆಯಲ್ಲಿ ವಿಶೇಷ ಆಯುಕ್ತೆ ಸುಷಮಾ ಗೋಡಬೋಲೆ, ನಗರ ಪಾಲಿಕೆ ಆಯುಕ್ತರಾದ ಪೊಮ್ಮಲ ಸುನೀಲ್ ಕುಮಾರ್, ಜಿ. ಜಗದೀಶ್, ಕೆ.ಎನ್. ರಮೇಶ್, ಡಾ. ಕೆ.ವಿ. ರಾಜೇಂದ್ರ ಉಪಸ್ಥಿತರಿದ್ದರು.

ಹೆಚ್ಚುವರಿ ಆಹಾರ ತಾಣ: ಬೀದಿ ನಾಯಿಗಳಿಗೆ ಆಹಾರ ನೀಡುವುದನ್ನು ನಿಷೇಧಿಸಿಲ್ಲ. ಪಾಲಿಕೆಯಿಂದ ಗುರುತಿಸಿರುವ ಸ್ಥಳದಲ್ಲಿ ಮಾತ್ರ ಆಹಾರ ನೀಡಬೇಕು. ಐದು ನಗರ ಪಾಲಿಕೆಗಳಲ್ಲಿ ಪ್ರತಿ ವಾರ್ಡ್‌ನಲ್ಲಿರುವ ಸಮುದಾಯ ನಾಯಿಗಳ ಸಂಖ್ಯೆಯನ್ನು ಆಧರಿಸಿ ಹೆಚ್ಚುವರಿ ಆಹಾರ ತಾಣಗಳನ್ನು ಗೊತ್ತುಪಡಿಸಲಾಗುತ್ತಿದೆ ಎಂದು ಮಹೇಶ್ವರ್ ರಾವ್ ತಿಳಿಸಿದರು.

ವ್ಯಕ್ತಿಗಳು ಅಥವಾ ಸಂಘಗಳು ಬೀದಿ ನಾಯಿಗಳನ್ನು ಸ್ಥಳಾಂತರಿಸುವುದು ಅಥವಾ ತೆಗೆದುಹಾಕುವುದು ನಿಷೇಧಿಸಿದ್ದು, ಅನ್ವಯಿಸುವ ಕಾನೂನುಗಳು ಹಾಗೂ ನ್ಯಾಯಾಲಯದ ನಿರ್ದೇಶನಗಳ ಅಡಿಯಲ್ಲಿ ಅಪರಾಧವಾಗಿದೆ ಎಂದರು.

ಬೀದಿ ಪ್ರಾಣಿಗಳ ಮೇಲೆ ಕಿರುಕುಳ, ಹಲ್ಲೆ, ಗಾಯಗೊಳಿಸುವುದು, ಕ್ರೌರ್ಯ ಎಸಗುವುದು ಕಾನೂನುಬಾಹಿರವಾಗಿದೆ. ಇಂತಹ ಕೃತ್ಯಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ ಎಂದರು.

ಕೆಂಪಾಂಬುಧಿ ಕೆರೆ ಅಭಿವೃದ್ಧಿಗೆ ಡಿಪಿಆರ್

ಕೆಂಪಾಂಬುಧಿ ಕೆರೆ ಅಭಿವೃದ್ಧಿಗೆ ಸಂಬಂಧಿಸಿದಂತೆ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಲ್ಲಿಸಿ ಬೇಗ ಕೆಲಸ ಆರಂಭಿಸಲು ಪಶ್ಚಿಮ ನಗರ ಪಾಲಿಕೆ ಆಯುಕ್ತ ಡಾ. ಕೆ.ವಿ. ರಾಜೇಂದ್ರ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಬಸವನಗುಡಿ ವಿಧಾನಸಭಾ ಕ್ಷೇತ್ರದ ಶಾಸಕ ರವಿಸುಬ್ರಮಣ್ಯ ಅವರೊಂದಿಗೆ ಬಸವನಗುಡಿ ವಿಭಾಗದಲ್ಲಿ ವಿವಿಧ ಕಾಮಗಾರಿಗಳನ್ನು ಪರಿಶೀಲಿಸಿ, ಅವರು ಮಾತನಾಡಿದರು.

ಹನುಮಂತನಗರದಲ್ಲಿ ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಯೋಜನೆ (ಸಿಎಂಐಡಿಪಿ) ರಸ್ತೆ ಕಾಮಗಾರಿಗೆ ಚಾಲನೆ ನೀಡಿ, ನಿಗದಿತ ಸಮಯದೊಳಗೆ ಕಾಮಗಾರಿ ಮುಗಿಸುವಂತೆ ತಿಳಿಸಿದರು.

ಬ್ಯಾಂಕ್ ಕಾಲೊನಿ ಮುಖ್ಯರಸ್ತೆಯಲ್ಲಿ ವೈಟ್ ಟಾಪಿಂಗ್ ಶೀಘ್ರ ಮುಗಿಸಿ, ಪಾದಚಾರಿ ಮಾರ್ಗಗಳು ವ್ಯವಸ್ಥಿತವಾಗಿರುವಂತೆ ಮಾಡಬೇಕು. ಮಳೆನೀರು ಸರಾಗವಾಗಿ ಹರಿದುಹೋಗುವಂತೆ ವ್ಯವಸ್ಥೆ ಮಾಡಿ ಎಂದು ಅಧಿಕಾರಿಗಳಿಗೆ ಸೂಚಿಸಿದರು. ಮುಖ್ಯ ಎಂಜಿನಿಯರ್ ಬಸವರಾಜ್ ಕಬಾಡೆ ಉಪಸ್ಥಿತರಿದ್ದರು.

ಡಾ.ಕೆ.ವಿ.ರಾಜೇಂದ್ರ ಅವರು ಬಸವನಗುಡಿಯಲ್ಲಿ ನಾಗರಿಕರಿಂದ ಅಹವಾಲು ಸ್ವೀಕರಿಸಿದರು.ರವಿಸುಬ್ರಮಣ್ಯ ಉಪಸ್ಥಿತರಿದ್ದರು

'ಡಿಕೆ 'ಮಾಫಿಯಾ' ಹಿತಾಸಕ್ತಿ ಕಾಯುವ ಏಜೆಂಟ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕದ ಏಳೂವರೆ ಕೋಟಿ ಕನ್ನಡಿಗರ ಹಕ್ಕಿಗಾಗಿ, ಬೆಂಗಳೂರಿನ ಒಂದೂವರೆ ಕೋಟಿ ನಾಗರಿಕರ ಧ್ವನಿಯಾಗಿ ನಿಂತಿರುವ 'ಜನತಾ ಏಜೆಂಟ್' ನಾನು. ನಿಮ್ಮ ಹಾಗೆ ಯಾವುದೋ 'ಮಾಫಿಯಾ' ಹಿತಾಸಕ್ತಿ ಕಾಯುವ ಕಮಿಷನ್ ಏಜೆಂಟ್ ಅಲ್ಲ' ಎಂದು ವಿರೋಧಪಕ್ಷದ ನಾಯಕ ಆರ್.ಅಶೋಕ ಕಿಡಿಕಾರಿದ್ದಾರೆ.

ಘನತ್ಯಾಜ್ಯ ನಿರ್ವಹಣೆ ಟೆಂಡರ್ ಅಕ್ರಮದ ವಿಷಯ ಪ್ರಸ್ತಾಪಿಸಿದ ತಮ್ಮನ್ನು ಕಸದ ಮಾಫಿಯಾದ ಏಜೆಂಟ್ ಎಂದು ಟೀಕಿಸಿದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಹೇಳಿಕೆಗೆ ಅಶೋಕ ಅವರು 'ಎಕ್ಸ್'ನಲ್ಲಿ ತಿರುಗೇಟು ನೀಡಿದ್ದಾರೆ.

'ಕಸ ವಿಲೇವಾರಿ ನಿರ್ವಹಣೆಯ ಟೆಂಡರ್ ನಿಯಮ ಅಕ್ರಮವನ್ನು ಮುಚ್ಚಿ ಹಾಕಲು ನೀವೇ ಸ್ವತಃ ಉನ್ನತ ಮಟ್ಟದ ರಚಿಸಿ, ವರದಿ ನೀಡಲು ಕೊಟ್ಟಿದ್ದ ಒಂದು ವಾರದ ಗಡುವು ಇಂದಿಗೆ ಮುಕ್ತಾಯವಾಗಿದೆ. ನಿಮ್ಮಲ್ಲಿ ತಾಕತ್ತಿದ್ದರೆ, ಕಿಂಚಿತ್ತಾದರೂ ಪಾರದರ್ಶಕತೆ ಉಳಿದಿದ್ದರೆ, ಆ ವರದಿಯನ್ನು ಅಡಗಿಸಿಡದೆ ತಕ್ಷಣವೇ ರಾಜ್ಯದ ಜನರ ಮುಂದಿಡಿ. ಆಗ ನಿಮ್ಮ ಅಸಲಿ ಮುಖವಾಡ ಕಳಚಿ ಬೀಳುತ್ತದೆ. ಯಾರ ಕಾರ್ಯ ವೈಖರಿ ಎಂಥದ್ದು ಎಂದು ಜನರೇ ತೀರ್ಮಾನಿಸಲಿ' ಎಂದಿದ್ದಾರೆ.

'ವಿಪಕ್ಷ ನಾಯಕನಾಗಿ ನಿಮ್ಮ ಲೂಟಿಯನ್ನು ಪ್ರಶ್ನಿಸುವುದು ನನ್ನ ಸಂವಿಧಾನಬದ್ಧ ಕರ್ತವ್ಯ. ಅದಕ್ಕೆ ಯಾರ ಅಪ್ಪಣೆಯೂ ಬೇಕಿಲ್ಲ. ಹೀಗಾಗಿ ನಾನು ಕನ್ನಡಿಗರ, ಬೆಂಗಳೂರಿನ ಜನಸಾಮಾನ್ಯರ ಏಜೆಂಟ್ ಆಗಿಯೇ ಮಾತನಾಡುತ್ತಿದ್ದೇನೆ' ಎಂದಿದ್ದಾರೆ.

ಸಾಕ್ಷ್ಯವಿದ್ದರೆ ಬಿಡುಗಡೆ ಮಾಡಿ: ಪ್ರಿಯಾಂಕ್

'ರಾಜ್ಯಪಾಲರ ಬಳಿ ದೂರು ನೀಡುವುದು ಮಾತ್ರ ಪರಿಹಾರವಲ್ಲ. ಬಿಜೆಪಿ ಬಳಿ ಭ್ರಷ್ಟಾಚಾರದ ಸಾಕ್ಷ್ಯಗಳಿದ್ದರೆ ಅವುಗಳನ್ನು ಬಹಿರಂಗಪಡಿಸಲಿ. ಸರ್ಕಾರ ಯಾವುದೇ ತನಿಖೆಗೆ ಸಿದ್ಧ' ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಸವಾಲು ಹಾಕಿದರು.

'ಬೆಂಗಳೂರಿನ ಘನತ್ಯಾಜ್ಯ ವಿಲೇವಾರಿ ನಿರ್ವಹಣೆ ಟೆಂಡರ್‌ನಲ್ಲಿ ಕಾಂಗ್ರೆಸ್ ಸರ್ಕಾರ ₹10 ಸಾವಿರ ಕೋಟಿ ಕಿಕ್ ಬ್ಯಾಕ್ ಪಡೆದಿದೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಮಾಡಿರುವ ಆರೋಪಕ್ಕೆ ಪ್ರತಿಕ್ರಿಯಿಸಿದ ಪ್ರಿಯಾಂಕ್, 'ಆರೋಪ ಮಾಡಿದರಷ್ಟೇ ಸಾಕಾಗುವುದಿಲ್ಲ. ಸೂಕ್ತ ದಾಖಲೆಗಳನ್ನು ಸಾರ್ವಜನಿಕರ ಮುಂದೆ ಇಡಬೇಕು' ಎಂದರು.

'ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಈಗಾಗಲೇ ಯಾವುದೇ ಹಗರಣ ನಡೆದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಬಿಜೆಪಿ ಇದುವರೆಗೆ ತಮ್ಮ ಆರೋಪಗಳಿಗೆ ಪೂರಕವಾಗಿ ಒಂದು ದೃಢ ದಾಖಲೆ ಕೂಡ ಬಿಡುಗಡೆ ಮಾಡಿಲ್ಲ' ಎಂದು ವ್ಯಂಗ್ಯವಾಡಿದರು.

PM SHRI SCHOOL JAWAHAR NAVODAYA VIDYALAYA,
BASHETTIHALLI, DODDABALLAPURA TALUK, BANGALORE RURAL.DISTRICT
WALK –IN- INTERVIEW
Walk-in-interview for the bellow mentioned posts purely on part time basis for the year 2026-27 at PM Shri School, Jawahar Navodaya Vidyalaya, Bashettihalli, Bangalore Rural District, Karnataka.

Sl. No.	Name of the post & Number of Vacancy	Nature Of Appointment & Remuneration	No. post vacant	QUALIFICATION	Date Of Interview
1.	Yoga Trainer	(Part time) Rs. 12500 per Month	1	M.P. Ed. Or B.P. Ed with specialization or certification in Yoga. Post-Graduation in Yoga. One Year Diploma in Yoga from a recognized University/ Institute. Bachelor of Naturopathy and Yogic science. (BNYS). Teaching experience desirable.	22.06.2026 (Monday) Reporting time: 10.30 AM
2.	APPAREL	(Part time) Rs. 1,000/- per Session	1	Post-graduation in Textile and Clothing or relevant area from a recognized Institute/ University, with at least 1 year work/ teaching experience in Textile and Clothing	
3	Atal Tinkering Lab Facilitator	(Part time) Rs. 1,000/- per Session	1	Diploma in Computer Science/ Information Technology OR Bachelor's Degree in Computer Application/ Science/ Information Technology (BCA, B.Sc. Computer Science/ Information Technology) OR Graduation with PGDCA OR DOEACC 'A' Level Certificate	
4	Bharathanatyam Trainer	Part time Rs.1040 Per session	1	Post Graduate degree/ Bachelor's Degree /Diploma/certificate course with specialization in concerned subject. Teaching experience desirable.	
5	Yakshagaana Trainer/ Folk dance art forms/ Drama	Part time Rs.1040 Per session	1	Post Graduate degree/Bachelor's Degree /Diploma/certificate course with specialization in concerned subject. Coaching experience desirable.	
6	Keyboard Trainer/Flute Trainer	Part time Rs.1040 Per session	1		
7	Tabala Trainer	Part time Rs.1040 Per session	1		
8	Football /Volley Ball/ Handball /Basket Ball	Part time Rs.1250 per session	1		
9	Kabaddi/Chess Coach	Part time Rs.1250 per session	1	Post Graduate degree/Bachelor's Degree /Diploma/certificate course with specialization in concerned subject. Coaching experience desirable	
10	Cricket Coach.	Part time Rs.1250 per session	1		
11	Boxing/ Taekwondo Coach / Self Defence especially for girls	(Part time) Rs. 12500 per Month	2		

Contact for any queries:- 1. Dr.Jayamma.c, Office Superintendent-9480193995, 2. Poojitha.R, SSA-7981061072

ಚಳ್ಳಕೆರೆ ಶಾಸಕ ರಘುಮೂರ್ತಿ ಜನ್ಮದಿನೋತ್ಸವ; ಅಭಿಮಾನಿಗಳಿಂದ ಶುಭಾಶಯ

'ರಘುಮೂರ್ತಿಗೆ ಉನ್ನತ ಸ್ಥಾನ ಸಿಗಲಿ'

ಪ್ರಜಾವಾಣಿ ವಾರ್ತೆ

ಚಳ್ಳಕೆರೆಯಲ್ಲಿ ಬುಧವಾರ ನಡೆದ ಶಾಸಕ ಟಿ.ರಘುಮೂರ್ತಿ ಅವರ ಜನ್ಮದಿನೋತ್ಸವದ ಕಾರ್ಯಕ್ರಮದಲ್ಲಿ ವಿವಿಧ ಮಠಾಧೀಶರು ಭಾಗಿಯಾಗಿದ್ದರು

ಚಳ್ಳಕೆರೆ (ಚಿತ್ರದುರ್ಗ): 'ಮೂರು ಬಾರಿ ಶಾಸಕರಾಗಿರುವ ಟಿ.ರಘುಮೂರ್ತಿ ಅವರು ತಾಲ್ಲೂಕಿನಲ್ಲಿ ಮಾಡಿರುವ ಅಭಿವೃದ್ಧಿ ಕೆಲಸಗಳು ಜಿಲ್ಲಾ ಕೇಂದ್ರದ ಅಭಿವೃದ್ಧಿಯನ್ನೂ ಮೀರಿಸುವಂತಿವೆ. ಕ್ಷೇತ್ರದ ಸರ್ವಾಂಗೀಣ ಪ್ರಗತಿಗೆ ಶ್ರಮಿಸಿರುವ ಇವರಿಗೆ ಇನ್ನೂ ಉನ್ನತ ಜವಾಬ್ದಾರಿ ದೊರೆಯಬೇಕು' ಎಂದು ಭೋವಿ ಗುರುಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಆಶಿಸಿದರು.

ನಗರದಲ್ಲಿ ಬುಧವಾರ ನಡೆದ ಶಾಸಕ ಟಿ.ರಘುಮೂರ್ತಿ ಅವರ ಜನ್ಮದಿನಾಚರಣೆ ಸಮಾರಂಭದ ಸಾನ್ನಿಧ್ಯವಹಿಸಿ ಆಶೀರ್ವಚನ ನೀಡಿದ ಅವರು, ಇಲ್ಲಿನ ಭವ್ಯ ಕಟ್ಟಡಗಳು, ಗುಣಮಟ್ಟದ ರಸ್ತೆಗಳು, ಅಭಿವೃದ್ಧಿ ಹೊಂದಿರುವ ಜಲಮೂಲಗಳು, ಮೂಲ ಸೌಕರ್ಯಗಳು, ಸುಸಜ್ಜಿತ ಸಮುದಾಯ ಭವನಗಳು ಹಾಗೂ ನಗರದಲ್ಲಿ ಕಂಗೊಳಿಸುತ್ತಿರುವ ಹಸಿರ ಸಿರಿಯೇ ಅಭಿವೃದ್ಧಿಯ ನೈಜ ಬೆಳವಣಿಗೆಯನ್ನು ಸಾರುತ್ತಿವೆ ಎಂದರು.

ರಘುಮೂರ್ತಿ ಸ್ವತಃ ಎಂಜಿನಿಯರ್ ಆಗಿರುವುದರಿಂದ ತಾಂತ್ರಿಕ ಜ್ಞಾನ ಅಭಿವೃದ್ಧಿಗೆ ಸಹಕಾರಿಯಾಗಿದೆ. ದಕ್ಷತೆ ಹಾಗೂ ಪಾರದರ್ಶಕತೆ ಕಾಯ್ದುಕೊಂಡಿರುವ ಅವರಿಂದ ಕ್ಷೇತ್ರ ಅಭಿವೃದ್ಧಿಯಾಗಿದೆ ಎಂದು ಕುಂಚಿಟಿಗ ಮಹಾಸಂಸ್ಥಾನ ಮಠದ ಶಾಂತವೀರ ಸ್ವಾಮೀಜಿ ಶ್ಲಾಘಿಸಿದರು.

ಅಭಿವೃದ್ಧಿಯ ಹರಿಕಾರ ಟಿ. ರಘುಮೂರ್ತಿ, ಕ್ಷೇತ್ರಕ್ಕೆ ನೀರಾವರಿ ಯೋಜನೆಗಳನ್ನು ತಂದು ರೈತರ ಬಾಳಿಗೆ ಬೆಳಕಾಗಿದ್ದಾರೆ. ಇಂತಹ ಜನಪರ ನಾಯಕನಿಗೆ ಸಚಿವ ಸ್ಥಾನ ಸಿಗಬೇಕು ಎಂದು ಭಗೀರಥ ಗುರುಪೀಠದ ಪುರುಷೋತ್ತಮಾನಂದಪುರಿ ಸ್ವಾಮೀಜಿ ತಿಳಿಸಿದರು.

ಯಾವುದೇ ವರ್ಗ ಅಥವಾ ಪ್ರದೇಶಕ್ಕೆ ಸೀಮಿತವಾಗದೆ ಅಭಿವೃದ್ಧಿಗೆ ಆದ್ಯತೆ ನೀಡುತ್ತಿರುವ ರಘುಮೂರ್ತಿ ಅವರಿಗೆ ಸಚಿವ ಸ್ಥಾನ ದೊರೆತರೆ ಕ್ಷೇತ್ರವಲ್ಲದೇ ಇಡೀ ಜಿಲ್ಲೆಯ ಅಭಿವೃದ್ಧಿಗೆ ಇನ್ನಷ್ಟು ವೇಗ ಸಿಗಲಿದೆ ಎಂದು ಕನಕ ಗುರುಪೀಠದ ಈಶ್ವರಾನಂದಪುರಿ ಸ್ವಾಮೀಜಿ ಅಭಿಪ್ರಾಯಪಟ್ಟರು.

ಹಸನ್ಮುಖಿಯಾಗಿರುವ ಇವರು 'ನಗುಮೂರ್ತಿ'. ಅವರ ಸೌಮ್ಯ ಸ್ವಭಾವವೇ ಕ್ಷೇತ್ರದ ಜನರನ್ನು ಅವರತ್ತ ಸೆಳೆಯುತ್ತದೆ ಎಂದು ಯಾದವ ಗುರುಪೀಠದ ಶ್ರೀಕೃಷ್ಣ ಯಾದವಾನಂದ ಸ್ವಾಮೀಜಿ ಹೇಳಿದರು.

ಜನ್ಮದಿನದ ಅಂಗವಾಗಿ ರಕ್ತದಾನ ಶಿಬಿರ ಆಯೋಜಿಸಲಾಗಿತ್ತು. ವೇದಿಕೆ ಕಾರ್ಯಕ್ರಮದಲ್ಲಿ ಸರ್ವ ಸಮುದಾಯಗಳ ಮಠಾಧೀಶರು ಭಾಗಿಯಾಗಿ ರಘುಮೂರ್ತಿ ಅವರ ಕಾರ್ಯವೈಖರಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಪಕ್ಷದ ಕಾರ್ಯಕರ್ತರು, ಅಭಿಮಾನಿಗಳು, ಮುಖಂಡರು ಪಾಲ್ಗೊಂಡು ಶುಭ ಕೋರಿದರು.

ನೋಟಿನ ಬೃಹತ್ ಹಾರ!

ಟಿ.ರಘುಮೂರ್ತಿ ಅವರ ಜನ್ಮದಿನದ ಹಿನ್ನೆಲೆಯಲ್ಲಿ ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ, ಕಾಂಗ್ರೆಸ್ ಮುಖಂಡ ಎಚ್. ಸಮರ್ಥ ರಾಯ್ ಅವರು ₹10 ಮುಖಬೆಲೆಯ ನೋಟುಗಳಿಂದ ವಿಶೇಷವಾಗಿ ಸಿದ್ಧಪಡಿಸಿದ್ದ ಬೃಹತ್ ಹಾರ ಹಾಗೂ ಪುಷ್ಪಗುಚ್ಛ ನೀಡಿ ಶುಭ ಕೋರಿದರು.

'ಶಾಸಕ ರಘುಮೂರ್ತಿ ಅವರ ಅಭಿವೃದ್ಧಿ ರಾಜಕಾರಣ ಯುವಕರಿಗೆ ಸ್ಫೂರ್ತಿಯಾಗಿದೆ' ಎಂದು ಸಮರ್ಥ ರಾಯ್ ಹೇಳಿದರು.

ಜಲಮಂಡಳಿ ಫೋನ್ ಇನ್ ಕಾರ್ಯಕ್ರಮ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಜಲಮಂಡಳಿಯು ಜೂನ್ 12 ರಂದು ಬೆಳಿಗ್ಗೆ 9.30 ರಿಂದ 10.30 ರವರೆಗೆ ನೇರ ಫೋನ್-ಇನ್ ಕಾರ್ಯಕ್ರಮವನ್ನು ಆಯೋಜಿಸಿದ್ದು, ಜಲಮಂಡಳಿಯ ಅಧ್ಯಕ್ಷೆ ಎನ್. ಮಂಜುಳಾ ಅವರು ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸಲಿದ್ದಾರೆ.

ಸಾರ್ವಜನಿಕರು ತಮ್ಮ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಮತ್ತು ಒಳಚರಂಡಿ, ಇಳಿ ಗುಂಡಿಯಿಂದ ತ್ಯಾಜ್ಯ ನೀರು ಹೊರಬರುತ್ತಿರುವ ಬಗ್ಗೆ, ಜಲಮಾಪನ ಹಾಗೂ ನೀರಿನ ಬಿಲ್ ಸಮಸ್ಯೆಯ ಬಗ್ಗೆ ನೇರವಾಗಿ ಮಾತನಾಡಬಹುದು. ಸಂಪರ್ಕ ಸಂಖ್ಯೆ; 080-22945119 ಮತ್ತು 080-22229639.

ನೀರಿನ ಸಂಪರ್ಕ ಸಮಸ್ಯೆ ಕುರಿತು ಗ್ರಾಹಕರು ತಮ್ಮ ಆರ್.ಆರ್.ಸಂಖ್ಯೆಯನ್ನು ತಿಳಿಸಿ ದೂರನ್ನು ನೀಡಬಹುದು.

ಜೈವಿಕ ತಂತ್ರಜ್ಞಾನ, ಶೈಕ್ಷಣಿಕ ಉಪಕ್ರಮಕ್ಕೆ ₹27.19 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನವೋದ್ಯಮಗಳ ಬೆಳವಣಿಗೆ ವೇಗಗೊಳಿಸಲು, ಉದ್ಯಮ–ಶೈಕ್ಷಣಿಕ ಸಹಯೋಗ ಹೆಚ್ಚಿಸಲು, ಜೈವಿಕ ತಂತ್ರಜ್ಞಾನ, ಮೂಲಸೌಕರ್ಯ ಅಭಿವೃದ್ಧಿಪಡಿಸಲು ಮತ್ತು ಸ್ಥಳೀಯ ಡೀಪ್‌ಟೆಕ್ ನಾವೀನ್ಯತೆ ಉತ್ತೇಜಿಸುವ ಉದ್ದೇಶಕ್ಕಾಗಿ ₹27.19 ಕೋಟಿ ಮೊತ್ತದ ನಾಲ್ಕು ಕಾರ್ಯತಂತ್ರದ ಉಪಕ್ರಮಗಳನ್ನು ರಾಜ್ಯ ಸರ್ಕಾರವು ಅನುಮೋದಿಸಿದೆ.

'ಈ ಉಪಕ್ರಮಗಳನ್ನು ಎಲೆಕ್ಟ್ರಾನಿಕ್ಸ್, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ನಾವೀನ್ಯತೆ ಮತ್ತು ತಂತ್ರಜ್ಞಾನ ಸೊಸೈಟಿ (ಕೆಐಟಿಎಸ್), ಕರ್ನಾಟಕ ಡಿಜಿಟಲ್ ಆರ್ಥಿಕತೆ (ಕೆಡಿಇಎಂ), ಪ್ರಮುಖ ಶೈಕ್ಷಣಿಕ ಸಂಸ್ಥೆಗಳು ಮತ್ತು ಪರಿಸರ ವ್ಯವಸ್ಥೆಯ ಪಾಲುದಾರರ ಮೂಲಕ ಕಾರ್ಯಗತಗೊಳಿಸಲಾಗುವುದು ಎಂದು ಐಟಿ–ಬಿಟಿ ಸಚಿವ ಪ್ರಿಯಾಂಕ್ ಖರ್ಗೆ' ಹೇಳಿದರು.

ನವೋದ್ಯಮಗಳು ಮತ್ತು ಪ್ರತಿಭಾನ್ವಿತರನ್ನು ಬೆಳೆಸುವುದರಿಂದ ಹಿಡಿದು ಜೈವಿಕ ತಂತ್ರಜ್ಞಾನ, ಆನುವಂಶಿಕ ಮಾಹಿತಿ 'ಜೀನೋಮ್' (ಡಿಎನ್) ಅಧ್ಯಯನ ಮಾಡುವ ಜೀವಶಾಸ್ತ್ರ ಶಾಖೆ (ಜಿನೊಮಿಕ್ಸ್) ಹಾಗೂ ವೈದ್ಯಕೀಯ ರೊಬೊಟಿಕ್ಸ್ ಕ್ಷೇತ್ರಗಳಲ್ಲಿನ ಅತ್ಯಾಧುನಿಕ ಸಂಶೋಧನೆಗಳವರೆಗೆ ಹೂಡಿಕೆ ಮಾಡಲಾಗುವುದು ಎಂದು ತಿಳಿಸಿದರು.

'ಮುಂದಿನ ತಲೆಮಾರಿನ ಉದ್ಯೋಗಗಳು, ಉದ್ಯಮಗಳು ಮತ್ತು ವೈಜ್ಞಾನಿಕ ಸಾಧನೆಗಳಿಗೆ ಅಗತ್ಯವಾದ ಭದ್ರ ಅಡಿಪಾಯವನ್ನು ನಾವು ನಿರ್ಮಿಸುತ್ತಿದ್ದೇವೆ. ಈ ಉಪಕ್ರಮಗಳು, ಭಾರತದ ಪ್ರಮುಖ ನಾವೀನ್ಯತೆ ಮತ್ತು ತಂತ್ರಜ್ಞಾನ ಕೇಂದ್ರವಾಗಿ ಕರ್ನಾಟಕದ ಸ್ಥಾನಮಾನವನ್ನು ಮತ್ತಷ್ಟು ಸದೃಢಗೊಳಿಸಲಿವೆ' ಎಂದು ಪ್ರಿಯಾಂಕ್ ಹೇಳಿದರು.

ಸಾಂತ್ವನ ಕೇಂದ್ರ ನಿರ್ಲಕ್ಷ್ಯ ಮಾಡದಿರಿ: ಜಿಲ್ಲಾಧಿಕಾರಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- 'ಆಶ್ರಯ ಪಡೆದ ಮಹಿಳೆಯರ ಅಹವಾಲುಗಳನ್ನು ಆಲಿಸಿ'
- 'ಬಡ ಮಕ್ಕಳಿಗೆ ಕಲ್ಯಾಣ ಯೋಜನೆಗಳ ಅರಿವು ಮೂಡಿಸಿ'

ಬೆಂಗಳೂರು: 'ದೌರ್ಜನ್ಯಕ್ಕೆ ಒಳಗಾದ ಹಾಗೂ ಶೋಷಿತ ಮಹಿಳೆಯರಿಗಾಗಿ ಇರುವ ಸಾಂತ್ವನ ಕೇಂದ್ರಗಳನ್ನು ಅಧಿಕಾರಿಗಳು ನಿರ್ಲಕ್ಷ್ಯ ಮಾಡಬಾರದು. ಅಲ್ಲಿಗೆ ನಿಯಮಿತವಾಗಿ ಭೇಟಿ ನೀಡಬೇಕು. ಮಹಿಳೆಯರಲ್ಲಿ ವಿಶ್ವಾಸ ತುಂಬಿ, ಕಾನೂನು ಜಾಗೃತಿ ಮೂಡಿಸಬೇಕು' ಎಂದು ಜಿಲ್ಲಾಧಿಕಾರಿ ಕಾಂತರಾಜು ಪಿ.ಎಸ್. ಅವರು ಸೂಚಿಸಿದರು.

ನಗರದಲ್ಲಿ ಗುರುವಾರ ನಡೆದ 'ಸಖಿ ಒನ್ ಸ್ಟಾಪ್ ಸೆಂಟರ್' ಸಿಬ್ಬಂದಿ ನೇಮಕಾತಿ ಹಾಗೂ ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿ, 'ಆತಂಕ, ದುಃಖದಲ್ಲಿರು ಮಹಿಳೆಯರೊಂದಿಗೆ ಅಪ್ತಸಮಾಲೋಚನೆ ನಡೆಸಬೇಕು. ಸೂಕ್ತ ಕಾನೂನು ಸಲಹೆ ನೀಡಬೇಕು' ಎಂದರು.

'ಸಾಂತ್ವನ ಕೇಂದ್ರಗಳಲ್ಲಿ ಮೂಲಸೌಲಭ್ಯಗಳು ಸರಿಯಾಗಿರುವ ಬಗ್ಗೆ ಖಚಿತಪಡಿಸಿಕೊಳ್ಳುತ್ತಿರಬೇಕು. ಆಶ್ರಯ ಪಡೆದ ಮಹಿಳೆಯರ ಅಹವಾಲುಗಳನ್ನು ಆಲಿಸಿ, ಕುಂದು ಕೊರತೆ ನಿವಾರಿಸಬೇಕು' ಎಂದು ಸೂಚಿಸಿದರು.

'ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳ ವಿಚಾರಣೆ ತ್ವರಿತವಾಗಿ ನಡೆಯುವಂತೆ ಮುತುವರ್ಜಿ ವಹಿಸಬೇಕು. ಪ್ರಧಾನಮಂತ್ರಿ ಮಾತೃವಂದನಾ ಯೋಜನೆಯಡಿ ಅಂಗನವಾಡಿಗಳ ಮೂಲಕ ಮಕ್ಕಳು ಮತ್ತು ಗರ್ಭಿಣಿಯರಿಗೆ ಪೌಷ್ಟಿಕ ಆಹಾರ ಒದಗಿಸಬೇಕು. ಗ್ರಾಮೀಣ ಮತ್ತು ಕೊಳೆಗೇರಿ ಪ್ರದೇಶಗಳ ಬಡ ಗರ್ಭಿಣಿಯರಿಗೆ ಹಾಗೂ ಮಕ್ಕಳಿಗೆ ಯೋಜನೆಯ ಅರಿವು ಮೂಡಿಸಬೇಕು. ಗೃಹಲಕ್ಷ್ಮೀ ಯೋಜನೆಗೆ ನೋಂದಣಿ ಮಾಡಿಸಬೇಕು' ಎಂದರು.

'ಮೆಟ್ರಿಕ್ ಪೂರ್ವ ಮತ್ತು ನಂತರದ ವಸತಿ ನಿಲಯಗಳಿಗೆ ಮಹಿಳಾ ಅಧಿಕಾರಿಗಳು ಭೇಟಿ ನೀಡಿ, ಬಾಲಕಿಯರ ಅಹವಾಲು ಆಲಿಸಬೇಕು. ಅವರ ಕಲಿಕೆ ಪ್ರಕ್ರಿಯೆ ಸಮರ್ಪಕವಾಗಿ ನಡೆಯುತ್ತಿದೆಯೇ ಎಂಬುದನ್ನು ಪರಿಶೀಲಿಸಬೇಕು' ಎಂದು ಸೂಚಿಸಿದರು.

'ಪೋಷಣ್ ಅಭಿಯಾನದಡಿ ಬೆಂಗಳೂರು ನಗರ ಜಿಲ್ಲೆಯ ಶಿವಾಜಿನಗರದಲ್ಲಿ ಪ್ರಾರಂಭವಾಗಿರುವ ಸಖಿ ಒನ್ ಸ್ಟಾಪ್ ಸೆಂಟರ್ ಹಾಗೂ ಅಂಗನವಾಡಿ ಕೇಂದ್ರಗಳಿಗೆ ಮೀಸಲಾತಿಗೆ ಅನುಗುಣವಾಗಿ ಅರ್ಹರನ್ನು ನೇಮಿಸಬೇಕು' ಎಂದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕಿ ಸುಮಂಗಲ, ಜಿಲ್ಲಾ ಆರೋಗ್ಯಾಧಿಕಾರಿ ಡಾ. ರವೀಂದ್ರನಾಥ್.ಟಿ ಪಾಲ್ಗೊಂಡಿದ್ದರು.

'ಕುಂದುಕೊರತೆ: ಅಧಿಕಾರಿಗಳಿಗೆ ಮುಖ್ಯಮಂತ್ರಿಗಳು ಸೂಚನೆ ನೀಡಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾರ್ವಜನಿಕರ ಕುಂದುಕೊರತೆ ಆಲಿಸಲು ಇಲಾಖೆಗಳ ಅಧಿಕಾರಿಗಳ ಸಭೆಯನ್ನು ಎರಡು ತಿಂಗಳಿಗೊಮ್ಮೆ ಜಿಲ್ಲಾಧಿಕಾರಿಗಳು ಕಡ್ಡಾಯವಾಗಿ ನಡೆಸುವಂತೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕೂಡಲೇ ಸೂಚಿಸಬೇಕು' ಎಂದು ರಾಮಮೂರ್ತಿ ನಗರ ಕ್ಷೇಮಾಭಿವೃದ್ಧಿ ಸಂಘದ ಸಂಸ್ಥಾಪಕ ಅಧ್ಯಕ್ಷ ಎ.ವಿ.ಶ್ಯಾಮರಾವ್ ಕೋರಿದ್ದಾರೆ.

'ಜೂನ್ 13ರಂದು ರಾಜ್ಯದ ಎಲ್ಲ ಜಿಲ್ಲಾಧಿಕಾರಿಗಳು, ಜಿ.ಪಂ ಸಿಇಒ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಪ್ರಗತಿ ಪರಿಶೀಲನಾ ಸಭೆಯನ್ನು ಸಿ.ಎಂ ನಡೆಸುತ್ತಿದ್ದು, ಅಂದೇ ನಿರ್ದೇಶನ ನೀಡಬೇಕು' ಎಂದು ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

'ಯಾವುದೇ ಇಲಾಖೆಗೆ ಹೋದರೂ ಅಧಿಕಾರಿಗಳು ಕೆಲಸ ಇಲ್ಲವೇ ಸಭೆ ಮೇರೆಗೆ ತೆರಳಿದ್ದಾರೆಂಬ ಫಲಕ ಕಾಣುತ್ತದೆ. ಅಲ್ಲದೇ, ಸಾರ್ವಜನಿಕರ ಭೇಟಿ ಸಮಯ ಮಧ್ಯಾಹ್ನ 3.30ರಿಂದ 5.30 ಎಂದಿರುತ್ತದೆ. ಜನರು ಕುಂದುಕೊರತೆಗಳನ್ನು ಯಾರ ಬಳಿ ಹೇಳಬೇಕು. ಅಧಿಕಾರಿಗಳಂತೆಯೇ ಜನಪ್ರತಿನಿಧಿಗಳೂ ಸ್ಪಂದಿಸುತ್ತಿಲ್ಲ' ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ರೈತರ ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿ., ಮಂಡ್ಯ
ಮೈಸೂರು–ಬೆಂಗಳೂರು ರಸ್ತೆ
ಪೋಸ್ಟ್ ಬಾಕ್ಸ್ ನಂ. 10, ಮಂಡ್ಯ–571401. ಫೋ.ನಂ. 08232–224038
ಫ್ಯಾಕ್ಸ್ ನಂ. 88232–231009 Email:rapcmsmdy12@gmail.com

ನಂ.ಆರ್.ಎ.ಪಿ.ಸಿ.ಎಂ.ಎಸ್/ಇ–ಟೆಂಡರ್/47/2026–27 ದಿನಾಂಕ : 10–06–2026

ಟೆಂಡರ್ ಪ್ರಕಟಣೆ

ಮೇಲ್ಕಂಡ ಸಂಸ್ಥೆಯು ಮಂಡ್ಯ ನಗರದ ತನ್ನ ಪ್ರಧಾನ ಕಛೇರಿ ಆವರಣದಲ್ಲಿ ನಿರ್ಮಿಸುತ್ತಿರುವ ವಾಣಿಜ್ಯ ಸಂಕೀರ್ಣ ನಿರ್ಮಾಣದ ಮೇಲ್ವಿಚಾರಣೆಗಾಗಿ ತಾಂತ್ರಿಕ ಸಲಹೆಗಾರರನ್ನು ನೇಮಿಸಿಕೊಳ್ಳುವ ಸಂಬಂಧ ಅರ್ಹ ಸಿವಿಲ್ ಇಂಜಿನಿಯರ್, M.Tech/ಸಂಸ್ಥೆಗಳಿಂದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ (KPPಪೋರ್ಟಲ್) ದ್ವಿ–ಲಕೋಟೆ ಪದ್ಧತಿಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಹ ಸಿವಿಲ್ ಇಂಜಿನಿಯರ್ಸ್. M.Tech/ಸಂಸ್ಥೆಗಳು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ RAPCMS/2026-27/SE0001 ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು. ದಿನಾಂಕ : 11–06–2026 ರಿಂದ https://kppp.karnataka.gov.in ಈ ಪೋರ್ಟಲ್ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಪ್ರೀಬಿಡ್ ವಿಚಾರಣೆ ದಿನಾಂಕ : 20–06–2026 ರ ಮಧ್ಯಾಹ್ನ 3.30 ಗಂಟೆಗೆ. ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ : 30–06–2026ರ ಸಂಜೆ 5.30 ಗಂಟೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 02–07–2026ರ ಬೆಳಿಗ್ಗೆ 11.30 ಗಂಟೆಗೆ ಆರ್ಥಿಕ ಬಿಡ್ ಟೆಂಡರ್‌ನ್ನು ದಿನಾಂಕ : 02–07–2026ರ ಮಧ್ಯಾಹ್ನ 3.30 ಗಂಟೆಗೆ.

ನೇಮಕಾತಿ ಅವಧಿ 18 ತಿಂಗಳು ಅಥವಾ ವಾಣಿಜ್ಯ ಸಂಕೀರ್ಣ ನಿರ್ಮಾಣದ ಕಾಮಗಾರಿಯು ಪೂರ್ಣಗೊಳ್ಳುವವರೆಗೆ ಇತರೆ ಮಾಹಿತಿಗಳನ್ನು ಇ–ಪೋರ್ಟಲ್‌ನಲ್ಲಿ ಅಥವಾ ಕಛೇರಿ ಅವಧಿಯಲ್ಲಿ ಪಡೆದುಕೊಳ್ಳಬಹುದಾಗಿದೆ.

ಅಧ್ಯಕ್ಷರು ಮತ್ತು ನಿರ್ದೇಶಕರು, ಆರ್.ಎ.ಪಿ.ಸಿ.ಎಂ.ಎಸ್.ಲಿ., ಮಂಡ್ಯ
ಸಹಿ/– ವ್ಯವಸ್ಥಾಪಕ ನಿರ್ದೇಶಕರು, ಆರ್.ಎ.ಪಿ.ಸಿ.ಎಂ.ಎಸ್.ಲಿ., ಮಂಡ್ಯ

ಶ್ರೀ ಡಿ. ಕೆ. ಶಿವಕುಮಾರ್
ಸನ್ಮಾನ್ಯ ಮುಖ್ಯಮಂತ್ರಿಗಳು

ಕಾರ್ಮಿಕ ಇಲಾಖೆ
ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ
ಕರ್ನಾಟಕ ರಾಜ್ಯ ಬಾಲ ಹಾಗೂ ಕಿಶೋರ ಕಾರ್ಮಿಕ ಪದ್ಧತಿ ನಿರ್ಮೂಲನಾ ಯೋಜನಾ ಸೊಸೈಟಿ (ರಿ)

ಡಾ. ಜಿ. ಪರಮೇಶ್ವರ
ಮಾನ್ಯ ಉಪಮುಖ್ಯಮಂತ್ರಿಗಳು

"ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನ"
12 ನೇ ಜೂನ್ -2026
"Red Card to Child Labour: Fair play for children, decent work for adults"
"ಬಾಲ ಕಾರ್ಮಿಕ ಪದ್ಧತಿಗೆ ಕೆಂಪು ಕಾರ್ಡ್: ಮಕ್ಕಳಿಗೆ ನ್ಯಾಯಯುತ ಆಟ, ವಯಸ್ಕರಿಗೆ ಯೋಗ್ಯ ಕೆಲಸ"

ಮಕ್ಕಳನ್ನು ಶಾಲೆಗೆ ಕಳುಹಿಸಿ, ಕೆಲಸಕ್ಕಲ್ಲ

ಬಾಲ ಹಾಗೂ ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986ರ ಅನ್ವಯ ಎಲ್ಲಾ ಉದ್ಯೋಗ ಮತ್ತು ಪ್ರಕ್ರಿಯೆಗಳಲ್ಲಿ 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಕೆಲಸಕ್ಕೆ ನಿಯೋಜಿಸಿಕೊಳ್ಳುವುದು ಹಾಗೂ 18 ವರ್ಷದೊಳಗಿನ ಕಿಶೋರರನ್ನು ಅಪಾಯಕಾರಿ ಉದ್ದಿಮೆಗಳಲ್ಲಿ ಕೆಲಸಕ್ಕೆ ನೇಮಿಸಿಕೊಳ್ಳುವುದು ಶಿಕ್ಷಾರ್ಹ ಅಪರಾಧವಾಗಿದೆ.

- ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳಲ್ಲಿ ಬಾಲ ಕಾರ್ಮಿಕರನ್ನು ಕೆಲಸಕ್ಕೆ ನೇಮಿಸಿಕೊಳ್ಳದಂತೆ ತಡೆಯಲು ಕ್ರಮ ಕೈಗೊಳ್ಳಲಾಗಿದ್ದು ನಿರಂತರ ಪರಿಶೀಲನೆಯನ್ನು ನಡೆಸಲಾಗುತ್ತಿದೆ.
- ಬಾಲ ಕಾರ್ಮಿಕ ನಿರ್ಮೂಲನೆಯ ಉದ್ದೇಶದಿಂದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮಕ್ಕಳ ಶಿಕ್ಷಣಕ್ಕಾಗಿ ಶೈಕ್ಷಣಿಕ ಧನ ಸಹಾಯವನ್ನು ನೀಡಲಾಗುತ್ತಿದೆ.
- ಬಾಲ ಹಾಗೂ ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986ರ ಪರಿಣಾಮಕಾರಿ ಅನುಷ್ಠಾನ.
- ಪ್ರತಿ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಬಾಲ ಕಾರ್ಮಿಕ ಯೋಜನಾ ಸೊಸೈಟಿಗಳನ್ನು ಸ್ಥಾಪಿಸಲಾಗಿದೆ.
- ಬಾಲ ಹಾಗೂ ಕಿಶೋರ ಕಾರ್ಮಿಕರನ್ನು ಕೆಲಸಕ್ಕೆ ನಿಯೋಜಿಸಿಕೊಂಡಲ್ಲಿ, ಮೊದಲ ಅಪರಾಧಕ್ಕೆ ಮಾಲೀಕರಿಗೆ 06 ತಿಂಗಳಿಂದ 02 ವರ್ಷಗಳವರೆಗೆ ಜೈಲು ಶಿಕ್ಷೆ ಅಥವಾ ರೂ. 20,000/- ರಿಂದ ರೂ. 50,000/- ಗಳವರೆಗೆ ದಂಡ ಅಥವಾ ಎರಡೂ. ಪುನರಾವರ್ತಿತ ಅಪರಾಧಕ್ಕೆ 01 ವರ್ಷದಿಂದ 03 ವರ್ಷಗಳವರೆಗೆ ಜೈಲು ಶಿಕ್ಷೆ.
- ತಪ್ಪಿತಸ್ಥ ಮಾಲೀಕರು ತಾವು ನಿಯೋಜಿಸಿಕೊಂಡ ಪ್ರತಿ ಮಗುವಿಗೆ ರೂ. 20,000/- ಗಳಂತೆ ಮಕ್ಕಳ ಪುನರ್ವಸತಿಗೆ ರಚಿಸಲಾದ ಕಲ್ಯಾಣ ನಿಧಿಗೆ ಪಾವತಿಸಬೇಕಾಗುತ್ತದೆ. ಸರ್ಕಾರದ ವತಿಯಿಂದ ಪ್ರತಿ ಮಗುವಿಗೆ ರೂ. 15,000/-ಗಳ ಸಮಾನಾಂತರ ವಂತಿಕೆಯನ್ನು ನಿಧಿಗೆ ಪಾವತಿಸಲಾಗುತ್ತದೆ.
- ಮಕ್ಕಳನ್ನು ಕೆಲಸಕ್ಕೆ ದೂಡುವ ಪೋಷಕರಿಗೂ ಸಹ ಶಿಕ್ಷಾ ಪ್ರಾವಧಾನವಿದ್ದು, ಪುನರಾವರ್ತಿತ ಅಪರಾಧಕ್ಕೆ ರೂ. 10,000/-ಗಳ ದಂಡ.

ಮಕ್ಕಳ ದುಡಿಮೆ ತಡೆಯೋಣ- ಸದೃಢ ಭವಿಷ್ಯ ರೂಪಿಸೋಣ
ಅಂತರ್ಜಾಲ ವ್ಯವಸ್ಥೆ : https://pencil.gov.in/ https://ncpcr.gov.in/user.complaints.php/ https://childlabour.karnataka.gov.in
ಸಹಾಯವಾಣಿಗಳು: ಮಕ್ಕಳ ಸಹಾಯವಾಣಿ - 1098, ಕಾರ್ಮಿಕರ ಸಹಾಯವಾಣಿ - 155214, ಪೊಲೀಸ್ ಸಹಾಯವಾಣಿ - 112

ಶ್ರೀಮತಿ ಸಲ್ಮಾ ಕೆ. ಫಹೀಮ್ ಭಾ.ಆ.ಸೇ, ಸರ್ಕಾರದ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ
ಡಾ|| ಹೆಚ್.ಎನ್. ಗೋಪಾಲಕೃಷ್ಣ ಭಾ.ಆ.ಸೇ, ಆಯುಕ್ತರು, ಕಾರ್ಮಿಕ ಇಲಾಖೆ
ಶ್ರೀ ರವಿ. ಡಿ. ಚನ್ನಣ್ಣವರ್ ಭಾ.ಪೊ.ಸೇ, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ಕಾರ್ಯದರ್ಶಿಗಳು, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ

ನೈಸರ್ಗಿಕ ಪರಿಸರವನ್ನು ರಕ್ಷಿಸುವುದು ಪ್ರತಿಯೊಬ್ಬ ನಾಗರಿಕನ ಸಂವಿಧಾನ ಬದ್ಧ ಮೂಲಭೂತ ಕರ್ತವ್ಯ

ರಸ್ತೆ ಅಪಘಾತದಲ್ಲಿ ಬೈಕ್ ಜಖಂಗೊಂಡಿದೆ

ಲಾರಿ ಚಕ್ರಕ್ಕೆ ಸಿಲುಕಿ ದಂಪತಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿಚಕ್ರ ವಾಹನಕ್ಕೆ ಗೂಡ್ಸ್ ವಾಹನ ಡಿಕ್ಕಿ ಹೊಡೆದ ಪರಿಣಾಮ ದಂಪತಿ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಯಶವಂತಪುರ ಸಂಚಾರ ಠಾಣೆ ವ್ಯಾಪ್ತಿಯ ಸಿಎಂಟಿಐ ಸಿಗ್ನಲ್ ಬಳಿ ಗುರುವಾರ ನಡೆದಿದೆ.

ನಾಗರಬಾವಿ ಬಳಿಯ ಉಲ್ಲಾಳು ನಿವಾಸಿಗಳಾದ ಶಬ್ರಾಜ್ (28) ಶಬ್ರೀನ್ (24) ಮೃತ ದಂಪತಿ.

ದಂಪತಿಗೆ ಐದು ವರ್ಷಗಳ ಹಿಂದೆ ಮದುವೆಯಾಗಿತ್ತು. ಆಂಧ್ರಪ್ರದೇಶದ ಮದನಪಲ್ಲಿಯಲ್ಲಿ ಸಂಬಂಧಿಕರೊಬ್ಬರ ವಿವಾಹದಲ್ಲಿ ಭಾಗವಹಿಸಲು ರಾಜ್‌ಕುಮಾರ್ ಸಮಾಧಿ ರಸ್ತೆ ಮೂಲಕ ಸಿಎಂಟಿಐ ಜಂಕ್ಷನ್ ಬಳಿ ಬೈಕ್‌ನಲ್ಲಿ ದಂಪತಿ ಬರುತ್ತಿದ್ದರು.

ಈ ವೇಳೆ ಪೀಣ್ಯದಿಂದ ಬರುತ್ತಿದ್ದ ಸಿಲಿಂಡರ್ ತುಂಬಿದ್ದ ಲಾರಿಯು ಬಲಭಾಗದಿಂದ ಎಡಕ್ಕೆ ಚಲಿಸುವಾಗ ನಿಯಂತ್ರಣ ತಪ್ಪಿ ಮುಂದೆ ಹೋಗುತ್ತಿದ್ದ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಲಾರಿಯ ಚಕ್ರಕ್ಕೆ ಸಿಲುಕಿ ರಕ್ತಸ್ರಾವವಾಗಿ ಇಬ್ಬರೂ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ತುಮಕೂರು ರಸ್ತೆ ಮತ್ತು ಯಶವಂತಪುರ ಮಾರ್ಗದಲ್ಲಿ ದಟ್ಟಣೆ ಉಂಟಾಗಿತ್ತು. ಪೊಲೀಸರು ಕ್ರೇನ್ ಬಳಸಿ ಅಪಘಾತಕ್ಕೀಡಾದ ವಾಹನಗಳನ್ನು ಪಕ್ಕಕ್ಕೆ ಸರಿಸಿ, ವಾಹನ ಸಂಚಾರಕ್ಕೆ ಅನುವು ಮಾಡಿದರು.

ಮೃತನ ಸಹೋದರ ನೀಡಿದ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡು ಗೂಡ್ಸ್ ವಾಹನದ ಚಾಲಕನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದರು. ಬ್ರೇಕ್ ವೈಫಲ್ಯ ಹಿನ್ನೆಲೆಯಲ್ಲಿ ನಿಯಂತ್ರಣ ತಪ್ಪಿ ಅಪಘಾತವೆಸಗಿದೆ ಎಂದು ಚಾಲಕ ಹೇಳಿಕೆ ನೀಡಿದ್ದಾನೆ ಎಂದು ಪೊಲೀಸರು ತಿಳಿಸಿದರು.

ಸತ್ಯಾಸತ್ಯತೆ ತಿಳಿಯಲು ಆರ್‌ಟಿಒ ಅಧಿಕಾರಿಗಳನ್ನು ಕರೆಯಿಸಿ ವಾಹನವನ್ನು ಪರಿಶೀಲಿಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ಮಗು ಕೊಲೆ ಪ್ರಕರಣ: ತಾಯಿ ಸೆರೆ

ಸಕಲೇಶಪುರ ಸಮೀಪ ಪತ್ತೆ • ಐದು ದಿನ ಕಸ್ಟಡಿಗೆ: ತೀವ್ರ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐದು ವರ್ಷದ ಮಗು ವೆನ್ನೆಲಾ ಕೊಲೆ ಪ್ರಕರಣದಲ್ಲಿ ತಲೆಮರೆಸಿಕೊಂಡಿದ್ದ ಆರೋಪಿ ತಾಯಿ ಪ್ರಿಯಾಂಕಾ ಎಂಬಾಕೆಯನ್ನು ಕಾಡುಗೋಡಿ ಪೊಲೀಸರು ಬಂಧಿಸಿದ್ದಾರೆ.

ಜೂನ್ 4ರಂದು ಪ್ರಕರಣ ದಾಖಲಾಗುತ್ತಿದ್ದಂತೆ ಪರಾರಿಯಾಗಿದ್ದ ಆರೋಪಿಯನ್ನು ಬುಧವಾರ ಸಕಲೇಶಪುರ ಸಮೀಪದ ಹೋಂ ಸ್ಟೇನಲ್ಲಿ ಪೊಲೀಸರು ಪತ್ತೆ ಹಚ್ಚಿ, ನಗರಕ್ಕೆ ಕರೆತಂದರು. ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, 5 ದಿನ ಪೊಲೀಸ್ ವಶಕ್ಕೆ ನೀಡಲಾಗಿದೆ.

ಮೊಬೈಲ್ ಬಂದ್ ಮಾಡಿದ್ದ ಆರೋಪಿಯು ಡೆಬಿಟ್ ಹಾಗೂ ಕ್ರೆಡಿಟ್ ಕಾರ್ಡ್ ಬಳಸುತ್ತಿರಲಿಲ್ಲ. ಪ್ರಿಯಕರ ಮೋಹನ್ ಹೇಳಿಕೆ ಹಾಗೂ ತಾಂತ್ರಿಕ ಸುಳಿವು ಆಧರಿಸಿ ಆಕೆಯನ್ನು ಬಂಧಿಸಿ, ವಿಚಾರಣೆ ನಡೆಸಲಾಗುತ್ತಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.


ಪ್ರಿಯಾಂಕಾ

‘ಮಗುವನ್ನು ಕೊಲೆ ಮಾಡಿರುವುದಾಗಿ ಪ್ರಿಯಕರ ಒಪ್ಪಿಕೊಂಡಿದ್ದಾರೆ. ಅದು ಪ್ರಿಯಾಂಕಾಗೆ ತಿಳಿದಿತ್ತಾ? ಇಬ್ಬರೂ ಸೇರಿ ಸಾಕ್ಷ್ಯ ನಾಶ ಪಡಿಸಲು ಯತ್ನಿಸಿದರಾ ಎಂಬ ಬಗ್ಗೆ ಆರೋಪಿಯಿಂದ ಹೇಳಿಕೆ ಪಡೆಯಬೇಕಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಮಾರ್ಚ್ 24ರಂದು ಆರೋಪಿ ಹಾಗೂ ಪ್ರಿಯಕರ ಕಾರಿನಲ್ಲಿ ಹೊರ ಹೋಗಿದ್ದ ವೇಳೆ ಮಗು ಐಸ್ ಕ್ರೀಂ ಕೇಳಿತ್ತು. ಕೊಟ್ಟ ಐಸ್‌ಕ್ರೀಂ ಬೇಡವೆಂದು ಬೇರೆಯದ್ದನ್ನು ತಂದುಕೊಡುವಂತೆ ಹಟ ಹಿಡಿದಿತ್ತು. ಆಗ ಆರೋಪಿಯು ಕೋಪಗೊಂಡು ಮಗುವಿನ ಹೊಟ್ಟೆಗೆ ಹೊಡೆದಿದ್ದ. ನೋವು ತಾಳದೆ ಅಳುತ್ತಿದ್ದಂತೆ ಉಸಿರುಗಟ್ಟಿಸಿ, ಕೊಲೆ ಮಾಡಿ ಕಾರಿನ ಹಿಂಭಾಗದ ಸೀಟಿನಲ್ಲಿ ಮಲಗಿಸಿದ್ದ’ ಎಂದಿದ್ದಾರೆ.

‘ಮಾರನೇ ದಿನ ಮಗು ಮೃತಪಟ್ಟಿರುವ ವಿಚಾರ ಗೊತ್ತಾಗಿತ್ತು. ಪೊಲೀಸ್ ವಿಚಾರಣೆ ವೇಳೆ ಆರೋಪಿಗಳಿಬ್ಬರೂ ನೀಡಿದ್ದ ಹೇಳಿಕೆ ಅನುಮಾನ ಮೂಡಿಸಿತ್ತು. ಉಸಿರುಗಟ್ಟಿ ಮಗು ಸಾವನ್ನಪ್ಪಿದೆ ಎಂದು ವೈದ್ಯರು ವರದಿ ನೀಡಿದ್ದರೂ ಪೊಲೀಸರು ಕ್ರಮ ಕೈಗೊಂಡಿರಲಿಲ್ಲ. ಈ ಬಗ್ಗೆ ಆರೋಪಿಯ ಪತಿ ಪ್ರವೀಣ್ ವಿದೇಶದಲ್ಲಿರುವ ತನ್ನ ಸಹೋದರಿ, ಮಕ್ಕಳ ವೈದ್ಯೆಗೆ ವರದಿ ಕಳುಹಿಸಿ, ಪೊಲೀಸರು ಪ್ರಕರಣ ದಾಖಲಿಸಿಕೊಳ್ಳುತ್ತಿಲ್ಲ ಎಂದು ನೋವು ತೋಡಿಕೊಂಡಿದ್ದರು.

ಸಹೋದರಿಯು ಲೋಕಾಯುಕ್ತ ಐಜಿಪಿಗೆ ಕರೆ ಮಾಡಿ ವಿಷಯ ತಿಳಿಸಿದ್ದರು. ಅದಕ್ಕೆ ಪೂರಕವಾಗಿ ಪ್ರವೀಣ್ ಅವರು ಲೋಕಾಯುಕ್ತಕ್ಕೆ ದೂರು ನೀಡಿದ್ದರು.

‘ಎಸಿಪಿ ನೇತೃತ್ವದಲ್ಲಿ ತನಿಖೆ ನಡೆಸಿದಾಗ, ಈ ಹಿಂದಿನ ಕಾಡುಗೋಡಿ ಇನ್‌ಸ್ಪೆಕ್ಟರ್ ರಂಗಸ್ವಾಮಿ, (ಪ್ರಸ್ತುತ ವರ್ಗಾವಣೆಗೊಂಡಿದ್ದಾರೆ) ಹಾಲಿ ಪಿಎಸ್‌ಐ ನಿಂಗರಾಜು ಹಾಗೂ ಸುಕೊ ತಂಡವು ತನಿಖೆ ನಡೆಸದೆ ನಿರ್ಲಕ್ಷ್ಯ ತೋರಿದೆ’ ಎಂದು ಲೋಕಾಯುಕ್ತ ವರದಿಯಲ್ಲಿ ಉಲ್ಲೇಖಿಸಿರುವುದಾಗಿ ಮೂಲಗಳು ತಿಳಿಸಿವೆ.

ಅಪರಾಧ ಸುದ್ದಿಗಳು

ವರದಿಯಲ್ಲಿ ಏನಿದೆ ?

‘ಮರಣೋತ್ತರ ಪರೀಕ್ಷೆ ವರದಿ ಬಂದರೂ ಕೊಲೆ ಪ್ರಕರಣ ದಾಖಲಿಸಿಲ್ಲ. ಸ್ಥಳ ಮಹಜರು, ಸಿ.ಸಿ.ಟಿ.ವಿ ಕ್ಯಾಮೆರಾಗಳ ದೃಶ್ಯ ಪರಿಶೀಲನೆ, ಕೃತ್ಯ ನಡೆದ ಸ್ಥಳ, ವಿಲ್ಲಾದಿಂದ ಹೊರ ಹೋಗಿದ್ದು, ವಾಪಸ್ ಬಂದಿರುವ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯವನ್ನು ವಶಕ್ಕೆ ಪಡೆದಿಲ್ಲ’ ಎಂದು ಲೋಕಾಯುಕ್ತ ಎಸಿಪಿ ವರದಿಯಲ್ಲಿ ತಿಳಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

‘ಮಾರ್ಚ್ 25ರಂದು ಮರಣೋತ್ತರ ಪರೀಕ್ಷೆ ದಿನವೇ ವೈದ್ಯರು ಉಸಿರುಗಟ್ಟಿ ಸಾವಾಗಿದೆ ಎಂದು ತಿಳಿಸಿದ್ದರೂ ಇನ್‌ಸ್ಪೆಕ್ಟರ್ ಕೊಲೆ ಪ್ರಕರಣ ದಾಖಲಿಸಿಲ್ಲ. ಈ ಮಧ್ಯೆ ಆರೋಪಿಗಳು ಸಾಕ್ಷ್ಯ ನಾಶ ಮಾಡಿದ್ದಾರೆ. ಘಟನೆ ನಡೆದಿದ್ದ ದಿನ ತಾವು ಹಾಗೂ ಮಗು ಧರಿಸಿದ್ದ ಬಟ್ಟೆಗಳು, ರೂಮ್‌ನಲ್ಲಿದ್ದ ಬೆಡ್ ಶೀಟ್‌ಗಳನ್ನು ಶುಚಿಗೊಳಿಸಲಾಗಿದೆ. ಕಾರನ್ನು ನೀರಿನಿಂದ ಶುಚಿಗೊಳಿಸಿರುವುದು ಗಮನಕ್ಕೆ ಬಂದರೂ ಪೊಲೀಸರು ಬಂಧಿಸದೆ ನಿರ್ಲಕ್ಷ್ಯ ತೋರಿದ್ದಾರೆ’ ಎಂದು ವರದಿಯಲ್ಲಿ ತಿಳಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಸುದ್ದಿ 2 ನಿಮಿಷ

ಬಾಲಕಿಯ ಶ್ವಾಸನಾಳ ಸೇರಿದ್ದ ಪಿನ್

ಬೆಂಗಳೂರು: ನಗರದ ಎಂಟು ವರ್ಷದ ಬಾಲಕಿಯ ಶ್ವಾಸನಾಳದಲ್ಲಿ ಸಿಲುಕಿಕೊಂಡಿದ್ದ ಪುಶ್ ಪಿನ್ ಅನ್ನು ಯಶವಂತಪುರದ ಸ್ಪರ್ಶ್ ಆಸ್ಪತ್ರೆಯ ವೈದ್ಯರು ಬ್ರಾಂಕೋಸ್ಕೋಪಿ ಮೂಲಕ ಯಶಸ್ವಿಯಾಗಿ ಹೊರ ತೆಗೆದಿದ್ದಾರೆ.

ಹೆಣ್ಣೂರು ರಸ್ತೆಯ ದಂಪತಿ ಜೂನ್ 4ರಂದು ಪುತ್ರಿಯನ್ನು ಆಸ್ಪತ್ರೆಗೆ ದಾಖಲಿಸಿದ್ದರು. ಬಾಲಕಿಯು ನಿರಂತರ ಕೆಮ್ಮು ಮತ್ತು ಉಸಿರಾಟದ ಸಮಸ್ಯೆ ಎದುರಿಸುತ್ತಿದ್ದಳು.

‘ಆರಂಭದಲ್ಲಿ ಇದು ತೀವ್ರ ಅಸ್ತಮಾ ಎಂಬಂತೆ ಕಂಡುಬಂದರೂ, ವಾಸ್ತವದಲ್ಲಿ ಬೇರೆಯದೇ ಸಮಸ್ಯೆಯಾಗಿತ್ತು. ಎಕ್ಸ್‌-ರೇ, ಸಿಟಿ ಸ್ಕ್ಯಾನ್ ಸೇರಿ ವಿವಿಧ ಪರೀಕ್ಷೆಗಳನ್ನು ನಡೆಸಲಾಯಿತು. ಶ್ವಾಸನಾಳದಲ್ಲಿ ಮೊನಚಾದ ವಸ್ತುವೊಂದು ಸಿಲುಕಿಕೊಂಡಿರುವುದು ದೃಢಪಟ್ಟಿತು’ ಎಂದು ಚಿಕಿತ್ಸೆ ನೀಡಿದ ಮಕ್ಕಳ ಶ್ವಾಸಕೋಶ ತಜ್ಞ ಡಾ. ಗಣೇಶ್ ಪ್ರತಾಪ್ ತಿಳಿಸಿದ್ದಾರೆ.

‘ಶ್ವಾಸಕೋಶದ ಸೂಕ್ಷ್ಮ ಒಳಪದರಕ್ಕೆ ಹಾನಿಯಾಗದಂತೆ ಬ್ರಾಂಕೋಸ್ಕೋಪಿ ತಂತ್ರಜ್ಞಾನವನ್ನು ಬಳಸಿ, ಪಿನ್ ಅನ್ನು ಹೊರಗೆ ತೆಗೆಯಲಾಯಿತು. ಕೂಡಲೇ ಮಗುವಿನ ಶ್ವಾಸನಾಳ ಸಂಪೂರ್ಣ ತೆರೆದುಕೊಂಡಿತು. ನಿರಂತರ ಕಾಡುತ್ತಿದ್ದ ಕೆಮ್ಮು ಸಹ ಕಡಿಮೆಯಾಯಿತು’ ಎಂದು ಹೇಳಿದ್ದಾರೆ.



‘ಯಾವುದೇ ಅಲರ್ಜಿ ಅಥವಾ ಅಸ್ತಮಾ ಇತಿಹಾಸವಿಲ್ಲದ ಆರೋಗ್ಯವಂತ ಮಗುವಿನಲ್ಲಿ ಏಕಾಏಕಿ ತೀವ್ರ ಕೆಮ್ಮು ಅಥವಾ ಉಬ್ಬಸದ ಲಕ್ಷಣಗಳು ಕಾಣಿಸಿಕೊಂಡರೆ, ಅದನ್ನು ನಿರ್ಲಕ್ಷಿಸದೆ ತಕ್ಷಣ ವೈದ್ಯರನ್ನು ಸಂಪರ್ಕಿಸಬೇಕು. ಮಕ್ಕಳು ತಮಗೆ ಗೊತ್ತಾಗದಂತೆ ಅಥವಾ ಆಟವಾಡುವ ವೇಳೆ ಸಣ್ಣ ವಸ್ತುಗಳನ್ನು ಬಾಯಿಗೆ ಹಾಕಿಕೊಳ್ಳುವ ಸಾಧ್ಯತೆ ಇರುತ್ತದೆ’ ಎಂದು ತಿಳಿಸಿದ್ದಾರೆ.

ನಕಲಿ ಅಂಕಪಟ್ಟಿ ಜಾಲ: ಪ್ರಮುಖ ಆರೋಪಿ ಬಂಧನ

ಬೆಂಗಳೂರು: ಶಿಕ್ಷಣ ಸಂಸ್ಥೆಗಳ ಹೆಸರಿನಲ್ಲಿ ವಿದ್ಯಾರ್ಥಿಗಳಿಗೆ ಆಮಿಷ ವೊಡ್ಡಿ ಹಣ ಪಡೆದು ನಕಲಿ ಅಂಕಪಟ್ಟಿ ಸೃಷ್ಟಿಸಿ ಮಾರುತ್ತಿದ್ದ ಜಾಲವನ್ನು ಕೇಂದ್ರ ಅಪರಾಧ ವಿಭಾಗದ (ಸಿಸಿಬಿ) ಪೊಲೀಸರು ಭೇದಿಸಿದ್ದಾರೆ.

ಕೋರಮಂಗಲದ ಡಿಜಿಟಲ್ ಡಿಸ್ಟೆನ್ಸ್ ಎಜುಕೇಷನ್ ಮಿಷನ್ ಸಂಸ್ಥೆಯ ಮಾಲೀಕ ರಾಜಾರೆಡ್ಡಿ ಎಂಬುವವರನ್ನು ಬಂಧಿಸಿದ್ದಾರೆ. ಮತ್ತೊಬ್ಬ ಆರೋಪಿ ಆರ್ಯನ್ ತಲೆಮರೆಸಿಕೊಂಡಿದ್ದಾರೆ.

ಡಿಜಿಟಲ್ ಡಿಸ್ಟೆನ್ಸ್ ಎಜುಕೇಷನ್ ಹೆಸರಿನಲ್ಲಿ ವಿದ್ಯಾರ್ಥಿಗಳ ಮೊಬೈಲ್ ನಂಬರ್ ಸಂಗ್ರಹಿಸಿ ಸಂಸ್ಥೆಯ ಉದ್ಯೋಗಿಗಳಿಂದ ಕರೆ ಮಾಡಿಸಿ ನಗರದ ಫ್ಲಾರೆನ್ಸ್, ಕಲಾನಿಕೇತನ್, ಎಂವಿಜೆ, ಟಿಪ್ಪು ಸುಲ್ತಾನ್ ಸೇರಿದಂತೆ ವಿವಿಧ ಕಾಲೇಜುಗಳಲ್ಲಿ ಪ್ರವೇಶ ಕೊಡಿಸುವುದಾಗಿ ಆರೋಪಿಗಳು ನಂಬಿಸುತ್ತಿದ್ದರು.

ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಓದದಿದ್ದರೂ ಪದವಿಗೆ ದಾಖಲಿಸುವುದಾಗಿ ಭರವಸೆ ನೀಡುತ್ತಿದ್ದರು. ಇದನ್ನು ನಂಬಿದ ವಿದ್ಯಾರ್ಥಿಗಳಿಗೆ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಅಂಕಪಟ್ಟಿ ಸೃಷ್ಟಿಸಿ ಮಾರಾಟ ಮಾಡುತ್ತಿದ್ದರು.

ವಿದ್ಯಾರ್ಥಿಗಳನ್ನು ಸಂಪರ್ಕಿಸುತ್ತಿದ್ದ ರಾಜಾರೆಡ್ಡಿ, ಆರೋಪಿ ಆರ್ಯನ್ ಮೂಲಕ ನಕಲಿ ಅಂಕಪಟ್ಟಿ ತಯಾರು ಮಾಡಿಸಿ ಕೊರಿಯರ್ ಮೂಲಕ ಮನೆಗೆ ಕಳುಹಿಸುತ್ತಿದ್ದ. ಒಂದು ಅಂಕಪಟ್ಟಿಗೆ ₹30 ರಿಂದ ₹50 ಸಾವಿರ ಪಡೆಯುತ್ತಿದ್ದ. ಈವರೆಗೂ 50ಕ್ಕಿಂತ ಹೆಚ್ಚಿನ ವಿದ್ಯಾರ್ಥಿಗಳಿಗೆ ನಕಲಿ ಅಂಕ ಪಟ್ಟಿ ಮಾರಾಟ ಮಾಡಿರುವುದು ವಿಚಾರಣೆ ವೇಳೆ ಗೊತ್ತಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

ಕೊಲೆ ಆರೋಪಿ ಕಾಲಿಗೆ ಗುಂಡು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಂಧಿಸಲು ಹೋದ ಪೊಲೀಸ್ ಸಿಬ್ಬಂದಿಗೆ ಚಾಕುವಿನಿಂದ ಇರಿದು ಪರಾರಿಯಾಗಲು ಯತ್ನಿಸಿದ, ಕೊಲೆ ಮತ್ತು ದರೋಡೆ ಪ್ರಕರಣದ ಆರೋಪಿ ರೌಡಿಶೀಟರ್ ಕಾಲಿಗೆ ಗುಂಡು ಹಾರಿಸಿ ಪೊಲೀಸರು ಬಂಧಿಸಿದ್ದಾರೆ.

ಜೀವ

ತಮಿಳುನಾಡಿನ ಜೀವ (20) ಎಂಬಾತನ ಬಲಗಾಲಿಗೆ ಗುಂಡೇಟು ಬಿದ್ದಿದ್ದು, ಆರೋಪಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಆರೋಪಿಯು ತನ್ನ ಸಹಚರರೊಂದಿಗೆ ಜೂನ್ 2ರ ರಾತ್ರಿ 1.30ರ ವೇಳೆಗೆ ತಿರುಪಾಳ್ಯದಲ್ಲಿ ಚಹಾ ಕುಡಿಯಲು ಹೊರಟಿದ್ದ ವ್ಯಕ್ತಿಯನ್ನು ಅಡ್ಡಗಟ್ಟಿ, ಹಲ್ಲೆ ನಡೆಸಿ ಮೊಬೈಲ್ ಮತ್ತು ನಗದು ದೋಚಿದ್ದ. ಬಳಿಕ ಅದೇ ಮಾರ್ಗದಲ್ಲಿ ಮತ್ತೊಬ್ಬ ವ್ಯಕ್ತಿಯನ್ನು ಅಡ್ಡಗಟ್ಟಿ, ಮೊಬೈಲ್ ಹಾಗೂ ಹಣ ಕಿತ್ತುಕೊಂಡು ಪರಾರಿಯಾಗಿದ್ದ. ಈ ಸಂಬಂಧ 112ಕ್ಕೆ ಸಂತ್ರಸ್ತರು ಕರೆ ಮಾಡಿ ವಿಷಯ ತಿಳಿಸಿದ್ದರು.

ಈ ಸಂಬಂಧ ಹೆಬ್ಬಗೋಡಿ ಠಾಣೆಯಲ್ಲಿ ದೂರು ದಾಖಲಿಸಿಕೊಂಡು, ಆರೋಪಿಗಳ ಪತ್ತೆಗೆ ಎರಡು ವಿಶೇಷ ತಂಡ ರಚಿಸಲಾಗಿತ್ತು.

ಕೃತ್ಯದ ಬಳಿಕ ರೌಡಿಶೀಟರ್ ತಲೆಮರೆಸಿಕೊಂಡಿದ್ದ. ಈತನ ಬಂಧನಕ್ಕಾಗಿ ಬಲೆ ಬೀಸಿದ್ದ ತನಿಖಾ ತಂಡಕ್ಕೆ ಆರೋಪಿ ಇರುವ ಸ್ಥಳದ ಮಾಹಿತಿ ಸಿಕ್ಕಿತ್ತು. ಸಿಂಗೇನ ಅಗ್ರಹಾರದ ಹೊರವಲಯದಲ್ಲಿರುವ ತೋಟವನ್ನು ಸುತ್ತುವರೆದು ಬಂಧಿಸಲು ಮುಂದಾಗಿದ್ದರು.

ಈ ವೇಳೆ ಆರೋಪಿ ಪೊಲೀಸರ ಮೇಲೆಯೇ ಮಾರಕಾಸ್ತ್ರದಿಂದ ದಾಳಿ ಮಾಡಿ ಪರಾರಿಯಾಗಲು ಪ್ರಯತ್ನಿಸಿದ. ಆಗ ಸಬ್ ಇನ್‌ಸ್ಪೆಕ್ಟರ್ ಅಯ್ಯಪ್ಪ ಎರಡು ಬಾರಿ ಗಾಳಿಯಲ್ಲಿ ಗುಂಡು ಹಾರಿಸಿ, ಶರಣಾಗುವಂತೆ ಎಚ್ಚರಿಕೆ ನೀಡಿದರೂ ಆರೋಪಿ ತನ್ನ ಹಲ್ಲೆ ಮುಂದುವರಿಸಿದ್ದ. ಆದ್ದರಿಂದ ತಮ್ಮ ಹಾಗೂ ಸಿಬ್ಬಂದಿಯ ಆತ್ಮರಕ್ಷಣೆಗಾಗಿ ಆರೋಪಿಯ ಬಲಗಾಲಿಗೆ ಗುಂಡು ಹಾರಿಸಿದ್ದಾರೆ.

ಘಟನೆಯಲ್ಲಿ ಗಾಯಗೊಂಡ ಆರೋಪಿ ಜೀವ ಮತ್ತು ಪೊಲೀಸ್ ಸಿಬ್ಬಂದಿಯನ್ನು ಕೂಡಲೇ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಇಬ್ಬರೂ ಚೇತರಿಸಿಕೊಳ್ಳುತ್ತಿದ್ದಾರೆ.

ಆರೋಪಿಯ ಈಗಾಗಲೇ ಏಳು ಗಂಭೀರ ಪ್ರಕರಣಗಳಲ್ಲಿ ಭಾಗಿಯಾಗಿದ್ದು, ಹೆಬ್ಬಗೋಡಿಯಲ್ಲಿ 4, ಸೂರ್ಯ ಸಿಟಿ, ಎಲೆಕ್ಟ್ರಾನಿಕ್ಸ್ ಸಿಟಿ ಮತ್ತು ತಮಿಳುನಾಡಿನ ವೆಟಮೆಲಮ್ ಪೊಲೀಸ್ ಠಾಣೆಯಲ್ಲಿ ತಲಾ ಒಂದು ಪ್ರಕರಣ ದಾಖಲಾಗಿವೆ.

‘ಬಂಧಿತ ಆರೋಪಿ 16ನೇ ವಯಸ್ಸಿನಲ್ಲಿಯೇ ವ್ಯಕ್ತಿಯೊಬ್ಬರನ್ನು ಕೊಲೆ ಮಾಡಿ, ಬಾಲ ಮಂದಿರ ಸೇರಿದ್ದ. ಜಾಮೀನಿನ ಮೇಲೆ ಬಿಡುಗಡೆಯಾಗಿ ತನ್ನದೇ ಗ್ಯಾಂಗ್ ಕಟ್ಟಿಕೊಂಡಿದ್ದ. ಅದರಲ್ಲಿ ಸಹೋದರ ಪುನೀತ್, ದಶರಥ್, ವರುಣ್, ನಾಗ, ರಾಜು, ಗೋಪಿ, ರಾಹುಲ್, ಅಂಜಲ್ ಕುಮಾರ್, ಆಕಾಶ ಇದ್ದರು. ಇವರಿಗೆ ಸ್ವಂತ ಮನೆಯಿರಲಿಲ್ಲ, ಕಾಯಂ ವಿಳಾಸವೂ ಇರಲಿಲ್ಲ. ಆರೋಪಿಗಳು ಮೊಬೈಲ್ ಬಳಸುತ್ತಿರಲಿಲ್ಲ’ ಎಂದು ಪೊಲೀಸರು ತಿಳಿಸಿದರು.

‘ತಮಿಳುನಾಡಿನಲ್ಲಿ ಐದು ಪ್ರಕರಣಗಳಲ್ಲಿ ಈತ ಪೊಲೀಸರಿಗೆ ಬೇಕಾಗಿದ್ದಾನೆ. ಇತ್ತೀಚೆಗೆ ಜಾಮೀನಿನ ಮೇಲೆ ಹೊರ ಬಂದು ತಮಿಳುನಾಡಿಗೆ ಪರಾರಿಯಾಗಿದ್ದ’ ಎಂದು ಹೇಳಿದರು.

‘ಗ್ಯಾಂಗ್‌ನ ಮತ್ತೊಬ್ಬ ಸದಸ್ಯ ಸೆರೆ ಸಿಕ್ಕಿದ್ದು, ಆತನ ವಿಚಾರಣೆ ನಡೆಸಲಾಗುತ್ತಿದೆ’ ಎಂದರು.

ಶ್ರೀಗಂಧ ಮರದ ತುಂಡು ಅಕ್ರಮ ಸಾಗಣೆ: ಮಹಿಳೆ ಸೇರಿ ಇಬ್ಬರ ಬಂಧನ

ಬೆಂಗಳೂರು: ಶ್ರೀಗಂಧ ಮರದ ತುಂಡುಗಳನ್ನು ಅಕ್ರಮವಾಗಿ ಸಾಗಣೆ ಮಾಡುತ್ತಿದ್ದ ಮಹಿಳೆ ಸೇರಿ ಇಬ್ಬರನ್ನು ನಂದಿನಿ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕನಕಪುರ ಬಳಿಯ ಕೊಳಗೊಂಡ ನಿವಾಸಿ ಮದುಮತ್ತಿ (39), ಧರ್ಮಪುರಿಯ ನವೀನ್‌ಕುಮಾರ್ (23) ಅವರನ್ನು ಬಂಧಿಸಿ, ₹11 ಲಕ್ಷ ಮೌಲ್ಯದ ಶ್ರೀಗಂಧ ಮರದ ತುಂಡುಗಳನ್ನು ವಶಕ್ಕೆ ಪಡೆದಿದ್ದಾರೆ.

ನಗರದ ಲಗ್ಗೆರೆ ಪಕ್ಕದ ಸೇತುವೆ ಬಳಿ ಕಾರಿನಲ್ಲಿ 44.780 ಕೆ.ಜಿ. ತೂಕದ 68 ಶ್ರೀಗಂಧ ಮರದ ತುಂಡುಗಳನ್ನು ಸಾಗಣೆ ಮಾಡುತ್ತಿದ್ದರು. ಖಚಿತ ಮಾಹಿತಿ ಮೇರೆಗೆ ಪೊಲೀಸರು ದಾಳಿ ನಡೆಸಿ, ಮರದ ತುಂಡು ಸಮೇತ ಇಬ್ಬರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ.

ನವೀನ್ ಕುಮಾರ್ ಮೆಕ್ಯಾನಿಕಲ್ ಎಂಜಿನಿಯರಿಂಗ್ ಪದವೀಧರ. ಉದ್ಯೋಗ ದೊರೆಯದ ಪರಿಣಾಮ ಚಾಲಕ ವೃತ್ತಿ ಮಾಡಿಕೊಂಡಿದ್ದ. ಹೊರ ರಾಜ್ಯದಿಂದ ಕಡಿಮೆ ಬೆಲೆಗೆ ಶ್ರೀಗಂಧ ಮರದ ತುಂಡುಗಳನ್ನು ಖರೀದಿಸಿಕೊಂಡು ಬಂದು ನಗರದಲ್ಲಿ ಮಾರಾಟಕ್ಕೆ ಯತ್ನಿಸಿದ್ದರು. ಇಬ್ಬರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಚಿಟಿಕೆ ಸುದ್ದಿ

ಎಜಿ ಶಶಿಕಿರಣ ಶೆಟ್ಟಿ ಮುಂದುವರಿಕೆ

ಬೆಂಗಳೂರು: ಕರ್ನಾಟಕ ಹೈಕೋರ್ಟ್‌ನ ಅಡ್ವೊಕೇಟ್ ಜನರಲ್ ಆಗಿ ಕೆ.ಶಶಿಕಿರಣ ಶೆಟ್ಟಿ ಅವರನ್ನು ಮುಂದುವರಿಸಿ ರಾಜ್ಯಪಾಲರು ಇತ್ತೀಚೆಗೆ ಆದೇಶಿಸಿದ್ದಾರೆ.

ಕೆ.ಶಶಿಕಿರಣ

ಶಶಿಕಿರಣ ಶೆಟ್ಟಿ ಅವರು, 2023ರಲ್ಲಿ ಅಸ್ತಿತ್ವಕ್ಕೆ ಬಂದ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಕರ್ನಾಟಕ ಹೈಕೋರ್ಟ್‌ನ 23ನೇ ಅಡ್ವೊಕೇಟ್ ಜನರಲ್ ಆಗಿ ನೇಮಕಗೊಂಡರು. ರಾಜ್ಯದ ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಕೆ.ವಿಶ್ವನಾಥ ಶೆಟ್ಟಿ ಅವರ ಪುತ್ರರಾಗಿರುವ ಶಶಿಕಿರಣ ಶೆಟ್ಟಿ ಪದಾಂಕಿತ ಹಿರಿಯ ವಕೀಲರು.

ಶಾಸಕ ಷಡಕ್ಷರಿ ಅಸ್ವಸ್ಥ

ನವದೆಹಲಿ: ಸಚಿವ ಸ್ಥಾನಕ್ಕಾಗಿ ಹೈಕಮಾಂಡ್ ಮೇಲೆ ಒತ್ತಡ ಹೇರಲು ನವದೆಹಲಿಗೆ ಬಂದಿರುವ ತಿಪಟೂರು ಶಾಸಕ ಕೆ.ಷಡಕ್ಷರಿ ಆರೋಗ್ಯದಲ್ಲಿ ಏರುಪೇರು ಉಂಟಾಗಿದೆ.

ಕರ್ನಾಟಕ ಭವನದಲ್ಲಿ ಉಳಿದಿದ್ದ ಅವರಿಗೆ ಉಸಿರಾಟದ ತೊಂದರೆ ಕಾಣಿಸಿಕೊಂಡಿತು. ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ ಹಾಗೂ ವಿಧಾನ ಪರಿಷತ್ ಸದಸ್ಯ ರಾಜೇಂದ್ರ ಕೂಡಲೇ ಶಾಸಕರನ್ನು ಮ್ಯಾಕ್ಸ್ ಆಸ್ಪತ್ರೆಗೆ ದಾಖಲಿಸಿದರು. ಅವರ ಆರೋಗ್ಯ ಸ್ಥಿರವಾಗಿದ್ದು, ಆತಂಕ ಪಡುವ ಅಗತ್ಯ ಇಲ್ಲ ಎಂದು ವೈದ್ಯರು ತಿಳಿಸಿದ್ದಾರೆ.

ಗಮಕ ಕೋರ್ಸ್ ಆರಂಭ

ಬೆಂಗಳೂರು: ನಗರದ ವಾಗ್ದೇವಿ ಗಮಕ ಕಲಾ ಪ್ರತಿಷ್ಠಾನವು ಗಮಕ ಕಲೆಯಲ್ಲಿ ಒಂದು ವರ್ಷದ ಡಿಪ್ಲೊಮಾ, ಎರಡು ವರ್ಷದ ಎಂ.ಎ ತರಗತಿಗಳನ್ನು ಆರಂಭಿಸಿದೆ.

ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶನ ಕಲೆಗಳ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದಿರುವ ಪ್ರತಿಷ್ಠಾನದ ಕೋರ್ಸ್‌ಗಳು ಜುಲೈನಿಂದ ಶುರುವಾಗಲಿದ್ದು, ಆಸಕ್ತರು ಪ್ರವೇಶಾತಿ ಪಡೆಯಬಹುದು. ಮಾಹಿತಿಗೆ ಮೊ.93426 67464, 94490 21530, 98809 66499 ಸಂಪರ್ಕಿಸಬಹುದು ಎಂದು ಪ್ರತಿಷ್ಠಾನದ ಕಾರ್ಯದರ್ಶಿ ಸಿ.ವಿ.ಶ್ರೀಮತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಮಹದೇವಪ್ಪಗೆ ಸಚಿವ ಸ್ಥಾನ ನೀಡಿ’

ದಲಿತ ಸಂಘಟನೆಗಳ ಒಕ್ಕೂಟದ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಲಿತ ಸಮುದಾಯದ ಶಾಸಕ ಡಾ. ಎಚ್‌.ಸಿ. ಮಹದೇವಪ್ಪ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಆಗ್ರಹಿಸಿ ರಾಜ್ಯ ದಲಿತ ಸಂಘಟನೆಗಳ ಒಕ್ಕೂಟದ ನೇತೃತ್ವದಲ್ಲಿ ಗುರುವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಮಂಡ್ಯ ಮತ್ತು ಚಾಮರಾಜನಗರ ಸೇರಿ ರಾಜ್ಯದ ವಿವಿಧ ಭಾಗಗಳಿಂದ ಬಂದಿದ್ದ ಸಾವಿರಾರು ಜನರು, ದಲಿತ ಸಮುದಾಯದ ರಾಜಕೀಯ ನಾಯಕರನ್ನು ಕಡೆಗಣಿಸಲಾಗುತ್ತಿದೆ ಎಂದು ಆರೋಪಿಸಿ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ಹಿಂದುಳಿದ ವರ್ಗಗಳ ನಾಯಕತ್ವ ಬಲಗೊಳ್ಳಲು ಮಹದೇವಪ್ಪ ಅವರು ಸಾಕಷ್ಟು ಶ್ರಮಿಸಿದ್ದಾರೆ. ಪರಿಶಿಷ್ಟ ಸಮುದಾಯಗಳನ್ನು ಒಗ್ಗೂಡಿಸುವ ಕೆಲಸ ಮಾಡಿದ್ದಾರೆ. ಅಧಿಕಾರ ಸಿಕ್ಕಾಗಲೆಲ್ಲಾ ಜಾತಿ– ಧರ್ಮ ನೋಡದೇ ಎಲ್ಲರಿಗೂ ಅನುಕೂಲವಾಗುವ ನಿಟ್ಟಿನಲ್ಲಿ ಕೆಲಸ ಮಾಡಿದ್ದಾರೆ. ಹಾಗಾಗಿ ಅವರಿಗೆ ಸಚಿವ ಸ್ಥಾನ ನೀಡಬೇಕು. ಇಲ್ಲವಾದರೆ ಮುಂದಿನ ಚುನಾವಣೆಯಲ್ಲಿ ಪರಿಶಿಷ್ಟ ಸಮುದಾಯಗಳು ತಮ್ಮ ದಾರಿಯನ್ನು ನೋಡಿಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ದಲಿತ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಎಚ್‌.ಸಿ. ಸಿದ್ದಲಿಂಗಯ್ಯ ಮಾತನಾಡಿ, ‘ರಾಜ್ಯ ರಾಜಕಾರಣದಲ್ಲಿ ದಲಿತ ಸಮುದಾಯದ ಪ್ರಭಾವಿ ಮತ್ತು ಹಿರಿಯ ನಾಯಕರನ್ನು ಮೂಲೆಗುಂಪು ಮಾಡುವ ಮೂಲಕ ದಲಿತ ನಾಯಕತ್ವವನ್ನೇ ನಾಶ ಮಾಡಲು ಕೆಲವರು ಸಂಚು ರೂಪಿಸಿದ್ದಾರೆ. ದಲಿತರ ರಾಜಕೀಯ ಪ್ರಾತಿನಿಧ್ಯವನ್ನು ಹತ್ತಿಕ್ಕುವ ಪ್ರಯತ್ನ ಇದಾಗಿದೆ’ ಎಂದರು.

ಆರ್‌ಪಿಐ(ಬಿ) ರಾಷ್ಟ್ರೀಯ ಅಧ್ಯಕ್ಷ ಡಾ.ಎನ್‌.ಮೂರ್ತಿ ಮಾತನಾಡಿ, ‘ಈ ಹಿಂದೆ ದಿ. ಬಿ.ಬಸವಲಿಂಗಪ್ಪ, ಕೆ.ಎಚ್‌.ರಂಗನಾಥ್, ಬಿ.ರಾಚಯ್ಯ, ಎನ್. ರಾಚಯ್ಯ, ಶ್ರೀನಿವಾಸ್ ಪ್ರಸಾದ್ ಮತ್ತು ಟಿ.ಎನ್. ನರಸಿಂಹಮೂರ್ತಿ ಅವರಂತಹ ಮುಖಂಡರಿಗೆ ಅನ್ಯಾಯ ಮಾಡಲಾಗಿತ್ತು. ಈಗ ಮಲ್ಲಿಕಾರ್ಜುನ ಖರ್ಗೆ, ಜಿ. ಪರಮೇಶ್ವರ, ಎಚ್‌.ಸಿ. ಮಹದೇವಪ್ಪ ಹಾಗೂ ಕೆ.ಎಚ್‌. ಮುನಿಯಪ್ಪ ಅವರಂಥ ಹಿರಿಯರನ್ನು ಮುಖ್ಯಮಂತ್ರಿ ಸ್ಥಾನಕ್ಕೆ ಪರಿಗಣಿಸಿಲ್ಲ. ನಮಗೆ ಮಂತ್ರಿ ಸ್ಥಾನ ಬೇಡ. ಮುಖ್ಯಮಂತ್ರಿ ಸ್ಥಾನ ಬೇಕು’ ಎಂದರು.

ಉರಿಲಿಂಗಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ, ಮಾಜಿ ಮೇಯರ್ ಪುರುಷೋತ್ತಮ, ರಾಜ್ಯ ಆದಿಜಾಂಬವ ಸಂಘದ ಕಾರ್ಯಾಧ್ಯಕ್ಷ ಜಂಬೂದೀಪ ಸಿದ್ದರಾಜು, ಡಿಎಸ್‌ಎಸ್ ಸಂಘಟನೆಯ ಡಿ.ಜಿ.ಸಾಗರ್, ದಲಿತ ಮುಖಂಡರಾದ ಅಣ್ಣಯ್ಯ, ಡಾ.ಎಂ. ವೆಂಕಟಸ್ವಾಮಿ, ಎನ್.ಮೂರ್ತಿ, ಕಲ್ಯಾಣಸಿರಿ ಬಂತೇಜಿ, ಸಿದ್ಧರಾಮ ಶಿವಯೋಗಿ ಸ್ವಾಮೀಜಿ ಮತ್ತಿತರರು ಹಾಜರಿದ್ದರು.

ಶಾಸಕ ಎಚ್‌.ಸಿ.ಮಹದೇವಪ್ಪ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಆಗ್ರಹಿಸಿ ರಾಜ್ಯ ದಲಿತ ಸಂಘಟನೆಗಳ ಒಕ್ಕೂಟದ ನೇತೃತ್ವದಲ್ಲಿ ಸ್ವಾತಂತ್ರ್ಯ ಉದ್ಯಾನದಲ್ಲಿ ಗುರುವಾರ ಪ್ರತಿಭಟನೆ ನಡೆಯಿತು – ಪ್ರಜಾವಾಣಿ ಚಿತ್ರ

ಮುಖ್ಯಾಂಶಗಳು

- ದಲಿತ ಸಮುದಾಯದ ನಾಯಕರ ಕಡೆಗಣನೆ: ಆರೋಪ
- ಮುಂದಿನ ಬಾರಿ ತಮ್ಮ ದಾರಿ ನೋಡಿಕೊಳ್ಳುವ ಎಚ್ಚರಿಕೆ

ಎಸ್‌ಐಆರ್ ವಿರುದ್ಧ ನಾಳೆಯಿಂದ ಜನಜಾಗೃತಿ ಜಾಥಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಗೆ (ಎಸ್‌ಐಆರ್) ಸಂಬಂಧಿಸಿದಂತೆ ನಾಗರಿಕರ ಆಕ್ಷೇಪಣೆ, ಪ್ರಶ್ನೆಗಳಿಗೆ ಯಾವುದೇ ರೀತಿಯ ಪ್ರತಿಕ್ರಿಯೆ, ಸ್ಪಂದನೆಯನ್ನು ಚುನಾವಣಾ ಆಯೋಗ ನೀಡುತ್ತಿಲ್ಲ ಎಂದು ಆರೋಪಿಸಿರುವ ಎಸ್‌ಐಆರ್ ವಿರೋಧಿ ಒಕ್ಕೂಟ ಹಾಗೂ ಎದ್ದೇಳು ಕರ್ನಾಟಕ ಸಂಘಟನೆಗಳು, ಇದೇ 13 ರಿಂದ 18ರ ವರೆಗೆ ರಾಜ್ಯವ್ಯಾಪಿ ಜನಜಾಗೃತಿ ಜಾಥಾ ಹಮ್ಮಿಕೊಂಡಿವೆ.

ಮಾಜಿ ಸಚಿವೆ ಬಿ.ಟಿ.ಲಲಿತಾ ನಾಯ್ಕ್, ರೈತ ಹೋರಾಟಗಾರ ಜೆ.ಎಂ. ವೀರಸಂಗಯ್ಯ, ಎದ್ದೇಳು ಕರ್ನಾಟಕದ ಕೆ.ಎಲ್.ಅಶೋಕ್ ಈ ಬಗ್ಗೆ ಹೇಳಿಕೆ ನೀಡಿದ್ದಾರೆ. ‘ಇದು ಕರ್ನಾಟಕ. ಇಲ್ಲಿ ನಡೆಯದು ಯಾವುದೇ ದುಷ್ಟ ಆಟ’ ಎಂಬ ಘೋಷವಾಕ್ಯದೊಂದಿಗೆ ಜನಜಾಗೃತಿ ಅಭಿಯಾನ ನಡೆಯಲಿದೆ ಎಂದಿದ್ದಾರೆ.

ಈ ಅಭಿಯಾನವು ಐದು ಮಾರ್ಗಗಳಲ್ಲಿ ನಡೆಯಲಿದೆ. ಮಾರ್ಗ-1ರಲ್ಲಿ ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ಬಳ್ಳಾರಿ, ವಿಜಯನಗರ, ಕೊಪ್ಪಳ, ಮಾರ್ಗ-2ರಲ್ಲಿ ವಿಜಯಪುರ, ಬಾಗಲಕೋಟೆ, ಬೆಳಗಾವಿ, ಧಾರವಾಡ, ಗದಗ, ಹಾವೇರಿ, ಮಾರ್ಗ-3ರಲ್ಲಿ ಉತ್ತರ ಕನ್ನಡ, ಚಿಕ್ಕಮಗಳೂರು, ಹಾಸನ, ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ, ಮಾರ್ಗ-4ರಲ್ಲಿ ತುಮಕೂರು, ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ಗ್ರಾಮಾಂತರ, ರಾಮನಗರ ಹಾಗೂ ಮಾರ್ಗ-5ರಲ್ಲಿ ಉಡುಪಿ, ದಕ್ಷಿಣ ಕನ್ನಡ, ಕೊಡಗು, ಮೈಸೂರು, ಚಾಮರಾಜನಗರ, ಮಂಡ್ಯ ಜಿಲ್ಲೆಗಳಲ್ಲಿ ಜಾಥಾ ಸಾಗಲಿದೆ ಎಂದು ಮಾಹಿತಿ ನೀಡಿದ್ದಾರೆ.

ಈವರೆಗೆ ಎಸ್‌ಐಆರ್ ನಡೆದ ರಾಜ್ಯಗಳಲ್ಲಿ 20 ಲಕ್ಷದಿಂದ ಆರಂಭಿಸಿ 3 ಕೋಟಿಯ ತನಕ ಅರ್ಹ ಮತದಾರರನ್ನು ಮತಪಟ್ಟಿಯಿಂದ ಹೊರಗಿಡಲಾಗಿದೆ. ಎಸ್‌ಐಆರ್ ಮೂಲಕ ನುಸುಳುಕೋರರನ್ನು ಪತ್ತೆ ಹಚ್ಚುತ್ತಿಲ್ಲ. ಬದಲಿಗೆ ಮತದಾನದ ಹಕ್ಕು ಇಲ್ಲದ ಎರಡನೇ ದರ್ಜೆಯ ವರ್ಗವನ್ನು ಸೃಷ್ಟಿಸುವ ಹುನ್ನಾರ ಇದರಲ್ಲಿ ಅಡಗಿದೆ ಎಂದು ದೂರಿದ್ದಾರೆ.

ಅಭಿಯಾನದ ಬಳಿಕ ಜೂನ್ 20ರಂದು ಬೆಂಗಳೂರಿನ ಫ್ರೀಡಂಪಾರ್ಕ್‌ನಲ್ಲಿ ಪ್ರತಿರೋಧ ಸಮಾವೇಶ ನಡೆಯಲಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಶಿವಣ್ಣ ನಾಮಪತ್ರ ತಿರಸ್ಕರಿಸಿ: ಜೆಡಿಎಸ್‌ನಿಂದ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆಯಿಂದ ವಿಧಾನಪರಿಷತ್ತಿನ ಏಳು ಸ್ಥಾನಗಳಿಗೆ ನಡೆಯುತ್ತಿರುವ ಚುನಾವಣೆಯಲ್ಲಿ ಎಂಟು ಅಭ್ಯರ್ಥಿಗಳು ಕಣದಲ್ಲಿ ಉಳಿದಿರುವ ಕಾರಣ ಜೂನ್ 18 ರಂದು ಮತದಾನ ನಡೆಯಲಿದೆ.

ಈ ಮಧ್ಯೆ ಕಾಂಗ್ರೆಸ್‌ನ ಬಿ.ಎಸ್.ಶಿವಣ್ಣ ಅವರ ನಾಮಪತ್ರ ತಿರಸ್ಕರಿಸಬೇಕು ಎಂದು ಚುನಾವಣಾಧಿಕಾರಿಗೆ ಜೆಡಿಎಸ್ ಅಭ್ಯರ್ಥಿ ಗೋವಿಂದರಾಜ್ ದೂರು ನೀಡಿದ್ದಾರೆ.

‘ಕಾಂಗ್ರೆಸ್ ಅಭ್ಯರ್ಥಿ ಶಿವಣ್ಣ ವಿರುದ್ಧ ನಾಲ್ಕು ಕ್ರಿಮಿನಲ್ ಪ್ರಕರಣಗಳು ದಾಖಲಾಗಿದ್ದು, ಆ ಅಂಶವನ್ನು ಪ್ರಮಾಣಪತ್ರದಲ್ಲಿ ನಮೂದಿಸಿಲ್ಲ’ ಎಂದು ಗೋವಿಂದರಾಜ್ ಅವರು ಚುನಾವಣಾಧಿಕಾರಿ ಎಂ.ಕೆ.ವಿಶಾಲಾಕ್ಷಿ ಅವರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

‘ಇದೊಂದು ಗಂಭೀರ ಸ್ವರೂಪದ ಪ್ರಕರಣ. ಆದ್ದರಿಂದ ನಾಮಪತ್ರವನ್ನು ತಿರಸ್ಕರಿಸಬೇಕು ಮತ್ತು ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಬೇಕು’ ಎಂದು ಗೋವಿಂದರಾಜ್ ಒತ್ತಾಯಿಸಿದ್ದಾರೆ.

ದೂರು ಸ್ವೀಕರಿಸಿರುವ ಚುನಾವಣಾಧಿಕಾರಿ ಈ ವಿಚಾರವನ್ನು ಪರಿಶೀಲಿಸಿ ಕಾನೂನು ಪ್ರಕಾರ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ್ದಾರೆ.

ಕಣದಲ್ಲಿ ಯಾರ್‍ಯಾರು?: ನಾಮಪತ್ರ ಹಿಂದಕ್ಕೆ ಪಡೆಯಲು ಗುರುವಾರ ಕಡೆಯ ದಿನವಾಗಿತ್ತು. ಯಾರೂ ನಾಮಪತ್ರ ಹಿಂದಕ್ಕೆ ಪಡೆದಿಲ್ಲ. ಅಂತಿಮವಾಗಿ ಕಣದಲ್ಲಿ ಕಾಂಗ್ರೆಸ್‌ನ ತಿಪ್ಪಣ್ಣಪ್ಪ ಕಮಕನೂರ, ಪಿ.ವಿ.ಮೋಹನ್, ಬಿ.ಕೆ.ಹರಿಪ್ರಸಾದ್, ಬಿ.ಎಸ್. ಶಿವಣ್ಣ, ವಿನಯ್ ಕಾರ್ತಿಕ್, ಬಿಜೆಪಿಯ ರಘು ಕೌಟಿಲ್ಯ, ಲಿಂಗರಾಜ ಪಾಟೀಲ ಮತ್ತು ಜೆಡಿಎಸ್‌ನ ಗೋವಿಂದರಾಜ್ ಉಳಿದಿದ್ದಾರೆ.

ಜೆಡಿಎಸ್ ಅಭ್ಯರ್ಥಿ ಗೋವಿಂದರಾಜು ಸೋಲಿನ ಭೀತಿಯಿಂದ ನನ್ನ ವಿರುದ್ಧ ಪಿತೂರಿ ಮಾಡಿದ್ದಾರೆ. ನನ್ನ ವಿರುದ್ಧ ಯಾವುದೇ ಪ್ರಕರಣಗಳು ಇಲ್ಲ
ಶಿವಣ್ಣ, ಕಾಂಗ್ರೆಸ್ ಅಭ್ಯರ್ಥಿ

ನಗರದಲ್ಲಿ ಇಂದು

ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನದ ಜಾಥಾ ಕಾರ್ಯಕ್ರಮಕ್ಕೆ ಚಾಲನೆ: ಡಿ.ಕೆ.ಶಿವಕುಮಾರ್, ಉಪಸ್ಥಿತಿ: ಜಿ.ಪರಮೇಶ್ವರ, ಪಿ.ಸಿ.ಮೋಹನ್, ರಿಜ್ವಾನ್ ಅರ್ಷದ್, ಅತಿಥಿ: ಮಿಚಿಕೊ ಮಿಯಾಮೊಟೊ, ಆಯೋಜನೆ: ಕಾರ್ಮಿಕ ಇಲಾಖೆ, ಕರ್ನಾಟಕ ರಾಜ್ಯ ಬಾಲ ಹಾಗೂ ಕಿಶೋರ ಕಾರ್ಮಿಕ ಪದ್ಧತಿ ನಿರ್ಮೂಲನಾ ಯೋಜನಾ ಸೊಸೈಟಿ, ಸ್ಥಳ: ಕಂಠೀರವ ಹೊರಾಂಗಣ ಕ್ರೀಡಾಂಗಣ, ಬೆಳಿಗ್ಗೆ 8.30

ಸಂಘದ ಸಂಸ್ಥಾಪನಾ ದಿನಾಚರಣೆ ಮತ್ತು ವಜ್ರ ಮಹೋತ್ಸವ ನಾಂದಿ ಕಾರ್ಯಕ್ರಮ: ಗಣಪತಿ ಹೋಮ, ಉಪಸ್ಥಿತಿ: ವೂಡೇ ಪಿ. ಕೃಷ್ಣ, ಟಿ.ವಿ.ರಾಜು, ಶ್ರೀರಾಮೇಗೌಡ, ಆಯೋಜನೆ ಹಾಗೂ ಸ್ಥಳ: ಉದಯ ಭಾನು ಕಲಾ ಸಂಘ, ಕೆಂಪೇಗೌಡನಗರ, ಬೆಳಿಗ್ಗೆ 10

ಪರಿಸರ ಸಪ್ತಾಹ ಹಾಗೂ ಹಸಿರು ಉತ್ಸವ: ಉದ್ಘಾಟನೆ: ಅಜಿತ್ ಬಿ. ಮೆನೆಜಸ್, ಜಿ.ಕೆ. ವಸಂತ ಕುಮಾರ್, ಆಯೋಜನೆ: ಅಸೋಸಿಯೇಷನ್ ಆಫ್ ಪೀಪಲ್ ವಿತ್ ಡಿಸೆಬಿಲಿಟಿ (ಎಪಿಡಿ), ಸ್ಥಳ: ಎಪಿಡಿ ತೋಟಗಾರಿಕಾ ತರಬೇತಿ ಕೇಂದ್ರ, ಎಲ್‌ಐಸಿ ಕಾಲೊನಿ, ಎಚ್‌ಎಎಲ್ 3ನೇ ಹಂತ, ಬೆಳಿಗ್ಗೆ 10

ಸ್ವಾಭಿಮಾನ ಭಾರತ ‘ಸಂವಿಧಾನ 75’ ಕಲಾ ಪ್ರದರ್ಶನ: ಉದ್ಘಾಟನೆ: ಎಸ್.ಜಿ. ವಾಸುದೇವ, ಅತಿಥಿಗಳು: ಮೈಸೂರು ಮಂಜುನಾಥ್, ಚಿ.ಸು.ಕೃಷ್ಣ ಸೆಟ್ಟಿ, ಅಧ್ಯಕ್ಷತೆ: ಸುಚೇಂದ್ರಪ್ರಸಾದ್, ಆಯೋಜನೆ: ಸಂಸ್ಕಾರ ಭಾರತೀ ಕರ್ನಾಟಕ ದಕ್ಷಿಣ ಪ್ರಾಂತ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಸವನಗುಡಿ, ಬೆಳಿಗ್ಗೆ 10.30

ರೇಬಾ ಹೋರೆ ಜನ್ಮಶತಮಾನೋತ್ಸವ ಪ್ರಯುಕ್ತ ‘ಬ್ರೋಕನ್ ಫುಟ್ ಜರ್ನಲ್ ಮತ್ತು ಇತರ ಕಥನಗಳು’ ವಿಶೇಷ ಕಲಾ ಪ್ರದರ್ಶನ: ಆಯೋಜನೆ: ‘ಸೀಗಲ್’ ಕೋಲ್ಕತ್ತ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

‘ಅಂಗಾರ’ ನಾಟಕ ಪ್ರದರ್ಶನ: ರಚನೆ: ಉಷಾ ಕಟ್ಟೆಮನೆ, ತಂಡ: ಪುನಃ ಥಿಯೇಟರ್, ನಿರ್ದೇಶನ: ಅಭಿನವ್ ಗ್ರೋವರ್, ಆಯೋಜನೆ: ಚಿಗುರು, ಕುಸುಮಾಲೆ– ಗಿರೀಶ್ ಕಾರ್ನಾಡ್ ಕನ್ನಡ ನಾಟಕ ರಚನಾ ಫೆಲೋಶಿಪ್, ಭಾಷಾ ಕೇಂದ್ರ, ಸಮಾಗತ ಫೌಂಡೇಷನ್, ಸ್ಥಳ: ಪ್ರೆಸ್ಟೀಜ್ ಸೆಂಟರ್ ಫಾರ್ ಪರ್ಫಾಮಿಂಗ್ ಆರ್ಟ್ಸ್, ಅಂಜನಾದ್ರಿ ಬಡಾವಣೆ, ಕೋಣನಕುಂಟೆ, ಬೆಳಿಗ್ಗೆ 11 ಮತ್ತು ಸಂಜೆ 5.30

ರಾಷ್ಟ್ರ ಮಟ್ಟದ ಶೈಕ್ಷಣಿಕ ಸಾಧಕರಿಗೆ ಸನ್ಮಾನ ಸಮಾರಂಭ: ಅತಿಥಿ: ಎಸ್. ಸೋಮನಾಥ್, ಆಯೋಜನೆ ಹಾಗೂ ಸ್ಥಳ: ಇಸ್ಕಾನ್, ಶೇಷಾದ್ರಿಪುರ, ಮಧ್ಯಾಹ್ನ 2

ಸೋಮನಾಥ್

ಮ್ಯಾನ್ಯುವಲ್ ಸ್ಕ್ಯಾವೆಂಜರ್ಸ್‌ಗಳಿಗೆ ಜಾಗೃತಿ ಶಿಬಿರದ ಸಮಾರೋಪ ಸಮಾರಂಭ: ಸಮಾರೋಪ ಭಾಷಣ: ಸಿ.ಜಿ.ಲಕ್ಷ್ಮೀಪತಿ, ಅತಿಥಿಗಳು: ರಾಜೇಶ್ ಜಿ. ಗೌಡ, ಕೆ.ಬಿ. ಓಬಳೇಶ್, ಅಧ್ಯಕ್ಷತೆ: ಆರ್‌.ವಿ. ಚಂದ್ರಶೇಖರ್, ಆಯೋಜನೆ: ಡಾ.ಬಾಬು ಜಗಜೀವನ್‌ರಾಮ್ ಸಂಶೋಧನಾ ಸಂಸ್ಥೆ, ಸ್ಥಳ: ದಕ್ಷಿಣ ಭಾರತದ ಪ್ರಾದೇಶಿಕ ಇಂಗ್ಲಿಷ್ ಸಂಸ್ಥೆ, ಜ್ಞಾನಭಾರತಿ, ಮಧ್ಯಾಹ್ನ 2

ಕೆ. ಮರುಳಸಿದ್ದಪ್ಪ

ಜಿ.ಎಸ್. ಶಿವರುದ್ರಪ್ಪ ಸಂಸ್ಮರಣೆ ಕಾರ್ಯಕ್ರಮ: ಛಾಯಾಚಿತ್ರ ಪ್ರದರ್ಶನ ಉದ್ಘಾಟನೆ: ಕೆ.ಮರುಳಸಿದ್ದಪ್ಪ, ‘ನನ್ನ ತಂದೆ ಜಿ.ಎಸ್.ಎಸ್’ ವಿಷಯದ ಬಗ್ಗೆ ಮಾತು: ಜಿ.ಎಸ್. ಜಯದೇವ, ‘ಕನ್ನಡ ಮತ್ತು ಕನ್ನಡ ಪ್ರಜ್ಞೆಯನ್ನು ರೂಪಿಸುವಲ್ಲಿ ಜಿ.ಎಸ್.ಎಸ್. ಅವರ ಪಾತ್ರ’ ವಿಷಯದ ಬಗ್ಗೆ ಮಾತು: ಎಸ್.ಜಿ. ಸಿದ್ಧರಾಮಯ್ಯ, ಆಯೋಜನೆ: ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ.ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 5

‘ವಿಪುಲ ರೂಪ ಧಾರಿಣಿ’ ಜಿ.ಎಸ್.ಎಸ್. ಅವರ ಆಯ್ದ ಕವನಗಳ ಕಾವ್ಯಾಭಿನಯ: ನಿರ್ದೇಶನ: ಶ್ರೀಪಾದ್ ಭಟ್, ಸಾಸ್ವೇಹಳ್ಳಿ ಸತೀಶ್, ಆಯೋಜನೆ: ಹೊಂಗಿರಣ ಶಿವಮೊಗ್ಗ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ.ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 6.30

ಜಿ.ಎಸ್.ಎಸ್. ಜನ್ಮಶತಮಾನೋತ್ಸವದ ಅಂಗವಾಗಿ ದತ್ತಿ ಉಪನ್ಯಾಸ: ‘ವಚನ ಸಾಹಿತ್ಯ–ಅಲಕ್ಷಿತ ವಚನಕಾರ್ತಿಯರು’ ವಿಷಯದ ಬಗ್ಗೆ ಉಪನ್ಯಾಸ: ಕುಸುಮ ಸಿ.ಆರ್., ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ: ಬಿ.ಎಂ.ಶ್ರೀ. ಪ್ರತಿಷ್ಠಾನ, ಸ್ಥಳ: ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ. ಕಲಾಭವನ, ಎನ್.ಆರ್.ಕಾಲೊನಿ, ಸಂಜೆ 5

ಎರಡು ದಿನಗಳ ರಂಗಸಂಭ್ರಮ: ವೇದಿಕೆ ಕಾರ್ಯಕ್ರಮದ ಅಧ್ಯಕ್ಷತೆ: ರಂಗಶ್ರೀ ರಂಗಸ್ವಾಮಿ, ಉದ್ಘಾಟನೆ: ಗಂಗರಾಜು ಪಟೇಲ್, ರಂಗಗೌರವ ಪ್ರಶಸ್ತಿ: ನಾರಾಯಣಪ್ಪ ಜಾಲಗೆರೆ, ರವೀಶ್ ಎಂ.ಎಲ್., ಎಸ್. ತಿಮ್ಮಯ್ಯ, ಮೋಹನ್ ಕುಮಾರ್, ಮಂಜುಳಾ ರಾಜಕುಮಾರ್, ಮಂಜುನಾಥ್ ಕರಲಮಂಗಲ, ‘ವರಭ್ರಷ್ಟ’ ನಾಟಕ ಪ್ರದರ್ಶನ, ಆಯೋಜನೆ: ಅಮ್ಮನ ಮಡಿಲು ಸಾಮಾಜಿಕ ಸಾಂಸ್ಕೃತಿಕ ಕಲಾ ಟ್ರಸ್ಟ್, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ.ರಸ್ತೆ, ಸಂಜೆ 5

‘ವಿರೋಧಾಭಾಸ ಕೂಡಲೇ ಕೊನೆಯಾಗಲಿ, ಡಾ. ಅಂಬೇಡ್ಕರ್ ಭಾಷಣ ಓದು’ ಕಾರ್ಯಕ್ರಮ: ಉದ್ಘಾಟನೆ: ಸೋಮಶೇಖರ್, ಓದು ಕಾರ್ಯಕ್ರಮಕ್ಕೆ ಚಾಲನೆ: ಟಿ.ಗಜೇಂದ್ರ, ಓದು ಕಾರ್ಯಕ್ರಮಕ್ಕೆ ಮಾರ್ಗದರ್ಶನ: ಮಂಗ್ಳೂರ ವಿಜಯ, ಆಯೋಜನೆ ಹಾಗೂ ಸ್ಥಳ: ಬೆಂಗಳೂರು ವಿಶ್ವವಿದ್ಯಾಲಯದ ಡಾ. ಬಿ.ಆರ್ ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ, ಸಂಜೆ 5



ಯುವ ಸಂಗೀತೋತ್ಸವ: ಪಿಟೀಲು: ದಾವಲೂರಿ ಶ್ರೀವಿದ್ಯಾ, ಮೃದಂಗ: ಶಂಕರ್ಷಣನ್ ಶ್ರೀಕಾಂತ್, ಘಟ: ಸ್ಕಂದ ಮಂಜುನಾಥ್, ಎರಡನೇ ಸಂಗೀತ ಕಛೇರಿ: ಗಾಯನ: ಅಪೂರ್ವ ಹೆಮ್ಮಿಗೆ ಅರುಣ್, ಪಿಟೀಲು: ಕುಶಾಲ್ ಬಿ.ಆರ್., ಮೃದಂಗ: ಬಿ.ಎಸ್. ಸಮರ್ಥ, ಘಟ: ಸುನಿಧಿ ಪ್ರಸಾದ್, ಆಯೋಜನೆ ಹಾಗೂ ಸ್ಥಳ: ಬೆಂಗಳೂರು ಗಾಯನ ಸಮಾಜ, ಕೆ. ಆರ್. ರಸ್ತೆ, ಸಂಜೆ 5.15

26ನೇ ವರ್ಷದ ಪ್ರವಚನ ವಾಹಿನಿ: ‘ವಿದುರ ನೀತಿ’ ವಿಷಯದ ಬಗ್ಗೆ ಪ್ರವಚನ: ಕಡೂರ್ ಶ್ರೀಧರಾಚಾರ್ಯ, ಆಯೋಜನೆ ಹಾಗೂ ಸ್ಥಳ: ಸಾಂಸ್ಕೃತಿಕ ಮಂದಿರ, ರಾಗೀಗುಡ್ಡದ ಶ್ರೀ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ 9ನೇ ಬಡಾವಣೆ, ಸಂಜೆ 6.30

‘ಜಾಜಿ’ ನಾಟಕ ಪ್ರದರ್ಶನ: ತಂಡ: ನಮ್ ಕಂಪನಿ, ಆಯೋಜನೆ ಮತ್ತು ಸ್ಥಳ: ರಂಗಶಂಕರ, ಸಂಜೆ 7.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.. nagaradalli_indu@prajavani.co.in

ಉಪನಗರ ಸಾರಿಗೆ: ಮುಂದಿನ ವರ್ಷ ಸಂಚಾರ

ಕಾರಿಡಾರ್–2ರಲ್ಲಿ ಚಿಕ್ಕಬಾಣಾವರ–ಯಶವಂತಪುರ ನಡುವೆ ಓಡಲಿದೆ ಮೊದಲ ರೈಲು

• ಬಾಲಕೃಷ್ಣಪಿ.ಎಚ್.

ಬೆಂಗಳೂರು: ಬೆಂಗಳೂರು ಉಪನಗರ ರೈಲು ಯೋಜನೆಯ ಕಾಮಗಾರಿ ಇತ್ತೀಚೆಗೆ ವೇಗ ಪಡೆದುಕೊಂಡಿದ್ದು, 2027ರ ಡಿಸೆಂಬರ್ ಒಳಗೆ ಕಾರಿಡಾರ್–2ರಲ್ಲಿ ಚಿಕ್ಕಬಾಣಾವರದಿಂದ ಯಶವಂತಪುರವರೆಗೆ ಮೊದಲ ರೈಲು ಸಂಚರಿಸುವ ಸಾಧ್ಯತೆ ಇದೆ.

'25.57 ಕಿ.ಮೀ. ಉದ್ದದ ಎರಡನೇ ಕಾರಿಡಾರ್‌ನಲ್ಲಿ ಚಿಕ್ಕಬಾಣಾವರದಿಂದ ಯಶವಂತಪುರವರೆಗೆ 7 ಕಿ.ಮೀ. ಕಾಮಗಾರಿಯಲ್ಲಿ ಶೇ 35ರಷ್ಟು ಕೆಲಸ ಆಗಿದೆ. ಉಳಿದ ಕಾಮಗಾರಿ ಇನ್ನು ಒಂದು ವರ್ಷದೊಳಗೆ ಪೂರ್ಣಗೊಳ್ಳಲಿದೆ. 2027ರ ಡಿಸೆಂಬರ್‌ನಲ್ಲಿ 7 ಕಿ.ಮೀ.ನಲ್ಲಿ ಉಪನಗರ ರೈಲು ಸಂಚರಿಸಲಿದೆ. ಉಳಿದಂತೆ ಬೆನ್ನಿಗಾನಹಳ್ಳಿವರೆಗೆ ಒಟ್ಟು ಶೇ 21ರಷ್ಟು ಕಾಮಗಾರಿ ಆಗಿದೆ. ಈ ಕಾರಿಡಾರ್ 2028ರ ಡಿಸೆಂಬರ್ ಒಳಗೆ ಪೂರ್ಣಗೊಳ್ಳಲಿದೆ' ಎಂದು ಯೋಜನೆಯ ಪ್ರಧಾನ ವ್ಯವಸ್ಥಾಪಕ ರಾಜು ಚಮ್ಮನ್ನರ್ ತಿಳಿಸಿದರು.

ಬೆಂಗಳೂರಿನಲ್ಲಿ ಉಪನಗರ ರೈಲು ಸಂಚಾರ ಆರಂಭಿಸಬೇಕು ಎಂಬ

ಪ್ರಸ್ತಾವ 40 ವರ್ಷಗಳ ಹಿಂದಿನಿಂದಲೂ ಇತ್ತಾದರೂ ರಾಜ್ಯ ಸರ್ಕಾರದ ಪಾಲುದಾರಿಕೆಯೊಂದಿಗೆ ಈ ಯೋಜನೆ ಅನುಷ್ಠಾನಗೊಳಿಸಲು 2018ರಲ್ಲಿ ಕೇಂದ್ರ ಸರ್ಕಾರ ನಿರ್ಧರಿಸಿತ್ತು. 2020ರಲ್ಲಿ ಅನುಮೋದನೆ ನೀಡಿದರೂ ಕೋವಿಡ್ ಕಾರಣದಿಂದಾಗಿ ಕಾಮಗಾರಿ ಆರಂಭವಾಗಿರಲಿಲ್ಲ. 2022ರಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಕಾಮಗಾರಿಗೆ ಚಾಲನೆ ನೀಡಿದ್ದಲ್ಲದೇ '40 ವರ್ಷಗಳಿಂದ ಆಗದ ಯೋಜನೆ 40 ತಿಂಗಳಲ್ಲಿ ಪೂರ್ಣಗೊಳ್ಳಲಿದೆ' ಎಂದು ಘೋಷಿಸಿದ್ದರು.

ಆವಾಗ ಚುರುಕಾಗಿ ಕೆಲಸ ಆರಂಭವಾಯಿತಾದರೂ ತಿಂಗಳುಗಳು ಕಳೆದಂತೆ ನಿಧಾನವಾಗತೊಡಗಿತು. ಕಾರಿಡಾರ್–1ರ ಬದಲು ಕಾರಿಡಾರ್–2ಕ್ಕೆ ಸಂಬಂಧಿಸಿದಂತೆ ಟೆಂಡರ್ ಆಗಿತ್ತು. ಆ ನಂತರ ಕಾರಿಡಾರ್–4ಕ್ಕೆ ಟೆಂಡರ್ ಪ್ರಕ್ರಿಯೆ ನಡೆಯಿತು. ಆದರೆ, ಕೆಲಸ ನಿರೀಕ್ಷಿತ ವೇಗದಲ್ಲಿ ಸಾಗದೇ ಕುಂಟತೊಡಗಿತು. ಗುತ್ತಿಗೆ ಪಡೆದಿದ್ದ ಎಲ್ ಆ್ಯಂಡ್ ಟಿ ಕಂಪನಿಯು ಒಂದೂಕಾಲು ವರ್ಷದ ಹಿಂದೆ ಕಾಮಗಾರಿಯನ್ನೇ ಸ್ಥಗಿತಗೊಳಿಸಿ ಗುತ್ತಿಗೆಯಿಂದಲೇ ಹಿಂದಕ್ಕೆ ಸರಿಯಿತು.

ನಾಲ್ಕು ಕಾರಿಡಾರ್‌ಗಳನ್ನು ಪೂರ್ಣಗೊಳಿಸಲು ಪ್ರಧಾನಿ ನೀಡಿದ್ದ 40 ತಿಂಗಳ ಗಡುವು 2025ರ ಅಕ್ಟೋಬರ್‌ಗೆ ಮುಗಿದು ಹೋಗಿತ್ತು. ನಾಲ್ಕರಲ್ಲಿ ಯಾವುದೇ ಒಂದು ಕಾರಿಡಾರ್ ಕೂಡ ಪೂರ್ಣಗೊಳ್ಳಲಿಲ್ಲ. ಕನಿಷ್ಠ ಶೇ 25ರಷ್ಟು ಕೆಲಸ ಕೂಡ ಆಗದೇ ನನೆಗುದಿಗೆ ಬಿದ್ದಿತ್ತು.

ಈ ಯೋಜನೆಯನ್ನು ಅನುಷ್ಠಾನಗೊಳಿಸುವ ಕರ್ನಾಟಕ ರೈಲು ಮೂಲಸೌಕರ್ಯ ಅಭಿವೃದ್ಧಿ ಎಂಟರ್‌ಪ್ರೈಸಸ್‌ಗೆ (ಕೆ- ರೈಡ್) ಕಳೆದ ನವೆಂಬರ್‌ನಲ್ಲಿ ಕಾಯಂ ವ್ಯವಸ್ಥಾಪಕ ನಿರ್ದೇಶಕರಾಗಿ ಲಕ್ಷ್ಮಣ್ ಸಿಂಗ್ ಬಂದ ಬಳಿಕ ಮರು ಟೆಂಡರ್ ಕರೆದು ಕಾಮಗಾರಿಗಳಿಗೆ ಮತ್ತೆ ಚಾಲನೆ ನೀಡಲಾಯಿತು.

'ಇನ್ನಾದರೂ ಬೇಗ ಮಾಡಿ'

ಉಪನಗರ ರೈಲು ಯೋಜನೆಗೆ ಸಂಬಂಧಪಟ್ಟಂತೆ ಕಳೆದ ನಾಲ್ಕು ವರ್ಷಗಳಿಂದ ನೀಡುತ್ತಿರುವ ಎಲ್ಲ ಗಡುವುಗಳು ಮುಕ್ತಾಯಗೊಂಡಿವೆ. ಈಗ ಕೆಲಸ ಸ್ವಲ್ಪ ವೇಗವಾಗಿ ನಡೆಯುತ್ತಿರುವುದು ಕಾಣುತ್ತಿದೆ. ನಿಲ್ದಾಣಗಳು, ಮಾರ್ಗ ನಿರ್ಮಾಣಗೊಳ್ಳುತ್ತಿವೆ. ಮತ್ತೆ ಯಾವುದೋ ಕಾರಣ ನೀಡಿ ವಿಳಂಬಗೊಳಿಸದೇ ಮುಂದಿನ ವರ್ಷ ರೈಲು ಸಂಚರಿಸುವಂತೆ ಮಾಡಬೇಕು.

ಸಂಜೀವ್ ದ್ಯಾಮಣ್ಣನವರ್,
ರೈಲ್ವೆ ಹೋರಾಟಗಾರ

ಬೆಂಗಳೂರು ಉಪನಗರ ಸಾರಿಗೆ ಯೋಜನೆಯ ಕಾರಿಡಾರ್–2ರಲ್ಲಿ ಯಶವಂತಪುರದಲ್ಲಿ ನಿರ್ಮಾಣಗೊಳ್ಳುತ್ತಿರುವ ನಿಲ್ದಾಣ

ಕಾರಿಡಾರ್–2

25.57 ಕಿ.ಮೀ. ಒಟ್ಟು ಉದ್ದ

12 ಒಟ್ಟು ನಿಲ್ದಾಣಗಳು

7 ಕಿ.ಮೀ. ಮೊದಲ ಹಂತದಲ್ಲಿ ಮುಕ್ತಾಯಗೊಳ್ಳಲಿರುವ ಉದ್ದ

9 ರೈಲುಗಳು ಈ ಕಾರಿಡಾರ್‌ನಲ್ಲಿ ಸಂಚರಿಸಲಿವೆ

'ನಾಲ್ಕು ವರ್ಷದಲ್ಲಿ ಪೂರ್ಣ'

ಅನೇಕ ಕಾರಣಗಳಿಂದ ವಿಳಂಬವಾಗಿದ್ದ ಉಪನಗರ ಸಾರಿಗೆ ಯೋಜನೆ ಈಗ ವೇಗ ಪಡೆದುಕೊಂಡಿದೆ. ಮುಂದಿನ ವರ್ಷ ಚಿಕ್ಕಬಾಣಾವರ–ಯಶವಂತಪುರ ನಡುವೆ, 2028ಕ್ಕೆ ಬೆನ್ನಿಗಾನಹಳ್ಳಿವರೆಗೆ ರೈಲು ಸಂಚರಿಸುವಂತೆ ಮಾಡುವ ಗುರಿ ಇಟ್ಟುಕೊಂಡಿದ್ದೇವೆ. ಕೆಲಸ ಭರದಿಂದ ಸಾಗುತ್ತಿದೆ. 2030ಕ್ಕೆ ಎಲ್ಲ ನಾಲ್ಕು ಕಾರಿಡಾರ್‌ಗಳಲ್ಲಿ ಉಪನಗರ ರೈಲು ಸಂಚರಿಸಲಿದೆ ಎಂದು ಕೆ–ರೈಡ್ ವ್ಯವಸ್ಥಾಪಕ ನಿರ್ದೇಶಕ ಲಕ್ಷ್ಮಣ್ ಸಿಂಗ್ ತಿಳಿಸಿದ್ದಾರೆ.

ಕೊಂಬೆ ಬಿದ್ದು ಗಾಯ: ₹25 ಲಕ್ಷ ಪರಿಹಾರ ನೀಡಿ ಸುಪ್ರೀಂ ಆದೇಶ

ನವದೆಹಲಿ (ಪಿಟಿಐ): ಬೆಂಗಳೂರಿನಲ್ಲಿ 19 ವರ್ಷಗಳ ಹಿಂದೆ ನಡೆದ ಘಟನೆಯಲ್ಲಿ, ಆಟೊರಿಕ್ಷಾ ಮೇಲೆ ಮರದ ಕೊಂಬೆ ಬಿದ್ದು ಗಂಭೀರವಾಗಿ ಗಾಯಗೊಂಡು, ಪಾರ್ಶ್ವವಾಯುವಿಗೆ ಒಳಗಾದ ವ್ಯಕ್ತಿಗೆ ₹25 ಲಕ್ಷ ಪರಿಹಾರ ನೀಡಿ ಸುಪ್ರೀಂ ಕೋರ್ಟ್ ಗುರುವಾರ ತೀರ್ಪು ನೀಡಿದೆ.

ಇಂತಹ ಪ್ರಕರಣದಲ್ಲಿ ವಿಶೇಷವಾಗಿ ಸ್ಥಳೀಯ ಸಂಸ್ಥೆಯ ವಿರುದ್ಧ ಮೋಟಾರು ವಾಹನ ಕಾಯ್ದೆಯ (ಎಂವಿಎ) ಸೆಕ್ಷನ್ 166ರ ಅಡಿಯಲ್ಲಿ ಪರಿಹಾರ ಕೋರಿ ಹಕ್ಕು ಸಲ್ಲಿಸಲು ಸಾಧ್ಯವಿಲ್ಲ ಎಂದು ಅಭಿಪ್ರಾಯಪಟ್ಟ ನ್ಯಾಯಮೂರ್ತಿ ಸಂಜಯ್ ಕರೋಲ್ ಮತ್ತು ಎನ್. ಕೋಟೀಶ್ವರ್ ಸಿಂಗ್ ಅವರನ್ನೊಳಗೊಂಡ ನ್ಯಾಯಪೀಠವು, ಸಂವಿಧಾನದ 142ನೇ ವಿಧಿ ಅಡಿಯಲ್ಲಿನ ವಿಶೇಷ ಅಧಿಕಾರ ಬಳಸಿಕೊಂಡು, ವ್ಯಕ್ತಿಗೆ ಹೈಕೋರ್ಟ್ ನೀಡಿದ್ದ ಪರಿಹಾರ ಮೊತ್ತವನ್ನು ₹17.10 ಲಕ್ಷದಿಂದ ₹25 ಲಕ್ಷಕ್ಕೆ ಹೆಚ್ಚಿಸಿ ತೀರ್ಪು ನೀಡಿದೆ.

ಸಂವಿಧಾನದ 142ನೇ ವಿಧಿಯು, ಬಾಕಿ ಇರುವ ಪ್ರಕರಣಗಳಲ್ಲಿ 'ಸಂಪೂರ್ಣ ನ್ಯಾಯ' ಒದಗಿಸಲು ಆದೇಶ ಹೊರಡಿಸುವ ವಿಶಿಷ್ಟ ಅಧಿಕಾರವನ್ನು ಸುಪ್ರೀಂ ಕೋರ್ಟ್‌ಗೆ ನೀಡುತ್ತದೆ.

ಏನಿದು ಘಟನೆ: ಈ 2007ರಲ್ಲಿ ಘಟನೆ ನಡೆದಿತ್ತು. ಕೆ.ಕೆ ಉಮೇಶ್ ಕುಮಾರ್ ಎಂಬುವರು ಆಟೊದಲ್ಲಿ ಪ್ರಯಾಣಿಸುತ್ತಿದ್ದರು. ಭಾರಿ ಮಳೆಯ ಕಾರಣ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಚಾಲಕ ಆಟೊ ನಿಲ್ಲಿಸಿದ್ದ. ಆಗ ಆಟೊ ಮೇಲೆ ಮರದ ಕೊಂಬೆ ಬಿದ್ದು, ಉಮೇಶ್ ಕುಮಾರ್ ಗಂಭೀರವಾಗಿ ಗಾಯಗೊಂಡಿದ್ದರು.

ಬಿಬಿಎಂಪಿ ಆಯುಕ್ತರನ್ನು ಹೊಣೆಗಾರರನ್ನಾಗಿ ಮಾಡಿ, ₹50 ಲಕ್ಷ ಪರಿಹಾರ ಕೋರಿ ಉಮೇಶ್‌ಕುಮಾರ್ ಸಲ್ಲಿಸಿದ್ದ ಮನವಿಯನ್ನು ಮೋಟಾರು ಅಪಘಾತ ಪರಿಹಾರ ನ್ಯಾಯಮಂಡಳಿ (ಎಂಎಸಿಟಿ) ತಿರಸ್ಕರಿಸಿತ್ತು. ಇದು ನೈಸರ್ಗಿಕ ವಿಕೋಪದಿಂದ ಅಥವಾ ದೇವರ ಕೃತ್ಯದಿಂದ ಆದ ಘಟನೆ ಎಂದು ಹೇಳಿತ್ತು. ವಿಳಂಬ ಕಾರಣ ನೀಡಿ ಹೈಕೋರ್ಟ್ ಅರ್ಜಿಯನ್ನು ವಿಚಾರಣೆ ನಡೆಸಲು ಮೊದಲು ನಿರಾಕರಿಸಿದರೂ, ನಂತರ ಸುಪ್ರೀಂಕೋರ್ಟ್ ಸೂಚನೆಯಂತೆ ಮರು ವಿಚಾರಣೆ ನಡೆಸಿ ₹ 17 ಲಕ್ಷ ಪರಿಹಾರ ನೀಡಿ ಆದೇಶಿಸಿತ್ತು. ಅರ್ಜಿದಾರರು ಮತ್ತೆ ಸುಪ್ರೀಂಕೋರ್ಟ್ ಮೊರೆ ಹೋಗಿದ್ದರು.

ಪ್ರೆಸ್ಟಿಜ್ ಗ್ರೂಪ್, ಬೆಂಗಳೂರು ಏರ್‌ಪೋರ್ಟ್ ಸಿಟಿ ಲಿಮಿಟೆಡ್ ಘೋಷಣೆ

ಏರ್‌ಪೋರ್ಟ್ ಸಿಟಿಯಲ್ಲಿ ವಾಣಿಜ್ಯ ಹಬ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರೆಸ್ಟಿಜ್ ಗ್ರೂಪ್, ಬೆಂಗಳೂರು ಏರ್‌ಪೋರ್ಟ್ ಸಿಟಿ ಲಿಮಿಟೆಡ್ (ಬಿಎಸಿಎಲ್) ಸಹಭಾಗಿತ್ವದಲ್ಲಿ ಬೆಂಗಳೂರು ಏರ್‌ಪೋರ್ಟ್ ಸಿಟಿಯಲ್ಲಿ ಸಮಗ್ರ ವಾಣಿಜ್ಯ, ಸಂಸ್ಕೃತಿ, ಆತಿಥ್ಯ, ಮನರಂಜನೆ ಮತ್ತು ಆರ್ಥಿಕ ಚಟುವಟಿಕೆಗಳ ತಾಣ (ಹಬ್) ನಿರ್ಮಿಸುವುದಾಗಿ ಘೋಷಿಸಿದೆ.

ಪ್ರೆಸ್ಟಿಜ್ ಗ್ರೂಪ್‌ನ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಇರ್ಫಾನ್ ರಜಾಕ್, ಬೆಂಗಳೂರು ಅಂತರರಾಷ್ಟ್ರೀಯ ವಿಮಾನನಿಲ್ದಾಣ ನಿಯಮಿತದ (ಬಿಐಎಎಲ್) ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಹರಿ ಮರಾರ್ ಗುರುವಾರ ಸುದ್ದಿಗೋಷ್ಠಿಯಲ್ಲಿ ಈ ಯೋಜನೆಯ ಬಗ್ಗೆ ಮಾಹಿತಿ ನೀಡಿದರು.

ಇದಕ್ಕಾಗಿ ಪ್ರೆಸ್ಟಿಜ್ ಗ್ರೂಪ್ ಸುಮಾರು ₹1,800 ಕೋಟಿ ಹೂಡಿಕೆ ಮಾಡುತ್ತಿದ್ದು, 2027ರ ಆರಂಭದಲ್ಲಿ ನಿರ್ಮಾಣ ಕಾರ್ಯ ಶುರುವಾಗಲಿದೆ. 2031ರ ಮಾರ್ಚ್ ಒಳಗೆ ಪೂರ್ಣಗೊಂಡು ಉದ್ಘಾಟನೆಗೆ ಸಿದ್ಧಗೊಳ್ಳಲಿದೆ ಎಂದರು.

ಅತ್ಯಾಧುನಿಕ ಸಮಾವೇಶ ಮತ್ತು ಪ್ರದರ್ಶನ ಕೇಂದ್ರ, 'ಸೇಂಟ್ ರೆಜಿಸ್' ಮತ್ತು 'ಮ್ಯಾರಿಯಟ್ ಮಾರ್ಕ್ವಿಸ್'ನಂಥ ಬ್ರ್ಯಾಂಡ್‌ಗಳ ಐಷಾರಾಮಿ ಹೋಟೆಲ್‌ಗಳು, ಕಚೇರಿ ಸ್ಥಳಾವಕಾಶ, ಪ್ರದರ್ಶನ ಕಲೆಗಳ ಕೇಂದ್ರ, ಶಾಪಿಂಗ್ ಮತ್ತು ಅತ್ಯುತ್ತಮ ಆಹಾರ ಮಳಿಗೆಗಳು ಇರಲಿವೆ ಎಂದು ತಿಳಿಸಿದರು.

ಜಾಗತಿಕ ಪ್ರಯಾಣಿಕರು, ಕಾರ್ಯಕ್ರಮ ಆಯೋಜಕರು, ಉದ್ಯಮಿಗಳು ಮತ್ತು ಸಂದರ್ಶಕರಿಗೆ ಅನುಕೂಲ ಕಲ್ಪಿಸುವ ಉದ್ದೇಶ ಹೊಂದಿದ್ದು, ಜಾಗತಿಕ ವಾಣಿಜ್ಯ ಮತ್ತು ಆತಿಥ್ಯ ರಂಗದಲ್ಲಿ ಬೆಂಗಳೂರಿನ ಸ್ಥಾನವನ್ನು ಮತ್ತಷ್ಟು ಬಲಪಡಿಸಲಿದೆ ಎಂದರು.

'ವಿಮಾನ ನಿಲ್ದಾಣದ ರಿಯಾಯಿತಿ ಒಪ್ಪಂದದ ಭಾಗವಾಗಿ ಸುಮಾರು 4,000 ಎಕರೆ ಭೂಮಿ ಲಭ್ಯವಿದ್ದು, ಅದರಲ್ಲಿ ಸುಮಾರು 400 ಎಕರೆಯನ್ನು ಏರ್‌ಪೋರ್ಟ್ ಸಿಟಿಗಾಗಿ ಕಾಯ್ದಿರಿಸಲಾಗಿದೆ. ಉತ್ತರ ಬೆಂಗಳೂರಿನಲ್ಲಿ ವಾಣಿಜ್ಯ, ಸಂಸ್ಕೃತಿ, ಆತಿಥ್ಯ, ಮನರಂಜನೆ ಮತ್ತು ಆರ್ಥಿಕ ಚಟುವಟಿಕೆಗಳ ಹಬ್ ನಿರ್ಮಾಣ ಮಾಡುವುದು ನಮ್ಮ ಗುರಿ' ಎಂದು ಮರಾರ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಪ್ರೆಸ್ಟೀಜ್ ಗ್ರೂಪ್‌ನ ಜೆಎಂಟಿ ರಿಜ್ವಾನ್ ರಜಾಕ್, ಪ್ರೆಸ್ಟೀಜ್ ಹಾಸ್ಪಿಟಾಲಿಟಿ ವೆಂಚರ್ಸ್ ಜೆಎಂಡಿ ಒಮರ್ ಬಿನ್ ಜಂಗ್ ಉಪಸ್ಥಿತರಿದ್ದರು.

ಪ್ರೆಸ್ಟಿಜ್ ಗ್ರೂಪ್, ಬೆಂಗಳೂರು ಏರ್‌ಪೋರ್ಟ್ ಸಿಟಿ ಲಿಮಿಟೆಡ್ ಸಹಭಾಗಿತ್ವದಲ್ಲಿ ಬೆಂಗಳೂರು ಏರ್‌ಪೋರ್ಟ್ ಸಿಟಿಯಲ್ಲಿ ನಿರ್ಮಾಣಗೊಳ್ಳಲಿರುವ ಸಮಗ್ರ ವಾಣಿಜ್ಯ, ಸಂಸ್ಕೃತಿ, ಆತಿಥ್ಯ, ಮನರಂಜನೆ ಮತ್ತು ಆರ್ಥಿಕ ಚಟುವಟಿಕೆಗಳ ತಾಣದ ಬಗ್ಗೆ ಇರ್ಫಾನ್ ರಜಾಕ್ ಮಾಹಿತಿ ನೀಡಿದರು. ಹರಿ ಮರಾರ್ ಉಪಸ್ಥಿತರಿದ್ದರು

ದೂರದೃಷ್ಟಿಯ ಯೋಜನೆ

ಏರ್‌ಪೋರ್ಟ್ ಸಿಟಿಯಲ್ಲಿ ಪ್ರಸ್ತುತ ಸುಮಾರು 110 ಎಕರೆ ಪ್ರದೇಶವನ್ನು ಈಗಾಗಲೇ ಅಭಿವೃದ್ಧಿಪಡಿಸಲಾಗಿದೆ. ಏರ್ ಇಂಡಿಯಾ ಮತ್ತು ಇಂಡಿಗೋ ಸಂಸ್ಥೆಗಳು ಅಭಿವೃದ್ಧಿಪಡಿಸುತ್ತಿರುವ ಮೇಂಟೆನೆನ್ಸ್, ರಿಪೇರಿ ಮತ್ತು ಮತ್ತಿತರ ಸೌಲಭ್ಯಗಳು, 20 ಲಕ್ಷ ಚದರ ಅಡಿಯ ಕಚೇರಿ ಉದ್ಯಾನ, ಸಂಗೀತ ಕಛೇರಿಗಳ ಅರೆನಾ, ಹೋಟೆಲ್‌ಗಳು ಮತ್ತು ಯೋಜಿತ ವೈದ್ಯಕೀಯ ವಲಯಗಳು ಇದರಲ್ಲಿ ಸೇರಿವೆ ಎಂದು ಅವರು ವಿವರಿಸಿದರು. ಈ ಯೋಜನೆಯು ನಗರದ ಬೆಳವಣಿಗೆಗೆ ಕೊಡುಗೆ ನೀಡುವ ಪ್ರೆಸ್ಟಿಜ್ ಸಂಸ್ಥೆಯ ದೂರದೃಷ್ಟಿಗೆ ಅನುಗುಣವಾಗಿದೆ ಎಂದು ಇರ್ಫಾನ್ ರಜಾಕ್ ತಿಳಿಸಿದರು.

'ರೈತರಿಗೆ ಚಿತ್ರನಮನ' ಕಲಾ ಶಿಬಿರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಲಲಿತಕಲಾ ಅಕಾಡೆಮಿಯು ಇದೇ 16ರಿಂದ 20ರವರೆಗೆ ಮಂಡ್ಯದ ಮೇಲುಕೋಟೆಯಲ್ಲಿರುವ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ 'ರೈತರಿಗೆ ಚಿತ್ರನಮನ' ಶೀರ್ಷಿಕೆಯಡಿ ಕಲಾ ಶಿಬಿರ ಹಮ್ಮಿಕೊಂಡಿದೆ.

ಸಾಹಿತಿ ದೇವನೂರು ಮಹಾದೇವ ಅವರು ಈ ಶಿಬಿರವನ್ನು ಉದ್ಘಾಟಿಸಲಿದ್ದಾರೆ. ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರು ಅಧ್ಯಕ್ಷತೆ ವಹಿಸುತ್ತಾರೆ. ರೈತರ ಬದುಕು ಬವಣೆಯ ಜತೆಗೆ, ರೈತ ಚಳವಳಿಗಳು ನಡೆದು ಬಂದ ಹಾದಿಯನ್ನು ಅವಲೋಕಿಸುವ ಚಿತ್ರ ದಾಖಲೆ ಇದಾಗಿದೆ ಎಂದು ಅಕಾಡೆಮಿ ರಿಜಿಸ್ಟ್ರಾರ್ ಎನ್. ನಮ್ರತ ತಿಳಿಸಿದ್ದಾರೆ.

ಎಸ್‌ಸಿ, ಎಸ್‌ಟಿ ಪ್ರವೇಶಕ್ಕೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿಕ್ಷಣ ಹಕ್ಕು ಕಾಯ್ದೆ ಅಡಿ (ಆರ್‌ಟಿಇ) 2025-26ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಎಂಟನೇ ತರಗತಿಯಲ್ಲಿ ತೇರ್ಗಡೆಯಾದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ 9 ಮತ್ತು 10ನೇ ತರಗತಿಗೂ ಅದೇ ಶಾಲೆಯಲ್ಲಿ ವಿದ್ಯಾಭ್ಯಾಸ ಮುಂದುವರೆಸಲು ಅನುಮತಿ ನೀಡಿ ಶಿಕ್ಷಣ ಇಲಾಖೆ ಹೊರಡಿಸಿದ್ದ ಸುತ್ತೋಲೆಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಸರ್ಕಾರದ ಸುತ್ತೋಲೆಯನ್ನು ಪ್ರಶ್ನಿಸಿ, 'ಕರ್ನಾಟಕದಲ್ಲಿನ ಸರ್ಕಾರದ ಮಾನ್ಯತೆ ಪಡೆದ ಇಂಗ್ಲಿಷ್ ಮಾಧ್ಯಮ ಶಾಲೆಗಳ ಆಡಳಿತ ಮಂಡಳಿ ಒಕ್ಕೂಟ' (ಕೆಎಎಂಎಸ್) ಸೇರಿದಂತೆ ಐದು ವಿದ್ಯಾ ಸಂಸ್ಥೆಗಳು ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಅಶೋಕ್ ಎಸ್.ಕಿಣಗಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ಕೆಲ ಕಾಲ ವಿಚಾರಣೆ ಆಲಿಸಿದ ನ್ಯಾಯಪೀಠ, 'ಅರ್ಜಿಯಲ್ಲಿ ಪ್ರಸ್ತಾಪಿಸಲಾಗಿರುವ ವಿಷಯ ಪರಿಶೀಲನೆಗೆ ಒಳಪಡಬೇಕಾದ ಅವಶ್ಯ ಇದೆ. ಹೀಗಾಗಿ, ಅರ್ಜಿ ವಿಲೇವಾರಿ ತನಕ ರಾಜ್ಯ ಸರ್ಕಾರ ಹೊರಡಿಸಿರುವ ಸುತ್ತೋಲೆಯ ಜಾರಿಗೆ ತಡೆ ನೀಡಬೇಕೆಂಬ ಅರ್ಜಿದಾರರ ಮಧ್ಯಂತರ ಮನವಿಯನ್ನು ಪರಿಗಣಿಸಲಾಗುತ್ತಿದೆ' ಎಂಬ ಅಭಿಪ್ರಾಯ ವ್ಯಕ್ತಪಡಿಸಿ ಮುಂದಿನ ವಿಚಾರಣೆವರೆಗೆ ತಡೆ ನೀಡಿ ಆದೇಶಿಸಿತು.

ಅಂತೆಯೇ, ಪ್ರತಿವಾದಿಗಳಾದ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಶಾಲಾ ಶಿಕ್ಷಣ ಇಲಾಖೆ ಆಯುಕ್ತರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಜುಲೈ 3ಕ್ಕೆ ಮುಂದೂಡಿತು.

ಆಕ್ಷೇಪ: 'ಸಾರ್ವಜನಿಕ ಶಿಕ್ಷಣ ಇಲಾಖೆ 2026ರ ಮೇ 21ರಂದು ಹೊರಡಿಸಿರುವ ಸುತ್ತೋಲೆಯ ಪ್ರಕಾರ 2025-26ನೇ ಶೈಕ್ಷಣಿಕ ವರ್ಷದಲ್ಲಿ 8 ನೇ ತರಗತಿ ಪೂರ್ಣಗೊಳಿಸಿರುವ ಎಸ್‌ಸಿ ಮತ್ತು ಎಸ್‌ಟಿ ವಿದ್ಯಾರ್ಥಿಗಳು ಆರ್‌ಟಿಇ ಕಾಯ್ದೆಯ ಕಲಂ 12(1)(ಸಿ) ಅಡಿಯಲ್ಲಿ ಅದೇ ಶಾಲೆಯಲ್ಲಿ 9 ನೇ ಮತ್ತು 10ನೇ ತರಗತಿಯ ಕಲಿಕೆಯನ್ನು ಮುಂದುವರೆಸಬಹುದು ಎಂದು ಹೇಳಲಾಗಿದೆ. ಈ ಸುತ್ತೋಲೆ ಶಿಕ್ಷಣ ಹಕ್ಕು ಕಾಯ್ದೆ–2009 ಹಾಗೂ ಕರ್ನಾಟಕ ಶಿಕ್ಷಣ ಹಕ್ಕು ನಿಯಮಗಳು-2012ಕ್ಕೆ ತದ್ವಿರುದ್ಧವಾಗಿದೆ' ಎಂದು ಆಕ್ಷೇಪಿಸಲಾಗಿದೆ.

'ಆರ್‌ಟಿಇ ಕಾಯ್ದೆಯು, 6 ರಿಂದ 14 ವರ್ಷದ ಮಕ್ಕಳಿಗೆ ಮಾತ್ರ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕನ್ನು ನೀಡುತ್ತದೆ. 9 ಮತ್ತು 10ನೇ ತರಗತಿಗೆ ಇದು ಅನ್ವಯಿಸುವುದಿಲ್ಲ. ಸುತ್ತೋಲೆ ಮೂಲಕ ಅದರ ವ್ಯಾಪ್ತಿಯನ್ನು ಅನಧಿಕೃತವಾಗಿ ವಿಸ್ತರಿಸಲಾಗಿದೆ. ಸುತ್ತೋಲೆ ಮೂಲಕ 9 ಮತ್ತು 10ನೇ ತರಗತಿಗೆ ಈ ಸೌಲಭ್ಯ ವಿಸ್ತರಿಸುವ ಅಧಿಕಾರ ಸರ್ಕಾರಕ್ಕೆ ಇಲ್ಲ' ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ.

'ಕೇವಲ ಎಸ್‌ಸಿ ಮತ್ತು ಎಸ್‌ಟಿ ವಿದ್ಯಾರ್ಥಿಗಳಿಗೆ ಮಾತ್ರ ಈ ಸೌಲಭ್ಯವನ್ನು ವಿಸ್ತರಿಸಿರುವುದು ಸಂವಿಧಾನದ 14ನೇ (ಸಮಾನತೆಯ ಹಕ್ಕು) ವಿಧಿಗೆ ವಿರುದ್ಧವಾಗಿದೆ. ಇದು ತಾರತಮ್ಯದ ಕ್ರಮ. ಅಲ್ಲದೆ, ಈ ಆದೇಶವನ್ನು ಮುಖ್ಯಮಂತ್ರಿ ಕಚೇರಿ ಹಾಗೂ ಸಮಾಜ ಕಲ್ಯಾಣ ಇಲಾಖೆಯ ನಿರ್ದೇಶನದ ಮೇರೆಗೆ ಹೊರಡಿಸಲಾಗಿದೆ. ಸಂಬಂಧಿಸಿದ ಅಧಿಕಾರಿಗಳು ಸ್ವತಂತ್ರವಾಗಿ ಈ ಕುರಿತು ಪರಿಶೀಲನೆ ನಡೆಸಿಲ್ಲ. ಆದ್ದರಿಂದ, ಸುತ್ತೋಲೆಯನ್ನು ರದ್ದುಪಡಿಸಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

ಆರ್‌ಟಿಇ

ಎಸ್‌ಐಟಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಧರ್ಮಸ್ಥಳದ ಬುರುಡೆ ಪ್ರಕರಣದ ತನಿಖಾ ವರದಿಯನ್ನು ಬಹಿರಂಗ ಪಡಿಸುವಂತೆ ವಿಶೇಷ ತನಿಖಾ ತಂಡಕ್ಕೆ (ಎಸ್‌ಐಟಿ) ನಿರ್ದೇಶಿಸಬೇಕು ಮತ್ತು ತನಿಖೆಯಲ್ಲಿ ಹೆಸರಿಸಲಾಗಿರುವ ಪಿತೂರಿಗಾರರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಆದೇಶಿಸಬೇಕು' ಎಂದು ಕೋರಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಕುರಿತು ಮಂಡ್ಯ ತಾಲ್ಲೂಕಿನ ಚಿಕ್ಕಬಳ್ಳಿ ಗ್ರಾಮದ ಚಿನ್ನ (50) ಅಲಿಯಾಸ್ ಚಿನ್ನಯ್ಯ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ, 'ಎಸ್‌ಐಟಿ ತನಿಖೆಯ ಸ್ಥಿತಿಗತಿ ಬಗ್ಗೆ ವಿವರ ಒದಗಿಸಿ' ಎಂದು ಸರ್ಕಾರದ ಪರ ವಕೀಲರಿಗೆ ಸೂಚಿಸಿ ವಿಚಾರಣೆಯನ್ನು ಇದೇ 29ಕ್ಕೆ ಮುಂದೂಡಿತು.

'ಬುರುಡೆ' ಪ್ರಕರಣ ತನಿಖೆ

ಪುತ್ತೂರು ಕೃಷ್ಣರಾವ್ ಪ್ರಕರಣ ಸುಶೀಲಾ ಮಧ್ಯಸ್ಥಿಕೆದಾರೆ

ಬೆಂಗಳೂರು: ತರುಣಿಯನ್ನು ಪ್ರೀತಿಸಿ ಮದುವೆಯಾಗುವುದಾಗಿ ನಂಬಿಸಿ ಆಕೆಯ ಮಗುವಿಗೆ ತಂದೆಯಾದ ಕೃಷ್ಣ ಜೆ.ರಾವ್ ವಿರುದ್ಧದ ಅತ್ಯಾಚಾರ ಆರೋಪದ ಪ್ರಕರಣದಲ್ಲಿ ರಾಜಿ ಸಂಧಾನ ಕೇಂದ್ರದ ಮಧ್ಯಸ್ಥಿಕೆದಾರರನ್ನಾಗಿ ಪದಾಂಕಿತ ಹಿರಿಯ ವಕೀಲೆ ಎಸ್.ಸುಶೀಲಾ ಅವರನ್ನು ನೇಮಕ ಮಾಡಲಾಗಿದೆ.

ಕೃಷ್ಣರಾವ್ ಅವರು ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನ ಬಿಜೆಪಿ ಮುಖಂಡ ಪಿ.ಜಿ.ಜಗನ್ನಿವಾಸ ರಾವ್ ಅವರ ಮಗ.

'ನನ್ನ ವಿರುದ್ಧದ ಪ್ರಕರಣ ರದ್ದುಪಡಿಸಬೇಕು' ಎಂದು ಕೋರಿ ಎಂಜಿನಿಯರಿಂಗ್ ವಿದ್ಯಾರ್ಥಿಯಾಗಿರುವ ಕೃಷ್ಣ ಜೆ.ರಾವ್ (22) ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಕೃಷ್ಣ ರಾವ್ ಪರ ಪದಾಂಕಿತ ಹಿರಿಯ ವಕೀಲ ಪಿ.ಪಿ.ಹೆಗ್ಡೆ ಪ್ರಕರಣವನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥಪಡಿಸಿಕೊಳ್ಳುವ ಪ್ರಸ್ತಾವವನ್ನು ನ್ಯಾಯಪೀಠಕ್ಕೆ ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ಪದಾಧಿಕಾರಿಗಳ ಆಯ್ಕೆ

ಬೆಂಗಳೂರು: ನಗರದ ಬೌರಿಂಗ್ ಸಂಸ್ಥೆಯ ಆಡಳಿತ ಮಂಡಳಿಗೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಎಸ್.ಭಾಸ್ಕರ್ ಆಯ್ಕೆಯಾಗಿದ್ದಾರೆ. ಅಶೋಕ್ ಕುಮಾರ್–ಉಪಾಧ್ಯಕ್ಷ, ಎಚ್.ಎಸ್. ಶ್ರೀಕಾಂತ್–ಖಜಾಂಚಿ, ಭರತ್ ಪೂರ್ವಯ್ಯ–ಕಾರ್ಯದರ್ಶಿಯಾಗಿ ಚುನಾಯಿತರಾಗಿದ್ದಾರೆ. ಅರ್ಜುನ್ ಸಂಪತ್ ಕುಮಾರ್, ಬೀನಾ ಆರ್. ಕುಮಾರ್, ಬಿ.ಚಿನ್ನಪ್ಪ ಗೌಡ, ದೇವನಂದನ್ ರಾಮಣ್ಣ, ಎಚ್.ಎಸ್. ಜೋಲಿ, ಅಂಜಿಲಿ ನವನಿ, ಮನೀಷ್ ಪಿ.ಶೆಟ್ಟಿ, ಎಂ.ರಾಮಮೂರ್ತಿ ಮತ್ತು ವಿ.ಲಕ್ಷ್ಮಿಕಾಂತ ಸದಸ್ಯರಾಗಿ ಆಯ್ಕೆಯಾಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಎಸ್.ಭಾಸ್ಕರ್

ನಾಳೆ ತೋಟಗಾರಿಕೆ ಸಂತೆ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಜಿಕೆವಿಕೆ ಆವರಣದಲ್ಲಿರುವ ಪ್ರಾದೇಶಿಕ ತೋಟಗಾರಿಕೆ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದಲ್ಲಿ ಜೂನ್ 13ರಂದು ಬೆಳಿಗ್ಗೆ 7ರಿಂದ ಮಧ್ಯಾಹ್ನ 2ರವರೆಗೆ 'ತೋಟಗಾರಿಕೆ ಸಂತೆ' ನಡೆಯಲಿದೆ. ಸುತ್ತಮುತ್ತಲ ಜಿಲ್ಲೆಗಳ ರೈತರು ತರಕಾರಿ, ಹೂವು, ಸಾಂಬಾರ ಪದಾರ್ಥಗಳು ಹಾಗೂ ಮೌಲ್ಯವರ್ಧಿತ ಉತ್ಪನ್ನಗಳನ್ನು ಗ್ರಾಹಕರಿಗೆ ನೇರವಾಗಿ ಮಾರಾಟ ಮಾಡಬಹುದು ಎಂದು ಕೇಂದ್ರದ ನಿರ್ದೇಶಕ ಎಸ್.ಎಲ್.ಜಗದೀಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಿಯು: ದಾಖಲಾತಿ ಶುರು

ಬೆಂಗಳೂರು: ನಗರದ ವಿ.ವಿ ಪುರ ಕಲೆ ಮತ್ತು ವಾಣಿಜ್ಯ ಸಂಜೆ ಪದವಿ ಪೂರ್ವ ಕಾಲೇಜಿನಲ್ಲಿ ಪ್ರಥಮ ಮತ್ತು ದ್ವಿತೀಯ ಪಿಯು ತರಗತಿಗಳಿಗೆ ಪ್ರವೇಶಾತಿ ಆರಂಭವಾಗಿದೆ.

ನಿತ್ಯ ಸಂಜೆ 5.30ರಿಂದ ರಾತ್ರಿ 9ರವರೆಗೆ ತರಗತಿಗಳು ನಡೆಯಲಿವೆ. ಮಾಹಿತಿಗೆ ದೂ.080 26601412, ಮೊ.94485 12348, 95133 50554 ಸಂಪರ್ಕಿಸಬಹುದು ಎಂದು ಕಾಲೇಜಿನ ಪ್ರಕಟಣೆ ತಿಳಿಸಿದೆ.

ಧರ್ಮಸ್ಥಳಕ್ಕೆ ಗೆಳೆಯರೊಂದಿಗೆ ಬಂದ ಯುವಕನಿಗೆ ಮರುಕಳಿಸಿದ ಬಾಲ್ಯದ ನೆನಪು

26 ವರ್ಷ ನಂತರ ಒಂದಾದ ತಾಯಿ– ಮಗ

ಪ್ರಜಾವಾಣಿ ವಾರ್ತೆ

ಬೆಳ್ತಂಗಡಿ: ತನ್ನ ಮಗ ಎಂದಾದರೂ ಮನೆಗೆ ಬರಬಹುದೆಂದು ಚಾತಕ ಪಕ್ಷಿಯಂತೆ ಕಾಯುತ್ತಿದ್ದ ತಾಯಿಯ ನಿರೀಕ್ಷೆ ಹುಸಿಯಾಗಲಿಲ್ಲ. 26 ವರ್ಷಗಳ ಹಿಂದೆ ಮನೆ ಬಿಟ್ಟು ಹೋಗಿದ್ದ ಮಗ ಮನೆಗೆ ಬಂದಿದ್ದು, ಹೆತ್ತ ಕರುಳಿನ ಸಂತಸ ಮುಗಿಲು ಮುಟ್ಟಿದೆ.

ಘಟನೆ ವಿವರ: ಬೆಳ್ತಂಗಡಿ ತಾಲ್ಲೂಕಿನ ಧರ್ಮಸ್ಥಳ ಅಶೋಕ ನಗರದ ಶಿವಪಾರ್ವತಿ ನಿಲಯದ ಕುಂಞ ಮತ್ತು ಅಕ್ಕು ದಂಪತಿ ಹಿರಿಯ ಪುತ್ರ ಸತೀಶ್, ಸರ್ಕಸ್ ಗೀಳು ಬೆಳೆಸಿಕೊಂಡು 12ನೇ ವಯಸ್ಸಿನಲ್ಲಿ ಸರ್ಕಸ್ ಕಂಪನಿ ಜೊತೆಗೆ ತೆರಳಿದ್ದ. 2000ನೇ ಇಸವಿಯಲ್ಲಿ ನಾಪತ್ತೆಯಾಗಿದ್ದ ಆತ ಎಂದಾದರೂ ಮನೆಗೆ ಬರಬಹುದೆಂದು ತಾಯಿ ಅಕ್ಕು ನಿರೀಕ್ಷೆ ಇಟ್ಟುಕೊಂಡಿದ್ದರು.

ಜೂನ್ 9ರಂದು ಸತೀಶ್ (ಸಲೀಂ) ತನ್ನ ಸ್ನೇಹಿತರೊಂದಿಗೆ ಪ್ರವಾಸಕ್ಕಾಗಿ ಧರ್ಮಸ್ಥಳಕ್ಕೆ ಬಂದಿದ್ದರು. ಹಿಂದೆ ಸರ್ಕಸ್ ನಡೆದಿದ್ದ ಜಾಗಕ್ಕೆ ಬಂದಾಗ ಅವರಿಗೆ ಹಳೆಯ ನೆನಪುಗಳು ಮರುಕಳಿಸಿವೆ. ಸ್ಥಳೀಯ ಅಂಗಡಿಯವರ ಬಳಿ ತಮ್ಮಂದಿರ ಹೆಸರನ್ನು ವಿಚಾರಿಸಿ, ಹುಟ್ಟಿದ ಮನೆ ತಲುಪಿದ್ದಾರೆ. ಮನೆಯ ಬಾಗಿಲಿಗೆ ಬಂದು ನಿಂತ ಹಿರಿಯ ಮಗನನ್ನು ಕಂಡು ತಾಯಿಯ ಕಣ್ಣಲ್ಲಿ ಆನಂದಭಾಷ್ಪ ಹರಿದಿದೆ. ಮನೆಯವರೆಲ್ಲರೂ ಸೇರಿ ಪ್ರೀತಿಯಿಂದ ಬರಮಾಡಿಕೊಂಡಿದ್ದಾರೆ.

ಸರ್ಕಸ್ ಕಂಪನಿ ಜೊತೆಗೆ ಹೋಗಿದ್ದ ಸತೀಶ್, ದೇಶದ ವಿವಿಧೆಡೆ ಸುತ್ತಾಡಿ, ನಂತರ ಮಹಾರಾಷ್ಟ್ರದಲ್ಲಿ ನೆಲೆ ಕಂಡಿದ್ದರು. ಅಲ್ಲಿ ಇಸ್ಲಾಂಗೆ ಮತಾಂತರಗೊಂಡು ಹೆಸರನ್ನು 'ಸಲೀಂ ಅಬ್ದುಲ್ ಅನ್ಸಾರಿ' ಎಂದು ಬದಲಾಯಿಸಿಕೊಂಡಿದ್ದಾರೆ. ಅಲ್ಲಿಯ ಯುವತಿ ತಾಲೀಮಾ ಎಂಬುವವರನ್ನು ಮದುವೆಯಾಗಿದ್ದು, ಅವರಿಗೆ ಇಬ್ಬರು ಮಕ್ಕಳಿದ್ದಾರೆ. ಕನ್ನಡ ಹಾಗೂ ಮಾತೃಭಾಷೆ ತುಳುವನ್ನು ಮರೆತಿರುವ ಅವರು, ಹಿಂದಿಯಲ್ಲಿ ಮಾತನಾಡುತ್ತಾರೆ ಎಂದು ಸ್ಥಳೀಯರು ಮಾಹಿತಿ ನೀಡಿದ್ದಾರೆ.

'ಹುಟ್ಟೂರು ತ್ಯಜಿಸಿದ್ದರೂ, ಕುಟುಂಬದವರ ಮುಖ, ಒಡನಾಟ ನೆನಪಿತ್ತು. ಧರ್ಮಸ್ಥಳಕ್ಕೆ ಬಂದಾಗ ಬಾಲ್ಯದ ದಿನಗಳು ನೆನಪಾಗಿ ಸ್ಥಳೀಯ ಅಂಗಡಿಯಲ್ಲಿ ವಿಚಾರಿಸಿದೆ. ಕುಟುಂಬದವರು ಮತ್ತೆ ಸಿಕ್ಕಿರುವುದು ಖುಷಿ ತಂದಿದೆ. ಆಗಾಗ ಬಂದು ಹೋಗುತ್ತೇನೆ ಮತ್ತು ನನ್ನ ಕುಟುಂಬದವರನ್ನು ಕರೆತರುತ್ತೇನೆ' ಎಂದು ಸಲೀಂ ಹೇಳಿದ್ದಾರೆ.

ಮನೆಗೆ ಬಂದ ಮಗನೊಂದಿಗೆ ತಾಯಿ

'ದೈವಸ್ಥಾನಕ್ಕೆ ಹರಕೆ ಹೊತ್ತಿದ್ದೆ'

'ಹಿರಿಯ ಮಗ ಎಂದಾದರೂ ಮನೆಗೆ ಬರಲಿ ಎಂದು ಧರ್ಮಸ್ಥಳ, ಕಟೀಲು ದುರ್ಗಾಪರಮೇಶ್ವರಿ ದೇವಸ್ಥಾನಗಳಿಗೆ, ಪಣೋಲಿಬೈಲ್ ದೈವಸ್ಥಾನಕ್ಕೆ ಹರಕೆ ಹೊತ್ತಿದ್ದೆ. ಸಾಯುವ ಮುನ್ನ ಒಮ್ಮೆಯಾದರೂ ಮಗನನ್ನು ನೋಡಬೇಕು ಎಂಬ ಆಸೆಯಿತ್ತು' ಎಂದು ತಾಯಿ ಅಕ್ಕು ಪ್ರತಿಕ್ರಿಯಿಸಿದ್ದಾರೆ.

ಇಂದು ಐದು ಸಿನಿಮಾಗಳು ತೆರೆಗೆ

ಸಾರಿಕಾ ರಾವ್

ಮೃತ್ಯು ದೇವತೆ

ವಂಚಕರ ಜಾಲದಲ್ಲಿ ಸಿಲುಕಿಕೊಳ್ಳುವ ಹೆಣ್ಣುಮಕ್ಕಳ ಕುರಿತಾದ ಕಥೆಯನ್ನು ಹೊಂದಿರುವ ಸಿನಿಮಾವಿದು. ಚಿತ್ರಕ್ಕೆ ನವೀನ್ ಮಹದೇವ್ ನಿರ್ದೇಶನವಿದೆ. 'ಈಗಿನ ಸಮಾಜದಲ್ಲಿ ಮಹಿಳೆಯರು ವಂಚಕರ ಜಾಲದಲ್ಲಿ ಹೇಗೆ ಸಿಲುಕಿಕೊಳ್ಳುತ್ತಿದ್ದಾರೆ? ನಂತರ ಅದರಿಂದ ಹೊರಬರಲು ಹೇಗೆ ಪ್ರಯತ್ನಿಸುತ್ತಾರೆ ಎಂಬುದೇ ಕಥೆ. ಅಂಥವರಿಗೆ ಶಿಕ್ಷಿಸಲು ಯಾವೆಲ್ಲ ಅವತಾರ ತಾಳುತ್ತಾರೆ ಎಂಬುದನ್ನು ಹೇಳಿದ್ದೇವೆ' ಎಂದಿದ್ದಾರೆ ನಿರ್ದೇಶಕ. ವಿನಯಾ ಪ್ರಕಾಶ್, ಹಿಮಶ್ರೀ, ಮಾಹೀನ್ ಪ್ರಮುಖ ಪಾತ್ರಗಳಲ್ಲಿದ್ದಾರೆ. ನಿರ್ದೇಶಕರೇ ನಾಯಕನಾಗಿ ಕಾಣಿಸಿಕೊಂಡಿದ್ದಾರೆ. ಪವನ್ ಶೆಟ್ಟಿ, ಸೂರ್ಯ ಮುಂತಾದವರು ಚಿತ್ರದಲ್ಲಿದ್ದಾರೆ. ಅನಿರುದ್ಧ ಛಾಯಾಚಿತ್ರಗ್ರಹಣ, ಶಿವಪ್ರಸಾದ್ ಸಂಗೀತ ನಿರ್ದೇಶನ, ಮಂಜು ವಿಕ್ರಂ ಸಂಕಲನ ಚಿತ್ರಕ್ಕಿದೆ.

ಮದ್ದಾನೆ

ಕೆ.ರಾಜ್ ಶರಣ್ ನಿರ್ದೇಶನದ ಚಿತ್ರವಿದು. ಎಲ್.ಎಂ.ಫಿಲ್ಮ್ಸ್ ಮೂಲಕ ಲತಾಮೂರ್ತಿ ಬಂಡವಾಳ ಹೂಡಿರುವ ಚಿತ್ರದಲ್ಲಿ ಆರ್ಯ ನಾಯಕನಾಗಿ ನಟಿಸಿದ್ದಾರೆ. 'ಮದ್ದಾನೆ' ಎಂದರೆ ಕೋಪಗೊಂಡ ಆನೆ. ಅದರ ಬಳಿ ಯಾರೂ ಹೋಗಲು ಸಾಧ್ಯವಿಲ್ಲ. ಆನೆ ರೀತಿಯ ವ್ಯಕ್ತಿ ಹೇಗೆ ಮದ್ದಾನೆಯಾಗಿ ಪರಿವರ್ತನೆಯಾಗುತ್ತಾನೆ ಎಂಬುದನ್ನು ಈ ಚಿತ್ರದಲ್ಲಿ ಹೇಳಿದ್ದೇವೆ. ನಾಯಕನಿಗೆ ಎರಡು ಶೇಡ್‌ಗಳಿವೆ' ಎಂದಿದ್ದಾರೆ ನಿರ್ದೇಶಕ. ಪ್ರಸನ್ನ ಭೋಜಶೆಟ್ಟರ್ ಸಂಗೀತ, ನಾಗಭೂಷಣ್ ಪೂಜಾರ್ ಛಾಯಾಚಿತ್ರಗ್ರಹಣವಿದೆ. ರಾಣಿ, ಶ್ರೀನಿವಾಸಮೂರ್ತಿ, ಲತಾಮೂರ್ತಿ ಮುಂತಾದವರು ಚಿತ್ರದಲ್ಲಿದ್ದಾರೆ.

ಕ್ಷಮೆ ಇರಲಿ ತಂದೆ

'ಸೂರ್ಯವಂಶ' ಚಿತ್ರದ ಹಾಸ್ಯ ನಟ ಮೂಗ್ ಸುರೇಶ್ ನಿರ್ಮಿಸಿ, ನಿರ್ದೇಶಿಸಿರುವ ಚಿತ್ರವಿದು. ಜತೆಗೆ 'ಅಭ್ಯಂಜನ', 'ಉತ್ತರ' ಸಿನಿಮಾಗಳು ಈ ವಾರ ತೆರೆ ಕಾಣುತ್ತಿವೆ.

ಬಲರಾಮನ ದಿನಗಳು ಮತ್ತೊಂದು ಅಧ್ಯಾಯ

• ಅಭಿಲಾಷ್ ಪಿ.ಎಸ್.

ಕನ್ನಡ ಚಿತ್ರರಂಗದಲ್ಲಿ 'ಆ ದಿನಗಳು' ಕಲ್ಟ್ ಕ್ಲಾಸಿಕ್ ಸಿನಿಮಾವಾಗಿ ಗುರುತಿಸಿಕೊಂಡಿದೆ. ಇದರ ನಿರ್ದೇಶಕರಾದ ಕೆ.ಎಂ.ಚೈತನ್ಯ ಇದೀಗ ಮತ್ತೊಂದು ಭೂಗತಲೋಕದ ಕಥೆಯೊಂದಿಗೆ ಬಂದಿದ್ದಾರೆ. ವಿನೋದ್ ಪ್ರಭಾಕರ್ ಮುಖ್ಯಭೂಮಿಕೆಯಲ್ಲಿರುವ 'ಬಲರಾಮನ ದಿನಗಳು' ಚಿತ್ರ ಜೂನ್ 26ರಂದು ತೆರೆಕಾಣಲಿದೆ. 80ರ ದಶಕದ ಭೂಗತ ಲೋಕದ ಕಥೆ ಹೊಂದಿರುವ ಈ ಚಿತ್ರ ಕುರಿತು ಕೆ.ಎಂ ಚೈತನ್ಯ ಮಾತಿಗೆ ಸಿಕ್ಕಾಗ...

'ಈ ಸಿನಿಮಾ 'ಆ ದಿನಗಳು' ಸಿನಿಮಾದ ಮುಂದುವರಿದ ಭಾಗವಲ್ಲ. ಬದಲಾಗಿ ಮತ್ತೊಂದು ಅಧ್ಯಾಯ. 'ಆ ದಿನಗಳು' ಅಗ್ನಿ ಶ್ರೀಧರ್ ಅವರಿಗೆ ಸಂಬಂಧಪಟ್ಟದ್ದು. 'ಬಲರಾಮನ ದಿನಗಳು' ಆ ದಿನಗಳ ಕಥೆ ಅಷ್ಟೇ. 'ಆ ದಿನಗಳು' ಸಿನಿಮಾದ ಕಥೆ 1986ರಲ್ಲಿ ಕೊನೆಗೊಳ್ಳುತ್ತದೆ. 'ಬಲರಾಮನ ದಿನಗಳು' ಸಿನಿಮಾದ ಕಥೆ 1985ರಲ್ಲಿ ಪ್ರಾರಂಭವಾಗಿ 1995ರಲ್ಲಿ ಕೊನೆಗೊಳ್ಳುತ್ತದೆ. ಆ ಕಾರಣದಿಂದಾಗಿ 'ಆ ದಿನಗಳ ಮತ್ತೊಂದು ಅಧ್ಯಾಯ' ಎಂದೇ ನಾವು ಈ ಸಿನಿಮಾವನ್ನು ಕರೆದಿದ್ದೇವೆ. 'ಆ ದಿನಗಳು' ಸಿನಿಮಾದ ಜಗತ್ತೇ ಇಲ್ಲೂ ಮುಂದುವರಿದಿದ್ದು, ಕೆಲ ಪಾತ್ರಗಳು ಸೇರಿಕೊಂಡಿವೆ' ಎನ್ನುತ್ತಾ ಮಾತು ಪ್ರಾರಂಭಿಸಿದರು.

'ಈ ನಡುವೆ ಏಕೆ ಅಂಡರ್‌ವರ್ಲ್ಡ್ ಸಿನಿಮಾ ಮಾಡಿಲ್ಲ?' ಎಂಬ ಪ್ರಶ್ನೆಗೆ ಉತ್ತರಿಸುತ್ತಾ, 'ಆ ದಿನಗಳು' ಸಿನಿಮಾ ಮಾಡಿದ ಬಳಿಕ ಅದೇ ಜಾನರ್‌ನ ಸಿನಿಮಾವನ್ನು ಯಾವಾಗ ಮಾಡುತ್ತೀರಿ ಎಂದು ಹಲವರು ಕೇಳುತ್ತಿದ್ದರು. ತಕ್ಷಣದಲ್ಲೇ ಅಂತಹ ಸಿನಿಮಾ ಮಾಡಿದರೆ 'ಆ ದಿನಗಳು' ಸಿನಿಮಾಗೆ ಹೋಲಿಸಿ ನೋಡುತ್ತಾರೆ ಎನ್ನುವ ಆತಂಕವಿತ್ತು. ಹೀಗಾಗಿ ಅದಾದ ಬಳಿಕ ಭೂಗತಲೋಕದ, ರೌಡಿಸಂ ಕಥೆಯುಳ್ಳ ಸಿನಿಮಾಗಳನ್ನು ಮಾಡಿಲ್ಲ. ಬೇರೆ ಬೇರೆ ಜಾನರ್‌ಗಳ ಸಿನಿಮಾಗಳನ್ನು ಮಾಡುವ ಆಸಕ್ತಿ ನನಗಿತ್ತು. ಕಾಮಿಡಿ, ಥ್ರಿಲ್ಲರ್, ಹಾರರ್ ಜಾನರ್‌ಗಳ ಸಿನಿಮಾ, 'ಅಮ್ಮ ಐ ಲವ್ ಯು' ಎನ್ನುವ ಫ್ಯಾಮಿಲಿ ಡ್ರಾಮಾ ಸಿನಿಮಾ ಮಾಡಿದೆ. 'ಆ ದಿನಗಳು' ರೀತಿಯಲ್ಲಿ ಸಿನಿಮಾ ಮಾಡದೆ ಬೇರೆ ಮಾದರಿಯಲ್ಲಿ ಇದೇ ಜಾನರ್‌ನ ಸಿನಿಮಾವನ್ನು ಪ್ರಸ್ತುತಪಡಿಸಬಹುದು ಎನ್ನುವ ಭರವಸೆ 19 ವರ್ಷಗಳ ಬಳಿಕ ಮೂಡಿತು. ಹೀಗಾಗಿ 'ಬಲರಾಮನ ದಿನಗಳು' ಕೈಗೆತ್ತಿಕೊಂಡೆ' ಎಂದರು ಚೈತನ್ಯ.

'ಎಲ್ಲರೂ ಇಷ್ಟಪಟ್ಟ 'ಆ ದಿನಗಳು' ಸಿನಿಮಾದ ಹೊರೆ ಇದ್ದೇ ಇರುತ್ತದೆ. ಅದನ್ನೊಂದು ಸಿಹಿಯಾದ ಹೊರೆಯನ್ನಾಗಿ ನಾನು ನೋಡಿದ್ದೇನೆ, ಸ್ವೀಕರಿಸಿದ್ದೇನೆ. ನನ್ನ ಸಿನಿಮಾದ ಜೊತೆಯೇ ನಾನು ಸ್ಪರ್ಧಿಸುವುದು ಖುಷಿಯ ವಿಚಾರವೇ' ಎನ್ನುತ್ತಾ ಕಥೆ ಹುಟ್ಟಿದ ಸಂದರ್ಭದತ್ತ ಮಾತು ಹೊರಳಿಸಿದರು.

'ಕೋವಿಡ್ ಲಾಕ್‌ಡೌನ್ ಸಂದರ್ಭದಲ್ಲಿ ಭೂಗತ ಜಗತ್ತಿನ ಕುರಿತ ಹಲವು ಪುಸ್ತಕಗಳನ್ನು ಓದುತ್ತಿದ್ದೆ. ಬೆಂಗಳೂರು ಮಾತ್ರವಲ್ಲದೆ ಮುಂಬೈ, ಕೋಲ್ಕತ್ತದಲ್ಲಿನ ಭೂಗತ ಜಗತ್ತಿನ ಬಗ್ಗೆಯೂ ತಿಳಿದುಕೊಂಡೆ. ಆ ಸಂದರ್ಭದಲ್ಲೇ ಒಂದು ಸಣ್ಣ ಎಳೆ ಹೊಳೆದಿತ್ತು. ಇದನ್ನು ವೆಬ್ ಸರಣಿ ಮಾಡುವುದೋ, ಸಿನಿಮಾ ಮಾಡುವುದೋ ಎನ್ನುವುದನ್ನು ಆಗ ನಿರ್ಧರಿಸಿರಲಿಲ್ಲ. 2023ರಲ್ಲಿ ನಿರ್ಮಾಪಕರಾದ ಶ್ರೇಯಸ್ ಅವರು ವಿನೋದ್ ಪ್ರಭಾಕರ್ ಅವರನ್ನಿಟ್ಟುಕೊಂಡು ಸಿನಿಮಾ ಮಾಡಲು ಮುಂದಾದರು. 'ಆ ದಿನಗಳು' ರೀತಿಯ ಸಿನಿಮಾ ಮಾಡುವ ಇಚ್ಛೆ ಅವರದ್ದಾಗಿತ್ತು. 'ಬಲರಾಮ'ನನ್ನು ಕೇಂದ್ರವಾಗಿಟ್ಟುಕೊಂಡು ಸಿನಿಮಾದ ಕಥೆ ಹೆಣೆದೆ. ಇದಕ್ಕಾಗಿ ಆಗಿನ ಅವಧಿಯಲ್ಲಿದ್ದ ಪೊಲೀಸ್ ಅಧಿಕಾರಿಗಳನ್ನು, ಸಂತ್ರಸ್ತರನ್ನು, ಕ್ರೈಂ ವರದಿಗಾರರನ್ನು ಸಂಪರ್ಕಿಸಿ ಹೆಚ್ಚಿನ ಸಂಶೋಧನೆ ಮಾಡಿದೆ. ಕಥೆಯೊಂದಿಗೆ ಸುಮಾರು ನಾಲ್ಕೈದು ವರ್ಷಗಳ ಪಯಣ ಮಾಡಿದ್ದೇನೆ' ಎನ್ನುತ್ತಾರೆ ಚೈತನ್ಯ.

'ಅದು ಯಾವುದೇ ಜಾನರ್ ಆಗಿರಲಿ, ಒಳ್ಳೆಯ ಸಿನಿಮಾ ಮಾಡುವುದು ನಮ್ಮ ಗುರಿಯಾಗಬೇಕು. 'ಆ ದಿನಗಳು' ಸಿನಿಮಾದಂತೆಯೇ 'ಬಲರಾಮನ ದಿನಗಳು' ಕೇವಲ ರೌಡಿಸಂ ಸಿನಿಮಾವಲ್ಲ. 'ಬಲರಾಮ'ನ ಮೂಲಕ 1985 ರಿಂದ 95ರ ನಡುವಿನ ಬೆಂಗಳೂರನ್ನು ನೋಡುವಂಥ ಸಿನಿಮಾ. ಆಗಿನ ರಾಜಕಾರಣ, ಆರ್ಥಿಕ ಸ್ಥಿತಿ ಎಲ್ಲವೂ ಇಲ್ಲಿ ಅನಾವರಣಗೊಳ್ಳಲಿದೆ. ನಮ್ಮ ಸಿನಿಮಾದಲ್ಲಿ ನಟರ ಒಂದು ದಂಡೇ ಇದೆ. ಚಿತ್ರದ ಕಥೆಯೇ ವಿಧ ವಿಧವಾದ ಪಾತ್ರಗಳನ್ನು ಕೇಳಿತು. ಅತುಲ್ ಕುಲಕರ್ಣಿ, ಆಶಿಶ್ ವಿದ್ಯಾರ್ಥಿ, ವಿನಯ್ ಗೌಡ, ರಮೇಶ್ ಇಂದಿರಾ, ಆದಿತ್ಯ ಅಶ್ರೀ, ಪ್ರಿಯಾ ಆನಂದ್ ಅವರಂಥ ನಟರನ್ನು ಕಥೆಯೇ ಪಡೆದುಕೊಂಡಿತು. ನಿರ್ಮಾಪಕರು ಬೆಂಬಲವಾಗಿ ನಿಂತರು' ಎಂದರು.

ಪ್ರಿಯಾ
ವಿನೋದ್ ಪ್ರಭಾಕರ್

ಬಗೆಬಗೆಯ ಹಾಡುಗಳು

'ನಮ್ಮ ಸಿನಿಮಾದಲ್ಲಿ 'ಶುರು ಶುರು' ಎನ್ನುವಂಥ ಜಯಂತ ಕಾಯ್ಕಿಣಿ ಅವರು ಬರೆದ ಇಂಪಾದ ಒಂದು ಪ್ರೇಮಗೀತೆ, 'ಟಾಟಾ ಟಾಟಾ' ಎನ್ನುವಂಥ ಡಾನ್ಸ್ ನಂಬರ್, ವಂದಿತಾ ಗೌಡ ಅವರು ಹೆಜ್ಜೆ ಹಾಕಿರುವ ಐಟಂ ಡಾನ್ಸ್ ಕೂಡಾ ಇದೆ. ರಘು ದೀಕ್ಷಿತ್ ಅವರು ಬೆಂಗಳೂರಿನ ಕುರಿತಾಗಿ ಹಾಡಿರುವ ಒಂದು ಹಾಡು, ಆಲ್ ಒಕೆ ಅವರ ರ್‍ಯಾಪ್ ಹಾಡೊಂದು ಸಿನಿಮಾದಲ್ಲಿದೆ. ವಿಜಯ್ ಪ್ರಕಾಶ್ ಅವರು ಒಂದು ಕ್ಲಾಸಿಕಲ್ ಹಾಡಿಗೆ ದನಿಯಾಗಿದ್ದಾರೆ. ಹೀಗೆ ಒಂದು ಸಿನಿಮಾದಲ್ಲೇ ಬಗೆಬಗೆಯ ಹಾಡುಗಳು ಇವೆ. ಎಲ್ಲವುದಕ್ಕೂ ರೆಟ್ರೋ ಸ್ಪರ್ಶವನ್ನು ನಾವು ನೀಡಿದ್ದೇವೆ. ಸಂತೋಷ್ ನಾರಾಯಣ್ ಅವರಂಥ ಸಂಗೀತ ನಿರ್ದೇಶಕರು ಜೊತೆಯಾದಾಗ ಇಂತಹ ಸಾಧ್ಯತೆಗಳು ಹೆಚ್ಚು' ಎಂದರು ಚೈತನ್ಯ.

'ನಾಲ್ಕೈದು ವರ್ಷಗಳಿಂದ ವಿನೋದ್ ಪ್ರಭಾಕರ್ ಅವರು ತಮ್ಮನ್ನು ಅನೇಕ ಸವಾಲುಗಳುಳ್ಳ ಪಾತ್ರಕ್ಕೆ ಒಡ್ಡಿಕೊಳ್ಳುತ್ತಿದ್ದಾರೆ. 'ನೆಲ್ಸನ್' ಹಾಗೂ 'ಮಾದೇವ' ಇದಕ್ಕೆ ಸಾಕ್ಷಿ. 'ಬಲರಾಮನ ದಿನಗಳು' ಸಿನಿಮಾದಲ್ಲಿನ ಅವರ ನಟನೆ ಮತ್ತೊಂದು ಆಯಾಮದಲ್ಲಿದೆ. ನಿರ್ದೇಶಕನಾಗಿ ನಾನು ಯಾವುದೇ ರೀತಿಯಲ್ಲಿ ಯೋಚಿಸಿದರೂ ಅದನ್ನು ನಿಭಾಯಿಸುವ ನಟರಾಗಿ ಅವರು ಬದಲಾಗಿದ್ದಾರೆ' ಎನ್ನುತ್ತಾ ಮಾತಿಗೆ ವಿರಾಮವಿತ್ತರು.

ಕೆ.ಎಂ.ಚೈತನ್ಯ

ಪ್ರೇಮದ ಊರಲಿ ಅವ್ವನಂತ ಅಪ್ಪ

'ಅಕ್ಷಿ' ಸಿನಿಮಾ ನಿರ್ದೇಶಿಸಿದ್ದ ಮನೋಜ್ ಕುಮಾರ್ ನಿರ್ದೇಶನದ 'ಪ್ರೇಮದ ಊರಲಿ' ಸಿನಿಮಾದ ಹಾಡೊಂದು ಬಿಡುಗಡೆಯಾಗಿದೆ.

ಅಮ್ಮನ ಕುರಿತು ಸಾಕಷ್ಟು ಹಾಡುಗಳು ಈಗಾಗಲೇ ಕನ್ನಡದಲ್ಲಿ ಬಂದಿವೆ. ಈ 'ಅವ್ವನಂತ ಅಪ್ಪನಿವನು' ಹಾಡಿನಲ್ಲಿ ಅಪ್ಪನ ಪ್ರೀತಿಯನ್ನು ಸಂಭ್ರಮಿಸಲಾಗಿದೆ. ಮ್ಯೂಸಿಕಲ್ ಲವ್ ಸ್ಟೋರಿ ಕಥಾಹಂದರ ಹೊಂದಿದೆ 'ಪ್ರೇಮದ ಊರಲಿ' ಸಿನಿಮಾ. ನಿರ್ದೇಶಕ ಮನೋಜ್ ಕುಮಾರ್ ಅವರೇ ಪದ ಪೋಣಿಸಿ ಅಪ್ಪನ ಶ್ರಮವನ್ನು ವರ್ಣಿಸಿದ್ದಾರೆ. ಸಿದ್ಧಾರ್ಥ್ ಸುಂದರ್ ಹಾಡಿಗೆ ದನಿಯಾಗಿದ್ದು, ಸುನಾದ್ ಗೌತಮ್ ಸಂಗೀತ ನೀಡಿದ್ದಾರೆ. ಗೀತೆಯಲ್ಲಿ ಅಪ್ಪನಾಗಿ ರಂಗಾಯಣ ರಘು ಹಾಗೂ ಮಗನಾಗಿ ಶ್ರೀರಾಮ್ ನಟಿಸಿದ್ದಾರೆ. ರಂಗಾಯಣ ರಘು ಅವರು ಹಾಡಿಗೆ ಹೆಜ್ಜೆಯನ್ನೂ ಹಾಕಿರುವುದು ವಿಶೇಷ.

ಸಿನಿಮಾದಲ್ಲಿ ಶ್ರೀರಾಮ್ ನಾಯಕನಾಗಿ ನಟಿಸಿದ್ದು, ನಟಿಯರಾದ ತಪಸ್ವಿನಿ ಪೂಣಚ್ಚ ಹಾಗೂ ರಮಿಕಾ ಶಿವು ಜೊತೆಯಾಗಿದ್ದಾರೆ. ಸಿನಿಮಾವನ್ನು ವೆನಿಲ್ಲಾ ಎಂಟರ್‌ಟೇನ್ಮೆಂಟ್, ಜಾನಕಮ್ಮ ಪ್ರೊಡಕ್ಷನ್‌ನಡಿ ಮಮತಾ ದೇವೇಂದ್ರ, ಪ್ರಶಾಂತ್ ಹಾಗೂ ರಮೇಶ್ ನಿರ್ಮಾಣ ಮಾಡಿದ್ದಾರೆ. ರಾಜ್‌ಕಾಂತ್ ಎಸ್.ಕೆ. ಛಾಯಾಚಿತ್ರಗ್ರಹಣ, ಹರ್ಷಿತ್ ಪ್ರಭು ಸಂಕಲನ ಚಿತ್ರಕ್ಕಿದೆ.

ರಂಗಾಯಣ ರಘು
ಶ್ರೀರಾಮ್

'ಕಿರುನಗೆ' ಬೀರಿದ ತಂಡ

ಹರ್ಷಿಣಿ ಸಿನಿಮಾಸ್ ಲಾಂಛನದಲ್ಲಿ ಲತಾಶ್ರೀ ಡಿ.ಸಿ ಅವರು ನಿರ್ಮಿಸಿರುವ ಹಾಗೂ ಅಶೋಕ್ ಕಡಬ ನಿರ್ದೇಶನದ ನೂತನ ಚಿತ್ರದ ಶೀರ್ಷಿಕೆ ಇತ್ತೀಚೆಗೆ ಅನಾವರಣಗೊಂಡಿತು.

ಚಿತ್ರಕ್ಕೆ 'ಕಿರುನಗೆ' ಎಂಬ ಶೀರ್ಷಿಕೆ ಇಡಲಾಗಿದೆ. 'ಕಿರುನಗೆ ನನ್ನ ನಿರ್ದೇಶನದ ಆರನೇ ಚಿತ್ರ. ಇದೊಂದು ಪ್ರೇಮಕಥೆಯಾಗಿದ್ದು, ತಂದೆ-ತಾಯಿಗಾಗಿ ಮಕ್ಕಳೇ ಪ್ರೀತಿಯನ್ನು ತ್ಯಾಗ ಮಾಡುವ ಕಥಾಹಂದರ ಹೊಂದಿದೆ. ಚಿತ್ರದ ಮೊದಲಾರ್ಧದ ಕಥೆ ಮದುವೆಮನೆಯಲ್ಲೇ ನಡೆಯುತ್ತದೆ. ಲತಾಶ್ರೀ ಅವರೇ ಚಿತ್ರಕ್ಕೆ ಕಥೆ ಬರೆದಿದ್ದಾರೆ. ಚಿತ್ರದ ಚಿತ್ರೀಕರಣ ಪೂರ್ಣಗೊಂಡಿದ್ದು, ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ನಡೆಯುತ್ತಿವೆ. ವಿಜಯ್ ರಾಜ್ ಹಾಗೂ ಖುಷ್ಬು ಈ ಚಿತ್ರದ ನಾಯಕ-ನಾಯಕಿಯಾಗಿ ನಟಿಸಿದ್ದಾರೆ. ಶ್ರುತಿ, ರಾಜು ಖೇರ್, ಸಂಗೀತ, ಮೂಗು ಸುರೇಶ್, ಸುಧಾ ಬೆಳವಾಡಿ ಮುಂತಾದವರು ತಾರಾಬಳಗದಲ್ಲಿದ್ದಾರೆ. ಸುಕೃತ್ ಸಂಗೀತ ನಿರ್ದೇಶನ ಹಾಗೂ ಸಿದ್ದು ಕಂಚನಹಳ್ಳಿ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ. ಚಿತ್ರದ ಹಾಡುಗಳನ್ನು ನಾಗಾರ್ಜುನ ಶರ್ಮ ಬರೆದಿದ್ದಾರೆ' ಎಂದರು ಅಶೋಕ್ ಕಡಬ

ವಿಜಯ್ ರಾಜ್, ಖುಷ್ಬು

ಅತ್ಯುತ್ತಮ ಚಿತ್ರಕಥೆ ಪ್ರಶಸ್ತಿ ಯಾರ ಮುಡಿಗೆ?

4ನೇ ಆವೃತ್ತಿ ಜೂನ್ 19ಕ್ಕೆ

'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'ದ ನಾಲ್ಕನೇ ಆವೃತ್ತಿ ಜೂನ್ 19ರಂದು ನಡೆಯಲಿದೆ. ಈಗಾಗಲೇ 19 ವಿಭಾಗಗಳಲ್ಲಿ ಪ್ರಶಸ್ತಿಗೆ ನಾಮನಿರ್ದೇಶನಗೊಂಡವರ ಹೆಸರುಗಳನ್ನು, ನಾಮನಿರ್ದೇಶನಗೊಂಡ ಸಿನಿಮಾಗಳ ಪಟ್ಟಿಯನ್ನು ಪ್ರಕಟಿಸಲಾಗಿದೆ. ನಾಮನಿರ್ದೇಶಿತರಾದವರಲ್ಲಿ ಒಬ್ಬರನ್ನು ಚಿತ್ರರಂಗದ ವಿವಿಧ ಸಂಘ–ಸಂಸ್ಥೆಗಳ ಒಂದು ಸಾವಿರಕ್ಕೂ ಅಧಿಕ ಸದಸ್ಯರು ವೋಟ್ ಮಾಡುವ ಮುಖಾಂತರ ಆಯ್ಕೆ ಮಾಡಲಿದ್ದಾರೆ. ಜನಮೆಚ್ಚಿದ ನಟ, ನಟಿ, ಸಿನಿಮಾ ಹಾಗೂ ಹಾಡು ವಿಭಾಗದಲ್ಲಿ ಜನರು ಹಾಕುವ ವೋಟ್ ವಿಜೇತರನ್ನು ತೀರ್ಮಾನಿಸಲಿದೆ. ಇದೀಗ 'ಅತ್ಯುತ್ತಮ ಚಿತ್ರಕಥೆ' ವಿಭಾಗದಲ್ಲಿ ನಾಮನಿರ್ದೇಶನಗೊಂಡವರನ್ನು ಪರಿಚಯಿಸುವ ಸಮಯ.

CASAGRAND building aspirations Presents ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

ವೋಟ್ ಮಾಡಿ

ನಿಮ್ಮ ನೆಚ್ಚಿನ ನಟ, ನಟಿ, ಸಿನಿಮಾ ಹಾಗೂ ಹಾಡಿಗೆ ವೋಟ್ ಮಾಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಅರ್ಜುನ್ ಜನ್ಯ

'45' ಸಿನಿಮಾದ ಚಿತ್ರಕಥೆಗಾಗಿ ಇವರು ನಾಮನಿರ್ದೇಶನಗೊಂಡಿದ್ದಾರೆ. ಸಂಗೀತ ನಿರ್ದೇಶಕರಾಗಿ ಗುರುತಿಸಿಕೊಂಡ ಇವರ ನಿರ್ದೇಶನದ ಚೊಚ್ಚಲ ಸಿನಿಮಾ '45'. ಬೆಂಗಳೂರಿನ ಇವರು ಸಂಗೀತ ಸಂಯೋಜಿಸಿದ ಮೊದಲ ಸಿನಿಮಾ 2006ರಲ್ಲಿ ತೆರೆಕಂಡ 'ಆಟೋಗ್ರಾಫ್ ಪ್ಲೀಸ್'. 'ಕೆಂಪೇಗೌಡ' ಸಿನಿಮಾದ ಹಾಡುಗಳು ಇವರಿಗೆ ಖ್ಯಾತಿ ತಂದಿತು. 'ಜರಾಸಂಧ', 'ರ್‍ಯಾಂಬೋ', 'ವಿಕ್ಟರಿ', 'ಮಾಣಿಕ್ಯ', 'ಅಧ್ಯಕ್ಷ', 'ಹೆಬ್ಬುಲಿ', 'ಚಕ್ರವರ್ತಿ', 'ರೋಮಿಯೋ', 'ಅಲೆಮಾರಿ', 'ಅಯೋಗ್ಯ', 'ಗಾಳಿಪಟ–2', 'ಕೃಷ್ಣಂ ಪ್ರಣಯ ಸಖಿ', 'KD' ಹೀಗೆ ನೂರಕ್ಕೂ ಅಧಿಕ ಸಿನಿಮಾಗಳಿಗೆ ಸಂಗೀತ ನಿರ್ದೇಶನ ಮಾಡಿದ್ದಾರೆ. '45' ಸಿನಿಮಾದಲ್ಲಿ ಭಿನ್ನವಾದ ವಿಷಯವನ್ನಿಟ್ಟುಕೊಂಡು ಕಥೆ ಹೆಣೆದಿದ್ದ ಅರ್ಜುನ್ ಜನ್ಯ, 'ಸಾವಿನ ಅಧಿಪತಿ ಯಮನ ವಿರುದ್ಧ ಸ್ಮಶಾನದ ಅಧಿಪತಿ ಶಿವನ ಯುದ್ಧ'ವನ್ನು ತೆರೆಗೆ ತಂದಿದ್ದರು. ಗಮನಸೆಳೆಯುವ ದೃಶ್ಯವೈಭವ, ಗ್ರಾಫಿಕ್ಸ್ ಚಿತ್ರದಲ್ಲಿ ಪ್ರಮುಖಭಾಗವಾಗಿತ್ತು.

ಆಯುಷ್ ಮಲ್ಲಿ

'ಪಪ್ಪಿ' ಸಿನಿಮಾದ ಚಿತ್ರಕಥೆಗಾಗಿ ಇವರು ನಾಮನಿರ್ದೇಶನಗೊಂಡಿದ್ದಾರೆ. ಮೂಲತಃ ಉತ್ತರ ಕರ್ನಾಟಕದ ರಾಯಚೂರು ಜಿಲ್ಲೆಯವರು. ಸುಮಾರು 18 ವರ್ಷ ಕನ್ನಡ ಚಿತ್ರರಂಗದಲ್ಲಿ ಸಕ್ರಿಯವಾಗಿರುವ ಇವರು ಉದಯ ಟಿವಿಯಲ್ಲಿ ಬರುತ್ತಿದ್ದ 'ಮಾಂಗಲ್ಯ', 'ಜೋಕಾಲಿ', 'ರಂಗೋಲಿ' ಧಾರಾವಾಹಿಗಳಿಗೆ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡಿದ್ದಾರೆ. 'ಎದೆಗಾರಿಕೆ', 'ತಾಜ್ ಮಹಲ್', 'ಪ್ರೇಮ್ ಕಹಾನಿ' ಸಿನಿಮಗಳಿಗೆ ಸಹ ನಿರ್ದೇಶಕರಾಗಿ ಕೆಲಸ ಮಾಡಿದ್ದಾರೆ. 'ಪಪ್ಪಿ' ಸಿನಿಮಾದ ನಂತರ ಮತ್ತೊಂದು ಹಾಸ್ಯಮಯ ಕೌಟುಂಬಿಕ ಸಿನಿಮಾದ ನಿರ್ದೇಶನದಕ್ಕೆ ಇವರು ಸಜ್ಜಾಗಿದ್ದಾರೆ.

ಪ್ರತಾಪ್ ಗಂಧರ್ವ

'ಕಂಗ್ರಾಜುಲೇಷನ್ಸ್ ಬ್ರದರ್' ಸಿನಿಮಾದ ಚಿತ್ರಕಥೆಗಾಗಿ ಇವರು ನಾಮನಿರ್ದೇಶನಗೊಂಡಿದ್ದಾರೆ. ಮಾಗಡಿಯವರಾದ ಇವರು 2015ರಲ್ಲಿ ಬಣ್ಣದ ಲೋಕಕ್ಕೆ ಕಾಲಿಟ್ಟರು. 'ಮಹಾದೇವಿ' ಎಂಬ ಧಾರಾವಾಹಿಯಲ್ಲಿ ಸಹಾಯಕ ನಿರ್ದೇಶಕರಾಗಿ ಕೆಲಸ ಆರಂಭಿಸಿದ ಇವರು 'ಬ್ರಹ್ಮಗಂಟು' ಎಂಬ ಖ್ಯಾತ ಧಾರಾವಾಹಿಯನ್ನು ನಿರ್ದೇಶಿಸಿದ್ದಾರೆ. 'ದಾಸಪುರಂದರ' ಸೇರಿದಂತೆ ಒಟ್ಟಾರೆ ಇಲ್ಲಿಯವರೆಗೂ ವಿವಿಧ ಧಾರಾವಾಹಿಗಳ 1500ಕ್ಕೂ ಅಧಿಕ ಕಂತುಗಳನ್ನು ನಿರ್ದೇಶಿಸಿದ್ದಾರೆ. 500ಕ್ಕೂ ಅಧಿಕ ಧಾರಾವಾಹಿ ಕಂತುಗಳಿಗೆ ಚಿತ್ರಕಥೆ ಬರೆದಿದ್ದಾರೆ. 'ಪ್ರೀಮಿಯರ್ ಪದ್ಮಿನಿ' ಸಿನಿಮಾದಲ್ಲಿ ಸಹ ನಿರ್ದೇಶಕರಾಗಿ ಕೆಲಸ ಮಾಡಿದ್ದಾರೆ. 'ಕಂಗ್ರಾಜುಲೇಷನ್ಸ್ ಬ್ರದರ್' ಇವರ ಚೊಚ್ಚಲ ಸಿನಿಮಾ. ಇವರ ಹೊಸ ಪ್ರಾಜೆಕ್ಟ್ ಮಾತುಕತೆ ಹಂತದಲ್ಲಿದೆ.

ಮಂಸೋರೆ, ಚೇತನಾ ತೀರ್ಥಹಳ್ಳಿ

'ದೂರ ತೀರ ಯಾನ' ಚಿತ್ರದ ಚಿತ್ರಕಥೆಗಾಗಿ ಇವರು ನಾಮನಿರ್ದೇಶನಗೊಂಡಿದ್ದಾರೆ. ಕನ್ನಡ ಚಿತ್ರರಂಗದ ಪ್ರಮುಖ ನಿರ್ದೇಶಕರಾದ ಮಂಸೋರೆ 'ನಾತಿಚರಾಮಿ', 'ಹರಿವು', 'ಆ್ಯಕ್ಟ್–1978', '19.20.21' ಮುಂತಾದ ಸಾಮಾಜಿಕ ಸಂದೇಶವುಳ್ಳ ಚಿತ್ರಗಳಿಂದ ಗುರುತಿಸಿಕೊಂಡವರು. ರಾಷ್ಟ್ರ ಪ್ರಶಸ್ತಿಗೆ ಪಾತ್ರರಾದ ಸಾಧಕರೂ ಹೌದು. ವಿಭಿನ್ನ ದೃಷ್ಟಿಕೋನದ ಸಿನಿಮಾಗಳ ಮೂಲಕ ಕನ್ನಡದ ಪ್ರೇಕ್ಷಕರಿಗೆ ಹತ್ತಿರವಾದವರು. 'ನಾತಿಚರಾಮಿ' ಸಿನಿಮಾವು 66ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಯ ಐದು ವಿಭಾಗಗಳಲ್ಲಿ ಪ್ರಶಸ್ತಿ ಪಡೆದಿತ್ತು. ಕಿರುಚಿತ್ರ ನಿರ್ಮಾಣದಲ್ಲೂ ಗಮನ ಸೆಳೆದವರು. ತಾವು ಗುರುತಿಸಿಕೊಳ್ಳುತ್ತಿದ್ದ ಜಾನರ್‌ನಿಂದ ಕೊಂಚ ಹೊರ ಹೆಜ್ಜೆ ಇಟ್ಟು 'ದೂರ ತೀರ ಯಾನ' ಎಂಬ ಪ್ರೇಮಕಥೆ ಹೆಣೆದಿದ್ದರು.

ಚೇತನಾ ತೀರ್ಥಹಳ್ಳಿ ಕವಯಿತ್ರಿ, ಲೇಖಕಿ. ಹತ್ತು ವರ್ಷ ಪತ್ರಿಕೋದ್ಯಮದಲ್ಲಿ ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡಿದ ಅನುಭವ ಇವರದು. ಕವನ ಸಂಕಲನ, ಗದ್ಯ ಬರಹಗಳು, ಅನುವಾದ ಸೇರಿದಂತೆ ಒಟ್ಟು 22 ಪುಸ್ತಕಗಳು ಪ್ರಕಟಗೊಂಡಿವೆ. ಬಾಲ್ಯದಿಂದಲೂ ರಂಗಭೂಮಿಯಲ್ಲಿ ರಚನೆ ಮತ್ತು ಅಭಿನಯದೊಂದಿಗೆ ಸಕ್ರಿಯ ಒಡನಾಟ ಹೊಂದಿದ್ದಾರೆ. 'ಮದಿಪು' ಸಿನಿಮಾದ ಕಥಾವಿಭಾಗದಲ್ಲಿ ಪ್ರಾಥಮಿಕ ಬರಹದೊಂದಿಗೆ ಸಿನಿಮಾ ರಂಗದ ಪರಿಚಯ. 'ಉಪ್ಪಿನ' ಕಾಗದ ಸಿನಿಮಾಗೆ ಚಿತ್ರಕಥೆ ವಿಭಾಗದಲ್ಲಿ ಸಹಾಯಕಿಯಾಗಿ ಮತ್ತು ಸಂಭಾಷಣೆ ಬರಹಗಾರ್ತಿಯಾಗಿ ಕೆಲಸ ಮಾಡಿದ್ದಾರೆ.

ಸಾಗರ್ ಕುಮಾರ್

'ಅನಾಮಧೇಯ ಅಶೋಕ್ ಕುಮಾರ್' ಚಿತ್ರದ ಚಿತ್ರಕಥೆಗಾಗಿ ಇವರು ನಾಮನಿರ್ದೇಶನಗೊಂಡಿದ್ದಾರೆ. ಮೂಲತಃ ಶಿವಮೊಗ್ಗದವರು. ವೃತ್ತಿಯಿಂದ ಸಾಫ್ಟ್‌ವೇರ್ ಎಂಜಿನಿಯರ್. ಐಒಎಸ್ ಡೆವಲಪರ್ ಆಗಿ ಕೆಲಸ ಮಾಡುತ್ತಿರುವ ಇವರು, ಪ್ರವೃತ್ತಿಯಾಗಿ ಸಿನಿಮಾವನ್ನು ಕೈಗೆತ್ತಿಕೊಂಡವರು. ಕಿರುಚಿತ್ರಗಳನ್ನು ಮಾಡುತ್ತಲೇ ತಮ್ಮ ಸಿನಿಮಾ ಕಲಿಕೆ ಅನುಭವನ್ನು ಪಡೆದರು. ಇವರು ನಿರ್ದೇಶಿಸಿದ 'ವರದಿ' ಕಿರುಚಿತ್ರ ಅನೇಕ ಪ್ರಶಸ್ತಿಗಳನ್ನು ಪಡೆದಿತ್ತು. ಸಾಫ್ಟ್‌ವೇರ್ ಜಗತ್ತಿನಿಂದಲೇ ತಮ್ಮ ತಂಡ ಕಟ್ಟಿಕೊಂಡು 'ಅನಾಮಧೇಯ ಅಶೋಕ್ ಕುಮಾರ್' ಚಿತ್ರವನ್ನು ತೆರೆಗೆ ತಂದರು.

ಕುಲ್‌ದೀಪ್ ಕಾರಿಯಪ್ಪ

'ನೋಡಿದವರು ಏನಂತಾರೆ' ಸಿನಿಮಾದ ಚಿತ್ರಕಥೆಗಾಗಿ ನಾಮನಿರ್ದೇಶನಗೊಂಡಿದ್ದಾರೆ. ಕೊಡಗಿನವರಾದ ಇವರು ಬರಹಗಾರರಾಗಿ ಗುರುತಿಸಿಕೊಂಡವರು. ಸಿವಿಲ್ ಎಂಜಿನಿಯರಿಂಗ್ ಪದವೀಧರರಾದ ಇವರು ಆರಂಭದಲ್ಲಿ ಬೆಂಗಳೂರಿನ ಪ್ರಮುಖ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಸಿನಿಮಾ ಕ್ಷೇತ್ರವು ಸೆಳೆದಾಗ ಆ ಕೆಲಸವನ್ನು ತೊರೆದು ಕೆ.ಎಂ. ಚೈತನ್ಯ ಹಾಗೂ ಆರ್.ಚಂದ್ರು ಅವರ ಬಳಿಕ ಸಹಾಯಕ ನಿರ್ದೇಶಕರಾಗಿ ಕಾರ್ಯಾರಂಭ ಮಾಡಿದರು. ಕೋವಿಡ್ ಲಾಕ್‌ಡೌನ್ ಕುರಿತಾದ ಇವರ ಸಾಕ್ಷ್ಯಚಿತ್ರವು ಹಲವು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಪ್ರಶಸ್ತಿಗಳನ್ನು ಪಡೆದಿದೆ. 2024ರಲ್ಲಿ 'ಬಿಟಿಎಸ್' ಎಂದರೆ 'ಬಿಹೈಂಡ್ ದಿ ಸೀನ್ಸ್' ಎಂಬ ಐದು ಕಥಾಗುಚ್ಛದ ಸಿನಿಮಾದಲ್ಲಿ ಒಂದು ಕಥೆಯನ್ನು ಇವರು ನಿರ್ದೇಶಿಸಿದ್ದಾರೆ.

ಪುನೀತ್ ರಂಗಸ್ವಾಮಿ



'ಏಳುಮಲೆ' ಚಿತ್ರದ ಚಿತ್ರಕಥೆಗಾಗಿ ಇವರು ನಾಮನಿರ್ದೇಶನಗೊಂಡಿದ್ದಾರೆ. ಮಂಡ್ಯದ ಇವರು ಕಾಲೇಜು ವಿದ್ಯಾಭ್ಯಾಸದ ಸಂದರ್ಭದಲ್ಲೇ ಗೀತ ಸಾಹಿತ್ಯದತ್ತ ಆಸಕ್ತಿ ಮೂಡಿಸಿಕೊಂಡವರು. ಇವರು ಸುಮಾರು 200ಕ್ಕೂ ಹೆಚ್ಚು ಭಕ್ತಿಗೀತೆಗಳನ್ನು ಬರೆದಿದ್ದಾರೆ. ನಂತರ ಸಿನಿಮಾ ಜೀವನದ ಆರಂಭದಲ್ಲಿ ಗೀತ ಸಾಹಿತಿ ಮತ್ತು ಸಂಭಾಷಣೆ ಕೆಲಸ ಮಾಡಿದ್ದಾರೆ. ಎಸ್.ಮಹೇಂದರ್, ಗುರು ದೇಶಪಾಂಡೆ ಮತ್ತು ತರುಣ್ ಸುಧೀರ್ ಅವರಿಗೆ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡಿರುವ ಇವರು 'ಕಾಟೇರ', 'ಗುರುಶಿಷ್ಯರು' ಸೇರಿದಂತೆ ಹಲವು ಸಿನಿಮಾಗಳಿಗೆ ಹಾಡು ಬರೆದಿದ್ದಾರೆ. 'ಕಾಟೇರ'ದಲ್ಲಿ ತರುಣ್ ಸುಧೀರ್ ಅವರಿಗೆ ಸಹ ನಿರ್ದೇಶಕರಾಗಿ ಕೆಲಸ ಮಾಡಿದ ಅನುಭವ ಇವರಿಗಿದೆ.

Fashion Partner: TRENDS
Mobility Partner: Akshaya Motors
Banking Partner: ಕೆನರು ಬ್ಯಾಂಕ್ केनरा बैंक Canara Bank A Government of India Undertaking — Together We Can
Wardrobe Partner: MALLESHWARAM Sudarshan Silks
Mobile Partner: HUMAN MOBILE DEVICES HMD
Knowledge Partner: GM UNIVERSITY DAVANAGERE
Travel Partner: ಅಡಿಗಾಸ್ ಯಾತ್ರಾ
Associate Sponsors: Amruth ಅಮೃತ್ ಆರ್ಗಾನಿಕ್ ಫರ್ಟಿಲೈಸರ್ಸ್ | ಒಡ್ಕರ್ | The Janatha Co-operative Bank Ltd., Malleswaram, Bangalore | Bindu
Audit Partner: EY
Television Partner: Z ಕನ್ನಡ

ದುರಂತಕ್ಕೆ ವರ್ಷ; ಕಾಡುವ ಸಂಕಟ

ವಿಮಾನ ಅಪಘಾತದ ಕಹಿ ಘಟನೆಗಳ ನೆನೆದು ಕಣ್ಣೀರಾದ ಮೃತರ ಕುಟುಂಬಸ್ಥರು

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಒಂದೆಡೆ ತಂಪಾದ ಗಾಳಿ ಬೀಸುತ್ತಿದ್ದರೆ, ಕಟ್ಟಡದ ಮುಂಭಾಗ ಸ್ವಲ್ಪಾಗಿ ನಿಂತಿದ್ದ ಮೂವರು ಯುವಕರ ಮನಸ್ಸಿನಲ್ಲಿ ಕರಾಳ ನೆನಪುಗಳು ಪುಟ ಬಿಡಿಸಿದಂತೆ ಒಂದೊಂದಾಗಿ ತೆರೆದುಕೊಳ್ಳುತ್ತಿದ್ದವು. ಅವರು ದಿಟ್ಟಿಸಿ ನೋಡುತ್ತಿದ್ದ ಕಟ್ಟಡದ ಮಹಡಿಯಿಂದ ಅವ್ಯಕ್ತವಾಗಿತ್ತು. ಕಿಟಕಿಗಳ ಗಾಜುಗಳು ಒಡೆದು ಚೆಲ್ಲಾಪಿಲ್ಲಿಯಾಗಿದ್ದವು. ನೂರಾರು ಮಂದಿಯ ಮೈ-ಮನಸ್ಸಿಗೆ ತಂಪು ನೀಡಿದ್ದ ಏರ್ ಕಂಡೀಷನರ್‌ಗಳು ದೂಳುಹಿಡಿದು ದುರಂತವನ್ನು ಸಾರಿ ಸಾರಿ ಹೇಳುತ್ತಿದ್ದವು.

– ಕಳೆದ ವರ್ಷ ಜೂನ್ 12ರಂದು ಅಹಮದಾಬಾದ್‌ನಲ್ಲಿ ಸಂಭವಿಸಿದ್ದ ಏರ್ ಇಂಡಿಯಾ ವಿಮಾನ (ಎಐ171) ಪತನಗೊಂಡಿದ್ದ ಸ್ಥಳಕ್ಕೆ ಗುರುವಾರ ಭೇಟಿ ನೀಡಿದ್ದವರ ಕಂಡುಬಂದ ದೃಶ್ಯ.

260ಕ್ಕೂ ಅಧಿಕ ಮಂದಿ ಪ್ರಾಣ ಕಳೆದುಕೊಂಡ ವಿಮಾನ ಅಪಘಾತ ಸಂಭವಿಸಿ ಗುರುವಾರಕ್ಕೆ ಒಂದು ವರ್ಷ ಪೂರ್ಣಗೊಂಡಿದೆ. ಪ್ರೀತಿಪಾತ್ರರನ್ನು ಕಳೆದುಕೊಂಡಿದ್ದ ನೂರಾರು ಮಂದಿ ಕಳೆದುಕೊಂಡವರ ಜೊತೆ ಕಳೆದ ಪ್ರತಿ ಕ್ಷಣವೂ ಈಗಲೂ ಹಸಿಯಾಗಿಯೇ ಉಳಿದಿದೆ.

'ನಾವು ಈಗಷ್ಟೇ ಬ್ರಿಟನ್‌ನಿಂದ ಬಂದಿಳಿದಿದ್ದೇವೆ. ವಿಮಾನ ಬಿದ್ದ ಜಾಗವನ್ನು ನೋಡಲು ಬಂದಿದ್ದು, ನಮ್ಮ ಊರಾದ ದಿಯು ಪಟ್ಟಣಕ್ಕೆ ತೆರಳುತ್ತಿದ್ದೇವೆ' ಎಂದು ಸ್ಥಳಕ್ಕೆ ಭೇಟಿ ನೀಡಿದ್ದ ವಿಶಾಲ್ ತಿಳಿಸಿದರು.

ದುರಂತದಲ್ಲಿ ಬದುಕುಳಿದ ಏಕೈಕ ವ್ಯಕ್ತಿ ವಿಶ್ವಾಸ್ ಕುಮಾರ್ ರಮೇಶ್ ಹಾಗೂ ವಿಶಾಲ್ ಸಂಬಂಧಿಕರು. ಹೀಗಾಗಿಯೇ, ವಿಮಾನ ಪತನಗೊಂಡ ಕಟ್ಟಡವನ್ನು ಪದೇ ಪದೇ ದಿಟ್ಟಿಸಿ ನೋಡುತ್ತಿದ್ದರು. ಒಡನಾಡಿಗಳ ಜೊತೆಗೆ ದುರಂತದ ನೆನಪುಗಳನ್ನು ಹಂಚಿಕೊಂಡರು.

'ರಮೇಶ್ ಅವರು ಬ್ರಿಟನ್‌ನಲ್ಲಿಯೇ ಇದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ. ಈಗಲೂ ಆಘಾತದಿಂದ ಹೊರಬಂದಿಲ್ಲ' ಎಂದು ತಿಳಿಸಿದರು.

ದುರಂತಕ್ಕೆ ವರ್ಷ: 2025 ರ ಜೂನ್ 12ರಂದು ಅಹಮದಾಬಾದ್‌ನ ಸರ್ದಾರ್ ವಲ್ಲಭಭಾಯಿ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಲಂಡನ್‌ಗೆ ಹೊರಟಿದ್ದ ಏರ್ ಇಂಡಿಯಾ ವಿಮಾನವು ಟೇಕಾಫ್ ಆದ ಕೆಲವೇ ಕ್ಷಣಗಳಲ್ಲಿ ಪತನಗೊಂಡಿತ್ತು. ಗುಜರಾತ್‌ನ ಮಾಜಿ ಮುಖ್ಯಮಂತ್ರಿ ವಿಜಯ್ ರೂಪಾಣಿ ಸೇರಿದಂತೆ 260ಕ್ಕೂ ಅಧಿಕ ಮಂದಿ ಮೃತಪಟ್ಟಿದ್ದರು.

ಏರ್ ಇಂಡಿಯಾ ವಿಮಾನವು ದೇಶದ ಪ್ರತಿಷ್ಠಿತ ಬಿ.ಜೆ.ವೈದ್ಯಕೀಯ ಕಾಲೇಜಿನ ಹಾಸ್ಟೆಲ್ ಹಾಗೂ ಕ್ಯಾಂಟೀನ್ ಕಟ್ಟಡದ ಮೇಲೆ ಬಿದ್ದಿತ್ತು. ವರ್ಷ ಸಮೀಪಿಸುವಷ್ಟರಲ್ಲಿ ಈ ಜಾಗದಲ್ಲಿ ಹೊಸ ಕಟ್ಟಡದ ನಿರ್ಮಾಣವು ಬಿರುಸಿನಿಂದ ನಡೆಯುತ್ತಿದೆ. ಹಳೆಯ ಕಟ್ಟಡದತ್ತ ನಿತ್ಯವೂ ನೂರಾರು ಮಂದಿ ಭೇಟಿ ನೀಡುತ್ತಿದ್ದಾರೆ. ದುರಂತಕ್ಕೆ ವರ್ಷ ಕಳೆಯುವ ಮುನ್ನಾದಿನವೂ ಅನೇಕರು ಭೇಟಿ ನೀಡಿ ಕಳೆದುಕೊಂಡಿದ್ದ ಪ್ರೀತಿಪಾತ್ರರನ್ನು ನೆನಪಿಸಿಕೊಂಡರು. ಇನ್ನೂ ಕೆಲವರು ಈಗಲೂ ದುರಂತಕ್ಕೆ ಕಾರಣಕ್ಕೆ ಉತ್ತರಗಳನ್ನು ಕೇಳುತ್ತಿದ್ದಾರೆ.

ದುರಂತದಿಂದ ಹಾನಿಗೊಳಗಾದ ಕಟ್ಟಡವನ್ನು ಶೀಘ್ರದಲ್ಲಿ ಕೆಡವ ಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈಗಲೂ ಇಡೀ ಸ್ಥಳವನ್ನು ಕೇಂದ್ರೀಯ ಮೀಸಲು ಪೊಲೀಸ್ ಪಡೆ (ಸಿಆರ್‌ಪಿಎಫ್) ಗಸ್ತು ಕಾಯುತ್ತಿದ್ದು, ನೂರಾರು, ಸಂದರ್ಶಕರು ಕಟ್ಟಡದ ಬಳಿ ಸುಳಿಯದಂತೆ ನೋಡಿಕೊಳ್ಳುತ್ತಿದ್ದಾರೆ.

'ದುರಂತ ಸಂಭವಿಸಿ ವರ್ಷ ಕಳೆದಿದೆ. ಆದರೆ, ಈ ಘಟನೆಯನ್ನು ಜೀವನದಲ್ಲಿ ಮರೆಯಲು ಸಾಧ್ಯವಿಲ್ಲ. ಇಡೀ ವರ್ಷವನ್ನು ಸಂಕಷ್ಟದಲ್ಲಿ ಕಳೆದಿದ್ದೇವೆ. ಹಲವು ರಾತ್ರಿಗಳ ಕಾಲ ಎದ್ದು ಕಣ್ಣೀರಿಟ್ಟಿದ್ದೇವೆ. ಮಗ ಮಲಗುತ್ತಿದ್ದ ಕೋಣೆ ಒಳಗೆ ಕಾಲಿಡಲು ಈಗಲೂ ಧೈರ್ಯ ಸಾಲುತ್ತಿಲ್ಲ. ನನ್ನ ಜೀವನದ ಅತ್ಯಂತ ನೋವಿನ ಕ್ಷಣವಾಗಿದೆ' ಎಂದು ಅಹಮದಾಬಾದ್‌ನ ಚಂದ್‌ಖೇಡ ನಿವಾಸಿ ಡೇವಿಡ್ ಕ್ರಿಶ್ಚಿಯನ್ ನೆನಪಿಸಿಕೊಂಡರು.

'ನಾವು ಕುಟುಂಬದ ಸದಸ್ಯರನ್ನು ಕಳೆದುಕೊಂಡಿದ್ದೇವೆ. ಸರ್ಕಾರವು ಆದಷ್ಟು ಬೇಗ ತನಿಖಾ ವರದಿಯನ್ನು ಬಿಡುಗಡೆಗೊಳಿಸಬೇಕು' ಎಂದು ಒತ್ತಾಯಿಸಿದ್ದಾರೆ.

ದುರಂತದಲ್ಲಿ ಡೇವಿಡ್ ಅವರ ಮಗ ರೋಜರ್‌–ನೋಸ್ ರಚನಾ ಮೃತಪಟ್ಟಿದ್ದರು.

61 ವರ್ಷದ ಗಿರಿಧರ್‌ಬಾಯ್ ಕಲವಡಿಯಾ ಅವರ ಹಿರಿಯ ಮಗ ಮಹೇಶ್ ಜೀರ್ವಾಲಾ ಮೃತಪಟ್ಟಿದ್ದರು. ವಿಮಾನವು ಹಾಸ್ಟೆಲ್ ಕಟ್ಟಡದ ಮೇಲೆ ಪತನಗೊಂಡು ಮೃತಪಟ್ಟಿದ್ದ 19 ಮಂದಿ ಪೈಕಿ ಒಬ್ಬರಲ್ಲಿ ಮಹೇಶ್ ಕೂಡ ಇದ್ದರು.

ಮಗನನ್ನು ವೈದ್ಯನನ್ನಾಗಿ ಮಾಡಲು ಕನಸು ಕಂಡಿದ್ದರು. ವೈದ್ಯನಾಗಿ ಹೊರಹೊಮ್ಮಬೇಕಿದ್ದ ಜಾಗದಲ್ಲೇ ಆತ ಸುಟ್ಟು ಬೂದಿಯಾಗಿದ್ದನ್ನು ನೆನಪಿಸಿಕೊಂಡು ಕಣ್ಣೀರಿಟ್ಟರು.

ಮೃತಪಟ್ಟ ಕುಟುಂಬದ ಸದಸ್ಯರ ಭಾವಚಿತ್ರ ಹಿಡಿದ ಮಹಿಳೆಯೊಬ್ಬರು ದುರಂತ ಸಂಭವಿಸಿದ ಕಟ್ಟಡದ ಮುಂದೆ ಗುರುವಾರ ಕಣ್ಣೀರಿಟ್ಟರು –ಪಿಟಿಐ ಚಿತ್ರ

ನ್ಯಾಯಾಂಗ ತನಿಖೆಗೆ ಎಫ್‌ಐಪಿ ಆಗ್ರಹ

ಅಹಮದಾಬಾದ್ (ಪಿಟಿಐ): 'ಏರ್ ಇಂಡಿಯಾ ವಿಮಾನ (ಎಐ171) ಅಪಘಾತಕ್ಕೆ ಸಂಬಂಧಿಸಿದಂತೆ ನ್ಯಾಯಾಂಗ ತನಿಖೆ ನಡೆಸಬೇಕು' ಎಂದು ಅಖಿಲ ಭಾರತೀಯ ಪೈಲಟ್‌ಗಳ ಒಕ್ಕೂಟ (ಎಫ್‌ಐಪಿ) ಒತ್ತಾಯಿಸಿದೆ.

'ಯಾವುದೇ ಕಾರಣಕ್ಕೂ ಮಧ್ಯಂತರ ವರದಿಯನ್ನು ಬಿಡುಗಡೆಗೊಳಿಸಬಾರದು. ಇದರಿಂದ ಅನಗತ್ಯ ಗೊಂದಲ ಹಾಗೂ ಊಹಾಪೋಹಗಳನ್ನು ಸೃಷ್ಟಿಸಿದೆ' ಎಂದೂ ಹೇಳಿದೆ.

'ಪ್ರಕರಣದ ಸಮಗ್ರ ತನಿಖೆ ಪೂರ್ಣಗೊಂಡ ಬಳಿಕವೇ ಅಂತಿಮ ವರದಿಯನ್ನು ಬಿಡುಗಡೆಗೊಳಿಸಬೇಕು' ಎಂದು ಎಫ್‌ಐಪಿ ಅಧ್ಯಕ್ಷ ಸಿ.ಎಸ್. ರಾಂಧವ ಗುರುವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಒತ್ತಾಯಿಸಿದ್ದಾರೆ.

'ವಿಬಿ ಜಿ ರಾಮ್ ಜಿ: ವೇತನ ಅನುಪಾತ ಹೆಚ್ಚಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗ್ರಾಮೀಣ ಜನರಿಗೆ ಉದ್ಯೋಗ ಖಾತ್ರಿ ಒದಗಿಸುವ 'ವಿಬಿ ಜಿ ರಾಮ್ ಜಿ' ಯೋಜನೆಯಡಿ ವೇತನ ಅನುಪಾತವನ್ನು ಕನಿಷ್ಠ 80:20ಕ್ಕೆ ಹೆಚ್ಚಿಸಬೇಕು' ಎಂದು ಪಂಚಾಯತ್ ರಾಜ್ ಸಚಿವ ಈಶ್ವರ ಖಂಡ್ರೆ ಅವರು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, 'ಯುಪಿಎ ಸರ್ಕಾರ 2006ರಲ್ಲಿ ಜಾರಿ ಮಾಡಿದ ನರೇಗಾ ಯೋಜನೆಯಲ್ಲಿ ಉದ್ಯೋಗಕ್ಕೆ ನೀಡುವ ಕೂಲಿಯ ಶೇ 90ರಷ್ಟು ಹಣವನ್ನು ಕೇಂದ್ರ ಸರ್ಕಾರ ನೀಡುತ್ತಿತ್ತು. ರಾಜ್ಯ ಸರ್ಕಾರಗಳು ಕೇವಲ 10ರಷ್ಟು ಭರಿಸುತ್ತಿದ್ದವು' ಎಂದರು.

'ನರೇಗಾ ಬದಲು ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಜುಲೈ 1ರಿಂದ ಜಾರಿ ಮಾಡುತ್ತಿರುವ ವಿಬಿ ಜಿ ರಾಮ್ ಜಿ ಯೋಜನೆಯಲ್ಲಿ ಕೇಂದ್ರ ಸರ್ಕಾರ 60:40 ಅನುಪಾತದಡಿ ಹಣ ಒದಗಿಸಲಿದೆ. ಇದರಿಂದ ರಾಜ್ಯ ಸರ್ಕಾರಗಳಿಗೆ ಹೆಚ್ಚಿನ ಹೊರೆ ಆಗಲಿದೆ. ಹೀಗಾಗಿ ಅನುಪಾತವನ್ನು ಹಿಂದೆ ಇದ್ದಂತೆ 90:10 ಅನುಪಾತ ದಲ್ಲಿ ಮುಂದುವರಿಸ ಬೇಕು ಅಥವಾ ಕನಿಷ್ಠ 80:20ಕ್ಕೆ ಹೆಚ್ಚಿಸಬೇಕು' ಎಂದು ಆಗ್ರಹಿಸಿದರು.

ಈಶ್ವರ ಖಂಡ್ರೆ

'ವರ್ಷದಲ್ಲಿ ಕೃಷಿ ಚಟುವಟಿಕೆಯ ಉತ್ತುಂಗದ 60 ದಿನ ಉದ್ಯೋಗ ನೀಡುವುದಿಲ್ಲ ಎಂಬ ಕೇಂದ್ರ ಸರ್ಕಾರದ ನಿಲುವು ಸರಿಯಲ್ಲ, ಸಮರ್ಥನೀಯವೂ ಅಲ್ಲ. ಉದ್ಯೋಗ ಖಾತ್ರಿಗೆ ರಜೆ ನೀಡುವ ಪ್ರಸ್ತಾವ ಕೈಬಿಡಬೇಕು' ಎಂದು ಒತ್ತಾಯಿಸಿದರು.

'ಕೇಂದ್ರ ಸಚಿವ ಶಿವರಾಜ್ ಸಿಂಗ್ ಚವ್ಹಾಣ್ ಅಧ್ಯಕ್ಷತೆಯಲ್ಲಿ ಇದೇ 28 ಮತ್ತು 29ರಂದು ಎಲ್ಲ ರಾಜ್ಯಗಳ ಗ್ರಾಮೀಣಾಭಿವೃದ್ಧಿ ಸಚಿವರ ಸಭೆ ದೆಹಲಿಯಲ್ಲಿ ನಡೆಯಲಿದೆ. ಈ ಸಭೆಯಲ್ಲಿ ವೇತನ ಅನುಪಾತ ಹೆಚ್ಚಿಸುವಂತೆ ಮತ್ತು 60 ದಿನಗಳ ಬಿಡುವು ಪ್ರಸ್ತಾವ ಕೈಬಿಡುವಂತೆ ಒತ್ತಾಯಿಸುತ್ತೇನೆ' ಎಂದರು.

'ಉಚಿತ ಬಸ್ ಪಾಸ್: ಶೀಘ್ರ ಚಾಲನೆ'

ಬೆಂಗಳೂರು: 'ಎಲ್ಲ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ವಿತರಿಸುವ ಪ್ರಕ್ರಿಯೆಗೆ ಚಾಲನೆ ನೀಡಲಾಗಿದೆ. ಬೆಂಗಳೂರು ಒನ್, ಕರ್ನಾಟಕ ಒನ್ ಕೇಂದ್ರಗಳಲ್ಲಿ ಇನ್ನೆರಡು ದಿನಗಳಲ್ಲಿ ಅರ್ಜಿ ಸಲ್ಲಿಕೆ ಆರಂಭವಾಗಲಿದೆ' ಎಂದು ಸಚಿವ ಬೈರತಿ ಸುರೇಶ್ ತಿಳಿಸಿದ್ದಾರೆ.

'ಶಕ್ತಿ' ಯೋಜನೆಯಡಿ ವಿದ್ಯಾರ್ಥಿನಿಯರ ಉಚಿತ ಪ್ರಯಾಣಕ್ಕೆ ಅವಕಾಶ ಇತ್ತು. ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾದ ಕೂಡಲೇ ವಿದ್ಯಾರ್ಥಿಗಳಿಗೂ ಉಚಿತ ಪ್ರಯಾಣದ 'ಗ್ಯಾರಂಟಿ'ಯನ್ನು ಘೋಷಿಸಿದ್ದು, ಈ ಯೋಜನೆ ಜಾರಿ ಮಾಡಲಾಗುತ್ತಿದೆ ಎಂದು ಮಾಹಿತಿ ನೀಡಿದ್ದಾರೆ. ಪಾಸ್ ವಿತರಣೆ ಕುರಿತಂತೆ ಮಾರ್ಗಸೂಚಿ ಸಿದ್ಧಪಡಿಸಿದ್ದು, ಬಿಡುಗಡೆ ಮಾಡಲಾಗುವುದು. 'ಕರ್ನಾಟಕ ಒನ್, ಬೆಂಗಳೂರು ಒನ್ ಕಚೇರಿಗಳಲ್ಲಿ ನಿಗದಿತ ಅರ್ಜಿಯನ್ನು ಸಲ್ಲಿಸಬೇಕು. ಪರಿಶೀಲನೆ ನಂತರ ಪಾಸ್ ಉಚಿತವಾಗಿ ವಿತರಿಸುವ ಪ್ರಕ್ರಿಯೆ ಆರಂಭಗೊಳ್ಳಲಿದೆ' ಎಂದಿದ್ದಾರೆ.

ಹಣ ವಾಪಸ್

ಈಗಾಗಲೇ ಹಣ ಪಾವತಿ ಮಾಡಿ ಬಸ್ ಪಾಸ್ ಪಡೆದ ವಿದ್ಯಾರ್ಥಿಗಳಿಗೆ ಹಣವನ್ನು ವಾಪಸ್ ನೀಡಲಾಗುವುದು. ವಿದ್ಯಾರ್ಥಿಗಳು ಈ ಸೌಲಭ್ಯ ಬಳಸಿಕೊಳ್ಳಬೇಕು ಎಂದು ಸಚಿವ ಬೈರತಿ ಸುರೇಶ್ ಮನವಿ ಮಾಡಿದ್ದಾರೆ.

ಬೆಂಗಳೂರು ನಗರ ಜಿಲ್ಲಾ ಪಂಚಾಯತಿ

ಕಾರ್ಯಪಾಲಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಜಿಲ್ಲಾ ಪಂಚಾಯತ್ ಕಟ್ಟಡ, 1ನೇ ಮಹಡಿ, ಎಸ್. ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು – 560070.

ಸಂಖ್ಯೆ:ಕಾಅ/ಗ್ರಾಕುನೀ&ನೈವಿ/ಬೆಂನ/ತಾಂಸ/ಟೆಂಡರ್/03/2026–27 ದಿನಾಂಕ: 10–06–2026

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಅಲ್ಪಾವಧಿ ಟೆಂಡರ್ ಪ್ರಕಟಣೆ

2026–27 ನೇ ಸಾಲಿನ EAP Support Activity ಲೆಕ್ಕಶೀರ್ಷಿಕೆ ಅನುದಾನದಡಿ ಅನುಮೋದನೆಯಾಗಿರುವ Goods ಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಮೂಲಕ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: **25–06–2026 ರಂದು ಸಂಜೆ 4.00 ಗಂಟೆಯವರೆಗೆ** ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್‌ಸೈಟ್: **https://kppp.karnataka.gov.in** ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ
ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.

ವಾಸಾಸಂಇ/ವಾ.ಪ್ರ/1107/ಅಡ್ವಟೋರ್/2026–27

ವಿಶೇಷ ತಹಶೀಲ್ದಾರ್ ರವರ ನ್ಯಾಯಾಲಯ,

ಬೆಂಗಳೂರು ದಕ್ಷಿಣ ತಾಲ್ಲೂಕು ಕಂದಾಯಭವನ, ನೆಲ ಮಹಡಿ, ಕೆ.ಜಿ. ರಸ್ತೆ, ಬೆಂಗಳೂರು–560009.
ಇ–ಮೇಲ್:tahasildar.bangaloresouth@gmail.com

ಸಂಖ್ಯೆ: ಎಂಎಸ್‌ಸಿ/ರೇರಾ/ಸಿ.ಆರ್.62/2025–26 ದಿನಾಂಕ:08.06.2026

ನೋಟೀಸ್

ವಿಷಯ:– **Krishna Enterprises (Housing & Infrastructures) India Pvt. Ltd. ರವರಿಂದ ರೇರಾ ಪ್ರಾಧಿಕಾರದ ಆದೇಶದಂತೆ ಬಾಕಿ ಮೊತ್ತ ರೂ. 82,41,723/– ತಹಲ್‌ವರೆಗಿನ ಬಡ್ಡಿ ರೂಪಾಯಿ ಮೊತ್ತವನ್ನು ಭೂಕಂದಾಯ ಬಾಕಿಯಂತೆ ವಸೂಲು ಮಾಡುವ ಬಗ್ಗೆ.**

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ ಉಲ್ಲೇಖ ರೇರಾ ನ್ಯಾಯಾಲಯದ ಆದೇಶ : ಸಂಖ್ಯೆ: ರೇರಾ/ಕಂದಾಯ/ಆಡಳಿತ/4688/2024–25/832 ದಿನಾಂಕ: 04.11.2020ರ ಆದೇಶದಂತೆ (KRISHNA Enterprises (Housing & Infrastructures) India Pvt Ltd. GPA Holder, ಬಿ.ಎಂ. ಐಯ್ಯಣ್ಣ ಬಿನ್ ಬಿ.ಪಿ.ಮಾಚಯ್ಯ, ಆರ್. ಚಂದ್ರಶೇಖರ್ ಬಿನ್ ಲೇ.ರಾಮಯ್ಯ, ಐ.ಎಂ.ದೇವಪ್ಪ ಬಿನ್ ಐ.ಜೆ ಮಾಚಯ್ಯ. ಇವರುಗಳು ರೇರಾ ಪ್ರಾಧಿಕಾರದ ಬಾಕಿ ಮೊಬಲಗನ್ನು ಭೂ ಕಂದಾಯ ಬಾಕಿಯಂತೆ ವಸೂಲು ಮಾಡುವ ಸಂಬಂಧ ಈ ಪ್ರಾಧಿಕಾರದಿಂದ ನಮೂನೆ–37ರ ಮುಖೇನ ನೋಟೀಸ್ ನೀಡಲಾಗಿದ್ದರೂ ಸಹ ಸದರಿ ಬಾಕಿದಾರರು **ರೇರಾ ಪ್ರಾಧಿಕಾರದ ನ್ಯಾಯಾಲಯದ ಆದೇಶದಂತೆ ದಂಡ/ಪರಿಹಾರದ ಮೊತ್ತ ರೂ. 82,41,723/– ತಹಲ್‌ವರೆಗಿನ ಬಡ್ಡಿ ಸೇರಿದ ನಿಗದಿತ ಮೊಬಲಗನ್ನು ಕಟ್ಟಲು** ವಿಫಲಾಗಿರುತ್ತಾರೆ.

ಆದ್ದರಿಂದ KRISHNA Enterprises (Housing & Infrastructures) India Pvt Ltd. GPA Holder, ಬಿ.ಎಂ. ಐಯ್ಯಣ್ಣ ಬಿನ್ ಬಿ.ಪಿ.ಮಾಚಯ್ಯ, ಆರ್. ಚಂದ್ರಶೇಖರ್ ಬಿನ್ ಲೇ.ರಾಮಯ್ಯ, ಐ.ಎಂ. ದೇವಪ್ಪ ಬಿನ್ ಐ.ಜೆ ಮಾಚಯ್ಯ.

ಸ್ವತ್ತಿನ ವಿವರ: ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ದೊಡ್ಡತೊಗೂರು ಗ್ರಾಮದ ಸ. ನಂ, 134/4 ಮತ್ತು 133/9 ರ ಸ್ವತ್ತು ಮತ್ತು ಬಾಕಿದರರ ಕಚೇರಿಯನ್ನು **ದಿನಾಂಕ: 29.06.2026 ರಂದು** ಬಹಿರಂಗ ಹರಾಜು ಮಾಡಲಾಗುವುದು.

ಸಹಿ/–
ವಿಶೇಷ ತಹಶೀಲ್ದಾರ್,
ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು.

ಕರ್ನಾಟಕ ಸರ್ಕಾರ

ಕೊಡಗು ಜಿಲ್ಲಾ ಪಂಚಾಯತ್, ಮಡಿಕೇರಿ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಸಹಾಯಕ ನಿರ್ದೇಶಕರ ಕಚೇರಿ, ಜಿಲ್ಲಾ ಕ್ರೀಡಾಂಗಣ, ಮ್ಯಾನ್ಸ್ ಕಂಪೌಂಡ್,ಮಡಿಕೇರಿ
ದೂರವಾಣಿ:08272–2220986 ಇ–ಮೇಲ್: adysskodagu@gmail.com
ಸಂ:ಸನಿ/ಯುಸಕ್ರೀಇ/ಕೊಡಗು/ಪೊ.ಕ್ರೀ.ವ.ಊ.ಟೆ/2026–27 ದಿನಾಂಕ:08–06–2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಸಹಾಯಕ ನಿರ್ದೇಶಕರ ಕಛೇರಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜನರಲ್ ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣ, ಮಡಿಕೇರಿ ಕೊಡಗು. ಇವರ ಅಧೀನದಲ್ಲಿರುವ ಪೊನ್ನಂಪೇಟೆ ಕ್ರೀಡಾ ವಸತಿ ನಿಲಯದ ಕ್ರೀಡಾಪಟುಗಳ ದೈನಂದಿನ ಊಟೋಪಹಾರ ಸರಬರಾಜು ಮಾಡಲು ಅರ್ಹ ಗುತ್ತಿಗೆದಾರರನ್ನು ಆಯ್ಕೆ ಮಾಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಕೆಳಕಾಣಿಸಿದ ಟೆಂಡರನ್ನು ಆಹ್ವಾನಿಸಿದೆ.

ಕ್ರ.ಸಂ	ಟೆಂಡರ್‌ನ ವಿವರ	ಟೆಂಡರ್‌ನ ಮೊತ್ತ (ರೂ ಗಳಲ್ಲಿ)	ಇ.ಎಂ.ಡಿ ಮೊತ್ತ (ರೂಗಳಲ್ಲಿ)
1	ಕ್ರೀಡಾ ವಸತಿ ನಿಲಯ, ಪೊನ್ನಂಪೇಟೆ ಕೊಡಗು ಜಿಲ್ಲೆ	ರೂ. 46,06,875/–	ರೂ. 92,138/–

ಆಸಕ್ತ ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://kppp.karnataka.gov.in ರಲ್ಲಿ ತಮ್ಮ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದು ಹಾಗೂ ಟೆಂಡರ್ ದಾಖಲೆಗಳನ್ನು ಉಚಿತವಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ನಲ್ಲಿ ವೀಕ್ಷಿಸಬಹುದು. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:18–06–2026 ಸಮಯ: ಅಪರಾಹ್ನ: 05.00 ಗಂಟೆ.

ಸಹಿ/– ಸಹಾಯಕ ನಿರ್ದೇಶಕರು
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಮಡಿಕೇರಿ, ಕೊಡಗು ಜಿಲ್ಲೆ

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಪ್ರಾದೇಶಿಕ ಕಛೇರಿ: ಶೆಡ್ ನಂ. ಎ–99, 3ನೇ ಮುಖ್ಯರಸ್ತೆ, 2ನೇ ಹಂತ ಪೀಣ್ಯ, ಬೆಂಗಳೂರು–560 058, ದೂ: 9900306365, e-mail: khdcsilk@gmail.com

ಸಂಖ್ಯೆ:No.KHDCL/2026-27/IND0030 ದಿನಾಂಕ: 11.06.2026

ಇ–ಟೆಂಡರ್ ಪ್ರಕಟಣೆ

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ (ಕೆಹೆಚ್‌ಡಿಸಿಎಲ್)ರವರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಗಳ ಅಧಿನಿಯಮದಡಿ 1999 ಹಾಗೂ ನಿಯಮನುಸಾರ 2000ರನ್ವಯ ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ನಿಗಮದ **ನೋಂದಾಯಿತ ಪ್ರತಿಷ್ಠಿತ ರೇಷ್ಮೆ ರೀಲರ್ಸ್, ಟ್ವಿಸ್ಟರ್ಸ್ ಮತ್ತು ರೇಷ್ಮೆ ಟ್ರೇಡರ್ಸ್‌ಗಳಿಂದ ವಿವಿಧ ನಮೂನೆಯ 1500 ಕೆ.ಜಿ ರೇಷ್ಮೆ ನೂಲು ಸರಬರಾಜಿಗಾಗಿ** ದ್ವಿ–ಲಕೋಟೆ ಪದ್ಧತಿಯಲ್ಲಿ (ತಾಂತ್ರಿಕ ಮತ್ತು ಕಮರ್ಷಿಯಲ್ ಬಿಡ್‌ಗಳು) ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಅಂತರ್ಜಾಲದಲ್ಲಿ (**https://kppp.Karnataka.gov.in**) ದಡಿ ಆಹ್ವಾನಿಸಲಾಗಿದೆ. **ದಿನಾಂಕ:25.06.2026ಸಂಜೆ 5.30 ಗಂಟೆಯೊಳಗೆ** ಟೆಂಡರುಗಳನ್ನು ಸಲ್ಲಿಸಬೇಕು.

ಟೆಂಡರ್‌ಗಳನ್ನು ಯಾವುದೇ ಸೂಚನೆಯಿಲ್ಲದೆ ಪೂರ್ತಿ ಅಥವಾ ಭಾಗಶ: ಪರಿಗಣಿಸುವ ಅಥವಾ ತಿರಸ್ಕರಿಸುವ ಪರಿಮಿತಿ/ಅಧಿಕಾರವನ್ನು ನಿಗಮವು ಹೊಂದಿರುತ್ತದೆ.

ಸಹಿ/–
ವ್ಯವಸ್ಥಾಪಕರು ಉತ್ಪಾದನೆ (ರೇಷ್ಮೆ)

ವಾಸಾಸಂಇ/ವಾಪ್ರ/ಜೆಎ/1112/2026–27

ನಗರಸಭಾ ಕಾರ್ಯಾಲಯ ಹೊಸಪೇಟೆ.

No:SE7735/3/CMC HOSPETE/TENDER/2026-27
Dated: 11.06.2026

ಟೆಂಡರಿಗಾಗಿಆಹ್ವಾನ (ಐ.ಎಫ್.ಟಿ.) ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೋಕ್ಯೂರಮೆಂಟ್ ಮುಖಾಂತರ)

2026–27 ನೇ ಸಾಲಿನ ನಗರಸಭೆ ನಿಧಿಅನುದಾನದಡಿಯಲ್ಲಿಈ ಕೆಳಗಿನ ಕೆಲಸಕ್ಕಾಗಿಸೂಕ್ತ ದರ್ಜೆಯಲ್ಲಿ ನೊಂದಾಯಿಸಿದ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರ್‌ಡಾಕ್ಯುಮೆಂಟ್ ನಿಯಮಾವಳಿಯಂತೆ ಇ–ಪ್ರೋಕ್ಯೂರಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು.ಗುತ್ತಿಗೆದಾರರುತಮಗೆ ಬೇಕಾದಟೆಂಡರ್ ವಿವರಗಳನ್ನು **www.eproc.karnataka.govt.in** ವೆಬ್‌ಸೈಟ್ ಮೂಲಕ ಪಡೆದುಕೊಂಡು, ಸದರಿ ಇ–ಪ್ರೋಕ್ಯೂರಮೆಂಟಿನ ಷರತ್ತಿಗೊಳಪಟ್ಟು ಭರ್ತಿ ಮಾಡಿದ ಟೆಂಡರ್‌ಗಳನ್ನು ಇ– ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಬಹುದು.ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ **ದಿನಾಂಕ:16–06–2026 ಸಂಜೆ 5.00 ಗಂಟೆ ವರೆಗೆ,** ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ **ದಿನಾಂಕ:17–06–2026 ಸಂಜೆ 5.30 ಗಂಟೆ ವರೆಗೆ** ಟೆಂಡರ್‌ಗಳನ್ನು ತೆರೆಯುವ ಸ್ಥಳನಗರಸಭೆ, ಹೊಸಪೇಟೆ. ಕಾಮಗಾರಿಯ ವಿವರ: **Operation and Maintenance of water Supply Distribution System of CMC Hosapete(DMA/2026-27/SE7735/CALL-3)** ಅಂದಾಜು ಮೊತ್ತ(ರೂ.ಲಕ್ಷಗಳಲ್ಲಿ):56.27 ಗಳು

ಸಹಿ/–ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ನಗರಸಭೆ, ಹೊಸಪೇಟೆ.
ಸಹಿ/–ಪೌರಾಯುಕ್ತರು ನಗರಸಭೆ, ಹೊಸಪೇಟೆ

ವಾ.ಸಾ.ಸಂ.ಇ/ವಿಜಯನಗರ/2026–27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/133

ಬೆಂಗಳೂರು ಕೇಂದ್ರ ನಗರ ಪಾಲಿಕೆ

ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಶಿವಾಜಿನಗರ ವಿಭಾಗ, ತಿಮ್ಮಯ್ಯ ರಸ್ತೆ, ಕ್ವೀನ್ಸ್ ರಸ್ತೆ, ಬೆಂಗಳೂರು.

ಸಂಖ್ಯೆ: ಕಾಪಾಅ/ಶಿನ/ಕೆಪಿಪಿ/14/2026–27 ದಿನಾಂಕ: 11–06–2026

ಅಲ್ಪಾವಧಿ ಟೆಂಡರ್‌ಗಳ ಆಹ್ವಾನ
(ದ್ವಿ ಲಕೋಟೆ ಪದ್ಧತಿ) (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ವೆಬ್‌ಸೈಟ್: **https://kppp.karnataka.gov.in**

ಕಾರ್ಯಪಾಲಕ ಅಭಿಯಂತರರು, ಶಿವಾಜಿನಗರ ವಿಭಾಗ, ಬೆಂಕೇನಪಾ, ಬೆಂಗಳೂರು ರವರು ಕೆಳಗೆ ತಿಳಿಸಿರುವ ನಿರ್ಮಾಣ ಕಾಮಗಾರಿಗಳಿಗೆ ಬೆಂಕೇನಪಾ/ಕೆ.ಪಿ.ಡಬ್ಲ್ಯೂ.ಡಿ/ಸಿ.ಪಿ.ಡಬ್ಲ್ಯೂ.ಡಿ/ರೈಲ್ವೆ/ಎಂಇಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರಕಾರಿ ಸಂಸ್ಥೆಗಳಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ.ಸಂ.	ಕೆಲಸದ ಹೆಸರು
1)	**ವಾರ್ಡ್ ನಂ.121 (ಹೊಸ ವಾರ್ಡ್ ನಂ.08) ಅಲಸೂರಿನ ಶ್ರೀ ಸೋಮೇಶ್ವರ ದೇವಸ್ಥಾನದ ಸಂಪರ್ಕ ರಸ್ತೆಗಳು ಮತ್ತು ಒಳಚರಂಡಿಗಳು ಮತ್ತು ಸುತ್ತಮುತ್ತಲಿನ ಪ್ರದೇಶದ ಸಮಗ್ರ ಅಭಿವೃದ್ಧಿ ಕಾಮಗಾರಿಗಳು.** ಟೆಂಡರ್‌ಗೆ ಇಟ್ಟ ಅಂದಾಜು ವೆಚ್ಚ (ಲಕ್ಷ ರೂ.ಗಳಲ್ಲಿ): **ರೂ.247.48.** ಇಎಂಡಿ ಮೊತ್ತ (ರೂ.ಗಳಲ್ಲಿ): **ರೂ.24,75,000/–.**

ಟೆಂಡರ್‌ನ ಕಾರ್ಯಸೂಚಿ: 1) ಪೂರ್ವ ಬಿಡ್ ಸಭೆಯು **ದಿನಾಂಕ: 17–06–2026 ರಂದು ಮಧ್ಯಾಹ್ನ 3.00 ಗಂಟೆಗೆ** ನಡೆಯಲಿದೆ. **2)** ಭರ್ತಿಮಾಡಿದ ಟೆಂಡರ್ ದಾಖಲೆಗಳನ್ನು ಅಪ್‌ಲೋಡ್ ಮಾಡುವ ಕೊನೆಯ **ದಿನಾಂಕ: 19–06–2026ರ ಸಂಜೆ 4.00 ಗಂಟೆಯವರೆಗೆ. 3)** ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **20–06–2026 ಸಂಜೆ 4.30 ಗಂಟೆಗೆ. 4)** ಆರ್ಥಿಕ ಬಿಡ್‌ಗಳನ್ನು ತಾಂತ್ರಿಕ ಬಿಡ್‌ಗಳ ಅನುಮೋದನೆಯ ನಂತರ ತೆರೆಯಲಾಗುವುದು.

ಸಹಿ/–, ಕಾರ್ಯಪಾಲಕ ಅಭಿಯಂತರರು, ಶಿವಾಜಿನಗರ ವಿಭಾಗ, ಬೆಂಕೇನಪಾ.

ಪುರಸಭಾ ಕಾರ್ಯಾಲಯ, ಬೊಮ್ಮಸಂದ್ರ

ಅತ್ತಿಬೆಲೆ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ–560 099
ಫೋನ್: 080–27834655, E-Mail: itstaff_ulb_bommasandra@yahoo.com

ಸಂಖ್ಯೆ: TMCB/ENG/MF/TR02/2026-27 ದಿನಾಂಕ: 11.06.2026

ಟೆಂಡರ್ ಪ್ರಕಟಣೆ
(ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)

(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯೂರ ನಿಬಂಧನೆಗಳಂತೆ ಅಲ್ಪಾವಧಿ ಹಾಗೂ ದೀರ್ಘಾವಧಿ ಟೆಂಡರ್ ಆಹ್ವಾನಿಸಲಾಗಿದೆ)

ಬೊಮ್ಮಸಂದ್ರ ಪುರಸಭೆ ವ್ಯಾಪ್ತಿಯಲ್ಲಿ 2026–27ನೇ ಸಾಲಿನ ವಿವಿಧ ಅನುದಾನದಡಿ ಬೊಮ್ಮಸಂದ್ರ ಪುರಸಭೆ ವ್ಯಾಪ್ತಿಯಲ್ಲಿ ಕೈಗೊಳ್ಳಲು ಉದ್ದೇಶಿಸಿರುವ **10 ಕಾಮಗಾರಿಗಳ ಒಟ್ಟು ಮೊತ್ತ ರೂ. 54.62 ಲಕ್ಷಗಳಿಗೆ** ಐಟಂವಾರು ಮತ್ತು ಕೆ.ಪಿ.ಪಿ ಪೋರ್ಟಲ್‌ನ ಏಕಲಕೋಟೆ ಪದ್ಧತಿಯಲ್ಲಿ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ **ಅಲ್ಪಾವಧಿ ಹಾಗೂ ದೀರ್ಘಾವಾಧಿ** ಟೆಂಡರ್ ಆಹ್ವಾನಿಸಲಾಗಿದೆ. ಕೆ.ಪಿ.ಪಿ ಪೋರ್ಟಲ್‌ನ ವೆಬ್‌ಸೈಟ್: **https://kppp.karnataka.gov.in** ಮೂಲಕ ಟೆಂಡರ್ ಸಲ್ಲಿಸುವುದು.

2026–27ನೇ ಸಾಲಿನ ವಿವಿಧ ಅನುದಾನದ ಕಾಮಗಾರಿಗಳಿಗೆ ಕೆ.ಪಿ.ಪಿ ಪೋರ್ಟಲ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 20.06.2026 ಸಮಯ: 17:00:00 ಯವರೆಗೆ.** ಟೆಂಡರ್ ತೆರೆಯುವ **ದಿನಾಂಕ: 22.06.2026 ಸಮಯ: 17:30:00 ಯವರೆಗೆ.** ಹೆಚ್ಚಿನ ವಿವರಗಳಿಗಾಗಿ **itstaff_ulb_bommasandra@yahoo.com** ಅಥವಾ ಪುರಸಭೆಯ ಕಿರಿಯ ಅಭಿಯಂತರರನ್ನು ಸಂಪರ್ಕಿಸುವುದು.

ಸಹಿ/–
ಆಡಳಿತಾಧಿಕಾರಿಗಳು / ಉಪವಿಭಾಗಾಧಿಕಾರಿಗಳು
ಪುರಸಭೆ, ಬೊಮ್ಮಸಂದ್ರ.

ವಾಸಾಸಂಇ/ವಾಪ್ರ/ಜೆಎ/1113/2026–27

ಸಹಿ/–
ಮುಖ್ಯಾಧಿಕಾರಿ
ಪುರಸಭೆ, ಬೊಮ್ಮಸಂದ್ರ.

AUCTION NOTICE

This is to inform public in general that Kotak Mahindra Bank Ltd has organized an auction in below mention respect of vehicles.

1) CB_TATA_INTRA_V50
YOM – 2023
Reg No – KA42B6160
2) ASHOK LEYLAND LIMITED - AL_DOST_GOODS
YOM – -
Reg No – KA17AA9274
3) MAHINDRA_AND_MAHINDRA - M&M PICKUPGOODS
YOM – 2024
Reg No – KA17AA9520
4) ASHOK LEYLAND LIMITED - AL 3118
YOM – 2016
Reg No – KA05AK6336
5) CB_EICHER_PRO_3019_FULLY_BULT_VEHICLE
YOM – -
Reg No – KA17AA9976
6) CB_LPT_4223_COWL_CHASSIS_GOODS
YOM – -
Reg No – KA40B5615
7) TATA MOTORS LTD. - TATA LPK 3118 FBV
YOM – 2018
Reg No – KA35C2213
8) CB_AL_BADA_DOST
YOM – 2023
Reg No – KA27C6403
9) CB_AL_BADA_DOST
YOM – 2024
Reg No – KA35D8791

UNDER HYPOTHECATION WITH M/S KOTAK MAHINDRA BANK IS UNDER SALE IN ITS "AS IS WHERE IS CONDITION"

INTERESTED PARTIES CAN GIVE THEIR QUOTATIONS (ONLINE/OFFLINE) WITHIN 15 DAYS FROM THIS PAPER PUBLICATION i.e. from 12.06.2026
(Please note that closing Auction date would not be a Weekly off / Holiday)

BRANCH ADDRESS:
KOTAK MAHINDRA BANK LTD.,
22, MG ROAD, BANGALORE
KARNATAKA – 560001
OR
Contact: Arunlaxman Kokare
Kotak Mahindra Bank Ltd.
Contact / 080 - 61564249

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಅಭಿಯಂತರವರ ಕಛೇರಿ, ಕನೀನಿನಿ, ತುಂ.ಭ.ಎ.ಕಾ. ವಿಭಾಗ ನಂ.3, ಸಿಂಧನೂರು–584128

ಸಂ: ಕನೀನಿನಿ/ಕಾನಿಅ–3/ಟಿ.ಎಲ್.ಬಿ.ಸಿ/ತಾಶಾ/ಕನಾಯೋ/ನೋಟಿಫಿಕೇಷನ್/2026–27/ 428 ದಿ: 04.06.2026.

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್ಮೆಂಟ್ ಮುಖಾಂತರ ಮಾತ್ರ)

ಈ ವಿಭಾಗದ ವ್ಯಾಪ್ತಿಯಲ್ಲಿನ ಲೆಕ್ಕ ಶೀರ್ಷಿಕೆ 4701 ರ ಅಡಿಯಲ್ಲಿ Diversion of Flood water from Maski nala to Kanakanala Valley and Modernization of Kanakanala Project ಕಾಮಗಾರಿಗೆ ಈ ಕಛೇರಿಯಿಂದ ಇ–ಪ್ರೊಕ್ಯೂರಮೆಂಟ್ ವೇದಿಕೆ ಮೂಲಕ ದ್ವಿಲಕೋಟೆ ಪದ್ಧತಿಯಲ್ಲಿ ಅರ್ಹ ಗುತ್ತೇದಾರರಿಂದ ಶೇಕಡಾವಾರು ಟೆಂಡರಗಳನ್ನು ಆಮಂತ್ರಿಸಲಾಗಿದೆ. ಟೆಂಡರಗಿಟ್ಟ ಮೊತ್ತ ರೂ. 10089.97 ಲಕ್ಷಗಳು ಇರುತ್ತದೆ. ಭರ್ತಿ ಮಾಡಿದ ಟೆಂಡರನ್ನು ದಿನಾಂಕ 09.07.2026 ರ ಸಂಜೆ 4–00 ಗಂಟೆ ವರೆಗೆ ಸಲ್ಲಿಸಬಹುದಾಗಿದೆ. ಕಾಮಗಾರಿಯ ಹೆಸರು, ಇ.ಎಂ.ಡಿ. ಮೊತ್ತ, ಗುತ್ತೇದಾರರ ದರ್ಜೆ ಹಾಗೂ ಇತರೆ ಎಲ್ಲಾ ವಿವರಗಳನ್ನು ಈ ಕಛೇರಿಯಿಂದ ಕಛೇರಿಯ ಸಮಯದಲ್ಲಿ ಅಥವಾ ಇ–ಪ್ರೊಕ್ಯೂರ್‌ಮೆಂಟ್ ಅಂತರ್ಜಾಲದಲ್ಲಿ https://kppp.karnataka.gov.in/#/portal/ portal-home ಪಡೆಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಕನೀನಿನಿ, ತುಂ.ಎ.ಕಾ. ವಿಭಾಗ ನಂ.3, ಸಿಂಧನೂರು.

DIP/RCR/115KSMCA/117/2026-27

ದಾವಣಗೆರೆ–ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ.

ಶ್ರೀ ಡಿ. ದೇವರಾಜ ಅರಸು ಬಡಾವಣೆ, 'ಎ' ಬ್ಲಾಕ್, ಪಿ.ಬಿ.ರಸ್ತೆ, ದಾವಣಗೆರೆ–06
ನಂ:ದಾಹನಪ್ರಾ:ನಿ4:ನಾಸೌನಿ:ನಿಹಂಪ್ರ–01:2026–27/785 ದಿನಾಂಕ: 10–06–2026.

ನಾಗರೀಕ ಸೌಲಭ್ಯ ನಿವೇಶನಗಳ ಹಂಚಿಕೆಗಾಗಿ ಅರ್ಜಿ ಆಹ್ವಾನ

ದಾವಣಗೆರೆ–ಹರಿಹರ ನಗರಾಭಿವೃದ್ಧಿ ಪ್ರಾಧಿಕಾರವು ತನ್ನ ವ್ಯಾಪ್ತಿಯಲ್ಲಿರುವ ಖಾಸಗಿ ವಸತಿ ವಿನ್ಯಾಸಗಳಲ್ಲಿನ ನಾಗರೀಕ ಸೌಲಭ್ಯ ನಿವೇಶನಗಳನ್ನು ಶೈಕ್ಷಣಿಕ ಸಂಸ್ಥೆಗಳಿಗೆ, ವಿಶೇಷಚೇತನರ ಕ್ಷೇಮಾಭಿವೃದ್ಧಿ ಸಂಸ್ಥೆ ಹಾಗೂ ವೃದ್ಧಾಶ್ರಮ ಸಂಸ್ಥೆಗಳಿಗೆ ಹಾಗೂ ನೋಂದಾಯಿತ ಇತರೆ ಸಂಘ ಸಂಸ್ಥೆಗಳಿಗೆ ಹಂಚಿಕೆ ಮಾಡಲು ಅರ್ಜಿ ಆಹ್ವಾನಿಸಲಾಗಿದೆ. ಶೈಕ್ಷಣಿಕ ಸಂಸ್ಥೆಗಳಿಗೆ(ಕನ್ನಡ ಮಾಧ್ಯಮ), ವಿಶೇಷಚೇತನರಿಗೆ ಮೊದಲ ಆಧ್ಯತೆ ಮೇರೆಗೆ ಸರ್ಕಾರದ ಆದೇಶದಂತೆ ಮಾರುಕಟ್ಟೆ ಬೆಲೆಯ ಶೇ.50 ರ ದರದಲ್ಲಿ ನಿವೇಶನಗಳನ್ನು ಹಂಚಿಕೆ ಮಾಡಲಾಗುವುದು. ಇತರೆ ಸಂಘ ಸಂಸ್ಥೆಗಳಿಗೆ ಹಾಗೂ ಶೈಕ್ಷಣಿಕ ಸಂಸ್ಥೆಗಳಿಗೆ ಸರ್ಕಾರ ನಿಗಧಿಪಡಿಸಿರುವ ಮಾರುಕಟ್ಟೆ ದರದಂತೆ ಹಂಚಿಕೆ ಮಾಡಲಾಗುವುದು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಸೇರಿದ ಸಂಘ ಸಂಸ್ಥೆಗಳಿಗೆ ಸರ್ಕಾರದ ನಿಯಮಗಳಂತೆ ಮೀಸಲಾತಿ ಆಧಾರದ ಮೇಲೆ ಹಂಚಿಕೆ ಮಾಡಲಾಗುವುದು. ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ 1991ರ ರೀತ್ಯಾ ಮಂಜೂರು ಮಾಡಲು, ನಿಗಧಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಲಭ್ಯವಿರುವ ನಾಗರೀಕ ಸೌಲಭ್ಯ ನಿವೇಶನಗಳ ಅಳತೆ, ದರ ಹಾಗೂ ನಿಬಂಧನೆಗಳ ವಿವರ ಪ್ರಾಧಿಕಾರ ಸೂಚನಾ ಫಲಕದಲ್ಲಿ ಮತ್ತು ಪ್ರಾಧಿಕಾರದ ವೆಬ್‌ಸೈಟ್ www.davanagere.uda.gov.in ನಲ್ಲಿ ಪ್ರಚುರಪಡಿಸಲಾಗಿದೆ. ಆಸಕ್ತ ಸಂಘ/ಸಂಸ್ಥೆಗಳು ಪ್ರಾಧಿಕಾರದಲ್ಲಿ ನೋಂದಾಯಿಸಿಕೊಂಡು ನಿವೇಶನಕ್ಕೆ ನಿಗಧಿಪಡಿಸಿದ ಶೇ.10ರಷ್ಟು ಪ್ರಾರಂಭಿಕ ಮೊತ್ತದೊಂದಿಗೆ ಅರ್ಜಿ ಸಲ್ಲಿಸಬಹುದು. ಅರ್ಜಿಗಳನ್ನು ದಿನಾಂಕ:15–07–2026ರಂದು ಸಂಜೆ 5.00ಗಂಟೆಯೊಳಗಾಗಿ ಪ್ರಾಧಿಕಾರದ ಕಛೇರಿಗೆ ಸಲ್ಲಿಸುವುದು. ಹೆಚ್ಚಿನ ಮಾಹಿತಿಗಾಗಿ ನಗರಾಭಿವೃದ್ಧಿ ಪ್ರಾಧಿಕಾರದ ಕಛೇರಿಯಲ್ಲಿ ವಿಷಯ ನಿರ್ವಹಕರನ್ನು ಸಂಪರ್ಕಿಸುವುದು.

ವಾಸಾಇ/ಡಿವಿಜಿ/145/ಕೆಎಸ್‌ಎಂಸಿಎ/2026–27 ಸಹಿ/– ಆಯುಕ್ತರು, ದಾ–ಹ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ.

ಕರ್ನಾಟಕ ಸರ್ಕಾರ

ಗಣಿ ಮತ್ತು ಭೂವಿಜ್ಞಾನ ಇಲಾಖೆ

#49, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560 001.
ಇ–ಮೇಲ್: dir-mines@karnataka.gov.in

No. DMG-17012/26/2025/2026-27 Dated: 06.06.2026

ಟೆಂಡರ್ ಆಹ್ವಾನ ಪ್ರಕಟಣೆ

ಗಣಿ ಮತ್ತು ಭೂವಿಜ್ಞಾನ ಇಲಾಖೆಯು ಜನಿತವಾದ ಕಬ್ಬಿಣದ ಅದಿರಿನ ಫೈನ್ಸ್ ಹರಾಜಿಗೆ MSTC ಮೂಲಕ ಸಂಬಂಧಿತ ಅಧಿಸೂಚನೆಯಡಿಯಲ್ಲಿ ಟೆಂಡರ್ ಕರೆಯಲಾಗಿದೆ.

ಅರ್ಹತಾ ಷರತ್ತುಗಳು, ನಿಯಮಗಳು ಮತ್ತು ಷರತ್ತುಗಳು, ಎಲೆಕ್ಟ್ರಾನಿಕ್ ಹರಾಜಿನಲ್ಲಿ ಭಾಗವಹಿಸುವ ದಿನಾಂಕ ಮತ್ತು ಸಮಯವನ್ನು ಟೆಂಡರ್ ಡಾಕ್ಯುಮೆಂಟ್‌ನಲ್ಲಿ ನೀಡಲಾಗಿದೆ. MSTC ಪೋರ್ಟಲ್‌ನಲ್ಲಿ ಪ್ರತ್ಯೇಕ ಲಾಟ್ ವೈಸ್ ಹರಾಜು ಅಧಿಸೂಚನೆಗಳನ್ನು ಪ್ರಕಟಿಸಲಾಗಿದೆ. ಆಯಾ ಲಾಟ್‌ಗಳ ಇ–ಹರಾಜು ಪ್ರಕ್ರಿಯೆಗಾಗಿ ಟೆಂಡರ್ ದಾಖಲೆಗಳು, ಅಧಿಸೂಚನೆಗಳು, ಇತ್ತೀಚಿನ ಮಾಹಿತಿಗಳು ಮತ್ತು ಇತರ ವಿವರಗಳು MSTC Ltd ನ ವೆಬ್‌ಸೈಟ್ https://www.mstcecommerce.com/auctionhome/aucsearch/search.jsp ಇದರಲ್ಲಿ ಎಲೆಕ್ಟ್ರಾನಿಕ್ ರೂಪದಲ್ಲಿ ಮಾತ್ರ ಲಭ್ಯವಿರುತ್ತವೆ.

ಹಳೇ ಸ್ಟಾಕ್ ಹರಾಜಿನ ಲಾಟ್‌ಅನ್ನು "ಎಲ್ಲಿ ಹೇಗಿದೆಯೋ ಹಾಗೆ ಮತ್ತು ಯಾವುದೇ ದೂರು ರಹಿತ" ಆಧಾರದ ಮೇಲೆ ಹರಾಜು ಮಾಡಲಾಗುತ್ತದೆ. ಭಾಗವಹಿಸುವ ಮೊದಲು ಆಸಕ್ತ ಬಿಡ್‌ದಾರರು ಕಬ್ಬಿಣ/ಮ್ಯಾಂಗನೀಸ್‌ನ ಅದಿರಿನ ಪ್ರಮಾಣ ಮತ್ತು ಗುಣಮಟ್ಟವನ್ನು ಖಚಿತ ಪಡಿಸಿಕೊಳ್ಳಬೇಕು. ಬಿಡ್‌ನ ದೃಢೀಕರಣದ ನಂತರ ಉದ್ಭವಿಸುವ ಯಾವುದೇ ವಿವಾದಕ್ಕೆ ಇಲಾಖೆಯು ಜವಾಬ್ದಾರಿಯಲ್ಲ. ಆಸಕ್ತ ಬಿಡ್ ದಾರರು MSTC Ltd ವೆಬ್‌ಸೈಟ್‌ಗೆ ಭೇಟಿ ನೀಡಬಹುದು.

ಸಹಿ/–
ನಿರ್ದೇಶಕರು,
ಗಣಿ ಮತ್ತು ಭೂವಿಜ್ಞಾನ ಇಲಾಖೆ

DIPR/CP/1106/NR/2026-27

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ.
ಬೆಂಗಳೂರು

ಲೋಕೋಪಯೋಗಿ ಇಲಾಖೆ

ಕಾರ್ಯಪಾಲಕ ಅಭಿಯಂತರವರ ಕಛೇರಿ,
ಲೋಕೋಪಯೋಗಿ ಇಲಾಖೆ, ಗುಣ ಭರವಸೆ ವಿಭಾಗ, 5ನೇ ಮಹಡಿ,
ಅನೆಕ್ಸ್ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು–560 001.

ಅಲ್ಪಾವಧಿ ಟೆಂಡರ್ (2ನೇ ಕರೆ) ಪ್ರಕಟಣೆ ಸಂಖ್ಯೆ: 06,07/2026–27
ದಿನಾಂಕ: 11.06.2026

(ದ್ವಿ ಲಕೋಟೆ ಪದ್ಧತಿ) (ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಮುಖ್ಯ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಗುಣ ಭರವಸೆ ವಲಯ, ಬೆಂಗಳೂರು, ಅಧೀಕ್ಷಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಗುಣ ಭರವಸೆ ವೃತ್ತ, ಬೆಂಗಳೂರು, ಲೋಕೋಪಯೋಗಿ ಇಲಾಖೆ, ಗುಣ ಭರವಸೆ ವಿಭಾಗ, ಬೆಂಗಳೂರು ಹಾಗೂ ಇದರ ಅಧೀನದಲ್ಲಿ ಬರುವ ಗುಣ ಭರವಸೆ ಉಪವಿಭಾಗ ಕಛೇರಿಗಳಾದ ಲೋಕೋಪಯೋಗಿ ಇಲಾಖೆ, ಗುಣ ಭರವಸೆ ಉಪವಿಭಾಗ ಬೆಂಗಳೂರು, ಕೋಲಾರ, ಚಿತ್ರದುರ್ಗ, ಶಿವಮೊಗ್ಗ ಹಾಗೂ ವಿಶೇಷ ಗುಣ ಭರವಸೆ ಉಪವಿಭಾಗ ತುಮಕೂರು ಕಛೇರಿಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಪಡೆಯಲು, ಯಾವುದೇ ರಾಜ್ಯ ಸಂಸ್ಥೆಗಳಲ್ಲಿ ಮತ್ತು ಕಾರ್ಮಿಕ ಇಲಾಖೆಯಿಂದ ಪರವಾನಗಿ ಹೊಂದಿರುವ ನೋಂದಾಯಿತ ಅರ್ಹ ಏಜೆನ್ಸಿ/ಸಂಸ್ಥೆಗಳಿಂದ ಹೊರಗುತ್ತಿಗೆ ಆಧಾರದ ಮೇಲೆ ಈ ಕೆಳಕಂಡ ಮಾನವ ಸಂಪನ್ಮೂಲ ಪೂರೈಕೆಗಾಗಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿರುತ್ತದೆ.

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ	ಇಎಂಡಿ
1	"Supply of Manpower through Outsourcing for the Offices of QA Zone, QA Bengaluru Circle, QA Bengaluru Division and QA Bengaluru Sub Division for FY 2026-27" (PWD/2026-27/SE1322-**Call-3**)	ರೂ.20.04 ಲಕ್ಷಗಳು.	ರೂ. 40,100/– ಮಾತ್ರ.
2	"Supply of Manpower through Outsourcing for the Offices of Kolar, Chitradurga, Shivamogga and Tumkur Special QA Sub Division for FY 2026-27" (PWD/2026-27/SE1324-**Call-2**)	ರೂ. 37.33 ಲಕ್ಷಗಳು.	ರೂ. 74,700/– ಮಾತ್ರ.

ಟೆಂಡರ್‌ನ ಕಾರ್ಯಸೂಚಿ: 1) ಟೆಂಡರ್ ಫಾರಂ ಡೌನ್‌ಲೋಡ್ ಮಾಡಿಕೊಳ್ಳಲು ಪ್ರಾರಂಭಿಕ ದಿನಾಂಕ: **11.06.2026.** 2) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **19.06.2026 & ಸಮಯ ಸಂಜೆ 4.30 ಗಂಟೆ.** 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ಸಮಯ: **20.06.2026 ಸಂಜೆ 5.00 ಗಂಟೆ ಆಗಿರುತ್ತದೆ.** 4) ಆರ್ಥಿಕ ಬಿಡ್‌ಗಳನ್ನು ತೆರೆಯುವುದು ತಾಂತ್ರಿಕ ಬಿಡ್‌ಗಳ ಅನುಮೋದನೆಯ ನಂತರ. 5) ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ https://kppp.karnataka.gov.in ವೆಬ್‌ಸೈಟ್‌ನಿಂದ ಪಡೆದುಕೊಳ್ಳಬಹುದು.

ಯಾವುದೇ ಮಾರ್ಪಾಡುಗಳು/ಬದಲಾವಣೆಗಳನ್ನು ಇ–ಪ್ರೊಕ್ ಪೋರ್ಟಲ್‌ನಲ್ಲಿ ಮಾತ್ರ ಅಪ್‌ಲೋಡ್ ಮಾಡಲಾಗುತ್ತದೆ ಮತ್ತು ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಗುಣ ಭರವಸೆ ವಿಭಾಗ, ಬೆಂಗಳೂರು

ವಾಸಾಸಂಇ/ವಾಪ್ರ/1117/ಎಂಎಎ/26–27

ಫಾರಂ ಎ–ಸಾರ್ವಜನಿಕ ಪ್ರಕಟಣೆ

[ಭಾರತೀಯ ಪಾಪರುಗಿರಿ ಮತ್ತು ದಿವಾಳಿತನ ಮಂಡಳಿಯ (ಕಾರ್ಪೊರೇಟ್ ವ್ಯಕ್ತಿಗಳ ದಿವಾಳಿತನ ನಿರ್ಣಯ ಪ್ರಕ್ರಿಯೆ) ನಿಬಂಧನೆಗಳು – 2016ರ ನಿಬಂಧನೆ 6ರ ಅಡಿಯಲ್ಲಿ]

ಮೊಗೈರ್ ವಿರಾಗೊ ಪ್ರೈವೇಟ್ ಲಿಮಿಟೆಡ್‌ಗೆ ಸಾಲನೀಡಿದವರ ಗಮನಕ್ಕೆ

	ಸಂಬಂಧಪಟ್ಟ ವಿವರಗಳು	
1.	ಕಾರ್ಪೊರೇಟ್ ಸಾಲಗಾರ ಸಂಸ್ಥೆಯ ಹೆಸರು	ಮೊಗೈರ್ ವಿರಾಗೊ ಪ್ರೈವೇಟ್ ಲಿಮಿಟೆಡ್
2.	ಸಾಲಗಾರ ಸಂಸ್ಥೆಯು ರಚನೆಯಾದ ದಿನಾಂಕ	18ನೇ ಜನವರಿ 2016
3.	ಯಾವ ಪ್ರಾಧಿಕಾರದ ಅಡಿಯಲ್ಲಿ ಸಾಲಗಾರ ಸಂಸ್ಥೆಯು ರಚನೆಯಾಗಿದೆ/ನೋಂದಾವಣಿಯಾಗಿದೆ	ROC- ಕರ್ನಾಟಕ–ಕಂಪನಿ ಕಾಯ್ದೆ 2013ರ ಅಡಿಯಲ್ಲಿ ಸಂಯೋಜಿಸಲಾಗಿದೆ
4.	ಕಾರ್ಪೊರೇಟ್ ಗುರುತಿನ ಸಂಖ್ಯೆ	U52599KA2016PTC085326
5.	ಸಾಲಗಾರ ಸಂಸ್ಥೆಯ ನೋಂದಾಯಿತ ಕಛೇರಿ ಮತ್ತು ಪ್ರಧಾನ ಕಛೇರಿ (ಇದ್ದಲ್ಲಿ) ವಿಳಾಸ	ನಂ. 314, ಅಭಿ ಲೇಕ್ ವ್ಯೂ, ಸೆರಿನಿಟಿ ಲೇಔಟ್, ಸರ್ಜಾಪುರ ರಸ್ತೆ, ಕೈಕೊಂಡ್ರಹಳ್ಳಿ, ಬೆಂಗಳೂರು–560035
6.	ಸಾಲಗಾರ ಸಂಸ್ಥೆಯ ದಿವಾಳಿತನ ನಿರ್ಣಯ	9ನೇ ಜೂನ್ 2026
7.	ಪ್ರಕ್ರಿಯೆಯ ಮುಕ್ತಾಯದ ಅಂದಾಜು ದಿನಾಂಕ	06ನೇ ಡಿಸೆಂಬರ್ 2026
8.	ಮಧ್ಯಂತರ ಪರಿಹಾರ ವೃತ್ತಿಪರರಾಗಿ ಕಾರ್ಯ ನಿರ್ವಹಿಸುತ್ತಿರುವವರ ಹೆಸರು ಮತ್ತು ನೋ.ಸ	ಶ್ರೀ ರಘು ರಾಜ ಹೆಚ್–(IBBI/IPA-003/IPA-ICAI-N-00453/2024-25/14438)
9.	ಮಂಡಳಿಯಲ್ಲಿ ನೋಂದಣಿಯಾದಂತೆ ಮಧ್ಯಂತರ ಪರಿಹಾರ ವೃತ್ತಿಪರರ ವಿಳಾಸ ಮತ್ತು ಇಮೇಲ್	ನಂ. 199, 4ನೇ ಮೈನ್, ಬಿಎಸ್‌ಕೆ 5ನೇ ಹಂತ, ಬೆಂಗಳೂರು –560061 ಇಮೇಲ್:hraghuraja@gmail.com
10.	ಮಧ್ಯಂತರ ಪರಿಹಾರ ವೃತ್ತಿಪರರ ಜೊತೆ ವ್ಯವಹರಿಸಲು ಬಳಸಲಾದ ವಿಳಾಸ ಮತ್ತು ಇಮೇಲ್	ನಂ. 199, 4ನೇ ಮೈನ್, ಬಿಎಸ್‌ಕೆ 5ನೇ ಹಂತ ಬೆಂಗಳೂರು –560061 ಇಮೇಲ್: moguirevirago.irp@gmail.com
11.	ಕ್ಲೇಮು ಸಲ್ಲಿಕೆಗೆ ಕೊನೆಯ ದಿನಾಂಕ	26ನೇ ಜೂನ್ 2026
12.	ಮಧ್ಯಂತರ ಪರಿಹಾರ ವೃತ್ತಿಪರರಿಂದ ಖಚಿತಪಡಿಸಲಾದಂತೆ ಸೆಕ್ಷನ್ 21 (6ಎ) (ಬಿ) ಇದರ ಪ್ರಕಾರ ಸಾಲನೀಡಿದವರ ವರ್ಗಗಳು	ಅನ್ವಯವಾಗುವುದಿಲ್ಲ
13.	ಸಾಲನೀಡಿದವರ ಅಧಿಕೃತ ಪ್ರತಿನಿಧಿಯಾಗಿ ಗುರುತಿಸಲಾದ ಹೆಸರುಗಳು	ಅನ್ವಯವಾಗುವುದಿಲ್ಲ
14.	(ಎ) ಸಂಬಂಧಪಟ್ಟ ಫಾರಂಗಳು ಮತ್ತು (ಬಿ) ಅಧಿಕೃತ ಪ್ರತಿನಿಧಿಗಳ ವಿವರಗಳು ಇಲ್ಲಿ ಲಭ್ಯವಿವೆ:	(ಎ) ವೆಬ್ ಲಿಂಕ್: www.ibbi.gov.in (ಬಿ) ಅನ್ವಯವಾಗುವುದಿಲ್ಲ

ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಾಧಿಕರಣ (NCLT) ಬೆಂಗಳೂರು 9ನೇ ಜೂನ್ 2026 ದಿನಾಂಕದ ತನ್ನ ಆದೇಶದ ಮೂಲಕ ಮೊಗೈರ್ ವಿರಾಗೊ ಪ್ರೈವೇಟ್ ಲಿಮಿಟೆಡ್ ಕಂಪನಿಯ ಕಾರ್ಪೊರೇಟ್ ದಿವಾಳಿತನ ಪರಿಹಾರ ಪ್ರಕ್ರಿಯೆಯನ್ನು ಆರಂಭಿಸಲು ಆದೇಶಿಸಿದೆ ಮತ್ತು ಈ ಕೆಳಗೆ ಸಹಿ ಮಾಡಿರುವವರನ್ನು ಮಧ್ಯಂತರ ಪರಿಹಾರ ವೃತ್ತಿಪರರನ್ನಾಗಿ ನೇಮಿಸಲಾಗಿದೆ ಎಂದು ಈ ಮೂಲಕ ಸೂಚನೆ ನೀಡಲಾಗುತ್ತಿದೆ. (ಆದೇಶ ಸ್ವೀಕರಿಸಿದ ದಿನಾಂಕ 10ನೇ ಜೂನ್ 2026).

ಮೊಗೈರ್ ವಿರಾಗೊ ಪ್ರೈವೇಟ್ ಲಿಮಿಟೆಡ್‌ಗೆ ಸಾಲನೀಡಿದವರು 26ನೇ ಜೂನ್, 2026ರಂದು ಅಥವಾ ಮುಂಚಿತವಾಗಿ ಸಾಕ್ಷ್ಯಾಧಾರಗಳ ಸಹಿತ ನಿಗದಿತ ನಮೂನೆಯಲ್ಲಿ ತಮ್ಮ ಕ್ಲೇಮುಗಳನ್ನು ಮೇಲೆ ಸಂಖ್ಯೆ 10ರಲ್ಲಿ ಹೇಳಿರುವ ಮಧ್ಯಂತರ ಪರಿಹಾರ ವೃತ್ತಿಪರರ ವಿಳಾಸಕ್ಕೆ ಸಲ್ಲಿಸಬೇಕಾಗಿ ಕೋರಿದೆ.

ಹಣಕಾಸು ಸಾಲದಾತರು ತಮ್ಮ ಕ್ಲೇಮುಗಳ ಪುರಾವೆಗಳನ್ನು ಇಲೆಕ್ಟ್ರಾನಿಕ್ ವಿಧಾನದ ಮೂಲಕ ಸಲ್ಲಿಸಬೇಕು. ಇತರ ಎಲ್ಲ ಹಕ್ಕುದಾರರು ತಮ್ಮ ಕ್ಲೇಮುಗಳ ಪುರಾವೆಯನ್ನು ವೈಯಕ್ತಿಕವಾಗಿ, ಅಂಚೆ ಮೂಲಕ ಅಥವಾ ಇಲೆಕ್ಟ್ರಾನಿಕ್ ವಿಧಾನದ ಮೂಲಕ ಸಲ್ಲಿಸಬಹುದಾಗಿದೆ.

ಸುಳ್ಳು ಮತ್ತು ದಾರಿ ತಪ್ಪಿಸುವ ಕ್ಲೇಮ್ ಪುರಾವೆಗಳನ್ನು ಒದಗಿಸಿದಲ್ಲಿ ಅದು ಶಿಕ್ಷಾರ್ಹವಾಗುತ್ತದೆ.

ದಿನಾಂಕ: 11ನೇ ಜೂನ್ 2026
ಸ್ಥಳ: ಬೆಂಗಳೂರು

ಸಹಿ/– ಶ್ರೀ ರಘು ರಾಜ ಹೆಚ್
ಮೊಗೈರ್ ವಿರಾಗೊ ಪ್ರೈವೇಟ್ ಲಿಮಿಟೆಡ್‌ನ
ಮಧ್ಯಂತರ ಪರಿಹಾರ ವೃತ್ತಿಪರರು

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 **editpage@prajavani.co.in**

ಅಭಿಮತ

ಸಂಪಾದಕೀಯ

ಸೋಲುಗಳಿಂದ ಕಂಗೆಟ್ಟ ಪ್ರತಿಪಕ್ಷಗಳು ಶಿಥಿಲ ಸ್ಥಿತಿಯಲ್ಲಿ 'ಇಂಡಿಯಾ' ಕೂಟ

ಇತ್ತೀಚಿನ ಚುನಾವಣೆಗಳಲ್ಲಿ ಕಂಡಿರುವ ಹಿನ್ನಡೆಯ ಬಗ್ಗೆ ಚರ್ಚಿಸಲು ನವದೆಹಲಿಯಲ್ಲಿ ಇತ್ತೀಚೆಗೆ ಸಭೆ ನಡೆಸಿದ 'ಇಂಡಿಯಾ' ಒಕ್ಕೂಟವು ಕಳೆಗುಂದಿರುವಂತೆ ಕಾಣಿಸಿತು. 2024ರ ಲೋಕಸಭಾ ಚುನಾವಣೆಯಲ್ಲಿ ಪ್ರದರ್ಶಿಸಿದ್ದ ಗಮನಾರ್ಹ ಫಲಿತಾಂಶದ ಯಶಸ್ಸನ್ನು ಮುಂದುವರಿಸಿಕೊಂಡು ಹೋಗುವಲ್ಲಿ ಒಕ್ಕೂಟ ವಿಫಲವಾಗಿದೆ. ಈ ವೈಫಲ್ಯದಿಂದಾಗಿ, ರಾಜ್ಯಗಳಲ್ಲಿ ಹಾಗೂ ಕೇಂದ್ರದಲ್ಲಿ ಭಾರತೀಯ ಜನತಾ ಪಕ್ಷವು (ಬಿಜೆಪಿ) ಇನ್ನಷ್ಟು ಪ್ರಬಲವಾಗಿ ಹೊರಹೊಮ್ಮಿದೆ. ಇಂಡಿಯಾ ಒಕ್ಕೂಟದ ಎರಡು ಪ್ರಮುಖ ಪಕ್ಷಗಳಾದ ದ್ರಾವಿಡ ಮುನ್ನೇತ್ರ ಕಳಗಂ (ಡಿಎಂಕೆ) ಹಾಗೂ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಇತ್ತೀಚಿನ ಆಯಾ ರಾಜ್ಯಗಳ ವಿಧಾನಸಭಾ ಚುನಾವಣೆಗಳಲ್ಲಿ ಹೀನಾಯ ಸೋಲು ಅನುಭವಿಸಿವೆ. ಕೇರಳದಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿ ಸರ್ಕಾರ ರಚಿಸಿದೆಯಾದರೂ, ರಾಷ್ಟ್ರ ಮಟ್ಟದಲ್ಲಿ ತನ್ನೊಂದಿಗೆ ಒಕ್ಕೂಟದಲ್ಲಿ ಇರುವವರೊಂದಿಗೇ ಚುನಾವಣೆಯಲ್ಲಿ ಸ್ಪರ್ಧೆ ನಡೆಸಬೇಕಾಯಿತು. ಪಶ್ಚಿಮ ಬಂಗಾಳದಲ್ಲಿ ಭಿನ್ನಮತ ಹಾಗೂ ಪಕ್ಷಾಂತರ ಪರ್ವ ಶುರುವಾಗಿದ್ದು, ಟಿಎಂಸಿ ತನ್ನ ಅಸ್ತಿತ್ವಕ್ಕಾಗಿ ಹೆಣಗಾಡಬೇಕಾದ ಪರಿಸ್ಥಿತಿ ಸೃಷ್ಟಿಯಾಗಿದೆ. ಆಂತರಿಕ ತಿಕ್ಕಾಟ ಸ್ಪಷ್ಟವಾಗಿ ಕಾಣಿಸಿರುವ ಸಂದರ್ಭದಲ್ಲಿ, 2024ರ ನಂತರ ಮೊದಲ ಬಾರಿಗೆ ಇಂಡಿಯಾ ಒಕ್ಕೂಟದ ಸಭೆ ನಡೆದಿದೆ. ಸಾಮಾನ್ಯ ವೇದಿಕೆಯಡಿ ಇರುವ ಪಕ್ಷಗಳ ನಡುವಣ ಬಿಕ್ಕಟ್ಟು ಎಷ್ಟು ಗಂಭೀರ ಸ್ವರೂಪ ತಳೆದಿದೆ ಎನ್ನುವುದಕ್ಕೂ ದೆಹಲಿಯ ಸಭೆ ಕನ್ನಡಿ ಹಿಡಿಯಿತು.

ಸರ್ಕಾರವನ್ನು ದೃಢ ಧ್ವನಿಯಲ್ಲಿ ಎದುರಿಸುವ ಪ್ರತಿಪಕ್ಷಗಳು ಸದ್ಯದ ತುರ್ತು. ಆದರೆ, 'ಇಂಡಿಯಾ' ಒಕ್ಕೂಟದ ಪಕ್ಷಗಳು ಸೋಲಿನಿಂದ ಹಾಗೂ ಆಂತರಿಕ ಬಿಕ್ಕಟ್ಟುಗಳಿಂದ ಕಂಗೆಟ್ಟಿವೆ.

ಹಲವು ಬಗೆಯ ರಾಜಕೀಯ ಧೋರಣೆಗಳನ್ನು 'ಇಂಡಿಯಾ' ಒಕ್ಕೂಟ ಪ್ರತಿನಿಧಿಸುತ್ತದೆ. ಒಟ್ಟು 23 ಪಕ್ಷಗಳು ಒಕ್ಕೂಟದಲ್ಲಿವೆ; ಈ ಪಕ್ಷಗಳು ತಮ್ಮದೇ ಆದ ಅಸ್ಮಿತೆ ಹೊಂದಿವೆ ಹಾಗೂ ಭಿನ್ನ ಸಿದ್ಧಾಂತಗಳನ್ನು ಪ್ರತಿಪಾದಿಸುತ್ತವೆ. ಇಂಡಿಯಾ ಒಕ್ಕೂಟದಲ್ಲಿನ ಪಕ್ಷಗಳಿಗೆ ತಮ್ಮೆಲ್ಲರ ಸಾಮಾನ್ಯ ಎದುರಾಳಿಯಾದ ಬಿಜೆಪಿಯನ್ನು ವಿರೋಧಿಸಲು ಒಗ್ಗೂಡುವುದು ಮುಖ್ಯವೋ ಅಥವಾ ಆಂತರಿಕವಾಗಿ ಒಗ್ಗಟ್ಟಿನಿಂದ ಇರುವುದು ಮುಖ್ಯವೋ ಎನ್ನುವ ಗೊಂದಲ ಮೂಡಿರುವಂತಿದೆ. ಒಕ್ಕೂಟದ ಪ್ರಮುಖ ಶಕ್ತಿಗಳಲ್ಲಿ ಒಂದಾಗಿದ್ದ ಡಿಎಂಕೆ, ತಮಿಳು ನಾಡು ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಜೊತೆಗೆ ಒಗ್ಗೂಡಿ ಸ್ಪರ್ಧಿಸಿ ಸೋಲುಂಡ ನಂತರ, ದೆಹಲಿಯ ಸಭೆಯಿಂದ ಹೊರಗುಳಿಯಿತು. ಅದರ ಮುಂದಿನ ಯೋಜನೆಗಳು ಅಸ್ಪಷ್ಟ ವಾಗಿವೆ. ಆಮ್‌ಆದ್ಮಿ ಪಕ್ಷ (ಎಎಪಿ) ಕೂಡ ಸಭೆಗೆ ಗೈರುಹಾಜರಾಯಿತು. ಒಕ್ಕೂಟದ ಪ್ರಬಲ ಸ್ತಂಭದಂತೆ ಇದ್ದ ಟಿಎಂಸಿಯ ಸಂಸದೀಯ ಬಲ ಎದ್ದುಕಾಣುವಷ್ಟು ಕುಸಿದಿದೆ, ಜನಪ್ರಿಯ ಜನಾದೇಶವೂ ಅದಕ್ಕೆ ಇಲ್ಲವಾಗಿದೆ. ಎಡಪಕ್ಷಗಳು ಹಾಗೂ ಕಾಂಗ್ರೆಸ್ ಪರಸ್ಪರ ಆರೋಪ-ಪ್ರತ್ಯಾರೋಪ ಮಾಡುತ್ತಿವೆ. ಕೆಲವು ಪಕ್ಷಗಳ ಪ್ರಮುಖರು ಬಿಜೆಪಿಗೆ ಪಕ್ಷಾಂತರ ಮಾಡುತ್ತಿರುವುದರಿಂದ ಒಕ್ಕೂಟದ ಬಿಕ್ಕಟ್ಟು ಇನ್ನಷ್ಟು ಜಟಿಲವಾಗಿದೆ. ಕಾಂಗ್ರೆಸ್ ಪಕ್ಷ ನಂಬಿಕೆಗೆ ಎಷ್ಟು ಅರ್ಹ ಎಂಬ ಪ್ರಶ್ನೆಯ ರೂಪದ ಶಂಕೆಯೂ ಸಭೆಯಲ್ಲಿ ವ್ಯಕ್ತಗೊಂಡಿದೆ. ತಮಿಳುನಾಡಿನ ಬೆಳವಣಿಗೆ ಕಾಂಗ್ರೆಸ್ ಬಗೆಗಿನ ಅಪನಂಬಿಕೆಗೆ ಕಾರಣವಾಗಿದೆ.

ಆಂತರಿಕ ಬಿರುಕುಗಳು ಇದ್ದರೂ, ಬಿಜೆಪಿಯನ್ನು ಎದುರಿಸಲು ಒಗ್ಗಟ್ಟಿನಿಂದ ಮುನ್ನಡೆಯಲು 'ಇಂಡಿಯಾ' ಒಕ್ಕೂಟದ ಪಕ್ಷಗಳು ನಿರ್ಧರಿಸಿವೆ. ಐದು ಅಂಶಗಳ ಆಲೋಚನೆಯು ಸಭೆಯಲ್ಲಿ ಹೊರಹೊಮ್ಮಿದೆ. ನಿಯಮಿತವಾಗಿ ಸಭೆ ನಡೆಸುವುದು, ಚುನಾವಣಾ ಆಯೋಗ ನಡೆಸುತ್ತಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ (ಎಸ್‌ಐಆರ್) ವಿರುದ್ಧ ಒಕ್ಕೊರಲಿನಿಂದ ದನಿ ಎತ್ತುವುದು, ಪರೀಕ್ಷಾ ಅಕ್ರಮಗಳ ಕಾರಣಕ್ಕೆ ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆಗೆ ಆಗ್ರಹಿಸುವುದು ಹಾಗೂ ಸಂಸತ್ ಕಲಾಪದ ಸಂದರ್ಭದಲ್ಲಿ ಸಂಯೋಜಿತ ಕಾರ್ಯತಂತ್ರ ರೂಪಿಸುವುದು ಒಕ್ಕೂಟದ ಕಾರ್ಯತಂತ್ರಗಳಾಗಿವೆ. ಆಗಸ್ಟ್ ತಿಂಗಳಲ್ಲಿ ಹೈದರಾಬಾದ್‌ನಲ್ಲಿ ಒಕ್ಕೂಟದ ಪಕ್ಷಗಳು ಮತ್ತೆ ಸಭೆ ಸೇರಲಿವೆ. ಇಂಡಿಯಾ ಒಕ್ಕೂಟವು ಬಹುಸ್ತರದ ಸಮಸ್ಯೆಗಳನ್ನು ಎದುರಿಸುತ್ತಿರುವುದಂತೂ ಸ್ಪಷ್ಟ. ಸಮಕಾಲೀನ ಸಮಸ್ಯೆಗಳನ್ನು ಪ್ರಸ್ತಾಪಿಸಿ, ಸರ್ಕಾರವನ್ನು ದೃಢ ಧ್ವನಿಯಲ್ಲಿ ಖಂಡಿಸಿ ಹಿಮ್ಮೆಟ್ಟಿಸುವಂತಹ ಪ್ರತಿಪಕ್ಷಗಳು ಈಗಿನ ತುರ್ತು ಅಗತ್ಯ. ಆದರೆ, ಒಕ್ಕೂಟದಲ್ಲಿ ಆ ವಿಶ್ವಾಸಾರ್ಹತೆಯೇ ಕಾಣಿಸುತ್ತಿಲ್ಲ. ಆಂತರಿಕ ಸಿಕ್ಕುಗಳನ್ನು ಬಿಡಿಸಿಕೊಂಡು, ರಾಜಕೀಯ ಎದುರಾಳಿಯನ್ನು ಒಗ್ಗಟ್ಟಿನಿಂದ ಎದುರಿಸಲು ಬೇಕಾಗಿರುವುದು ದೃಢಸಂಕಲ್ಪ. ಅದು ಕೆಲವು ಸಭೆಗಳನ್ನು ನಡೆಸಿ, ನಿರ್ಣಯಗಳನ್ನು ಕೈಗೊಳ್ಳುವುದರಿಂದ ಮಾತ್ರ ಸಾಧ್ಯವಾಗುವುದಿಲ್ಲ ಎನ್ನುವ ಸತ್ಯ ಒಕ್ಕೂಟದ ಪಕ್ಷಗಳಿಗೆ ಮನವರಿಕೆಯಾಗಬೇಕು.

ಪರಿಸರಕ್ಕೆ ಕುತ್ತು 'ಅಣು ವಿದ್ಯುತ್'

ವಿಶ್ಲೇಷಣೆ

ಅಖಿಲೇಶ್ ಚಿಪ್ಪಳಿ

ಅಣು ವಿದ್ಯುಚ್ಛಕ್ತಿಯನ್ನು ಹಸಿರು ಇಂಧನವೆಂದು ಬಣ್ಣಿಸಲಾಗುತ್ತದೆ. ಆದರೆ, ಅಪಾರ ಪ್ರಮಾಣದ ಪರಿಸರನಾಶದ ಬುನಾದಿಯ ಮೇಲೆ ಅಣು ವಿದ್ಯುತ್ ಸ್ಥಾವರಗಳು ರೂಪುಗೊಂಡಿರುತ್ತವೆ. ಈಗ ಶಿವಮೊಗ್ಗ ಜಿಲ್ಲೆಯಲ್ಲಿ ಅಣು ವಿದ್ಯುತ್ ಸ್ಥಾವರದ ಪ್ರಸ್ತಾವ ತಲೆಯೆತ್ತಿದೆ. ಇದೆಲ್ಲ ಯಾರ ಹಿತಕ್ಕಾಗಿ?

ಅಡಿಕೆ ಮರಕ್ಕೆ ಬಡಿಯುವಷ್ಟು ಎತ್ತರದಲ್ಲಿ ಲಘು ವಿಮಾನಗಳ ನಿರಂತರ ಹಾರಾಟವು ಮಲೆನಾಡಿಗರ ನಿದ್ದೆ-ನೆಮ್ಮದಿ ಕೆಡಿಸಿತ್ತು. ಜನ ಭೀತ ರಾಗಿದ್ದರು, ಆತಂಕದಿಂದ ಮಾತನಾಡಿಕೊಳ್ಳುತ್ತಿದ್ದರು. ವಿಮಾನ ಹಾರಾಟಕ್ಕೂ ಮುಂದಿನ ಭವಿಷ್ಯಕ್ಕೂ ಏನಾದರೂ ಸಂಬಂಧವಿದೆಯೇ ಎಂದು ಕಳವಳ ಗೊಂಡಿದ್ದರು. ವೃದ್ಧಾಪ್ಯದ ಅಂಚಿನಲ್ಲಿ ಇರುವವರು ಮುಂದೆ ಹೇಗೋ ಎಂಬ ಭಯದಲ್ಲಿದ್ದರು.

ಮಲೆನಾಡಿನ ಭಾಗದಲ್ಲಿ ಈ ರೀತಿ ವಿಮಾನ ಹಾರಾಟ ಹಾಗೂ ಅನುಮಾನಾಸ್ಪದ ವಾಹನಗಳ ಸಂಚಾರ ಹೊಸತೇನಲ್ಲ. 90ರ ದಶಕದಲ್ಲಿ ಇಕ್ಕೇರಿ ಭಾಗದಲ್ಲಿ ಚಿನ್ನದ ನಿಕ್ಷೇಪ ಹುಡುಕಲು ವಿಮಾನ ಬಂದಿತ್ತು. ಗಣಿ ಇಲಾಖೆಯ ಜೀಪು ಇತಿಹಾಸ ಪ್ರಸಿದ್ಧ ಇಕ್ಕೇರಿ, ಹಳೇಇಕ್ಕೇರಿ ಭಾಗದಲ್ಲಿ ಅನುಮಾನಾಸ್ಪದವಾಗಿ ತಿರುಗಾಡುತ್ತಿತ್ತು. ಕ್ರಮೇಣ ಜನರ ಭಯ-ಆತಂಕ ಹೋರಾಟವಾಗಿ ಬದಲಾಯಿತು. ಹೆಗ್ಗೋಡಿನ ಕೆ.ವಿ. ಸುಬ್ಬಣ್ಣ, ಸಾಗರದ ನಾ. ಡಿಸೋಜ, ಮುಂತಾದವರು ಹೋರಾಟದ ಮುಂಚೂಣಿಯಲ್ಲಿದ್ದರು. 'ಗಣಿ ಇಲಾಖೆಯ ವಾಹನಗಳಿಗೆ ಇಲ್ಲಿ ಪ್ರವೇಶವಿಲ್ಲ' ಎಂಬ ಫಲಕ ನೆಟ್ಟರು. ಗಣಿ ಭೂತ ಜನರಿಗೆ ಅಂಜಿ ಮರೆಯಾಯಿತು.

ಲಘು ವಿಮಾನ ಹಾರಾಟಕ್ಕೂ ಸಾಗರದ ಬೇಸೂರಿನ ಅಣು ವಿದ್ಯುತ್ ಸ್ಥಾವರ ಯೋಜನೆಗೂ ನೇರ ಸಂಬಂಧವಿಲ್ಲದಿದ್ದರೂ, ಎರಡೂ ವಿದ್ಯಮಾನ ಗಳೂ ಏಕಕಾಲಕ್ಕೆ ಘಟಿಸಿದವು. ಸಾಗರದ ಕೋಳೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬೇಸೂರು ಗ್ರಾಮದ ಎರಡು ಸಾವಿರ ಎಕರೆ ಪ್ರದೇಶದಲ್ಲಿ ಅಣು ವಿದ್ಯುತ್ ಸ್ಥಾವರ ನಿರ್ಮಿಸಲು ಸೂಕ್ತವಾಗಿದೆಯೆಂದು ತಾಲ್ಲೂಕು ಆಡಳಿತ ಜಿಲ್ಲಾಡಳಿತಕ್ಕೆ ವರದಿ ನೀಡಿದ್ದು, ಜನರಲ್ಲಿ ಆತಂಕ ಮೂಡಿಸಿದೆ.

2047ರ ಹೊತ್ತಿಗೆ 30 ಗಿಗಾ ವಾಟ್ ಅಣು ವಿದ್ಯುತ್ ಉತ್ಪಾದಿಸುವ ಗುರಿ ಹೊಂದಿರುವ ಕೇಂದ್ರ ಸರ್ಕಾರ, ರಷ್ಯಾದ ರೋಸ್ವಮ್ ಹಾಗೂ ಫ್ರಾನ್ಸ್‌ನ ಇ.ಡಿ.ಎಫ್. ಜೊತೆ ರಹಸ್ಯ ಒಪ್ಪಂದಗಳಿಗೆ ಸಹಿ ಹಾಕಿದೆಯೆಂದು 'ಎಕನಾಮಿಕ್ ಟೈಮ್ಸ್' ಪತ್ರಿಕೆ ವರದಿ ಮಾಡಿದೆ. 2100ರ ಹೊತ್ತಿಗೆ ಭಾರತದಲ್ಲಿ 100 ಗಿಗಾವಾಟ್ ಅಣು ವಿದ್ಯುತ್ ಉತ್ಪಾದಿಸಲು, ಕೊರಿಯಾ ಅಣು ವಿದ್ಯುತ್ ಕಂಪನಿ ಸೇರಿದಂತೆ ಹಲವು ಜಾಗತಿಕ ಕಂಪನಿಗಳು ಮುಂದೆ ಬಂದಿವೆ. ವಿದೇಶಿ ಹೂಡಿಕೆದಾರ ಕಂಪನಿಗಳ ಅನುಕೂಲಕ್ಕಾಗಿ, ಅಣುಶಕ್ತಿ ಕಾಯ್ದೆ (1962) ಮತ್ತು 2010ರ ಅಣು ವಿಪತ್ತು ನಾಗರಿಕ ಹೊಣೆಗಾರಿಕೆ ಕಾಯ್ದೆಗಳನ್ನು ಮೂಲೆಗುಂಪು ಮಾಡಲಾಗಿದೆ. 'ಶಾಂತಿ' (ಭಾರತದ ಪ್ರಗತಿಗಾಗಿ ಅಣುಶಕ್ತಿ ಸುಸ್ಥಿರ ಉತ್ಪಾದನೆ- ಎಸ್‌ಎಚ್‌ಎಎನ್‌ಟಿಐ) ಕಾಯ್ದೆ-2025 ಅನ್ನು ಜಾರಿ ಮಾಡಲಾಗಿದೆ. ಈ ಕಾಯ್ದೆ ಮೊದಲ ಬಾರಿಗೆ ಭಾರತೀಯ ಖಾಸಗಿ ಕಂಪನಿಗಳಿಗೆ ಮತ್ತು ವಿದೇಶಿ ಸಂಸ್ಥೆಗಳಿಗೆ ಅಣು ಸ್ಥಾವರ ಸ್ಥಾಪಿಸಲು ಅನುಮತಿ ನೀಡುತ್ತದೆ.

ಹೊಸದಾಗಿ ರೂಪಿಸಿದ 'ಶಾಂತಿ' ಕಾಯ್ದೆಯ ಪ್ರಕಾರ, ಅಣು ವಿದ್ಯುತ್ ಸ್ಥಾವರದಲ್ಲಿ ಅಪಘಾತ ವಾದಲ್ಲಿ ಸ್ಥಾವರದ ಗಾತ್ರದ ಅನುಸಾರವಾಗಿ ಕನಿಷ್ಠ ₹100 ಕೋಟಿಯಿಂದ ಗರಿಷ್ಠ ₹3,900 ಕೋಟಿಯ ವರೆಗೆ ಪರಿಹಾರ ಧನ ನೀಡಲಾಗುವುದು. ಹಳೆಯ ಕಾಯ್ದೆಯಲ್ಲಿ ನಿರ್ವಹಣೆ ಹೊಣೆಗಾರಿಕೆ ಮೊತ್ತ ₹1,500 ಕೋಟಿಗಳಷ್ಟಿತ್ತು. ಹೆಚ್ಚುವರಿ ಪರಿಹಾರ ವನ್ನು ಕೇಂದ್ರ ಸರ್ಕಾರ ಭರಿಸಬೇಕಿತ್ತು. ಉದಾಹರಣೆಗೆ, ಜಪಾನಿನ ಪುಕುಶಿಮಾ ಅಣು ಸ್ಥಾವರದ ಅನಾಹುತದಲ್ಲಿ ಆದ ಒಟ್ಟು ಆರ್ಥಿಕ ನಷ್ಟ ₹46 ಲಕ್ಷ ಕೋಟಿ. ಶಾಂತಿ ಕಾಯ್ದೆಯ ಗರಿಷ್ಠ ಮಿತಿ ₹3,900 ಕೋಟಿ, ಅಂದರೆ ಅನಾಹುತದ ಸಾವಿರದ ಒಂದು ಭಾಗ ಮಾತ್ರ.

2014-15ರಲ್ಲಿ ಕರ್ನಾಟಕ ರಾಜ್ಯ ಅರಣ್ಯ ಇಲಾಖೆಯು ಒಂದು ಸುತ್ತೋಲೆ ಹೊರಡಿಸಿತು. ರೈತರೇ ನೆಟ್ಟು ಬೆಳೆಸಿದ ಮರಗಳನ್ನು ಕಡಿಯಲು ಅರಣ್ಯ ಇಲಾಖೆಯ ಅನುಮತಿ ಬೇಡ ಎನ್ನುವ ಆ ಸುತ್ತೋಲೆ, ಇಲಾಖೆಯ ತಂಟೆ-ತಕರಾರುಗಳಿಂದ ಕೃಷಿಕರನ್ನು ಪಾರು ಮಾಡುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯಾಗಿತ್ತು. ತೆಂಗು, ಅಡಿಕೆ, ಕಾಫಿ, ಮಾವು ಇತ್ಯಾದಿಗಳು ಈ ಪಟ್ಟಿಯಲ್ಲಿದ್ದವು. ಸುತ್ತೋಲೆಯಲ್ಲಿ ಒಂದು ಪ್ರಮಾದವಾಗಿತ್ತು. ವಾಣಿಜ್ಯ ಮಹತ್ವ ಹೊಂದಿರುವ ಮಾವಿನ ಗಿಡಗಳು ಹದಿನೈದಿಪ್ಪತ್ತು ವರ್ಷ ಫಸಲು ನೀಡುತ್ತವೆ. ನೆಡುತೋಪಿನ ಮಾವಿನ ಮರಗಳನ್ನು ಕಡಿಯಲು ಇಲಾಖಾ ಪರವಾನಗಿ ಅಗತ್ಯವಿತ್ತು. ಅನುಮತಿ ಅಗತ್ಯವಿಲ್ಲದ ಪಟ್ಟಿಯಲ್ಲಿ ಮಾವು ಸೇರಿತು. ಪಶ್ಚಿಮಘಟ್ಟಗಳ ಸುಮಾರು 20 ಸಾವಿರ ಎಕರೆ ಪಾರಂಪರಿಕ ಕಾಡು ಮತ್ತು ಸಾಲು ಮಾವಿನ ಮರಗಳ ಮಾರಣಹೋಮವಾಯಿತು. ಮಾವು ಎಂಬಲ್ಲಿ 'ಕಸಿಮಾವು' ಎಂದಾಗಬೇಕಿತ್ತು. ಇಲಾಖೆ ಎಚ್ಚತ್ತುಕೊಂಡು ತನ್ನ ತಪ್ಪನ್ನು ಸರಿಪಡಿಸುವ ಹೊತ್ತಿಗೆ ಅನಾಹುತ ನಡೆದು ಹೋಗಿತ್ತು. ಹಲವು ಮಾವಿನ ತಳಿಗಳು ಶಾಶ್ವತವಾಗಿ ಕಣ್ಮರೆಯಾದವು.

ನೇತ್ರಾವತಿ ನದಿಯಲ್ಲಿ ಮಳೆಗಾಲದಲ್ಲಿ ಸಂಗ್ರಹ ವಾಗುವ 24 ಟಿಎಂಸಿ ಅಡಿ ನೀರನ್ನು ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಮತ್ತು ಕೋಲಾರ ಜಿಲ್ಲೆಗಳಿಗೆ ಹರಿಸುವ ಎತ್ತಿನಹೊಳೆ ಯೋಜನೆ 2011ರಲ್ಲಿ ಪ್ರಾರಂಭವಾಯಿತು. ನೇತ್ರಾವತಿ ಯಲ್ಲಾಗಲೀ ಅಥವಾ ಎತ್ತಿನಹೊಳೆ ಯಲ್ಲಾಗಲೀ ಇಷ್ಟು ಪ್ರಮಾಣದ ನೀರು ಲಭ್ಯವಿಲ್ಲವೆಂದು ಸ್ಥಳೀಕರು ಹೇಳಿದರು. ಪರಿಸರವಾದಿಗಳು ನ್ಯಾಯಾಲಯದ ಮೊರೆ ಹೋದರು. ಚಾಣಾಕ್ಷ ಆಡಳಿತ 'ಕುಡಿಯುವ' ನೀರಿಗಾಗಿ ಎತ್ತಿನಹೊಳೆ ಯೋಜನೆ ಮಾಡುತ್ತಿದ್ದೇವೆ ಎಂದು ನ್ಯಾಯಾಲಯಕ್ಕೆ ಪ್ರಮಾಣಪತ್ರ ಸಲ್ಲಿಸಿತು. ಕುಡಿಯುವ ನೀರಿಗೆ ಯಾರೂ ಅಡ್ಡಿ ಮಾಡುವಂತಿಲ್ಲ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿತು. ಯೋಜನೆ ಜಾರಿಯಿಂದಾಗಿ, ಆನೆ-ಹುಲಿ ಪಥಗಳು ತುಂಡಾದವು. ಮಾನವ-ವನ್ಯಜೀವಿ ಸಂಘರ್ಷ ತಾರಕಕ್ಕೇರಿತು. ಯೋಜನೆ ಸಫಲವಾಯಿತೆ? ಇದುವರೆಗೂ ಹನಿ ನೀರು ಕೂಡ ಯೋಜಿತ ಜಿಲ್ಲೆಗಳಿಗೆ ತಲುಪಿಲ್ಲ. ಸಾವಿರಾರು ಕೋಟಿ ರೂಪಾಯಿ ಮೌಲ್ಯದ ನೈಸರ್ಗಿಕ ಸಂಪತ್ತಿನ ಸೂರೆಯಾಗಿದೆಯಷ್ಟೇ.

ನ್ಯಾಷನಲ್ ಥರ್ಮಲ್ ಪವರ್ ಕಾರ್ಪೊರೇಷನ್ ರಾಜ್ಯ ಸರ್ಕಾರಕ್ಕೆ, ನಿಮ್ಮ ರಾಜ್ಯದಲ್ಲಿ ಅಣು ವಿದ್ಯುತ್ ಸ್ಥಾವರ ನಿರ್ಮಿಸಲು ಸೂಕ್ತ ಸ್ಥಳಗಳನ್ನು ಆಯ್ಕೆ ಮಾಡಿ ಪಟ್ಟಿ ಕಳುಹಿಸಿ ಎನ್ನುವ ಪತ್ರ ಕಳುಹಿಸಿತು. ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಕಚೇರಿ ಅಣು ವಿದ್ಯುತ್ ಸ್ಥಾವರ ನಿರ್ಮಿಸಲು ಸೂಕ್ತ ಸ್ಥಳಗಳನ್ನು ಗುರ್ತಿಸಲು ಐದು ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಿತು. ಉತ್ತರ ಕನ್ನಡ ಸೇರಿದಂತೆ ನಾಲ್ಕು ಜಿಲ್ಲಾಧಿಕಾರಿಗಳು ನಮ್ಮ ಭಾಗದಲ್ಲಿ ಸದರಿ ಯೋಜನೆ ಜಾರಿ ಮಾಡಲು ಸೂಕ್ತ ಸ್ಥಳಗಳಿಲ್ಲವೆಂದು ಉತ್ತರ ಬರೆದರು. ಶಿವಮೊಗ್ಗ ಜಿಲ್ಲಾಧಿಕಾರಿ ಮಾತ್ರ, ಬೇಸೂರಿನಲ್ಲಿ 'ಸೂಕ್ತ' ಭೂಮಿ ಲಭ್ಯವಿದೆ ಎಂದು ಉತ್ತರಿಸಿದರು. ಈಗಾಗಲೇ ಲಿಂಗನಮಕ್ಕಿ ಅಣೆಕಟ್ಟು ಕಟ್ಟಿ ಈ ಭಾಗದ 326 ಚ.ಕಿ.ಮೀ. ಕಾಡು, ಕೃಷಿ ಜಮೀನು ಮುಳುಗಡೆಯಾಗಿದೆ. 2,800 ಕುಟುಂಬಗಳ 12 ಸಾವಿರ ಜನರಿಗೆ ಇದುವರೆಗೂ ಪುನರ್ವಸತಿ ಕಲ್ಪಿಸಿಲ್ಲ. ಲಿಂಗನಮಕ್ಕಿ ಜಲಾಶಯದಿಂದ ಕುಡಿಯುವ ನೀರನ್ನು ಸಾಗರ ಪಟ್ಟಣಕ್ಕೆ ಒದಗಿಸಲಾಗುತ್ತಿದೆ. ಸಿದ್ದಾಪುರಕ್ಕೂ ಕುಡಿಯುವ ನೀರು ನೀಡಲು ಯೋಜನೆ ಜಾರಿಯಾಗಿದೆ ಎಂದೆಲ್ಲಾ ಕಾರಣಗಳನ್ನು ನೀಡಿ, ಶಿವಮೊಗ್ಗ ಜಿಲ್ಲೆಯಲ್ಲಿ ಸ್ಥಾವರ ನಿರ್ಮಿಸಲು 'ಸೂಕ್ತ' ಪ್ರದೇಶ ಲಭ್ಯವಿಲ್ಲವೆಂದು ಜಿಲ್ಲಾಧಿಕಾರಿ ಉತ್ತರಿಸಬಹುದಿತ್ತು. ಆದರೆ, 2,000 ಎಕರೆ ಸೂಕ್ತ ಪ್ರದೇಶ ಲಭ್ಯವಿದೆ ಎಂದವರು ಉತ್ತರಿಸಿದರು. ಇದಕ್ಕೆ ಜನರಿಂದ ವಿರೋಧ ಎದುರಾಗಿದೆ. ಎಲ್ಲ ರಾಜಕೀಯ ಪಕ್ಷದ ನಾಯಕರು, ಧಾರ್ಮಿಕ ಮುಖಂಡರು ಸೇರಿದಂತೆ ಇಡೀ ಶಿವಮೊಗ್ಗ ಜಿಲ್ಲೆಯ ಜನತೆ ಯೋಜನೆಯನ್ನು ವಿರೋಧಿಸಿದೆ. ಅಧಿಕಾರ ಹೋದರೂ ಚಿಂತೆಯಿಲ್ಲ, ಜನರ ಪರವಾಗಿ ಇರುತ್ತೇವೆ. ಯಾವುದೇ ಕಾರಣಕ್ಕೂ ಯೋಜನೆ ಜಾರಿಯಾಗಲು ಬಿಡುವುದಿಲ್ಲವೆಂದು ಸಾಗರ-ಹೊಸನಗರ ಕ್ಷೇತ್ರದ ಶಾಸಕರು ಗಟ್ಟಿ ದನಿಯಲ್ಲಿ ಹೇಳಿದ್ದಾರೆ. ಸಂಬಂಧಪಟ್ಟ ಇಲಾಖೆಯೊಂದಿಗೆ ಮಾತನಾಡಿ, ಯೋಜನೆಯನ್ನು ರದ್ದುಪಡಿಸುತ್ತೇನೆ ಎಂದು ಶಿವಮೊಗ್ಗ ಸಂಸದರು ಧ್ವನಿಗೂಡಿಸಿದ್ದಾರೆ.

ಅಣು ವಿದ್ಯುಚ್ಛಕ್ತಿಯನ್ನು ಹಸಿರು ಇಂಧನವೆಂದು ಬಣ್ಣಿಸಲಾಗುತ್ತದೆ. ಈ ಬಣ್ಣನೆಗೆ ತಕ್ಕನಾದ ಅರ್ಹತೆ ಅಣುಶಕ್ತಿಗಿದೆಯೇ? ಮಹಾರಾಷ್ಟ್ರದ ಕೊಂಕಣ ತೀರದಲ್ಲಿ ಪ್ರಸ್ತಾಪಿತ ಜೈತಾಪುರ ಅಣು ವಿದ್ಯುತ್ ಸ್ಥಾವರವು ವಿಶ್ವದ 8 ಅತ್ಯಂತ ಸೂಕ್ಷ್ಮ ಜೀವವೈವಿಧ್ಯ ಹೊಂದಿರುವ ಪಶ್ಚಿಮಘಟ್ಟಗಳಲ್ಲಿ ನಿರ್ಮಾಣವಾಗ ಲಿದೆ. ಈ ಭಾಗದಲ್ಲಿ 5,000ಕ್ಕೂ ಹೆಚ್ಚು ಹೂಬಿಡುವ ಸಸ್ಯಗಳು, 139 ಸ್ತನಿ ಪ್ರಭೇದಗಳು ಮತ್ತು ಜಾಗತಿಕವಾಗಿ ಅಪಾಯದಲ್ಲಿರುವ 325 ಜೀವಿ ಪ್ರಭೇದಗಳು ವಾಸಿಸುತ್ತವೆ. ಈ ಸ್ಥಾವರ ದಿನಕ್ಕೆ ಹಲವು ಕೋಟಿ ಲೀಟರ್ ಬಿಸಿ ನೀರನ್ನು ಅರಬ್ಬೀ ಸಮುದ್ರಕ್ಕೆ ಬಿಡಲಿದ್ದು, ಸಮುದ್ರದ ಉಷ್ಣತೆ ಹೆಚ್ಚಾಗ ಲಿದೆ. ಸ್ಥಳೀಯ ಮೀನುಗಾರಿಕೆ ಮತ್ತು ಸಮುದ್ರಜೀವಿ ಗಳ ಮೇಲೆ ಇದು ದುಷ್ಪರಿಣಾಮ ಬೀರಲಿದೆ. ಟಾಟಾ ಸಮಾಜ ವಿಜ್ಞಾನ ಸಂಸ್ಥೆ ನಡೆಸಿದ ಸಾಮಾಜಿಕ ಪ್ರಭಾವ ಮೌಲ್ಯಮಾಪನ ವರದಿಯ ಪ್ರಕಾರ, ಈ ಯೋಜನೆ ಪರಿಸರ ಮತ್ತು ಸಾಮಾಜಿಕ ಅಭಿವೃದ್ಧಿಯ ಮೇಲೆ ಅಪಾರ ಋಣಾತ್ಮಕ ಪರಿಣಾಮವನ್ನು ಬೀರಲಿದೆ.

ಅರಣ್ಯ ನಾಶ ಮಾಡಿ ಅಣು ವಿದ್ಯುತ್ ಸ್ಥಾವರ ನಿರ್ಮಿಸುವುದರಿಂದ, ಅರಣ್ಯ ಹೀರಿಕೊಳ್ಳುತ್ತಿದ್ದ ಇಂಗಾಲಾಮ್ಲದ ಪ್ರಮಾಣ ಸಹಜವಾಗಿ ಕಡಿಮೆ ಯಾಗುತ್ತದೆ. ವನ್ಯಜೀವಿ ಪಥ ತುಂಡಾಗುವುದು, ಸ್ಥಳೀಯ ಸಮುದಾಯಗಳ ಸ್ಥಳಾಂತರ, ತ್ಯಾಜ್ಯ ವಿಕಿರಣದ ದೀರ್ಘಕಾಲಿಕ ಸಮಸ್ಯೆ ಮುಂತಾದವು ಗಳನ್ನು ಯಾರು ಗಮನಿಸಬೇಕು. 'ಬಾಂಬೆ ನ್ಯಾಚುರಲ್ ಹಿಸ್ಟರಿ ಸೊಸೈಟಿ'ಯ ಅಧ್ಯಯನದ ಪ್ರಕಾರ, ಸಮಗ್ರ ಜೀವವೈವಿಧ್ಯ ಮೌಲ್ಯಮಾಪನ ಮಾಡದ ಯಾವುದೇ ಯೋಜನೆ ಉಂಟುಮಾಡುವ ಪರಿಸರದ ಮೇಲಿನ ನೈಜ ಹಾನಿ ಎಂದಿಗೂ ತಿಳಿಯಲಾರದು. ಪರಿಸರಕ್ಕೆ ಭಾರವಾಗುವ ಅಪಾಯಕಾರಿ ಅಣು ವಿದ್ಯುತ್ ಸ್ಥಾವರಗಳು ಯಾರ ಸುಖಕ್ಕಾಗಿ?



ಸುಭಾಷಿತ

ಹಣ್ಣುಗಳಿಂದ ಒಡಗೂಡಿದ ಮರವು ಯಾವಾಗಲೂ ಬಗ್ಗಿರುತ್ತದೆ. ನೀವು ಉನ್ನತ ವ್ಯಕ್ತಿ ಆಗಬೇಕಾದರೆ ವಿನಯ ಸಂಪನ್ನರಾಗಿರಿ ಮತ್ತು ತಾಳ್ಮೆಯಿಂದಿರಿ. **-ರಾಮಕೃಷ್ಣ ಪರಮಹಂಸ**

ವಾಚಕರ ವಾಣಿ

ಚಪ್ಪಲಿಗಳ ಪಾಳಿ: ಅನ್ನದಾತನೇಕೆ ಅಶಕ್ತ?

ಸೇಡಂ ತಾಲ್ಲೂಕಿನ ಸಹಕಾರ ಸಂಘದ ಎದುರು ರೈತರು ರಸಗೊಬ್ಬರಕ್ಕಾಗಿ ಸಾಲಿನಲ್ಲಿ ಚಪ್ಪಲಿಗಳನ್ನಿಟ್ಟು ಕಾಯುತ್ತಿರುವುದು ವರದಿಯಾಗಿದೆ. ನಾವು ಚಂದ್ರನಲ್ಲಿಗೆ, ಮಂಗಳ ಗ್ರಹಕ್ಕೆ ಉಪಗ್ರಹಗಳನ್ನು ಕಳುಹಿಸಿ ಬೆನ್ನು ತಟ್ಟಿಕೊಳ್ಳುತ್ತಿದ್ದೇವೆ. ಆದರೆ, ನಮ್ಮದೇ ನೆಲದಲ್ಲಿ ಅನ್ನದಾತ ತನ್ನ ಹೊಲಕ್ಕೆ ರಸಗೊಬ್ಬರ ಪಡೆಯಲು ತನ್ನ ಹರಿದ ಚಪ್ಪಲಿಗಳನ್ನು ಸರದಿ ಸಾಲಿನಲ್ಲಿಟ್ಟು ಕಾಯುವ ಪರಿಸ್ಥಿತಿ ನಿರ್ಮಾಣವಾಗಿದೆ. ಇದು ಕೃಷಿ ಇಲಾಖೆಯ ನಿಷ್ಕ್ರಿಯತೆಗೆ ಸಾಕ್ಷಿಯಾಗಿದೆ. ಇದು ಇಡೀ ಭಾರತೀಯ ಕೃಷಿ ವಲಯದ ದಯನೀಯ ಸ್ಥಿತಿಯ ಪ್ರತೀಕವೂ ಹೌದು. ಆಧುನಿಕ ತಂತ್ರಜ್ಞಾನ ಬಳಸಿಕೊಂಡು ರಸಗೊಬ್ಬರ ವಿತರಣೆಯನ್ನು ಪಾರದರ್ಶಕಗೊಳಿಸಬೇಕು. ಮುಖ್ಯವಾಗಿ ಕೃಷಿಯನ್ನು ಉದ್ಯಮವಾಗಿ ಪರಿಗಣಿಸಬೇಕು. ಸಕಾಲದಲ್ಲಿ ರೈತರಿಗೆ ಪರಿಕರ ಒದಗಿಸುವ ವ್ಯವಸ್ಥೆಯನ್ನು ಜಾರಿಗೊಳಿಸಬೇಕು. ರೈತರು ಸಂಘಟಿತರಾದಾಗಲಷ್ಟೇ ಭಾರತೀಯ ಕೃಷಿಗೆ ಉಳಿಗಾಲ.

ಪ್ರವೀಣ್ ನಾಗಪ್ಪ ಯಲವಿಗಿ, ಮುಂಡಗೋಡು

ಶಿಕ್ಷಣ: ಸಮಾನತೆಯ ಸಾಧನ ಆಗುವುದೆ?

ಸರ್ಕಾರಿ ಮತ್ತು ಖಾಸಗಿ ಶಿಕ್ಷಣ ವ್ಯವಸ್ಥೆಯು ಸಮಾನಾಂತರವಾಗಿ ಕಾರ್ಯ ನಿರ್ವಹಿಸುತ್ತಿದ್ದರೂ, ಸರ್ಕಾರಿ ಶಾಲೆಗಳು ಹಲವು ಸಮಸ್ಯೆಗಳನ್ನು ಎದುರಿಸುತ್ತಿವೆ. ಗುಣಮಟ್ಟದ ಕೊಠಡಿ ಮತ್ತು ಶಿಕ್ಷಕರ ಕೊರತೆ ಕಾಡುತ್ತಿದೆ. ಮೂಲಸೌಕರ್ಯದ ವಿಷಯದಲ್ಲಿ ಸರ್ಕಾರಿ ಶಾಲೆಗಳು ಖಾಸಗಿ ಶಾಲೆಗಳಿಗಿಂತ ಹಿಂದುಳಿದಿವೆ. ಶಿಕ್ಷಣಕ್ಕೆ ಸರ್ಕಾರವು ಬಜೆಟ್‌ನಲ್ಲಿ ಅನುದಾನ ಮೀಸಲಿಡಲು ಸೀಮಿತವಾಗಬಾರದು. ಶಾಲೆಗಳ ಮೂಲಸೌಕರ್ಯ ಅಭಿವೃದ್ಧಿಗೆ ಪಾರದರ್ಶಕವಾಗಿ ಅನುದಾನ ಬಳಕೆ ಆಗುವಂತೆ ಮೇಲ್ವಿಚಾರಣೆ ವ್ಯವಸ್ಥೆ ರೂಪಿಸಬೇಕು. ಸಮಾಜದ ಎಲ್ಲ ವರ್ಗದ ಮಕ್ಕಳು ಒಂದೇ ಶಾಲೆಯಲ್ಲಿ ಕಲಿಯುವ ವಾತಾವರಣ ನಿರ್ಮಾಣವಾದಾಗಷ್ಟೇ ಶಿಕ್ಷಣದಲ್ಲಿ ಸಮಾನತೆ ಮತ್ತು ಸಾಮಾಜಿಕ ನ್ಯಾಯದ ಆಶಯ ಸಾಕಾರಗೊಳ್ಳಲಿದೆ; ಆಗ ಸಮಾನತೆಯ ಭಾರತವೂ ಉಳಿಯಲಿದೆ. ಇಲ್ಲದೆ ಹೋದಲ್ಲಿ ಶಿಕ್ಷಣವು ಉಳ್ಳವರು ಕೊಳ್ಳುವ ಸರಕಾಗಲಿದೆ.

ಮಧು ಎನ್.ಬಿ. ನಾರನಹಳ್ಳಿ, ದೊಡ್ಡಬಳ್ಳಾಪುರ

ಮನೆಗೆ ಬೆಳಕಾಗದ ಸಿಸಿ ವಿನಾಯಿತಿ

ಈಗಾಗಲೇ, ನಿರ್ಮಿಸಿರುವ ಹೊಸ ಕಟ್ಟಡಗಳಿಗೆ ಸ್ವಾಧೀನಾನುಭವ ಪತ್ರ (ಒಸಿ) ಮತ್ತು ನಿರ್ಮಾಣಾರಂಭ ಪ್ರಮಾಣಪತ್ರ (ಸಿಸಿ) ಇಲ್ಲದೆ ಒಂದು ಬಾರಿ ವಿದ್ಯುತ್ ಸಂಪರ್ಕ ಕಲ್ಪಿಸಲು ಸರ್ಕಾರ ಆದೇಶಿಸಿದೆ. ಸೌಲಭ್ಯ ಪಡೆಯುವವರು ಮೇ 31ರ ಒಳಗೆ ಅರ್ಜಿ ಸಲ್ಲಿಸಿರಬೇಕೆಂದು ಷರತ್ತು ವಿಧಿಸಿದೆ. ಈ ನಿರ್ಬಂಧ ಸಡಿಲಿಸಿ ಕಟ್ಟಡ ಪೂರ್ಣಗೊಳಿಸಿದವರಿಗೆ ಜೂನ್ 31ರೊಳಗೆ ಅರ್ಜಿ ಸಲ್ಲಿಸಲು ಅವಕಾಶ ನೀಡ ಬೇಕು. ಹೊಸ ಮನೆ ಕಟ್ಟುವವರಿಗೆ ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆದುಕೊಳ್ಳಲು ಈ ಹಿಂದೆ ಇದ್ದಂತೆ ನಿವೇಶನದ ನೋಂದಣಿ ಪತ್ರ, ಆಧಾರ್ ಕಾರ್ಡ್‌ನಂತಹ ಕನಿಷ್ಠ ದಾಖಲೆ ಪಡೆದು ಕೊಳ್ಳಲು ಆದೇಶಿಸಬೇಕು. ಕಟ್ಟಡ ಪೂರ್ಣಗೊಂಡು ಶಾಶ್ವತ ಸಂಪರ್ಕ ಪಡೆಯುವಾಗ ಒಸಿ ಮತ್ತು ಸಿಸಿ ಸಲ್ಲಿಕೆ ಕಡ್ಡಾಯಗೊಳಿಸಲಿ.

ಉದಂತ ಶಿವಕುಮಾರ, ಬೆಂಗಳೂರು

ಸ್ವಹಿತಾಸಕ್ತಿ ರಾಜಕೀಯ: ಸದಸ್ಯತ್ವಕ್ಕೆ ಕುತ್ತು

ಮಹೇಶ್ ಜೋಶಿಯವರ ಕಸಾಪ ಆಜೀವ ಸದಸ್ಯತ್ವವನ್ನು ರದ್ದುಪಡಿಸಲಾಗಿದೆ. ಜೋಶಿಯವರು ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿಗೆ ಆಯ್ಕೆಯಾದಾಗ ಮೊದಲು ಮಾಡಿದ ಕೆಲಸವೆಂದರೆ 'ಬೈ-ಲಾ' ತಿದ್ದುಪಡಿ. ಆ ಸಮಯದಲ್ಲಿ ಅನೇಕ ಜಿಲ್ಲಾ ಕಸಾಪ ಅಧ್ಯಕ್ಷರು ಇದಕ್ಕೆ ವಿರೋಧ ವ್ಯಕ್ತಪಡಿಸಿದ್ದರು; ಹಲವು ಕನ್ನಡಪರ ಸಂಘ-ಸಂಸ್ಥೆಗಳು ಪ್ರತಿಭಟನೆ ಮಾಡಿದ್ದೂ ಉಂಟು.

ಹೋರಾಟ ಮಾಡಿದ ಸಂಘಟನೆಗಳ ಮುಖ್ಯಸ್ಥರನ್ನು ಗುರಿ ಮಾಡಿ, 'ನೀವು ಕಸಾಪಗೆ ಅವಮಾನ ಮಾಡಿದ್ದೀರಿ, ನಿಮ್ಮ ಆಜೀವ ಸದಸ್ಯತ್ವ ರದ್ದು ಮಾಡಬಾರ ದೇಕೆ' ಎಂದು ನೋಟಿಸ್ ನೀಡಿದ್ದು ಸುದ್ದಿ ಆಗಿತ್ತು. ಈಗ ಹಣ ದುರ್ಬಳಕೆ ಮತ್ತು ಕರ್ತವ್ಯಲೋಪದ ಆರೋಪದಿಂದಾಗಿ ಮಹೇಶ್ ಜೋಶಿಯವರ ಆಜೀವ ಸದಸ್ಯತ್ವ ರದ್ದಾಗಿದೆ. ಈ ಹಿಂದೆ ಯಾರನ್ನು ಹಣಿಯ ಬೇಕೆಂದು ಬಯಸಿ ಯಾವ ಬಲೆಯನ್ನು ಹೆಣೆದಿದ್ದರೋ ಅವರು ಅದೇ ಬಲೆಗೆ ಬಿದ್ದಿದ್ದಾರೆ. ಅವರ ಸ್ಥಿತಿ 'ಮಾಡಿದ್ದುಣ್ಣೋ ಮಹರಾಯ' ಎನ್ನುವಂತಾಗಿದೆ.

ತಾ.ಸಿ. ತಿಮ್ಮಯ್ಯ, ಬೆಂಗಳೂರು

ಪುಸ್ತಕ ಖರೀದಿ ಅವ್ಯವಸ್ಥೆಗೆ ಕೊನೆ ಎಂದು?

ಗ್ರಂಥಾಲಯ ಇಲಾಖೆಯು ಏಕಗವಾಕ್ಷಿ ಯೋಜನೆಯಡಿ ಪುಸ್ತಕಗಳನ್ನು ಕೊಳ್ಳಲಾಗುತ್ತಿದ್ದ ಯೋಜನೆಯನ್ನು ಕಳೆದ ಕೆಲವು ವರ್ಷಗಳಿಂದ ನಿಲ್ಲಿಸಿದೆ. ಈಗ 2022ರಲ್ಲಿ ಪ್ರಕಟವಾಗಿ ಆಯ್ಕೆ ಸಮಿತಿಯಿಂದ ಶಿಫಾರಸು ಪಡೆದಿರುವ ಪುಸ್ತಕಗಳ ಖರೀದಿಯನ್ನು ಜಿಲ್ಲೆ ಮತ್ತು ವಲಯಗಳ ಗ್ರಂಥಾಲಯಗಳಲ್ಲಿ ನಡೆಸಲು ಆರಂಭಿಸಿದೆ. ಅದಕ್ಕೆ ಸಂಬಂಧಿಸಿ ಸಿಕ್ಕ ಮಾಹಿತಿ ಅನುಸರಿಸಿ ಕೆಲವು ವಾರಗಳ ಹಿಂದೆ, ರಾಜ್ಯದ ಎಲ್ಲ ಜಿಲ್ಲಾ-ವಲಯ ಗ್ರಂಥಾಲಯಗಳಿಗೂ ಪತ್ರ ಬರೆದು ಅಕ್ಷರ ಪ್ರಕಾಶನದಿಂದ ಆಯ್ಕೆಯಾದ 10 ಪುಸ್ತಕಗಳ ಪಟ್ಟಿಯನ್ನು ಅವರಿಗೆ ನೀಡಿ ಖರೀದಿ ಮಾಡಬೇಕೆಂದು ವಿನಂತಿಸಲಾಗಿತ್ತು. ಈವರೆಗೂ ಅದಕ್ಕೆ ಯಾವ ಉತ್ತರವೂ ಇಲ್ಲ.

ಲಭ್ಯವಿರುವ ಈ ಗ್ರಂಥಾಲಯಗಳ ಸ್ಥಿರ ದೂರವಾಣಿ ಸಂಖ್ಯೆಗಳಿಗೆ ಕರೆ ಮಾಡಿದರೆ, ಅದರಲ್ಲಿ ಬಹುಪಾಲು ಚಾಲ್ತಿಯಲ್ಲಿಲ್ಲ, ಚಾಲ್ತಿಯಲ್ಲಿರುವಂತೆ ತೋರುವ ದೂರವಾಣಿಗಳನ್ನು ಯಾರೂ ಎತ್ತುತ್ತಿಲ್ಲ. ಮುಖತಃ ಭೇಟಿಯಾಗಿ ವ್ಯವಹಾರ ಕುದುರಿಸಿರುವ ಹಲವು ಪ್ರಕಾಶಕರಿಗೆ ಈಗಾಗಲೇ ಬೇಡಿಕೆ ಸಿಕ್ಕಿದೆಯಂತೆ. ನಮ್ಮಂಥ ಹಲವಾರು ಪ್ರಕಾಶಕರಿಗೆ ಈ ಬೇಡಿಕೆ ಪಡೆಯಲು ಪ್ರತಿಯೊಂದು ಗ್ರಂಥಾಲಯಕ್ಕೂ ಹೋಗಿ ಕಚೇರಿಯ ಕಟ್ಟೆ ಕಾಯುವಷ್ಟು ವ್ಯವಧಾನವೂ ಇಲ್ಲ. ಅನೈತಿಕವಾಗಿ ಕಮಿಷನ್ ಕೊಟ್ಟು ಪುಸ್ತಕಗಳನ್ನು ಮಾರಿಕೊಳ್ಳುವ ಆಸಕ್ತಿಯೂ ಇಲ್ಲ. ಆದರೆ, ಸರ್ಕಾರದ ಇಲಾಖೆಯೊಂದರಲ್ಲಿ ಹೀಗಾಗುತ್ತಿರುವುದು ಎಷ್ಟು ಸರಿ?

ಅಕ್ಷರ ಕೆ.ವಿ., ಹೆಗ್ಗೋಡು; **ವಿವೇಕ ಶಾನಭಾಗ,** ಬೆಂಗಳೂರು

ಚಾಟಿ

ಹಾಸ್ಯಕ್ಕೂ ಅಪಾಯ

ಭಾರತದಲ್ಲಿ ಹಾಸ್ಯ ಒಂದು ಅಪಾಯದ ಕ್ಷೇತ್ರದಂತಿದೆ. ಯಾವ ಮಾತು ಯಾವಾಗ ದೊಡ್ಡ ವಿವಾದವಾಗುತ್ತದೆ ಎಂದು ಯಾರಿಗೂ ಹೇಳಲು ಆಗುವುದಿಲ್ಲ... ಹಾಸ್ಯವೂ, ಸಾಮಾಜಿಕ ಹೋರಾಟದಂತೆಯೇ, ಅಧಿಕಾರವನ್ನು ಪ್ರಶ್ನಿಸಬೇಕು.

ಚೇತನ್ 'ಅಹಿಂಸಾ', ನಟ, 'ಎಕ್ಸ್'ನಿಂದ

ಕಿಡಿನುಡಿ

ಜನರ ಹಣ ಲೂಟಿ ಮಾಡಲು ಚಿನ್ನದ ಗಣಿಗೇ ಕೈ ಹಾಕಬೇಕಾಗಿಲ್ಲ, ಕಸದಿಂದಲೂ ಲೂಟಿ ಮಾಡುವ ಕಲೆ ನಮಗೆ ಸಿದ್ಧಿಸಿದೆ ಎಂಬುದನ್ನು ರಾಜ್ಯದ ಕಾಂಗ್ರೆಸ್ ಸರ್ಕಾರ ಸಾಬೀತುಪಡಿಸಿದೆ.

ಬಿ.ವೈ. ವಿಜಯೇಂದ್ರ, ಅಧ್ಯಕ್ಷ, ಬಿಜೆಪಿ ರಾಜ್ಯ ಘಟಕ

25 ವರ್ಷಗಳ ಹಿಂದೆ

ಮಂಗಳವಾರ, 12-6-2001

• ಖುಷ್ಕಿ ಭೂಮಿಯಲ್ಲಿ ಜಲಾನಯನ ಅಭಿವೃದ್ಧಿ

ಬೆಂಗಳೂರು, ಜೂನ್ 11- ರಾಜ್ಯದ 10 ಲಕ್ಷ ಹೆಕ್ಟೇರ್ ಖುಷ್ಕಿ ಜಮೀನಿನಲ್ಲಿ ಜಲಾನಯನ ಅಭಿವೃದ್ಧಿ ಯೋಜನೆ ಗಳನ್ನು ಕೈಗೊಳ್ಳಲು ವಿಶ್ವಬ್ಯಾಂಕ್ 100 ದಶಲಕ್ಷ ಡಾಲರ್ ನೆರವು ನೀಡಲು ಮುಂದೆ ಬಂದಿದೆ ಎಂದು ಎಸ್.ಎಂ. ಕೃಷ್ಣ ಇಂದು ಇಲ್ಲಿ ತಿಳಿಸಿದರು.

ರಾಷ್ಟ್ರೀಯ ಮಾಹಿತಿ ಕೇಂದ್ರವು ಏರ್ಪಡಿಸಿದ್ದ ವಿಡಿಯೊ ಸಂವಾದದಲ್ಲಿ ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವ ವೆಂಕಯ್ಯನಾಯ್ಡು ಮತ್ತು ಉತ್ತರ ಪ್ರದೇಶದ ಮುಖ್ಯಮಂತ್ರಿ ರಾಜನಾಥ್ ಸಿಂಗ್ ಅವರೊಂದಿಗೆ ಭಾಗವಹಿಸಿದ ನಂತರ ಈ ಮಾಹಿತಿ ನೀಡಿದರು.

ರಾಜಸ್ಥಾನವನ್ನು ಬಿಟ್ಟರೆ ಕರ್ನಾಟಕದಲ್ಲಿ ಮಾತ್ರ ಅತಿಹೆಚ್ಚು ಒಣಭೂಮಿ ಇದೆ. ಈ ಪ್ರದೇಶದಲ್ಲಿ ಅಂತರ್ಜಲಮಟ್ಟವನ್ನು ಹೆಚ್ಚಿಸಲು ರಾಜ್ಯ ಸರ್ಕಾರ ಹಲವು ಕಾರ್ಯಕ್ರಮ ಗಳನ್ನು ಹಾಕಿಕೊಂಡಿದೆ ಎಂದು ಕೃಷ್ಣ ಅವರು, ಕೇಂದ್ರ ಸಚಿವರಿಗೆ ತಿಳಿಸಿದರು.

• ನೀರಿನ ದರ ಹೆಚ್ಚಳ ಸಂಭವ

ಬೆಂಗಳೂರು, ಜೂನ್ 11- ನಗರದಲ್ಲಿ ನೀರಿನ ದರ ಹೆಚ್ಚಿಸುವ ಸಂಬಂಧ ಸದ್ಯದಲ್ಲಿಯೇ ಪ್ರಸ್ತಾವವನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಅಧ್ಯಕ್ಷ ಎಂ.ಎನ್. ವಿದ್ಯಾಶಂಕರ್ ತಿಳಿಸಿದರು.

ಶೇ 20ರಷ್ಟು ನೀರಿನ ದರ ಹೆಚ್ಚಿಸುವಂತೆ ಮಂಡಳಿಯು ಕೆಲವು ದಿನಗಳ ಹಿಂದೆ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿತ್ತು. ಆದರೆ, ಅದನ್ನು ಪರಿಶೀಲಿಸಿದ ಸರ್ಕಾರ ದರ ಪುನರ್ ಪರಿಶೀಲಿಸುವಂತೆ ಕೋರಿ ಪ್ರಸ್ತಾವ ವನ್ನು ವಾಪಸ್ ಕಳುಹಿಸಿದೆ ಎಂದರು.

75 ವರ್ಷಗಳ ಹಿಂದೆ

ಮಂಗಳವಾರ, 12-6-1951

• ಕಾಶ್ಮೀರ ವಿವಾದದಲ್ಲಿ ಪಾಕಿಸ್ತಾನಕ್ಕೆ ಬ್ರಿಟನ್, ಅಮೆರಿಕ ಬೆಂಬಲ: ನೆಹರೂ

ನವದೆಹಲಿ, ಜೂನ್ 11-ಕಾಶ್ಮೀರ ವಿವಾದವನ್ನು ವಿಕೃತಗೊಳಿಸುವುದರಲ್ಲಿ ಪಾಕಿಸ್ತಾನಕ್ಕೆ ಬ್ರಿಟನ್, ಅಮೆರಿಕಗಳು ಶಾಮೀಲಾಗಿವೆ ಎಂದು ಪ್ರಧಾನಿ ನೆಹರೂ ಅವರು ಇಂದು ಆಪಾದಿಸಿದರು.

ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡುತ್ತಿದ್ದ ಪ್ರಧಾನಿ, 'ಅಂಶಗಳಿಗೆ ಅನುಸಾರವಾಗಿ ನಾವು ಆದಷ್ಟು ಮೃದುವಾದ ಭಾಷೆಯಲ್ಲಿ ಈ ವಿಷಯವೆಲ್ಲ ಹುಚ್ಚು ಕಟ್ಟುಕತೆಯೆಂದು ಬ್ರಿಟನ್, ಅಮೆರಿಕಗಳಿಗೆ ತಿಳಿಸಿದ್ದೇವೆ' ಎಂದರು.

'ಈಚೆಗೆ ಬ್ರಿಟನ್, ಅಮೆರಿಕಗಳ ಬೆಂಬಲ ಪಡೆದ ಪಾಕಿಸ್ತಾನದ ಧೋರಣೆ ಪೂರ್ತಿ ವಿಕೃತವಾದುದಾಗಿ, ತಪ್ಪಾಗಿವೆ. ಏನೇ ಬಂದರೂ ಕಾಶ್ಮೀರದ ವಿಷಯದಲ್ಲಿ ಹುಚ್ಚು ವರ್ತನೆಯನ್ನು ನಾವು ಸಹಿಸಲಾರೆವೆಂಬುದನ್ನು ನಾನು ಸ್ಪಷ್ಟಪಡಿಸಬೇಕಾಗಿದೆ' ಎಂದು ಪಂಡಿತ ನೆಹರೂ ಅವರು ಹೇಳಿದರು.

ಚುರುಮುರಿ

ಹೊಸ ಸುದ್ದಿ!

• ಬಿ.ಎನ್. ಮಲ್ಲೇಶ್

'ಏನೋ ಗುಡ್ಡೆ ಇವತ್ತಿನ ಹೊಸ ಸುದ್ದಿ?' ಹರಟೆಕಟ್ಟೆಯಲ್ಲಿ ದುಬ್ಬೀರ ಕೇಳಿದ.

'ಹೊಸ ಸುದ್ದೀನಾ? ಫುಟ್‌ಬಾಲ್ ವರ್ಲ್ಡ್ ಕಪ್ ಶುರುವಾತು, ಮೋದಿ ಸಾಹೇಬ್ರು ನೆಹರೂ ಅವರ್ನ ಹಿಂದಿಕ್ಕಿ ದೇಶದ ದೀರ್ಘಾವಧಿ ಪ್ರಧಾನಿ ಆದ್ರು. ಟಿಎಂಸಿ, ಕಾಂಗ್ರೆಸ್ ವಿಲೀನ ಆದ್ರೂ ಆಗಬೋದು... ಸೋ ಅಂಡ್ ಸೋ...' ಎಂದ ಗುಡ್ಡೆ.

'ಈ ಹಿಂದಿಕ್ಕೋದು ಹೊಸದೇನಲ್ಲ, ಮೋದಿ ನೆಹರೂನ ಹಿಂದಿಕ್ಕಿದ್ರು, ಸಿದ್ರಾಮಣ್ಣ ಅರಸುನ ಹಿಂದಿಕ್ಕಿದ್ರು, ಅಂಥ ಸಿದ್ರಾಮಣ್ಣನ್ನೇ ಹಿಂದಿಕ್ಕಿ ಡಿಕೆಶಿ ಸಿಎಂ ಆದ್ರು ಹಿಂಗೇ...' ತೆಪರೇಸಿ ನಕ್ಕ.

'ಇದೊಂಥರ ಫುಟ್‌ಬಾಲ್ ಆಟ ಇದ್ದಂಗೆ. ಆಟಗಾರರನ್ನ ಹಿಂದಿಕ್ಕಿ ಬಾಲ್‌ನ ಗೋಲಿಗೆ ಹೊಡೆಯೋ ತರ...'

'ಕರೆಕ್ಟ್, ಆದ್ರೆ ಗೋಲು ಹೊಡೆಸ್ಕಂಡೋರ ಮುಖ ನೋಡಾಕಾಗಲ್ಲ ಪಾಪ... ಈಗ ದೀದಿ ಪಕ್ಷದ ಕತಿ ನೋಡು...' ಮಂಜಮ್ಮಗೆ ಬೇಸರ.

'ಅಲ್ಲ, ಟಿಎಂಸಿ, ಕಾಂಗ್ರೆಸ್ ವಿಲೀನ ಆದ್ರೆ ಚಿಹ್ನೆ ಏನಾಗಬೋದು?'

'ಎರಡು ಹೂವು, ಒಂದು ಹಸ್ತ ಅಂತೆ... ಟೀವಿಯೋರು ಹೇಳ್ತಿದ್ರು...'

'ನಿನ್ತೆಲಿ, ಈ ಟೀವಿಯೋರು ಹೆಂಗೆ ಅಂದ್ರೆ, 'ಚಾರಾಣೆ ಮುರ್ಗಿಗೆ ಬಾರಾಣೆ ಮಸಾಲ' ಇದ್ದಂಗೆ... ಅದಿರ್ಲಿ, ನಮ್ ಕೊಟ್ರ ಯಾಕೆ ಏನೂ ಮಾತಾಡ್ತಿಲ್ಲ?' ದುಬ್ಬೀರ ಕೇಳಿದ.

'ಯಾಕೋ ಬೇಜಾರು ಕಣಲೆ' ಎಂದ ಕೊಟ್ರ.

'ಬೇಜಾರಾ? ಅದು ಯಾರಿಗಿಲ್ಲ ಹೇಳು, ಸಿಎಂ ಆಗ್ಲಿಲ್ಲ, ಮಂತ್ರಿ ಮಾಡ್ಲಿಲ್ಲ ಅಂತ ಕೆಲವರಿಗೆ ಬೇಜಾರು. ಮಂತ್ರಿ ಮಾಡಿದ್ರೂ ಒಳ್ಳೆ ಖಾತೆ ಕೊಡ್ಲಿಲ್ಲ ಅಂತ ಮತ್ತೆ ಕೆಲವರಿಗೆ ಬೇಜಾರು... ಸದ್ಯ ಖುಷೀಲಿರೋದು ಅಂದ್ರೆ ನಮ್ ಡಿಕೆ ಸಾಹೇಬ್ರು ಒಬ್ರೇ... ಮೊನ್ನೆ ಸೇಬು ಕಚ್ಚಿ ಹೆಂಗೆ ಜನರ ಮೇಲೆ ಬಿಸಾಕಿದ್ರು ನೋಡಿದ್ಯಾ?'

'ಅಲ್ಲ, ಸೇಬಿನ ಹಾರದ ಸೇಬು ಕಚ್ಚಿದ್ರು ಓಕೆ, ಹಿಂದೆ ಮೆಣಸಿನಕಾಯಿ ಹಾರನೂ ಇತ್ತು, ಅದನ್ಯಾಕೆ ಕಚ್ಚಲಿಲ್ಲ?'

'ಅದು ವಿರೋಧ ಪಕ್ಷದೋರಿಗೆ' ಎಂದ ಗುಡ್ಡೆ. ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ಬಾಲಕಾರ್ಮಿಕರ ಬಗ್ಗೆ ಲೋಕವೇಕೆ ಮೂಕ?

ಬಾಲಕಾರ್ಮಿಕ ಪದ್ಧತಿ ಎಳೆಯರ ಬಗ್ಗೆ ಸಮಾಜ ಅಸೂಕ್ಷ್ಮ ಆಗಿರುವುದರ ಸಂಕೇತ. ಬಾಲಕಾರ್ಮಿಕರ ಅಸ್ತಿತ್ವಕ್ಕೂ ಸಮಾಜದಲ್ಲಿನ ಅಸಮಾನತೆಗೂ ಸಂಬಂಧವಿದೆ.

• ಅರುಣ್ ಜೋಳದಕೂಡ್ಲಿಗಿ

ಒಂದು ಮಧ್ಯಾಹ್ನ ಹೋಟೆಲೊಂದರಲ್ಲಿ ಊಟ ಮಾಡುತ್ತಿದ್ದೆ. ಯಾರೋ ಒಬ್ಬರು ಅವಸರದಲ್ಲಿ ಬಂದು ರಿಸೆಪ್ಷನ್ ಕೌಂಟರ್‌ನಲ್ಲಿ ಇರುವವರ ಕಿವಿಯಲ್ಲಿ ಏನೋ ಹೇಳಿದರು. ಆ ಹೋಟೆಲಿನ ಅಡುಗೆಕೋಣೆಯಲ್ಲಿ ಕೆಲಸ ಮಾಡುತ್ತಿದ್ದ ಇಬ್ಬರು ಹುಡುಗರನ್ನು ತಕ್ಷಣ ಹೋಟೆಲಿಂದ ಹೊರಗಡೆ ಕಳಿಸಲಾಯಿತು. ಆ ಹುಡುಗರು ಭಯದಲ್ಲಿ ಹೊರ ನಡೆದರು. ನಂತರ ಒಬ್ಬ ಅಧಿಕಾರಿ ಬಂದರು. ಅವರ ಎದುರು 'ಸರ್, ನಮ್ಮ ಹೋಟೆಲಲ್ಲಿ ಬಾಲಕಾರ್ಮಿಕರು ಯಾರೂ ಕೆಲಸ ಮಾಡುತ್ತಿಲ್ಲ' ಎಂದು ಹೋಟೆಲ್‌ನವರು ಹೇಳಿದರು. ಅಧಿಕಾರಿ ಒಮ್ಮೆ ಹೋಟೆಲಲ್ಲಿ ಸುತ್ತಾಡಿ ಕೆಲವು ನಿಮಿಷವಿದ್ದು ಹೊರಟುಹೋದರು. ನಾನು ಸಂಜೆ ಅದೇ ಹೋಟೆಲಿಗೆ ಟೀ ಕುಡಿಯಲು ಹೋದಾಗ, ಮಧ್ಯಾಹ್ನ ಹೊರಹೋಗಿದ್ದ ಮಕ್ಕಳು ಒಳಗಡೆ ತಟ್ಟೆ-ಲೋಟಗಳನ್ನು ತೊಳೆಯುತ್ತಿದ್ದರು.

ಆ ಮಕ್ಕಳನ್ನು ಮಾತನಾಡಿಸಿದೆ. ಅವರು ಸಮೀಪದ ಹಳ್ಳಿಯಿಂದ ಬಂದ ಕೆಳಜಾತಿಗೆ ಸೇರಿದವರಾಗಿದ್ದರು. ಬಡತನದ ಕಾರಣಕ್ಕೆ ಓದು ನಿಲ್ಲಿಸಿ ದುಡಿಯಲು ಬಂದಿದ್ದರು. ಹೋಟೆಲಿನವರು ಅವರನ್ನು ಸಾರ್ವಜನಿಕರಿಗೆ ಕಾಣದ ಹಾಗೆ ಅಡುಗೆಮನೆಯ ಒಳಗಿನ ಕೆಲಸಕ್ಕೆ ಬಳಸುತ್ತಿದ್ದರು. ಇವರು ಸಮಾಜದ ಕಣ್ಣಿಗೆ ಕಾಣದ ಅದೃಶ್ಯ ಬಾಲಕಾರ್ಮಿಕರು!

2025ರ ಆಗಸ್ಟ್ 22ರಂದು, ಆಗಿನ ಕಾರ್ಮಿಕ ಸಚಿವರಾಗಿದ್ದ ಸಂತೋಷ್ ಲಾಡ್ ಅವರು, ಸದನದಲ್ಲಿ ಪ್ರಸ್ತಾಪವಾದ 'ಕಳೆದ ಐದು ವರ್ಷಗಳಲ್ಲಿ ಎಷ್ಟು ಬಾಲಕಾರ್ಮಿಕರ ಪ್ರಕರಣಗಳು ಕಂಡುಬಂದಿವೆ' ಎಂಬ ಪ್ರಶ್ನೆಗೆ ನೀಡಿದ ಉತ್ತರ: '2020ರಿಂದ 2025ರ ಜೂನ್ ತನಕ ಒಟ್ಟು 1,72,227 ತಪಾಸಣೆಗಳು ನಡೆದಿದ್ದು, 2,834 ಬಾಲಕಾರ್ಮಿಕರನ್ನು ರಕ್ಷಿಸಲಾಗಿದೆ; ಒಟ್ಟು 1,599 ಪ್ರಕರಣಗಳು ಪತ್ತೆಯಾಗಿವೆ'. 50 ಪ್ರಕರಣಗಳಲ್ಲಿ ತಪ್ಪಿತಸ್ಥರಿಂದ ₹31,91,750 ದಂಡ ವಾಗಿ ಪಡೆಯಲಾಗಿದೆ ಎಂದು ಹೇಳಲಾಗಿತ್ತು. ಇವು ಸಾರ್ವಜನಿಕವಾಗಿ ಗೋಚರವಾದ ಬಾಲಕಾರ್ಮಿಕರ ಅಂಕಿ ಅಂಶಗಳು. ಅದೃಶ್ಯ ಬಾಲಕಾರ್ಮಿಕರ ಸಂಖ್ಯೆ ಇದಕ್ಕಿಂತಲೂ ಹಲವು ಪಟ್ಟು ದೊಡ್ಡದಿದೆ.



ಬಾಲಕಾರ್ಮಿಕರ ಸಮಸ್ಯೆ ಕರ್ನಾಟಕಕ್ಕೆ ಸೀಮಿತವಾದುದಲ್ಲ; ಅದು ಜಾಗತಿಕ ಸಮಸ್ಯೆ ಕೂಡ. ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಯು 2025ರ ಜೂನ್‌ನಲ್ಲಿ ಬಿಡುಗಡೆ ಮಾಡಿದ 'ಜಾಗತಿಕ ಬಾಲಕಾರ್ಮಿಕರ ಅಂಕಿಅಂಶಗಳ ಅಂದಾಜು ವರದಿ 2024'ರ ಪ್ರಕಾರ, ವಿಶ್ವದಾದ್ಯಂತ ಸುಮಾರು 13 ಕೋಟಿ 80 ಲಕ್ಷದಷ್ಟು ಬಾಲಕಾರ್ಮಿಕರಿದ್ದಾರೆ. ವಿಶ್ವದ ಒಟ್ಟು ಮಕ್ಕಳಲ್ಲಿ ಶೇ 8ರಷ್ಟು ಎಳೆಯರು ದುಡಿಮೆಯಲ್ಲಿ ತೊಡಗಿಕೊಂಡಿದ್ದಾರೆ. ಇವರಲ್ಲಿ 5 ಕೋಟಿ 4 ಲಕ್ಷ ಮಕ್ಕಳು ಜೀವಕ್ಕೆ ರಕ್ಷಣೆ ಇಲ್ಲದಂತಹ ಅಪಾಯಕಾರಿ ಕ್ಷೇತ್ರಗಳಲ್ಲಿ ದುಡಿಯುತ್ತಿದ್ದಾರೆ. ಕೃಷಿಯಲ್ಲಿ ದುಡಿಯುವ ಮಕ್ಕಳ ಸಂಖ್ಯೆ ಶೇ 61 ರಷ್ಟು ಹೆಚ್ಚಾಗಿದೆ. ಬೇರೆಯವರ ಬಳಿ ಸಣ್ಣಪ್ರಮಾಣದ ವಾಣಿಜ್ಯ ಕೆಲಸಗಳಲ್ಲಿ ತೊಡಗಿಕೊಂಡ ಮಕ್ಕಳ ಸಂಖ್ಯೆ ಶೇ 27ರಷ್ಟಿದೆ. ನಿರ್ಮಾಣ, ಉತ್ಪಾದನೆ ಮತ್ತು ಗಣಿಗಾರಿಕೆಯಂತಹ ಸ್ಥಳಗಳಲ್ಲಿ ಶೇ 19ರಷ್ಟು ಬಾಲಕಾರ್ಮಿಕರಿದ್ದಾರೆ.

ಜಾಗತಿಕವಾಗಿ ಬಾಲಕಾರ್ಮಿಕ ಪದ್ಧತಿಯ ನಿರ್ಮೂಲನೆ ಮಾಡುವ ಯೋಜನೆಗಳು ಕ್ರಿಯಾಶೀಲವಾಗಿವೆ. ಇದರಿಂದಾಗಿ, 2016-2020ರ ಅವಧಿಯಲ್ಲಿ ಜಾಗತಿಕವಾಗಿ ಬಾಲಕಾರ್ಮಿಕರ ಸಂಖ್ಯೆಯಲ್ಲಿನ ಏರಿಕೆಯನ್ನು ಗಮನಿಸಿದರೆ, 2020-2024ರಲ್ಲಿ ಇದು ಇಳಿಕೆ ಕ್ರಮದಲ್ಲಿರುವುದು ಆಶಾದಾಯಕ ಬೆಳವಣಿಗೆ.

ಮಕ್ಕಳ ಹಕ್ಕುಗಳ ಹೋರಾಟಗಾರ ಹಾಗೂ ನೊಬೆಲ್ ಶಾಂತಿ ಪ್ರಶಸ್ತಿ ಪುರಸ್ಕೃತ ಕೈಲಾಶ್ ಸತ್ಯಾರ್ಥಿ ಅವರ 'ಕೈಲಾಶ್ ಸತ್ಯಾರ್ಥಿ ಮಕ್ಕಳ ಪ್ರತಿಷ್ಠಾನ'ವು 2025ರ ಭಾರತದ ಬಾಲ ಕಾರ್ಮಿಕ ಪದ್ಧತಿಯ ಬಿಕ್ಕಟ್ಟಿನ ಕುರಿತು ಸಂಶೋಧನಾ ವರದಿ ಪ್ರಕಟಿಸಿದೆ. ಆ ವರದಿಯು, ದೇಶದ ಬಾಲಕಾರ್ಮಿಕರ ಸಮಸ್ಯೆಯ ಆಳ-ಅಗಲವನ್ನು ಸೂಕ್ಷ್ಮವಾಗಿ ವಿಶ್ಲೇಷಿಸುತ್ತದೆ ಮತ್ತು ಬಾಲಕಾರ್ಮಿಕರ ಸಮಸ್ಯೆಯನ್ನು ಬಗೆಹರಿಸಬಹುದಾದ ಸುಸ್ಥಿರ ಅಭಿವೃದ್ಧಿ ಮಾದರಿಗಳನ್ನು ಮುಂದಿಡುತ್ತದೆ. ಬಾಲಕಾರ್ಮಿಕ ಸಮಸ್ಯೆ ಮಕ್ಕಳ ಮೇಲಿನ ದೌರ್ಜನ್ಯದ ಅತ್ಯಂತ ಕೆಟ್ಟ ನಡೆಯಾಗಿದೆ. ಅಂತೆಯೇ ಮಕ್ಕಳ ಹಕ್ಕುಗಳ ಮತ್ತು ಮಾನವ ಹಕ್ಕುಗಳ ಗಂಭೀರ ಉಲ್ಲಂಘನೆಯಾಗಿದೆ.

ಭಾರತದಲ್ಲಿ ಪ್ರತಿವರ್ಷ 6.3 ಕೋಟಿಯಷ್ಟು ಜನರು ಬಡತನದ ರೇಖೆಗೆ ತಳ್ಳಲ್ಪಡುತ್ತಿದ್ದಾರೆ. ಇದುವೇ ಬಾಲ ಕಾರ್ಮಿಕರ ಸಮಸ್ಯೆ ಜೀವಂತವಾಗಿರಲು ಪ್ರಮುಖ ಕಾರಣ ಎನ್ನಲಾಗಿದೆ. ಇದಕ್ಕಾಗಿ ಸಾರ್ವತ್ರಿಕ ಮೂಲ ಆದಾಯ ಯೋಜನೆ (ಯುಬಿಐಎಸ್) ಜಾರಿಯಲ್ಲಿದೆ. ನಿರ್ದಿಷ್ಟ ಆದಾಯದ ಮಿತಿಗಿಂತ ಕಡಿಮೆ ಇರುವ ಎಲ್ಲ ಕುಟುಂಬಗಳಿಗೆ ಈ ಯೋಜನೆ ಅನ್ವಯವಾಗುತ್ತದೆ. ಆದರೆ, ಈ ಯೋಜನೆ ಪರಿಣಾಮಕಾರಿಯಾಗಿ ಜಾರಿಯಲ್ಲಿಲ್ಲ. ಈಗಿರುವ 1ರಿಂದ 10ನೇ ತರಗತಿಯ ತನಕದ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು 12ನೇ ತರಗತಿವರೆಗೆ ವಿಸ್ತರಿಸಿದರೆ, ಬಾಲಕಾರ್ಮಿಕರ ಸಂಖ್ಯೆಯನ್ನು ಸ್ವಲ್ಪ ಕಡಿತಗೊಳಿಸಬಹುದು. ನಮ್ಮ ದೇಶದಲ್ಲಿ ವೈದ್ಯಕೀಯ ತುರ್ತುಪರಿಸ್ಥಿತಿಯು ವ್ಯಾಪಕವಾಗಿ ಮಕ್ಕಳನ್ನು ಬಾಲಕಾರ್ಮಿಕರನ್ನಾಗಿಸುತ್ತಿದೆ. ಹಾಗಾಗಿ ಗುಣಮಟ್ಟದ ಸಾರ್ವಜನಿಕ ಉಚಿತ ಆರೋಗ್ಯ ಸೇವೆಗಳು ಸಿಕ್ಕರೆ ಬಾಲ ಕಾರ್ಮಿಕ ಸಮಸ್ಯೆ ಸ್ವಲ್ಪಮಟ್ಟಿಗೆ ತಗ್ಗಬಹುದು. ದೇಶದ ಮೂಲಭೂತ ಸಮಸ್ಯೆಯಾದ ಬಡತನ ಕಡಿಮೆಯಾಗಿ, ಅಸಮಾನತೆಯನ್ನು ಕಡಿಮೆ ಮಾಡಿದರೆ ಬಾಲಕಾರ್ಮಿಕರ ಸಂಖ್ಯೆಯೂ ಇಳಿಮುಖವಾಗಬಹುದು.

ಪ್ರತಿವರ್ಷ ಜೂನ್ 12ನ್ನು 'ವಿಶ್ವ ಬಾಲಕಾರ್ಮಿಕ ವಿರೋಧಿ' ದಿನವನ್ನಾಗಿ ಜಾಗತಿಕವಾಗಿ ಆಚರಿಸಲಾಗುತ್ತಿದೆ. ಈ ದಿನವಾದರೂ ನಮ್ಮ ಸುತ್ತಮುತ್ತಲ ಬಾಲಕಾರ್ಮಿಕರನ್ನು ಸಹಾನುಭೂತಿಯಿಂದ ಗಮನಿಸಿ, ಅವರ ಸಮಸ್ಯೆಗಳನ್ನು ಬಗೆಹರಿಸಬಹುದಾದ ಸಾಧ್ಯತೆಗಳ ಬಗ್ಗೆ ಚರ್ಚಿಸಬೇಕಾಗಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಐಸಿಸಿ ಮಹಿಳೆಯರ ಟಿ20 ವಿಶ್ವಕಪ್ 2026

ಮಹಿಳೆಯರ ಟಿ20 ಕ್ರಿಕೆಟ್ ವಿಶ್ವಕಪ್‌ಗೆ ಶುಕ್ರವಾರ ಚಾಲನೆ ಸಿಗಲಿದೆ. ಈ ಬಾರಿಯದ್ದು ವಿಶ್ವಕಪ್‌ನ 10ನೇ ಆವೃತ್ತಿ. ಟಿ20ಯಲ್ಲಿ ಭಾರತದ ಮಹಿಳಾ ತಂಡ ಈವರೆಗೆ ಚಾಂಪಿಯನ್ ಆಗಿಲ್ಲ. ಕಳೆದ ವರ್ಷ ಕ್ರಿಕೆಟ್ ವಿಶ್ವಕಪ್ ಟೂರ್ನಿಯನ್ನು ಭಾರತದ ವನಿತೆಯರು ಜಯಿಸಿದ್ದರು. ಹಲವು ಸವಾಲುಗಳ ಮಧ್ಯೆಯೂ ಕಳೆದ ವರ್ಷದ ಸಾಧನೆಯನ್ನು ಚುಟುಕು ಕ್ರಿಕೆಟ್‌ನಲ್ಲಿ ಪುನರಾವರ್ತಿಸುವ ವಿಶ್ವಾಸದಲ್ಲಿ ಭಾರತದ ವನಿತೆಯರಿದ್ದಾರೆ

ಟಿ20 ಕಿರೀಟದ ಮೇಲೆ ಭಾರತದ ಕಣ್ಣು

ಕಳೆದ ವರ್ಷ ಭಾರತದಲ್ಲಿ ನಡೆದ ಐಸಿಸಿ ಮಹಿಳೆಯರ ವಿಶ್ವಕಪ್ ಟೂರ್ನಿಯಲ್ಲಿ ಜಯಿಸಿದ್ದ ಭಾರತ ತಂಡದ ಸದಸ್ಯರು ಟ್ರೋಫಿಯೊಂದಿಗೆ ಸಂಭ್ರಮಿಸಿದ್ದ ಕ್ಷಣ

ಎಎಫ್‌ಪಿ ಚಿತ್ರ

ಬಹುಮಾನ ಮೊತ್ತ

₹22.43 ಕೋಟಿ
ಟಿ20 ವಿಶ್ವಕಪ್ ಗೆಲ್ಲುವ ತಂಡ ಪಡೆಯುವ ಬಹುಮಾನ

₹11.17 ಕೋಟಿ
ರನ್ನರ್ಸ್ ಅಪ್ ತಂಡವು ಪಡೆಯುವ ಮೊತ್ತ

ಮಹಿಳಾ ಟಿ20 ವಿಶ್ವಕಪ್‌ನಲ್ಲಿ ಭಾರತದ ಸಾಧನೆ

ವರ್ಷ	ಸ್ಥಾನ
2009	ಸೆಮಿಫೈನಲ್
2010	ಸೆಮಿಫೈನಲ್
2012	ಗುಂಪು ಹಂತ
2014	ಗುಂಪು ಹಂತ
2016	ಗುಂಪು ಹಂತ
2018	ಸೆಮಿಫೈನಲ್
2020	ರನ್ನರ್ಸ್ ಅಪ್
2023	ಸೆಮಿಫೈನಲ್
2024	ಗುಂಪು ಹಂತ

ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್ ನೆರವು ನಿಧಿ

ಎಸ್‌ಎಸ್‌ಎಲ್‌ಸಿಯಲ್ಲಿ ಉನ್ನತ ಶ್ರೇಣಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ದಾನಿಗಳ ನೆರವಿನಿಂದ ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಆನ್‌ಲೈನ್ ಮೂಲಕ ಹಣವನ್ನು **'Deccan Herald- Prajavani Relief Trust'**ಗೆ ಕಳುಹಿಸಬಹುದು.

₹ 5,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ದಾನ ನೀಡಿದ ಹಣಕ್ಕೆ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 133ರ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಪಕ್ಕದಲ್ಲಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ. ಚೆಕ್, ನಗದು ಮತ್ತು ಡಿ.ಡಿ ಸ್ವೀಕರಿಸುವುದಿಲ್ಲ.

https://bit.ly/3xFpoz4

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2026ನೇ ಸಾಲಿನ ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿಯ ಜತೆಗೆ ಅರ್ಜಿದಾರರ ಆಧಾರ್, ಮೊಬೈಲ್ ಸಂಖ್ಯೆ, ಬ್ಯಾಂಕ್ ವಿಳಾಸ ಮತ್ತು ಐಎಫ್‌ಎಸ್‌ಸಿ ನಂಬರ್ ಇರುವ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿ ಮತ್ತು ಚೆಕ್ ಹಾಳೆಯ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಲಕೋಟೆಯ ಮೇಲೆ **'ಶೈಕ್ಷಣಿಕ ನೆರವಿಗೆ ಅರ್ಜಿ'** ಎಂದು ಬರೆಯಬೇಕು.

ಯಾವ ಕಾರಣಕ್ಕೆ ತಮಗೆ ಶೈಕ್ಷಣಿಕ ನಿಧಿಯ ಅವಶ್ಯಕತೆಯಿದೆ ಎಂದು ವಿದ್ಯಾರ್ಥಿಯು ವಿವರವನ್ನು ಸ್ವಬರಹದಲ್ಲಿ ವಿವರವಾಗಿ ನೀಡಬೇಕು.

ವಿಳಾಸ

ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್– ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು – 560001

• ಚಂದ್ರಮೌಳಿ ಕಣವಿ

ಇಂಗ್ಲೆಂಡ್‌ನಲ್ಲಿ ಶುಕ್ರವಾರದಿಂದ (ಜೂನ್ 12) ಹತ್ತನೇ ಮಹಿಳಾ ಟಿ20 ವಿಶ್ವಕಪ್ ಕ್ರಿಕೆಟ್ ಆರಂಭವಾಗಲಿದೆ. ಹೋದ ವರ್ಷವಷ್ಟೇ ಮೊದಲ ಬಾರಿಗೆ ಏಕದಿನ ವಿಶ್ವಕಪ್ ಜಯಿಸಿದ ಭಾರತ ತಂಡವು 52 ವರ್ಷಗಳ ಕನಸನ್ನು ನನಸು ಮಾಡಿಕೊಂಡಿತ್ತು. ಈಗ ಅದೇ ಆತ್ಮವಿಶ್ವಾಸದಿಂದ ಮತ್ತೆ ಕಣಕ್ಕಿಳಿಯುತ್ತಿದೆ.

ಭಾರತದ ಆಟಗಾರ್ತಿಯರಿಗೆ ಟಿ20 ಕ್ರಿಕೆಟ್ ಹೊಸತಲ್ಲ. ಪುರುಷರಿಗಿಂತ ಮೊದಲೇ ಅಂತರರಾಷ್ಟ್ರೀಯ ಟಿ20 ಕ್ರಿಕೆಟ್ ಪಂದ್ಯ ಆಡಿದ್ದರು. 2006ರ ಆಗಸ್ಟ್‌ನಲ್ಲಿ ಡರ್ಬಿಯಲ್ಲಿ ಇಂಗ್ಲೆಂಡ್ ವಿರುದ್ಧ ತನ್ನ ಮೊದಲ ಟಿ20 ಪಂದ್ಯ ಗೆದ್ದಿತ್ತು. ಅದೇ ವರ್ಷ ಡಿಸೆಂಬರ್ 1ರಂದು ಪುರುಷರ ತಂಡವು ಜೋಹಾನೆಸ್‌ಬರ್ಗ್‌ನಲ್ಲಿ ದಕ್ಷಿಣ ಆಫ್ರಿಕಾ ಎದುರು ತನ್ನ ಪ್ರಥಮ ಚುಟುಕು ಕ್ರಿಕೆಟ್ ಪಂದ್ಯ ಆಡಿತ್ತು.

ಟಿ20 ವಿಶ್ವಕಪ್ ಗೆಲ್ಲಲು ಒಂದು 'ಜ್ವಾಲೆ'ಯ ಅವಶ್ಯಕತೆ ಇದೆ. ನಾಲ್ಕು ವರ್ಷಗಳಿಂದ ನಡೆಯುತ್ತಿರುವ ಡಬ್ಲ್ಯುಪಿಎಲ್‌ನಿಂದ (ಮಹಿಳಾ ಪ್ರೀಮಿಯರ್ ಲೀಗ್) ಗಳಿಸಿದ ಅನುಭವ ಸಹಕಾರಿಯಾಗಬಲ್ಲದು. ತಂಡದ ಮುಖ್ಯ ತರಬೇತುದಾರ, ಭಾರತದ ಪ್ರಥಮ ದರ್ಜೆಯ ಕ್ರಿಕೆಟ್‌ನಲ್ಲಿ ಬ್ಯಾಟಿಂಗ್ 'ದಂತಕತೆ' ಅಮೋಲ್ ಮಜುಂದಾರ್ ಹಾಗೂ ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರ ಕೊಡುಗೆ ಅಪಾರ. ಮಜುಂದಾರ್ ಅವರು ಈ ಹಿಂದಿನ ಮುಖ್ಯ ಕೋಚ್ ಡಬ್ಲ್ಯು.ವಿ. ರಾಮನ್ ಮತ್ತು ರೊಮೇಶ್ ಪೊವಾರ್ ಅವರಿಗಿಂತ ಹೆಚ್ಚು ಕ್ಷಮತೆ ಉಳ್ಳವರು ಎಂಬುದನ್ನು ಸಾಬೀತುಮಾಡಿದ್ದಾರೆ.

ಅಮೋಲ್ ಮಜುಂದಾರ್

15 ಆಟಗಾರ್ತಿಯರ ತಂಡವನ್ನು ಗಮನಿಸಿದರೆ, ಸಾಕಷ್ಟು ಅನುಭವವಿದೆ. ಸ್ಫೋಟಕ ಶೈಲಿಯ ಬ್ಯಾಟರ್, ಸ್ಫೂರ್ತಿದಾಯಕ ನಾಯಕಿ ಹರ್ಮನ್‌ಪ್ರೀತ್ ಕೌರ್, ಆಕರ್ಷಕ ಪ್ರಾರಂಭಿಕ ಬ್ಯಾಟರ್ ಸ್ಮೃತಿ ಮಂದಾನ, ಬಿರುಸಿನ ಹೊಡೆತಗಳಿಗೆ ಹೆಸರಾದ ಯುವ ಬ್ಯಾಟರ್ ಶಫಾಲಿ ವರ್ಮಾ, ಪವರ್‌ಪ್ಲೇ ಪರಿಣತೆ ಎಡಗೈ ಬ್ಯಾಟರ್, ವಡೋದರದ ಯಸ್ತಿಕಾ ಭಾಟಿಯಾ, ಉತ್ಸಾಹದ ಬುಗ್ಗೆ ಜೆಮಿಮಾ ರಾಡ್ರಿಗಸ್, 2019ರ ನಂತರ ಪುನರಾಗಮನ ಮಾಡುತ್ತಿರುವ, ವಿದರ್ಭದ ಭಾರತಿ ಫೂಲ್ಮಾಲಿ, ವಿಕೆಟ್‌ಕೀಪರ್–ಬ್ಯಾಟರ್ ಸಿಲಿಗುರಿಯ 22 ವರ್ಷದ ರಿಚಾ ಘೋಷ್, ವಿಶ್ವ ಶ್ರೇಷ್ಠ ಆಲ್‌ರೌಂಡರ್ ದೀಪ್ತಿ ಶರ್ಮಾ, ಆಲ್‌ರೌಂಡರ್ ರಾಧಾ ಯಾದವ್ ತಂಡದ ಜೀವಾಳ.

ಅರುಂಧತಿ ರೆಡ್ಡಿ ಇಂಗ್ಲೆಂಡ್ ವಾತಾವರಣದಲ್ಲಿ ತಮ್ಮ ಸ್ವಿಂಗ್ ಬೌಲಿಂಗ್ ಮೇಲೆ ಹೇಗೆ ನಿಯಂತ್ರಣ ಸಾಧಿಸುತ್ತಾರೆ ಎನ್ನುವ ಕುತೂಹಲವಿದೆ. ತಮ್ಮ ಮೂರನೇ ವಯಸ್ಸಿನಲ್ಲಿಯೇ ತಂದೆಯನ್ನು ಕಳೆದುಕೊಂಡು ಕಚೇರಿಯೊಂದರಲ್ಲಿ ಜವಾನರಾಗಿದ್ದ ತಾಯಿ ಸುಜಾತಾ ಅವರ ಆರೈಕೆಯಲ್ಲಿ ಹಿಮಾಚಲಪ್ರದೇಶದ ಸ್ವಿಂಗ್ ಬೌಲರ್ ರೇಣುಕಾಸಿಂಗ್ ಠಾಕೂರ್, ಮಧ್ಯಪ್ರದೇಶದ ಗುಲ್ವಾರಾದ ವೇಗದ ಬೌಲಿಂಗ್ ಆಲ್‌ರೌಂಡರ್ ಆಗಿರುವ 22 ವರ್ಷದ ಕ್ರಾಂತಿ ಗೌಡ್, ಭರವಸೆದಾಯಕ ಎಡಗೈ ಸ್ಪಿನ್ನರ್, ಆಂಧ್ರದ ಕಡಪಾ ಜಿಲ್ಲೆಯ 21 ವರ್ಷದ ಶ್ರೀಚರಣಿ, ಕರ್ನಾಟಕದ ಹೆಮ್ಮೆಯ ಚಾಣಾಕ್ಷ ಆಫ್‌ಸ್ಪಿನ್ನರ್ ಶ್ರೇಯಾಂಕಾ ಪಾಟೀಲ ಮೇಲೆ ವಿಶ್ವಾಸದ ನೋಟವಿದೆ. ಈಚೆಗೆ ಪದಾರ್ಪಣೆ ಮಾಡಿದ ನಂದನಿ ಶರ್ಮಾ ಅವರಿಗೆ ತಮ್ಮ ಸಾಮರ್ಥ್ಯ ಮೆರೆಯಲು ಇದೊಂದು ವೇದಿಕೆಯಾಗಿದೆ.

ತುರುಸಿನ ವಿಶ್ವಕಪ್

ಈ ವಿಶ್ವಕಪ್ ಅತ್ಯಂತ ತುರುಸಿನದ್ದಾಗಲಿದೆ. 2009ರಲ್ಲಿ ಇಂಗ್ಲೆಂಡ್‌ನಲ್ಲೇ ವಿಶ್ವಕಪ್ ಟೂರ್ನಿ ಆರಂಭವಾದಾಗ ಇಂಗ್ಲೆಂಡ್ ಚಾಂಪಿಯನ್ ಆಗಿತ್ತು. ಅಲ್ಲಿಂದ ಇಲ್ಲಿಯವರೆಗೆ ಆ ತಂಡ ಗೆದ್ದಿಲ್ಲ. ಬಲಿಷ್ಠ ಆಸ್ಟ್ರೇಲಿಯಾವು ಆರು ಬಾರಿ ಟ್ರೋಫಿಯನ್ನು ತನ್ನದಾಗಿಸಿಕೊಂಡಿದೆ. ವೆಸ್ಟ್ ಇಂಡೀಸ್ 2016ರಲ್ಲಿ ಹಾಗೂ ಕಳೆದ ಬಾರಿ ಅಂದರೆ 2024ರಲ್ಲಿ ಯುಎಇಯಲ್ಲಿ ನಡೆದಾಗ ನ್ಯೂಜಿಲೆಂಡ್ ಗೆದ್ದಿತ್ತು. ಭಾರತವು 2009, 2010 ಹಾಗೂ 2018ರಲ್ಲಿ ಸೆಮಿಫೈನಲ್ ಪ್ರವೇಶಿಸಿತ್ತು. 2020ರಲ್ಲಿ ಫೈನಲ್‌ನಲ್ಲಿ ಆಸ್ಟ್ರೇಲಿಯಾಕ್ಕೆ ಶರಣಾಗಿತ್ತು.

ಆಸ್ಟ್ರೇಲಿಯಾ ತಂಡದಲ್ಲಿ ನಾಯಕಿ ಸೋಫಿ ಮಾಲಿನೆ, ಬೆಥ್ ಮೂನಿ, ಅಲಿಸಾ ಪೆರಿ ಅಂತಹ ಪರಿಣಾಮಕಾರಿ ಆಟಗಾರ್ತಿಯರು ಇದ್ದಾರೆ. ಇಂಗ್ಲೆಂಡ್‌ಗೆ ಮನೆಯಂಗಳದಲ್ಲಿ ಜಯಿಸುವ ಅವಕಾಶ ಹೆಚ್ಚಿದೆ. ಏಕೆಂದರೆ, ನಾಯಕಿ ನ್ಯಾಟ್ ಶಿವರ್ ಬ್ರಂಟ್ ಗಾಯದಿಂದ ಚೇತರಿಸಿಕೊಂಡಿದ್ದಾರೆ. ಅನುಭವಿ ಹೀಥರ್ ನೈಟ್, ಲಾರೆನ್ ಬೆಲ್, ಬಲಿಷ್ಠ ಆಟಗಾರ್ತಿ ಅಲಿಸ್ ಕ್ಯಾಪ್ಸಿ ಶಕ್ತಿ ತುಂಬಬಲ್ಲರು. ನ್ಯೂಜಿಲೆಂಡ್ ತಂಡದ ದಿಗ್ಗಜರಾದ ಸೂಜಿ ಬೇಟ್ಸ್ ತಮ್ಮ ಫಾರ್ಮ್ ಕಂಡುಕೊಳ್ಳಬೇಕು. ಸೋಫಿ ಡಿವೈನ್, ನಾಯಕಿ ಅಮೇಲಿಯಾ ಕೆರ್, ಕಳೆದ ಸಲ ಗೆದ್ದ ಟ್ರೋಫಿಯನ್ನು ಮತ್ತೆ ತಮ್ಮದಾಗಿಸಿಕೊಳ್ಳುವ ಹವಣಿಕೆಯಲ್ಲಿದ್ದಾರೆ. ಪ್ರಬಲ ಆಕಾಂಕ್ಷಿ ದಕ್ಷಿಣ ಆಫ್ರಿಕಾದ ಶ್ರೇಷ್ಠ ವೇಗದ ಬೌಲರ್ 37 ವರ್ಷದ ಶಬ್ನಿಮ್ ಇಸ್ಮಾಯಿಲ್ ಅವರನ್ನು ವಾಪಸ್ ಕರೆಸಿಕೊಂಡಿದೆ. ಜೊತೆಗೆ ಅದ್ಭುತ ಬ್ಯಾಟರ್ ಲಾರಾ ವೊಲ್ವಾರ್ಟ್, ಮರೈಝಾನ್ ಕ್ಯಾಪ್ ವ್ಯತ್ಯಾಸ ಮಾಡಬಲ್ಲರು. ಹೀಗೆಂದು ಪಾಕಿಸ್ತಾನ, ಬಾಂಗ್ಲಾದೇಶ, ನೆದರ್ಲೆಂಡ್ಸ್, ಸ್ಕಾಟ್ಲೆಂಡ್, ಐರ್ಲೆಂಡ್ ತಂಡಗಳನ್ನು ಅಲ್ಲಗಳೆಯುವ ಹಾಗಿಲ್ಲ. ಈ ತಂಡಗಳೂ ಅಚ್ಚರಿ ಫಲಿತಾಂಶ ನೀಡಬಲ್ಲ ಸಾಮರ್ಥ್ಯ ಹೊಂದಿವೆ.

ಲೇಖಕ: ಮಾಜಿ ಆಟಗಾರ, ಕ್ರೀಡಾ ವಿಶ್ಲೇಷಕ

ಭಾರತದ ಮುಂದಿರುವ ಸವಾಲುಗಳು

ಸ್ಮೃತಿ ಮಂದಾನ ಹಾಗೂ ಶಫಾಲಿ ವರ್ಮಾ ಜೋಡಿಯು ಪವರ್‌ಪ್ಲೇನಲ್ಲಿ ಅಬ್ಬರಿಸಲೇಬೇಕು. ಆದರೆ ಕೆಲ ಪಂದ್ಯಗಳಿಂದ ಅವರು ಒಳ್ಳೆಯ ಅರಂಭ ನೀಡಿಲ್ಲ. ಶಸ್ತ್ರಚಿಕಿತ್ಸೆಯಿಂದ ಈಗ ಗುಣಮುಖರಾಗಿರುವ, ಮೂರನೇ ಕ್ರಮಾಂಕದಲ್ಲಿ ಬರುವ ಯಾಸ್ತಿಕಾ ಭಾಟಿಯಾ ಪವರ್‌ಪ್ಲೇ ನಂತರ ಸ್ಟ್ರೈಕ್ ರೇಟ್ ಹೆಚ್ಚಿಸಬೇಕು. ವಿಕೆಟ್ ಮಧ್ಯೆ ಜೋರಾಗಿ ಓಡಬೇಕು. ಕಳೆದ ಮೂರು ಮ್ಯಾಚ್‌ಗಳಲ್ಲಿ ಅವರು ಎರಡು ಬಾರಿ ರನ್‌ಔಟ್ ಆಗಿದ್ದಾರೆ ಹಾಗೂ ಒಂದು ಸಲ ರಿಟೈರ್ಡ್ ಔಟ್ ಆಗಿದ್ದರು. ನಾಲ್ಕನೇ ಕ್ರಮಾಂಕದಲ್ಲಿ ಜೆಮಿಮಾ ರಾಡ್ರಿಗಸ್ ಹಾಗೂ ನಂತರ ಬರುವ ಹರ್ಮನ್‌ಪ್ರೀತ್ ಅವರಲ್ಲಿ ಒಬ್ಬರಾದರೂ ಕೊನೆಯವರೆಗೂ ಆಡಬೇಕು. ಬಲಿಷ್ಠ ರಿಚಾ ಘೋಷ್ ಅವರಿಗೆ ಬಡ್ತಿ ಯಾಕೆ ನೀಡಬಾರದು?

ದೀಪ್ತಿ ಶರ್ಮಾ ಅವರು ರನ್ ಗಳಿಕೆಯಲ್ಲಿ ವೇಗ ಹೆಚ್ಚಿಸಿಕೊಂಡಿದ್ದರೂ, ಇತ್ತೀಚಿನ ದಿನಗಳಲ್ಲಿ ಅವರ ಬೌಲಿಂಗ್ ಫಾರ್ಮ್ ಕುಂಠಿತವಾಗಿದೆ. ವಿಕೆಟ್ ಬರ ಎದುರಿಸುತ್ತಿದ್ದಾರೆ. ಇಷ್ಟೆಲ್ಲದರ ನಡುವೆ ಬಿರುಸಿನ ಬ್ಯಾಟರ್ ಭಾರತಿ ಫೂಲ್ಮಾಲಿ ಅವರಿಗೆ ಅವಕಾಶ ಸಿಗುವುದು ಕಷ್ಟ.

ಅರುಂಧತಿ ರೆಡ್ಡಿ ಇಂಗ್ಲೆಂಡ್ ವಾತಾವರಣದಲ್ಲಿ ತಮ್ಮ ಬೌಲಿಂಗ್ ಮೇಲೆ ಹೇಗೆ ನಿಯಂತ್ರಣ ಸಾಧಿಸುತ್ತಾರೆ? ಹೊಸ ಬೌಲರ್ ನಂದನಿ ಶರ್ಮಾ ವಿಕೆಟ್ ಪಡೆಯುವಾಗ ರೇಣುಕಾ ಸಿಂಗ್ ಅವರಿಗೆ ಅವಕಾಶ ಸಿಗುವುದು ಕಷ್ಟ. ವೆಸ್ಟ್ ಇಂಡೀಸ್ ವಿರುದ್ಧ ಕಾರ್ಡಿಫ್‌ನಲ್ಲಿ ಆಡಿದ ಅಭ್ಯಾಸ ಪಂದ್ಯದಲ್ಲಿ ಭಾರತಿ ಫೂಲ್ಮಾಲಿ, ಶ್ರೇಯಾಂಕಾ ಪಾಟೀಲ, ರಾಧಾ ಯಾದವ್ ಮಿಂಚಿದ್ದರು. ಕ್ರಾಂತಿ ಗೌಡ್ ಅವರಿಗೆ ಅವಕಾಶ ಸಿಗುವುದು ನಿಶ್ಚಿತವೇ?

ತಂಡದ ಆಯ್ಕೆ ಮಾಡುವುದು ನಿಜವಾಗಿಯೂ ಆಯ್ಕೆ ಸಮಿತಿಗೆ ಸವಾಲಿನ ಜೊತೆಗೆ ತಲೆನೋವು ಕೂಡ. ಇದೆಲ್ಲದರ ಜೊತೆಗೆ ಭಾರತ ತಂಡವು ಈ ಸಲ ಕಪ್ ಗೆಲ್ಲುವ ಫೇವರಿಟ್ ಅನ್ನಬಹುದೇ ಅಥವಾ ಪ್ರಬಲ ಆಕಾಂಕ್ಷಿಯೇ, ಭಾರತವು ಲೀಗ್ ಹಂತದಲ್ಲಿ ಆಸ್ಟ್ರೇಲಿಯಾ ಮತ್ತು ದಕ್ಷಿಣ ಆಫ್ರಿಕಾ ಮೇಲೆ ಜಯಿಸಿ ಸೆಮಿಫೈನಲ್‌ಗೆ ಅರ್ಹತೆ ಪಡೆಯಬೇಕು. ನಂತರ ಜುಲೈ 5ರಂದು ಫೈನಲ್‌ಗೂ ಲಗ್ಗೆ ಇಟ್ಟು ಐತಿಹಾಸಿಕ ಸಾಧನೆ ಮಾಡುವುದೇ ಎಂಬ ಪ್ರಶ್ನೆಗಳಿಗೆ ಹರ್ಮನ್ ಬಳಗವೇ ಉತ್ತರ ನೀಡಲಿದೆ.

ನಾಯಕಿ ಹರ್ಮನ್‌ಪ್ರೀತ್ ಕೌರ್ ಮತ್ತು ಸ್ಮೃತಿ ಮಂದಾನ

12 ಟೂರ್ನಿಯಲ್ಲಿ ಭಾಗವಹಿಸುವ ತಂಡಗಳು

33 ಒಟ್ಟು ಪಂದ್ಯಗಳು

6 ಆಸ್ಟ್ರೇಲಿಯಾ ತಂಡವು ಗೆದ್ದಿರುವ ಟಿ20 ವಿಶ್ವಕಪ್

7 ಟೂರ್ನಿ ನಡೆಯುವ ಒಟ್ಟು ಕ್ರೀಡಾಂಗಣಗಳು

ಶ್ರೇಯಾಂಕಾ ಪಾಟೀಲ

ಕಣದಲ್ಲಿ ಕನ್ನಡತಿ ಶ್ರೇಯಾಂಕಾ

• ಗಿರೀಶ ದೊಡ್ಡಮನಿ

ಭಾರತ ಮಹಿಳಾ ತಂಡವು ಹೋದ ವರ್ಷ ಡಿವೈ ಪಾಟೀಲ ಕ್ರೀಡಾಂಗಣದಲ್ಲಿ ಏಕದಿನ ಕ್ರಿಕೆಟ್ ವಿಶ್ವಕಪ್ ಗೆದ್ದು ಸಂಭ್ರಮಿಸಿತ್ತು. ಆಗ ಗಣ್ಯರ ಗ್ಯಾಲರಿಯಲ್ಲಿದ್ದ ಶ್ರೇಯಾಂಕಾ ಪಾಟೀಲ ಅವರ ಕಂಗಳಲ್ಲಿ ಏಕಕಾಲದಲ್ಲಿ ಸಂತೋಷ ಮತ್ತು ನಿರಾಶೆಗಳು ಸುಳಿದಾಡುತ್ತಿದ್ದವು. ತನ್ನ ಗೆಳತಿಯರು ವಿಶ್ವಕಪ್ ಗೆದ್ದ ಸಂತಸ ಒಂದೆಡೆಯಾದರೆ; ಅವರೊಂದಿಗೆ ತಾನೂ ಇತಿಹಾಸದ ಭಾಗವಾಗಬೇಕಿತ್ತಲ್ಲ ಎಂಬ ನೋವು ಕೂಡ ಇತ್ತು.

2024ರಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಡಬ್ಲ್ಯುಪಿಎಲ್ ಜಯಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದ ಆಫ್‌ಸ್ಪಿನ್–ಆಲ್‌ರೌಂಡರ್. ಅದೇ ವರ್ಷ ಟಿ20 ವಿಶ್ವಕಪ್ ಟೂರ್ನಿಯಲ್ಲಿಯೂ ಆಡಿದ್ದರು. ಆದರೆ 2024ರ ಅಕ್ಟೋಬರ್‌ನಿಂದ ಸುಮಾರು 14 ತಿಂಗಳುಗಳು ಅವರ ವೃತ್ತಿಜೀವನದಲ್ಲಿ ಅತ್ಯಂತ ಸವಾಲಿನ ದಿನಗಳಾಗಿದ್ದವು. ಗಾಯದಿಂದಾಗಿ ಅವರು ಒಂದು ಡಬ್ಲ್ಯುಪಿಎಲ್ ಋತುವಿನಿಂದ ದೂರ ಉಳಿಯಬೇಕಾಯಿತು. ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಆಡಲೂ ಸಾಧ್ಯವಾಗಲಿಲ್ಲ. ಆದರೆ ಆ ಸವಾಲಿನಿಂದ ಫೀನಿಕ್ಸ್‌ನಂತೆ ಮೇಲೆದ್ದು ಬಂದಿದ್ದಾರೆ ಶ್ರೇಯಾಂಕಾ.

ಕಳೆದ ಡಬ್ಲ್ಯುಪಿಎಲ್‌ನಲ್ಲಿ 11 ವಿಕೆಟ್‌ಗಳನ್ನು ತಮ್ಮ ಬುಟ್ಟಿಗೆ ಹಾಕಿಕೊಂಡರು. ಆರ್‌ಸಿಬಿ ಮತ್ತೆ ಚಾಂಪಿಯನ್ ಆಯಿತು. ಈಚೆಗೆ ಇಂಗ್ಲೆಂಡ್‌ನಲ್ಲಿ ನಡೆದ ಎರಡು ಅಭ್ಯಾಸ ಪಂದ್ಯಗಳಲ್ಲಿ (ವೆಸ್ಟ್ ಇಂಡೀಸ್ ಎದುರು 4 ಹಾಗೂ ಇಂಗ್ಲೆಂಡ್ ಎದುರು 2 ವಿಕೆಟ್) ಮಿಂಚಿದ್ದಾರೆ.

ಗಾಯದ ಚಿಕಿತ್ಸೆಗಾಗಿ ಅವರು ಬೆಂಗಳೂರಿನ ಬಿಸಿಸಿಐ ಶ್ರೇಷ್ಠತಾ ಕೇಂದ್ರದಲ್ಲಿದ್ದರು. ಆಗ ಅಲ್ಲಿದ್ದ ಸೀನಿಯರ್ ಆಟಗಾರರೊಂದಿಗೆ ಮಾತನಾಡಿ ಆಟದ ಕೌಶಲಗಳನ್ನು ಉತ್ತಮಪಡಿಸಿಕೊಂಡರು. ಮಾನಸಿಕ ಒತ್ತಡ ನಿರ್ವಹಣೆಯ ಕುರಿತು ವಿಶೇಷ ಮಾರ್ಗದರ್ಶನ ಪಡೆದರು. ಅದು ಅವರಿಗೆ ನೆರವಾಯಿತು.

'ಶ್ರೇಯಾಂಕಾ ಬಾಲ್ಯದಿಂದಲೂ ಛಲಗಾತಿ. ಯಾವುದೇ ವಿಷಯದಲ್ಲಿಯೂ ಹೋರಾಟ ಮಾಡುವ ಮನೋಭಾವ ಅವರದ್ದು. ಈಗಂತೂ ಗಾಯದಿಂದಾಗಿ ದೀರ್ಘ ಕಾಲ ಆಟದಿಂದ ದೂರವಾಗಿದ್ದು ಅವರಲ್ಲಿ ಛಲದ ಮನೋಭಾವ ಮತ್ತಷ್ಟು ಹೆಚ್ಚಲು ಕಾರಣವಾಗಿದೆ. ಆದ್ದರಿಂದ ಸಿಕ್ಕ ಅವಕಾಶಗಳನ್ನು ಪೂರ್ಣವಾಗಿ ಬಳಸಿಕೊಳ್ಳಲು ಶಕ್ತಿ ಮೀರಿ ಹೋರಾಡುತ್ತಿದ್ದಾರೆ' ಎಂದು ಶ್ರೇಯಾಂಕಾ ಅವರ ಕೋಚ್ ಅರ್ಜುನ್ ದೇವ್ 'ಪ್ರಜಾವಾಣಿ'ಗೆ ಹೇಳಿದರು.

ಅಂದ ಹಾಗೆ, ವಿರಾಟ್ ಕೊಹ್ಲಿಯ ಕಟ್ಟಾ ಅಭಿಮಾನಿಯಾಗಿರುವ 23 ವರ್ಷದ ಶ್ರೇಯಾಂಕಾ ನೃತ್ಯ, ಸಂಗೀತದ ಮೂಲಕ ತಮ್ಮ ಮನೋದಾರ್ಢ್ಯ ಕಾಪಾಡಿಕೊಳ್ಳುವುದನ್ನು ರೂಢಿಸಿಕೊಂಡಿದ್ದಾರೆ.

ಕುಲಕುಲವೆಂದು ಭೇದ ಭಾವ ಮಾಡದಿರಿ

ನುಡಿ ಬೆಳಗು

ರೇಣುಕಾ ನಿಡಗುಂದಿ

ಭಾರತವು ಮಹಾನ್ ಸಂತರ ಭೂಮಿಯಾಗಿದೆ. ಮಾನವತೆಯ ಆರಾಧಕರಾದ ರಾಮಕೃಷ್ಣ ಪರಮಹಂಸ ಅವರಲ್ಲೊಬ್ಬರು. ನರೇಂದ್ರ ಎಂಬ ಸಾಮಾನ್ಯ ಬಾಲಕನು ಅವರ ಶಿಷ್ಯನಾಗಿ ಸ್ವಾಮಿ ವಿವೇಕಾನಂದರಾದರು ಮತ್ತು ಅವರಿಂದ ಪಡೆದ ಶಿಕ್ಷಣದ ಮೂಲಕ ಸಂಪೂರ್ಣ ವಿಶ್ವವನ್ನು ಪ್ರಭಾವಿಸಿದರು.

ಒಂದು ಕಾಲದಲ್ಲಿ ರಾಮಕೃಷ್ಣ ಪರಮಹಂಸರು ತೋತಾಪುರಿ ಎಂಬ ಸಂತನೊಂದಿಗೆ ದೇವರು ಮತ್ತು ಅಧ್ಯಾತ್ಮದ ಕುರಿತು ಚರ್ಚಿಸುತ್ತಿದ್ದರು. ಸಂಜೆ ಆಗಿತ್ತು ಮತ್ತು ಚಳಿಗಾಲವಾಗಿದ್ದರಿಂದ ಅವರು ಹೊತ್ತಿ ಉರಿಯುತ್ತಿದ್ದ ಅಗ್ನಿಕುಂಡದ ಸಮೀಪ ಕುಳಿತಿದ್ದರು. ಆ ತೋಟದ ಮಾಲಿಯೂ ಅಲ್ಲಿ ಕೆಲಸ ಮಾಡುತ್ತಿದ್ದ ಮತ್ತು ಅವನಿಗೂ ಚಳಿಯಾಗುತ್ತಿತ್ತು. ಅವನು ತಕ್ಷಣ ಎದ್ದು, ತೋತಾಪುರಿ ಅವರು ಹಚ್ಚಿದ್ದ ಅಗ್ನಿಕುಂಡದಿಂದ ಉರಿಯುತ್ತಿರುವ ಒಂದು ಮರದ ತುಂಡನ್ನು ತೆಗೆದುಕೊಂಡನು.

'ಅಗ್ನಿಕುಂಡವನ್ನು ಮುಟ್ಟುವ ಧೈರ್ಯ ನಿನಗೆ ಹೇಗೆ ಬಂತು?', ಎಂದು ತೋತಾಪುರಿ ಜೀ ಕೋಪದಿಂದ ಕೂಗಿದರು... 'ಇದು ಎಷ್ಟು ಪವಿತ್ರವೆಂದು ಗೊತ್ತಿದೆಯೇ?' ಹೀಗೆ ಹೇಳುತ್ತಾ ಅವರು ಮಾಲಿಯ ಕಡೆಗೆ ಹೋಗಿ ಅವನ ಕಪಾಳಕ್ಕೆ ಹೊಡೆದರು.

ಇದನ್ನೆಲ್ಲಾ ಗಮನಿಸುತ್ತಿದ್ದ ರಾಮಕೃಷ್ಣ ಪರಮಹಂಸರು ಮುಗುಳ್ನಗುತ್ತಿದ್ದರು. ಅವರ ನಗು ತೋತಾಪುರಿ ಅವರಿಗೆ ಇನ್ನಷ್ಟು ಅಸಮಾಧಾನ ತಂದಿತು. ತೋತಾಪುರಿ ಹೇಳಿದರು, 'ನೀವು ನಗುತ್ತಿದ್ದೀರಾ, ಈ ವ್ಯಕ್ತಿ ಎಂದಿಗೂ ಪೂಜೆ-ಪಾಠ ಮಾಡುವುದಿಲ್ಲ, ದೇವರ ಭಜನೆ ಹಾಡುವುದಿಲ್ಲ... ಆದರೂ ನನ್ನಿಂದ ಪ್ರಜ್ವಲಿತವಾದ ಈ ಪವಿತ್ರ ಅಗ್ನಿಯನ್ನು ಸ್ಪರ್ಶಿಸಲು ಪ್ರಯತ್ನಿಸಿದ್ದಾನೆ... ತನ್ನ ಅಶುದ್ಧ ಕೈಗಳಿಂದ ಅದನ್ನು ಮುಟ್ಟಿದ್ದಾನೆ... ಆದ್ದರಿಂದ ನಾನು ಅವನಿಗೆ ಈ ಶಿಕ್ಷೆ ನೀಡಿದೆ.'

ರಾಮಕೃಷ್ಣ ಪರಮಹಂಸರು ಶಾಂತವಾಗಿ ಅವರ ಮಾತುಗಳನ್ನು ಕೇಳಿ ನಂತರ ಹೇಳಿದರು, 'ಯಾವುದೇ ವಸ್ತುವನ್ನು ಮುಟ್ಟಿದ ಮಾತ್ರಕ್ಕೆ ಅದು ಅಪವಿತ್ರವಾಗುತ್ತದೆ ಎಂಬುದು ನನಗೆ ತಿಳಿದಿರಲಿಲ್ಲ... ಕೆಲವೇ ಕ್ಷಣಗಳ ಹಿಂದೆ ನೀವೇ ನಮಗೆ – 'ಏಕೋ ಬ್ರಹ್ಮ ದ್ವಿತೀಯೋ ನಾಸ್ತಿ' (ಏಕೋ ಬ್ರಹ್ಮ ದ್ವಿತೀಯೋ ನಾಸ್ತಿ) ಎಂಬ ಉಪದೇಶವನ್ನು ನೀಡುತ್ತಿದ್ದೀರಲ್ಲಾ... ಈ ಸಂಪೂರ್ಣ ಜಗತ್ತು ಬ್ರಹ್ಮನ ಪ್ರಕಾಶ ಮತ್ತು ಪ್ರತಿಬಿಂಬವೇ ಹೊರತು ಬೇರೆ ಏನೂ ಅಲ್ಲ ಎಂದು ನೀವೇ ವಿವರಿಸುತ್ತಿದ್ದೀರಲ್ಲಾ. ಆದರೆ ಈಗ ನಿಮ್ಮ ಮಾಲಿ ಅಗ್ನಿಯನ್ನು ಮುಟ್ಟಿದ ಕಾರಣಕ್ಕೆ ನೀವು ನಿಮ್ಮ ಎಲ್ಲಾ ಜ್ಞಾನವನ್ನೇ ಮರೆತು ಅವನನ್ನು ಹೊಡೆಯಲು ಮುಂದಾಗಿದ್ದೀರಿ. ಇದನ್ನು ನೋಡಿ ನನಗೆ ನಗೆ ಬರದೇ ಇನ್ನೇನು ಬರುತ್ತದೆ?'

ಪರಮಹಂಸರು ಗಂಭೀರವಾಗಿ ಹೇಳಿದರು, 'ಇದರಲ್ಲಿ ನಿಮ್ಮ ಯಾವುದೇ ತಪ್ಪಿಲ್ಲ. ನಿಮ್ಮನ್ನು ಸೋಲಿಸಿರುವ ಶತ್ರು ಸಾಮಾನ್ಯನಲ್ಲ... ಅದು ನಿಮ್ಮೊಳಗಿನ ಅಹಂಕಾರ. ಅದನ್ನು ಜಯಿಸುವುದು ಸುಲಭವಲ್ಲ.' ತೋತಾಪುರಿ ಅವರಿಗೆ ತಮ್ಮ ತಪ್ಪಿನ ಅರಿವಾಗಿತ್ತು. ಅವರು ಇನ್ನು ಮುಂದೆ ತಮ್ಮ ಅಹಂಕಾರವನ್ನು ತ್ಯಜಿಸುವುದಾಗಿ ಮತ್ತು ಯಾವತ್ತೂ ಅಸ್ಪೃಶ್ಯತೆ ಹಾಗೂ ಮೇಲು-ಕೀಳು ಭೇದಭಾವವನ್ನು ಮಾಡುವುದಿಲ್ಲವೆಂದು ಪ್ರತಿಜ್ಞೆ ಕೈಗೊಂಡರು. ❖

ಪದಬಂಧ 6431

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

3.ತಡವಾಗಿ ನೋಡುತ್ತಿರುವ ಅಬ್ಬಿ (4)
5.ಕರಿಯ ಹತ್ತಿರ ಹಾರುತ್ತಿರುವ ಹೆಣ್ಣುದುಂಬಿ (4)
6.ಶಕುನ ಶಾಸ್ತ್ರದವನ ಹತ್ತಿರವಿರುವ ಗಿಳಿ (2)
7.ಗಿರಿಯ ಕೊನೆಗೆ ಸೆರೆ ಹಿಡಿಯುವುದು! (4)
9.ಸಂಕಟದಲ್ಲಿದ್ದಾಗಲೇ ಸೇತುವೆ ಕಾಣಿಸಿತಲ್ಲಾ! (2)
11.ಕೆಸರಲ್ಲಿರುವ ಎಕ್ಕಡ ಕಾಣುತ್ತಿದೆಯೇ (2)
12.ಬಿರುಸಾದ ಮಾತಿದು (4)
14.ಒಣಕಟ್ಟಿಗೆ ಇಲ್ಲಿದೆ (2)
16.ಯಾವ ವಿವಾದಕ್ಕೂ ಸೇರದಿರುವ ಸೀನ! (4)
17.ಕೆಲಸ ಮಾಡುವ ಸ್ಥಳ (4)

ಮೇಲಿಂದ ಕೆಳಕ್ಕೆ

1.ರಾಗಬದ್ಧವಾಗಿ ಕಾವ್ಯವನ್ನು ಓದುವುದು (3)
2.ಹೂವಿನಲ್ಲಿರುವ ಸಿಹಿ ರಸ (4)
3.ತರಿಯನ್ನು ತರುವಾಗ ತೋರಿದ ಅವಸರ (4)
4.ಈತ ಬಲು ಜಿಪುಣ (3)
6.ಕಪ್ಪೆಚಿಪ್ಪು ಇಲ್ಲಿದೆ (3)
8.ಗೀಟು ಕಾಣದಂತೆ ಮಾಡಿದ ಹೊಳಪಿನ ಲೇಪನ (3)
10.ಅತ್ಯಂತ ಕೆಳಮಟ್ಟದ್ದು (3)
12.ಸೊಂಟಕ್ಕೆ ಕಟ್ಟಿದ ಉಡಿದಾರ (4)
13.ನ್ಯಾಯಾಲಯದಲ್ಲಿ ತನ್ನ ಕಡೆಗೆ ತೀರ್ಪು ಪಡೆದಿರುವ ವ್ಯಕ್ತಿ (4)
14.ಕೈಲಾಸವೆನಿಸಿಕೊಂಡಿರುವ ಕೆಲಸವಿಲ್ಲಿ ದೀರ್ಘವಾಗಿದೆ (3)
15.ನಿದ್ರೆಯಲ್ಲಿ ಕಾಣುವ ನೋಟ (3)



6430ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸಂಕಲನ 3.ಪ್ರಗತಿ 5.ಕಣಕ
7.ಉದರ 8.ಚಡಿ
9.ನಾಮಕರಣ 11.ಉಲ್ಕೆ
12.ಕಲ್ಯಾಣ 13.ಶತಕ
16. ಗರುಡ 17.ತಕರಾರು

ಮೇಲಿಂದ ಕೆಳಕ್ಕೆ:
1.ಸಂದೂಕ 2.ನಗು
3.ಪ್ರಚಾರ 4.ತಿಳಿಗೇಡಿ
6.ಕವಿನಾ 7. ಉಪಕರಣ
10.ಣರಶ 11.ಉಪಯೋಗ
12.ಕನ್ನಡ 14.ಕದಿರು
15.ಸಂತ

ಸುಡೊಕು 6814

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	9	5	6		2			3
					4	6	8	
6		4		1			5	
	8	3		6				4
1								8
2			8		1	5	6	
					3			
4		2		9			3	1
	1		4		6			5

6813 ಸುಡೊಕು

8	7	6	1	4	9	3	2	5
1	3	4	5	2	7	8	6	9
5	9	2	6	3	8	7	4	1
2	1	5	9	7	3	6	8	4
6	4	7	8	1	2	9	5	3
3	8	9	4	5	6	1	7	2
9	2	8	3	6	5	4	1	7
7	6	1	2	9	4	5	3	8
4	5	3	7	8	1	2	9	6

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

12 ಜೂನ್ 2026 ಶುಕ್ರವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಅಧಿಕ ಜ್ಯೇಷ್ಠ ಕೃಷ್ಣದ್ವಾದಶಿ ಗಂ. 19-37 ನಕ್ಷತ್ರ: ಅಶ್ವಿನಿ ಗಂ. 6-29 ನಂತರ ಭರಣಿ ಗಂ. 28-06 ಯೋಗ: ಅತಿಗಂಡ ಗಂ. 21-26 ಕರಣ: ಕೌಲವ ಗಂ. 9-11, ವೃಷಭ ಮಾಸದ 29 ನೇ ದಿನ. ಮಳೆ ನಕ್ಷತ್ರ : ಮೃಗಶಿರ 2 ನೇ ಪಾದ. ರಾಹುಕಾಲ : ಬೆಳಿಗ್ಗೆ 10-30 - 12-00, ಸೂರ್ಯೋದಯ : 06-07 ಸೂರ್ಯಾಸ್ತ : 06-54, ಮುಸ್ಲಿಂ ದಿನಾಂಕ : 26 ದುಲ್ ಹಿಜ್ಜಾ, ಅದೃಷ್ಟ ಸಂಖ್ಯೆ : 9, 11

ಮೇಷ: ಕೌಟುಂಬಿಕ ಸಮಸ್ಯೆಗಳನ್ನು ಎಲ್ಲರೂ ಮೆಚ್ಚುವಂತೆ ಪರಿಹರಿಸಿಕೊಳ್ಳುವ ಸಾಮರ್ಥ್ಯ ಅಭಿವೃದ್ಧಿಯಾಗಲಿದೆ. ಯೋಜನೆಗಳನ್ನು ಇತರರ ಮುಂದೆ ಮಂಡಿಸಿ ಅವರ ವಿಶ್ವಾಸ ಗಳಿಸುವಲ್ಲಿ ಯಶಸ್ವಿಯಾಗುವಿರಿ.

ವೃಷಭ: ಜವಾಬ್ದಾರಿಗಳತ್ತ ಹೆಚ್ಚಿನ ಗಮನ ಹರಿಸಿ. ಆತಂಕವಿಲ್ಲದೆ ಕೆಲಸ ಕಾರ್ಯಗಳು ಸುಸೂತ್ರವಾಗಿ ನಡೆಯಲಿವೆ. ಉಂಡ ಮನೆಗೆ ಎರಡು ಬಗೆಯುವ ಪೈಕಿಯವರು ಇಂದು ಅನುಭವಕ್ಕೆ ಬರಲಿದ್ದಾರೆ.

ಮಿಥುನ: ಔಷಧ ಮಾರಾಟಗಾರರಿಗೆ ಅಥವಾ ಪ್ರತಿನಿಧಿಗಳಿಗೆ ಕಾರ್ಯಾನುಕೂಲವಾಗಲಿದೆ. ಮಾಡಲೇ ಬೇಕಾದ ಸಂದರ್ಭವಿದೆ. ಬರವಣಿಗೆಯಲ್ಲಿ ಉತ್ಸಾಹ ಮೂಡುವುದು.

ಕರ್ಕಾಟಕ: ಜೀವನೋಪಾಯಕ್ಕೆ ಪರ್ಯಾಯ ಮಾರ್ಗ ಹುಡುಕುವ ಪ್ರಯತ್ನ ಮಾಡಿ. ಹಣದ ವಿಚಾರದಲ್ಲಿ ಮಿತವ್ಯಯಿಗಳಾಗಿರಿ. ಇದ್ದ ವಿವಾದಗಳನ್ನು ರಾಜಿಯೊಂದಿಗೆ ಬಗೆಹರಿಸಿಕೊಳ್ಳುವಿರಿ.

ಸಿಂಹ: ಹೂಡಿಕೆ ವಿಚಾರದಲ್ಲಿ ಆಳವಾಗಿ ಯೋಚಿಸಿ ತೀರ್ಮಾನ ಕೈಗೊಳ್ಳಿ. ಮಿತ್ರರಿಂದ ಸಲಹೆ ಸ್ವೀಕರಿಸಿ. ಮಾನಸಿಕವಾಗಿ ಆದ ನೋವನ್ನು ಮರೆಯಲು ಪ್ರೀತಿಪಾತ್ರರೊಂದಿಗೆ ಮಾತನಾಡುವಿರಿ.

ಕನ್ಯಾ: ಸಿಟ್ಟು ಅಥವಾ ಯೋಚನಾರಹಿತ ನಿರ್ಧಾರಗಳು ಏಕಾಂಗಿತನಕ್ಕೆ ಕಾರಣವಾಗಲಿದೆ. ಪ್ರೀತಿಪಾತ್ರರೊಂದಿಗೆ ಮನಬಿಚ್ಚಿ ಮಾತನಾಡುವ ಇಚ್ಛೆ ತೋರಿಸುವಿರಿ. ಸಂಸಾರ ನಿರ್ವಹಣೆಗಾಗಿ ಅಧಿಕ ಹಣ ವ್ಯಯಿಸುವಿರಿ.

ತುಲಾ: ತಾಂತ್ರಿಕ ಕ್ಷೇತ್ರದಲ್ಲಿ ಜೀವನ ನಡೆಸುವವರು ಉದ್ಯೋಗದಲ್ಲಿ ದಂಡ ಕಟ್ಟುವ ಸ್ಥಿತಿ ಬರಬಹುದು. ಜಾಗ್ರತೆಯಿಂದ ಕೆಲಸ ಮಾಡಿ. ಮನೆಯಲ್ಲಿ ಅನುಕೂಲಕರ ಸನ್ನಿವೇಶ ನಿರ್ಮಾಣವಾಗಲಿದೆ.

ವೃಶ್ಚಿಕ: ರಾಜಕೀಯ ಭವಿಷ್ಯದಲ್ಲಿ ಜನಪ್ರಿಯತೆ ಹೆಚ್ಚಿಸಿಕೊಳ್ಳಲು ಪ್ರಯತ್ನ ನಡೆಸಿ. ಇತ್ತೀಚಿನ ಲೇಖನಗಳಿಗೆ ಓದುಗರಿಂದ ತೀಕ್ಷ್ಣ ಪ್ರತಿಕ್ರಿಯೆ ವ್ಯಕ್ತವಾಗುತ್ತದೆ. ಯಾರಿಂದಲೂ ಧನ ಸಹಾಯ ಅಪೇಕ್ಷಿಸಬೇಡಿ.

ಧನು: ಕಾರ್ಯಕ್ಷೇತ್ರದಲ್ಲಿ ಶಾಂತ ಚಿತ್ತದಿಂದ ಕಾರ್ಮಿಕರ ಮಾತುಗಳನ್ನು ಆಲಿಸಿ ಸೂಕ್ತ ಕ್ರಮ ಕೈಗೊಳ್ಳಿ. ಬೇಕಾದ ಸಮಯದಲ್ಲಿ ಅವರ ಸಹಾಯ ದೊರೆಯಲಿದೆ. ವೈಯಕ್ತಿಕವಾಗಿ ನಿಯಮ, ನಿಷ್ಠೆಯಿಂದಿರುವುದು ಉತ್ತಮ.

ಮಕರ: ಅಪರೂಪದ ಅತಿಥಿಗಳ ಆಗಮನದಿಂದ ಮನೆಯಲ್ಲಿ ಸಂತಸದ ವಾತಾವರಣ. ವೈಯಕ್ತಿಕ ಜೀವನದ ಸಮಸ್ಯೆಗಳು ಬಗೆಹರಿದು ಮನಸ್ಸಿಗೆ ನೆಮ್ಮದಿ ಮೂಡಲಿದೆ. ಪತ್ರಕರ್ತರಿಗೆ ಭಯ ಮೂಡುವ ಪ್ರಸಂಗ ಬರಲಿದೆ.

ಕುಂಭ: ಅವಕಾಶವನ್ನು ವ್ಯರ್ಥವಾಗದಂತೆ ಪಡೆದುಕೊಳ್ಳಲು ಪ್ರಯತ್ನಪಡುವುದು ಅಗತ್ಯ. ಮಾರುಕಟ್ಟೆಯಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಗಮನಿಸಿ ಷೇರುಗಳನ್ನು ಕೊಳ್ಳುವ ಯೋಜನೆಗೆ ಮುಂದಾಗಿ.

ಮೀನ: ಎದುರಾಗಿರುವ ಸದ್ಯದ ಸಮಸ್ಯೆಗಳು ಪರಿಹಾರ ಕಾಣಲಿವೆ. ಫಲಿತಾಂಶ ಸಂತಸವನ್ನು ತರಲಿದೆ. ಆರೋಗ್ಯದಲ್ಲಿ ಪದೇ ಪದೇ ವ್ಯತ್ಯಾಸಗಳು ಆಗುತ್ತಿರುವುದರಿಂದಾಗಿ ಆಹಾರ ಪದ್ಧತಿಯನ್ನು ಬದಲಿಸಿಕೊಳ್ಳಿ.

ಗುಂಡಣ್ಣ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	23,214
ಇಂದಿನ ಅಂತ್ಯ:	23,161
ದಿನದ ಕನಿಷ್ಠ:	23,072
	▼ 53

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು	
100 ಕ್ಕೆ	₹650
12 ಕ್ಕೆ	₹90
ಮೈಸೂರು: 100 ಕ್ಕೆ	₹660

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹263
ಆರ್‌ಎಸ್‌ಎಸ್-5	₹256
ಗುಡ್ ಲಾಟ್	₹223

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹385-696
ದ್ವಿತಳಿ (ಬಿ.ವಿ)	₹379-860

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)	
ಶೇಂಗಾ (ರಿಫೈನ್ಡ್)	₹1590 (1600)
ಸೋಯಾ (ರಿಫೈನ್ಡ್)	₹1485 (1480)
ಸೂರ್ಯಕಾಂತಿ (ರಿಫೈನ್ಡ್)	₹1670 (1640)
ಪಾಮೋಲಿನ್	₹1465 (1465)

ಮುದ್ರೆಮನೆ ಕಾಫಿ (50 ಕೆ.ಜಿಗೆ)	
ಎಪಿ	₹22000
ಎಸಿ	₹14000
ಆರ್‌ಪಿ	₹18150
ಆರ್‌ಸಿ	₹9600

ಬ್ಯಾಂಕ್ ಸಾಲ ನೀಡಿಕೆ: ಶೇ 17ರಷ್ಟು ಪ್ರಗತಿ

ಮುಂಬೈ (ಪಿಟಿಐ): ಬ್ಯಾಂಕ್‌ಗಳ ಸಾಲ ನೀಡುವಿಕೆ ಪ್ರಮಾಣವು ಕಳೆದ ವರ್ಷದ ಮೇ ತಿಂಗಳಿಗೆ ಹೋಲಿಸಿದರೆ ಈ ಬಾರಿ ಶೇ 17ರಷ್ಟು ಬೆಳವಣಿಗೆ ದಾಖಲಿಸಿದೆ. ಸತತ 9ನೇ ತಿಂಗಳಿನಲ್ಲೂ ಸಹ ಎರಡಂಕಿ ಬೆಳವಣಿಗೆ ದಾಖಲಿಸಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಅಂಕಿ-ಅಂಶ ತಿಳಿಸಿದೆ.

ರಿಟೇಲ್ ಮತ್ತು ಕಾರ್ಪೊರೇಟ್ ವಲಯದಿಂದ ಸಾಲಕ್ಕೆ ಬೇಡಿಕೆ ಹೆಚ್ಚಿದೆ. ಇದೇ ಸಾಲದ ಪ್ರಮಾಣ ಏರಿಕೆಗೆ ಕಾರಣ ಎಂದು ತಿಳಿಸಿದೆ. ಪ್ರಸಕ್ತ ವರ್ಷದ ಜನವರಿ 31ರಿಂದಲೂ ಸಾಲದ ಬೆಳವಣಿಗೆ ಶೇ 13ಕ್ಕಿಂತ ಹೆಚ್ಚಿದೆ.

ಕಳೆದ ವರ್ಷದ ಸೆಪ್ಟೆಂಬರ್ ತಿಂಗಳಿನಲ್ಲಿ ಜಿಎಸ್‌ಟಿ ಮಂಡಳಿಯು ಎರಡು ಹಂತದ (ಶೇ 5 ಮತ್ತು ಶೇ 18) ತೆರಿಗೆಯನ್ನು ಜಾರಿಗೊಳಿಸಿತು. ಇದು ವ್ಯವಹಾರ ಹೆಚ್ಚಳಕ್ಕೆ ಕಾರಣವಾಯಿತು ಎಂದು ತಿಳಿಸಿದೆ.

ಕೊಬ್ಬರಿ ಧಾರಣೆ	(ಕ್ವಿಂಟಲ್‌ಗೆ)
ಅರಸೀಕೆರೆ	₹20000-20000
ಬೆಂಗಳೂರು	₹36000-39000
ತುರುವೇಕೆರೆ	₹30000-33000

ಮುಂಬೈ ಧಾರಣೆ (ಶೇಂಗಾ) 11-06-2026	
ಜಾವಾ 70/80(ಹೊಸ)	11000-11100
ಜಾವಾ 80/90(ಹೊಸ)	10300-10400
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9100-9200
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1600 (1610)
ಒಂದು ವಾರದ ಡೆಲಿವರಿ	1595 (1605)
ಪಾಮ್ ವಾರದ ಡೆಲಿವರಿ	1463 (1463)
ಸೂರ್ಯಕಾಂತಿ ಎಣ್ಣೆ ಕಚ್ಚಾ	1570 (1550)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,44,000 (1,45,400)
ಬೆಳ್ಳಿ ಕೆ.ಜಿಗೆ	2,32,500 (2,34,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

'ವಿ ಬಿಜಿ ರಾಮ್' ಅಡಿ ಕೇಂದ್ರ, ರಾಜ್ಯದ ವೇತನ ಅನುಪಾತ 80:20ಕ್ಕೆ ಹೆಚ್ಚಿಸಬೇಕು ಎಂಬ ರಾಜ್ಯ ಸರ್ಕಾರದ ಒತ್ತಾಯ ಸರಿಯೇ?

ಸರಿ   ತಪ್ಪು

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಒಗ್ಗಟ್ಟಿನ ಕೆಲಸಕ್ಕೆ ಪ್ರಧಾನಿ ಮೋದಿ ಕರೆ

ನೀತಿ ಆಯೋಗದ ಸಭೆಯಲ್ಲಿ ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳು ಭಾಗಿ

ಪ್ರಜಾವಾಣಿ ವಾರ್ತೆ

ನವದೆಹಲಿ: ನೀತಿ ಆಯೋಗದ ಆಡಳಿತ ಮಂಡಳಿಯ ಸಭೆಯಲ್ಲಿ ಇದೇ ಮೊದಲ ಬಾರಿಗೆ ಎಲ್ಲ 28 ರಾಜ್ಯಗಳ ಮುಖ್ಯಮಂತ್ರಿಗಳು ಪಾಲ್ಗೊಂಡಿದ್ದರು. ಸಭೆಯ ಅಧ್ಯಕ್ಷತೆಯನ್ನು ಪ್ರಧಾನಿ ನರೇಂದ್ರ ಮೋದಿ ವಹಿಸಿದ್ದರು.

ಕೇಂದ್ರಾಡಳಿತ ಪ್ರದೇಶಗಳ ಲೆಫ್ಟಿನೆಂಟ್ ಗವರ್ನರ್‌ಗಳು ಕೂಡ ಸಭೆಯಲ್ಲಿ ಭಾಗಿಯಾಗಿದ್ದರು. ಸಭೆಯು ರಾಷ್ಟ್ರಪತಿ ಭವನದ ಸಾಂಸ್ಕೃತಿಕ ಕೇಂದ್ರದಲ್ಲಿ ಗುರುವಾರ ನಡೆಯಿತು.

ಸಭೆಯಲ್ಲಿ ಮಾತನಾಡಿದ ಮೋದಿ ಅವರು, ದೇಶದ ಅಭಿವೃದ್ಧಿಯ ಪಯಣಕ್ಕೆ ವೇಗ ನೀಡಲು ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳು ಒಟ್ಟಾಗಿ ಕೆಲಸ ಮಾಡಬೇಕು ಎಂದು ಕರೆ ನೀಡಿದರು. 'ವಿಕಸಿತ ಭಾರತ ಸಾಕಾರಗೊಳ್ಳುವಲ್ಲಿ ಕೇಂದ್ರ ಹಾಗೂ ರಾಜ್ಯಗಳ ಸಂಘಟಿತ ಪ್ರಯತ್ನ ಮಹತ್ವದ ಪಾತ್ರ ವಹಿಸಲಿದೆ' ಎಂದು ಮೋದಿ ಅವರು ಎಕ್ಸ್ ಮೂಲಕ ಹೇಳಿದ್ದಾರೆ.

ಮಾದಕ ಪದಾರ್ಥಗಳ ಬಳಕೆ ಮತ್ತು ಸೈಬರ್ ವಂಚನೆಯಂತಹ ಹೊಸ ಸಮಸ್ಯೆಗಳನ್ನು ನಿಭಾಯಿಸಲು ಸಮನ್ವಯದಿಂದ ಕೆಲಸ ಮಾಡುವ ಅಗತ್ಯ ಇದೆ ಎಂದು ಪ್ರಧಾನಿಯವರು ಹೇಳಿದ್ದಾರೆ.

ಎಲ್-ನಿನೊ ಪರಿಸ್ಥಿತಿಯ ಕಾರಣದಿಂದಾಗಿ ಮೂಡಿರುವ ಕಳವಳಗಳ ಬಗ್ಗೆ ಅವರ ಎಲ್ಲರ ಗಮನ ಸೆಳೆದರು. ರಾಜ್ಯಗಳು ನೀರಿನ ಸಂರಕ್ಷಣೆಗೆ ಒತ್ತು ನೀಡಬೇಕು, ಸಹಜ ಹಾಗೂ ಸಾವಯವ ಕೃಷಿ ಪದ್ಧತಿಯನ್ನು ಉತ್ತೇಜಿಸಲು ಕ್ರಮ ಕೈಗೊಳ್ಳಬೇಕು ಎಂಬ ಮನವಿ ಮಾಡಿದರು ಎಂದು ಸಭೆಯ ನಂತರದ ಬಿಡುಗಡೆ ಮಾಡಿರುವ ಪ್ರಕಟಣೆಯಲ್ಲಿ ಹೇಳಲಾಗಿದೆ.

'ವಿಕಸಿತ ಭಾರತ ಎಂಬುದು 2047ಕ್ಕೆ ಮಾತ್ರ ಸೀಮಿತವಾದ ಗುರಿ ಅಲ್ಲ... ಅದು ಒಂದು ಕನಸು ಮಾತ್ರವೇ ಅಲ್ಲ. ಹಲವು ಆಯಾಮಗಳಲ್ಲಿ ಕೆಲಸ ಮಾಡಬಹುದಾದ ಅಂಶಗಳನ್ನು ಅದು ಒಳಗೊಂಡಿದೆ' ಎಂದು ಸಭೆಯ ನಂತರ ಸುದ್ದಿಗಾರರಿಗೆ ಮಾಹಿತಿ ನೀಡಿದ ನೀತಿ ಆಯೋಗದ ಉಪಾಧ್ಯಕ್ಷ ಅಶೋಕ್ ಕುಮಾರ್ ಲಹಿರಿ ಹೇಳಿದರು.

ಪ್ರಧಾನಿಯವರು ಸಭೆಯಲ್ಲಿ ಜಾಗತಿಕ ಮಟ್ಟದಲ್ಲಿನ ಅನಿಶ್ಚಿತತೆಗಳ ಬಗ್ಗೆಯೂ ಮಾತನಾಡಿದರು. ಆದರೆ ಭಾರತವು ಪ್ರಗತಿಯ ಹಾದಿಯಲ್ಲಿ ಆತ್ಮವಿಶ್ವಾಸದಿಂದ ಮುನ್ನಡೆಯುತ್ತಿದೆ ಎಂದರು.

ಸಂಘರ್ಷದ ಬದಲು ಸೌಹಾರ್ದ: ಡಿಕೆ ಸೂತ್ರ

ನವದೆಹಲಿ: 'ಶಿಕ್ಷಣ, ಆರೋಗ್ಯ, ಉದ್ಯೋಗ ಸೃಷ್ಟಿ, ತಂತ್ರಜ್ಞಾನ, ಸಂಶೋಧನೆ ಸೇರಿದಂತೆ ಪ್ರಮುಖ ಕ್ಷೇತ್ರಗಳಲ್ಲಿ ಪ್ರಗತಿಗೆ ಕರ್ನಾಟಕ ಸೇರಿದಂತೆ ರಾಜ್ಯಗಳಿಗೆ ಪ್ರೋತ್ಸಾಹ ನೀಡಬೇಕು' ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ನೀತಿ ಆಯೋಗದ ಸಭೆಯಲ್ಲಿ ಸಲಹೆ ನೀಡಿದರು.

ದೆಹಲಿಯಲ್ಲಿ ನಡೆದ ನೀತಿ ಆಯೋಗದ ಸಭೆಯಲ್ಲಿ ಭಾಗವಹಿಸಿದ ಶಿವಕುಮಾರ್ ಅವರು ಕರ್ನಾಟಕ ರಾಜ್ಯದ ಪ್ರಗತಿಗೆ ಕಾಂಗ್ರೆಸ್ ಸರ್ಕಾರ ಕೈಗೊಂಡಿರುವ ತೀರ್ಮಾನಗಳನ್ನು ವಿವರಿಸಿ ಕೇಂದ್ರ ಸರ್ಕಾರದಿಂದ ಅಗತ್ಯವಿರುವ ಪ್ರೋತ್ಸಾಹ ನೀಡುವಂತೆ ಸಲಹೆ ನೀಡಿದರು.

ಅನುದಾನ ಹಂಚಿಕೆಯಲ್ಲಿ ಕೇಂದ್ರ ಸರ್ಕಾರ ತಾರತಮ್ಯ ಎಸಗುತ್ತಿದೆ ಎಂದು ಆರೋಪಿಸಿ ಸಿದ್ದರಾಮಯ್ಯ ಅವರು 2024ರಲ್ಲಿ ನೀತಿ ಆಯೋಗದ ಸಭೆಯನ್ನು ಬಹಿಷ್ಕರಿಸಿದ್ದರು. 2025ರಲ್ಲೂ ನೀತಿ ಆಯೋಗದ ಸಭೆಯಿಂದ ದೂರ ಉಳಿದಿದ್ದರು. ಆದರೆ, ಡಿ.ಕೆ. ಶಿವಕುಮಾರ್ ಅವರು ಆಡಳಿತ ಮಂಡಳಿ ಸಭೆಯಲ್ಲಿ ಭಾಗಿಯಾಗಿ ರಾಜ್ಯದ ಬೇಡಿಕೆಗಳ ಪಟ್ಟಿ ಮುಂದಿಟ್ಟರು.

ಶಿವಕುಮಾರ್ ಅವರ ಪ್ರಮುಖ ಸಲಹೆಗಳು

- ಖಾಸಗಿ ವಲಯಕ್ಕೆ ಸಮನಾಗಿ ಗುಣಮಟ್ಟದ ಶಿಕ್ಷಣ ನೀಡಲು ಸರ್ಕಾರಿ ಶಾಲೆ ಮತ್ತು ಕಾಲೇಜುಗಳಿಗೆ ಒಂದು ಬಾರಿಯ ಮೂಲಸೌಕರ್ಯ ಅನುದಾನ ನೀಡಬೇಕು
- ಪೌಷ್ಟಿಕಾಂಶ, ಆರೋಗ್ಯ, ಕಲಿಕೆಯ ಫಲಿತಾಂಶಗಳು, ಕೌಶಲ, ಉದ್ಯೋಗ ಸೃಷ್ಟಿ ಮತ್ತು ಸುಸ್ಥಿರತೆಯ ಸೂಚಕಗಳಲ್ಲಿನ ಅಳೆಯಬಹುದಾದ ಸುಧಾರಣೆಗಳಿಗಾಗಿ ರಾಜ್ಯಗಳಿಗೆ ಉತ್ತೇಜನ ನೀಡಬೇಕು
- ತಂತ್ರಜ್ಞಾನ, ಸಂಶೋಧನೆ ಮತ್ತು ಮಾನವ ಬಂಡವಾಳದಲ್ಲಿ ಹೂಡಿಕೆ ಮಾಡುವ ಮೂಲಕ ಜಾಗತಿಕ ಆರ್ಥಿಕ ಮತ್ತು ಭೌಗೋಳಿಕ-ರಾಜಕೀಯ ಅನಿಶ್ಚಿತತೆಗಳನ್ನು ಎದುರಿಸುವ ವಾತಾವರಣ ನಿರ್ಮಿಸಬೇಕು
- ನಿರ್ದಿಷ್ಟ ಸಮಯದೊಳಗೆ ಗ್ರಾಮೀಣ ಆರೋಗ್ಯ ಮತ್ತು ಶಿಕ್ಷಣ ಮೂಲಸೌಕರ್ಯಗಳನ್ನು ಸುಧಾರಿಸುವಲ್ಲಿ ಗಮನಹರಿಸಲು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯದ ಮೂಲಕ ಸಿಎಸ್‌ಆರ್ ನಿಯಮಗಳನ್ನು ಜಾರಿಗೊಳಿಸಬೇಕು
- ಬೆಂಗಳೂರನ್ನು ಹೊರತುಪಡಿಸಿ ಇತರ ಪ್ರದೇಶಗಳಲ್ಲಿ ಗುಣಮಟ್ಟದ ಉದ್ಯೋಗಾವಕಾಶಗಳನ್ನು ಸೃಷ್ಟಿಸಲು ನಗರ ಮತ್ತು ಪ್ರಾದೇಶಿಕ ಆರ್ಥಿಕ ಬೆಳವಣಿಗೆಯ ಕೇಂದ್ರಗಳನ್ನು ಬಲಪಡಿಸಬೇಕು
- ಬೆಂಗಳೂರು ಭಾರತದ ಬೆಳವಣಿಗೆಯ ಕೇಂದ್ರವಾಗಿರುವುದರಿಂದ, ಇತರ ರಾಜ್ಯಗಳಿಂದ ಹೆಚ್ಚಿನ ವಲಸೆಯ ಕಾರಣದಿಂದಾಗಿ ಹೆಚ್ಚುತ್ತಿರುವ ಬೇಡಿಕೆಗಳನ್ನು ನಿಭಾಯಿಸಲು ಹೆಚ್ಚುವರಿ ಮೂಲಸೌಕರ್ಯ ಅನುದಾನ ನೀಡಬೇಕು

ಟಿಸಿಎಸ್–ಆಂಥ್ರೊಪಿಕ್ ಪಾಲುದಾರಿಕೆ

ನವದೆಹಲಿ (ಪಿಟಿಐ): ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಅಳವಡಿಕೆ ಮೂಲಕ ಗ್ರಾಹಕರಿಗೆ ನೆರವು ನೀಡಲು ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ಜಾಗತಿಕ ಎ.ಐ ಕಂಪನಿ ಆಂಥ್ರೊಪಿಕ್ ಜೊತೆಗೆ ಪಾಲುದಾರಿಕೆ ಮಾಡಿಕೊಂಡಿದೆ.

ಪಾಲುದಾರಿಕೆ ಅಡಿ ಟಿಸಿಎಸ್ ಕಂಪನಿಯು, ಈ ವ್ಯವಹಾರಕ್ಕಾಗಿ ಮೀಸಲಾಗಿರುವ ಪ್ರತ್ಯೇಕ ಘಟಕವನ್ನು ಸ್ಥಾಪಿಸಲಿದೆ. ಎಂಜಿನಿಯರಿಂಗ್, ಹಣಕಾಸು, ಕಾನೂನು, ಮಾರ್ಕೆಟಿಂಗ್ ಮತ್ತು ಮಾರಾಟ ವಿಭಾಗದಲ್ಲಿ 50 ಸಾವಿರ ಸಿಬ್ಬಂದಿಯನ್ನು ನಿಯೋಜಿಸಲಿದೆ ಎಂದು ಕಂಪನಿಯು ಷೇರುಪೇಟೆಗೆ ತಿಳಿಸಿದೆ.

ಹಣಕಾಸು ಸೇವೆಗಳು, ಸಾರ್ವಜನಿಕ ಸೇವೆಗಳು, ಆರೋಗ್ಯ, ವಿಮಾನಯಾನ, ದೂರಸಂಪರ್ಕ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಟಿಸಿಎಸ್ ಮತ್ತು ಆಂಥ್ರೊಪಿಕ್ ಜಂಟಿಯಾಗಿ ಎ.ಐ ಸಲ್ಯೂಷನ್ಸ್ ಮತ್ತು ಸೇವೆಗಳನ್ನು ನೀಡಲಿದೆ.

ಎಥೆನಾಲ್: ಎಕ್ಸೈಸ್ ಸುಂಕ ಇಲ್ಲ

ಇ22, ಇ25, ಇ27 ಮತ್ತು ಇ30 ಎಥೆನಾಲ್ ಇರುವ ಪೆಟ್ರೋಲ್ ಸುಂಕ ರದ್ದು

ನವದೆಹಲಿ (ಪಿಟಿಐ): ಹೆಚ್ಚಿನ ಪ್ರಮಾಣದಲ್ಲಿ ಎಥೆನಾಲ್ ಮಿಶ್ರಣ ಹೊಂದಿರುವ ಪೆಟ್ರೋಲ್ ಮೇಲೆ ವಿಧಿಸಲಾಗುತ್ತಿದ್ದ ಎಕ್ಸೈಸ್ ಸುಂಕವನ್ನು ಕೇಂದ್ರ ಸರ್ಕಾರ ರದ್ದುಗೊಳಿಸಿದೆ. ಇಂಧನ ಮಿಶ್ರಣದ ಪ್ರಕ್ರಿಯೆಯ ಮೇಲೆ ಎರಡು ಬಾರಿ ತೆರಿಗೆ ವಿಧಿಸುವ ಸ್ಥಿತಿ ಇರಬಾರದು ಎಂಬ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ.

ಪರೋಕ್ಷ ತೆರಿಗೆಗಳು ಹಾಗೂ ಸುಂಕಗಳ ಕೇಂದ್ರೀಯ ಮಂಡಳಿಯು ಈ ಕುರಿತಾಗಿ ಅಧಿಸೂಚನೆ ಹೊರಡಿಸಿದೆ. ಇ22, ಇ25, ಇ27 ಮತ್ತು ಇ30 (ಅಂದರೆ ಶೇ 22ರಷ್ಟು, ಶೇ 25ರಷ್ಟು, ಶೇ 27ರಷ್ಟು ಮತ್ತು ಶೇ 30ರಷ್ಟು ಎಥೆನಾಲ್ ಹೊಂದಿರುವ ಪೆಟ್ರೋಲ್) ಮಾದರಿಯ ಪೆಟ್ರೋಲ್‌ಗೆ ಎಕ್ಸೈಸ್ ಸುಂಕ ಇರುವುದಿಲ್ಲ ಎಂದು ತಿಳಿಸಿದೆ. ಇಲ್ಲಿ ಪೆಟ್ರೋಲ್‌ಗೆ ಅದಾಗಲೇ ಎಕ್ಸೈಸ್ ಸುಂಕ ಪಾವತಿ ಆಗಿದ್ದರೆ, ಮಿಶ್ರಣಕ್ಕೆ ಬಳಸುವ ಎಥೆನಾಲ್‌ಗೆ ಅದಾಗಲೇ ಜಿಎಸ್‌ಟಿ ಪಾವತಿ ಆಗಿದ್ದರೆ ಉಲ್ಲೇಖಿತ ಪ್ರಮಾಣದಲ್ಲಿ ಎಥೆನಾಲ್ ಮಿಶ್ರಣವಿರುವ ಪೆಟ್ರೋಲ್‌ಗೆ ಕೇಂದ್ರ ಎಕ್ಸೈಸ್ ಸುಂಕ ಇರುವುದಿಲ್ಲ.

ಎಥೆನಾಲ್ ಮಿಶ್ರಣ ಮಾಡುವುದನ್ನು ತಯಾರಿಕಾ ಚಟುವಟಿಕೆ ಎಂದು ಪರಿಗಣಿಸಿ, ಅದರ ಪರಿಣಾಮವಾಗಿ ಈ ಮಿಶ್ರಣದ ಇಂಧನಕ್ಕೆ ಮತ್ತೊಮ್ಮೆ ಎಕ್ಸೈಸ್ ಸುಂಕ ವಿಧಿಸುವುದನ್ನು ತಪ್ಪಿಸಲು ಈ ಕ್ರಮ ಕೈಗೊಳ್ಳಲಾಗಿದೆ ಎಂದು ಕೇಂದ್ರ ಸರ್ಕಾರದ ಮೂಲಗಳು ತಿಳಿಸಿವೆ. 'ಎರಡು ಬಾರಿ ತೆರಿಗೆ ವಿಧಿಸುವುದನ್ನು ತಡೆಯುವುದು ಈ ಕ್ರಮದ ಉದ್ದೇಶ' ಎಂದು ಅವು ಸ್ಪಷ್ಟಪಡಿಸಿವೆ.

ಈಗಾಗಲೇ ಮಾರುಕಟ್ಟೆಯಲ್ಲಿ ಲಭ್ಯವಿರುವ ಇ5, ಇ10 ಮತ್ತು ಇ20 ಪೆಟ್ರೋಲ್‌ಗಳಿಗೆ ಯಾವ ಬಗೆಯಲ್ಲಿ ತೆರಿಗೆ ವಿಧಿಸಲಾಗುತ್ತಿದೆಯೋ, ಅದೇ ಬಗೆಯ ತೆರಿಗೆಯನ್ನು ಹೆಚ್ಚಿನ ಪ್ರಮಾಣದ ಎಥೆನಾಲ್ ಮಿಶ್ರಣ ಇರುವ ಪೆಟ್ರೋಲ್‌ಗೂ ಅನ್ವಯಿಸುವ ಉದ್ದೇಶದಿಂದ ಹೀಗೆ ಮಾಡಲಾಗಿದೆ. ಇದರಿಂದಾಗಿ ಗ್ರಾಹಕರ ಬಳಕೆಗೆ ಮಾರಾಟ ಮಾಡುತ್ತಿರುವ ಪೆಟ್ರೋಲ್ ಮೇಲಿನ ಎಕ್ಸೈಸ್ ಸುಂಕ ಕಡಿಮೆ ಆಗುವುದಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈಗ ಪ್ರಕಟಿಸಿರುವ ತೆರಿಗೆ ವಿನಾಯಿತಿಯು ಕಾನೂನಾತ್ಮಕ ಕ್ರಮ ಮಾತ್ರ. ಇದರಿಂದಾಗಿ ಮುಂದೊಂದು ದಿನ ಅಗತ್ಯ ಎದುರಾದಲ್ಲಿ ಹೆಚ್ಚಿನ ಪ್ರಮಾಣದ ಎಥೆನಾಲ್ ಮಿಶ್ರಣದ ಪೆಟ್ರೋಲ್‌ಅನ್ನು ಬಳಕೆಗೆ ಬಿಡುಗಡೆ ಮಾಡಲು ಅನುಕೂಲ ಆಗುತ್ತದೆ. ಈಗಿನ ಕ್ರಮವು ಇ22, ಇ25, ಇ27 ಮತ್ತು ಇ30 ಇಂಧನವನ್ನು ತಕ್ಷಣಕ್ಕೆ ಮಾರುಕಟ್ಟೆಗೆ ಬಿಡುಗಡೆ ಮಾಡುವ ಸೂಚನೆ ಅಲ್ಲವೇ ಅಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಹೆಚ್ಚಿನ ಪ್ರಮಾಣದ ಎಥೆನಾಲ್ ಮಿಶ್ರಣದ ಇಂಧನವನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುವ ಮೊದಲು ವ್ಯಾಪಕವಾಗಿ ಪರೀಕ್ಷಿಸಲಾಗುತ್ತದೆ, ಸಮಾಲೋಚನೆ ನಡೆಸಲಾಗುತ್ತದೆ ಎಂದು ಅವರು ಹೇಳಿದ್ದಾರೆ.

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)	
ದೊಡ್ಡ	₹1600-2200
ಮಧ್ಯಮ	₹1000-1400
ಸಣ್ಣ	₹400-1000

ಸುದ್ದಿ 2 ನಿಮಿಷ

ದತ್ತಾಂಶ ಕೇಂದ್ರ: ₹26 ಲಕ್ಷ ಕೋಟಿ ಮೌಲ್ಯದ ಅವಕಾಶ– ಪಿಡಬ್ಲ್ಯುಸಿ

ನವದೆಹಲಿ (ಪಿಟಿಐ): ದೇಶದ ದತ್ತಾಂಶ ಕೇಂದ್ರಗಳ ವ್ಯವಸ್ಥೆಯು 2035ರ ವೇಳೆಗೆ ಒಟ್ಟು 280 ಬಿಲಿಯನ್ ಅಮೆರಿಕನ್ ಡಾಲರ್ (₹26.80 ಲಕ್ಷ ಕೋಟಿ) ಮೌಲ್ಯದ ಕಾರ್ಯಾದೇಶಗಳನ್ನು ಸೃಷ್ಟಿಸುವ ಅಂದಾಜು ಇದೆ ಎಂದು ಪಿಡಬ್ಲ್ಯುಸಿ ಅಂದಾಜು ಮಾಡಿದೆ.

ಕೃತಕ ಬುದ್ಧಿಮತ್ತೆ ಹಾಗೂ ಡಿಜಿಟಲ್ ಪರಿವರ್ತನೆಯು ಇದಕ್ಕೆ ಕಾರಣವಾಗಲಿದೆ ಎಂದು ಅದು ಹೇಳಿದೆ.

ದತ್ತಾಂಶ ಕೇಂದ್ರಗಳ ನಿರ್ಮಾಣಕ್ಕೆ ಆಗುವ ನೇರ ಹೂಡಿಕೆಗಳು 2035ರ ವೇಳೆಗೆ ಅಂದಾಜು 71.6 ಬಿಲಿಯನ್ ಡಾಲರ್‌ನಷ್ಟು (₹6.85 ಲಕ್ಷ ಕೋಟಿ) ಆಗುವ ನಿರೀಕ್ಷೆ ಇದೆ. ದತ್ತಾಂಶ ಕೇಂದ್ರಗಳಿಗೆ ಸಂಬಂಧಿಸಿದ ಇತರ ಹೂಡಿಕೆಗಳು ಇನ್ನಷ್ಟು ಹೆಚ್ಚಿನ ಅವಕಾಶಗಳನ್ನು ಸೃಷ್ಟಿಸಲಿವೆ ಎಂದು ಹೇಳಿದೆ.

ಭಾರತದಲ್ಲಿ ಈಗ ಇರುವ ದತ್ತಾಂಶ ಕೇಂದ್ರಗಳ ಅಂದಾಜು ಸಾಮರ್ಥ್ಯವು 1.6 ಗಿಗಾವಾಟ್ ಆಗಿದೆ. ಇದು 2035ರ ಹೊತ್ತಿಗೆ ಎಂಟೂವರೆ ಪಟ್ಟು ಹೆಚ್ಚಾಗಿ 13.8 ಗಿಗಾವಾಟ್ ಆಗಬಹುದು ಎಂದು ಪಿಡಬ್ಲ್ಯುಸಿ ಅಂದಾಜು ಮಾಡಿದೆ.

ನಾರಿನ ನೆಲಹಾಸು ಖರೀದಿಗೆ ಎಂಎಸ್‌ಐಎಲ್ ಸೂಚನೆ

ಬೆಂಗಳೂರು: ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ತಯಾರಿಸುವ ಕಾರಿಡಾರ್ ನೆಲಹಾಸುಗಳಿಗೆ ಹೆಚ್ಚು ಬೇಡಿಕೆ ಇದ್ದು, 'ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್' (ಎಂಎಸ್‌ಐಎಲ್) ರಾಜ್ಯದಾದ್ಯಂತ ಹೊಂದಿರುವ ಮಾರಾಟ ಮಳಿಗೆಗಳಲ್ಲಿ ಬಳಕೆಗಾಗಿ ಒಟ್ಟು 2,134 ಕಾರಿಡಾರ್ ಮ್ಯಾಟ್‌ಗಳ ಸರಬರಾಜಿಗೆ ಸೂಚನೆ ನೀಡಲಾಗಿದೆ.

ಎಂಎಸ್‌ಐಎಲ್ ವ್ಯವಸ್ಥಾಪಕ ನಿರ್ದೇಶಕ ಮನೋಜ್ ಕುಮಾರ್ ಅವರು ಈ ಸೂಚನೆ ನೀಡಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ. ನಿಗಮವು ಗ್ರಾಮೀಣ ನಿರುದ್ಯೋಗಿಗಳಿಗೆ, ಅದರಲ್ಲೂ ಪ್ರಮುಖವಾಗಿ ಮಹಿಳೆಯರಿಗೆ ತೆಂಗಿನ ನಾರಿನ ಉತ್ಪನ್ನಗಳ ತಯಾರಿಕೆಯ ತರಬೇತಿ ನೀಡಿ, ಅವರಿಗೆ ಉದ್ಯೋಗಾವಕಾಶ ಕಲ್ಪಿಸಿದೆ ಎಂದು ಪ್ರಕಟಣೆ ವಿವರಿಸಿದೆ.

ನಿಗಮವು ಉತ್ಪಾದಿಸುವ ಕಾರಿಡಾರ್ ನೆಲಹಾಸುಗಳಿಗೆ ಹೆಚ್ಚು ಬೇಡಿಕೆಯಿದ್ದು, ಅದನ್ನು ಜೈಪುರ ಹಾಗೂ ದೆಹಲಿಗೆ ಸರಬರಾಜು ಮಾಡುತ್ತಿದೆ.

'ಒಂದು ಕಾರಿಡಾರ್ ನೆಲಹಾಸು ತಯಾರಿಕೆಗೆ ತಗಲುವ ₹100 ವೆಚ್ಚದಲ್ಲಿ ಕನಿಷ್ಠ ₹40 ಮಹಿಳಾ ಕೆಲಸಗಾರರಿಗೆ ದೊರೆಯುತ್ತಿದೆ. ಇದರಿಂದ ಮಹಿಳೆಯರಿಗೆ ಅನುಕೂಲವಾಗುತ್ತಿದೆ' ಎಂದು ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಸಿ.ಎನ್. ಶಿವಪ್ರಕಾಶ್ ಹೇಳಿದ್ದಾರೆ.

ಅಡಿಕೆ ಧಾರಣೆ

ಚಿತ್ರದುರ್ಗ		ಕೋಕ	18669-37899	ತಟ್ಟಿಬೆಟ್ಟೆ	38611-46599
ಆಪಿ	52619-53029	ಕೆಂಪುಗೋಟು	16189-40599	**ಶಿರಸಿ**	
ಬೆಟ್ಟೆ	38149-38599	ರಾಶಿ	41009-59089	ಬೆಟ್ಟೆ	40699-51999
ಕೆಂಪುಗೋಟು	32209-32610	ಸಿಪ್ಪೆಗೋಟು	8599-22500	ಬಿಳಿಗೋಟು	25899-35700
ರಾಶಿ	52139-52569	**ಶಿವಮೊಗ್ಗ**		ಚಾಲಿ	44100-48409
ಕುಮಟಾ		ಸರಕು	56209-95069	ಕೆಂಪುಗೋಟು	25909-36150
ಹಳೆಚಾಲಿ	45069-47898	ಬೆಟ್ಟೆ	50099-64799	ರಾಶಿ	48099-53809
ಹೊಸಚಾಲಿ	31091-47539	ರಾಶಿ	47011-54069	**ಯಲ್ಲಾಪುರ**	
ಚಿಪ್ಪು	21091-37809	ಗೊರಬಲು	21009-43389	ಆಪಿ	55666-55666
ಕೋಕ	16160-33599	**ಸಿದ್ದಾಪುರ**		ಬಿಳಿಗೋಟು	18109-35600
ಪುತ್ತೂರು		ಬಿಳಿಗೋಟು	27899-35209	ಚಾಲಿ	37799-48099
ಕೋಕ	20000-33500	ಚಾಲಿ	40000-47599	ಕೋಕ	17600-30099
ಹೊಸತು	30000-47000	ಕೋಕ	22099-33499	ಕೆಂಪುಗೋಟು	24899-36099
ಸಾಗರ		ಕೆಂಪುಗೋಟು	30000-37769	ರಾಶಿ	49309-54239
ಬಿಳಿಗೋಟು	24899-36099	ರಾಶಿ	47699-53009	ತಟ್ಟಿಬೆಟ್ಟೆ	37506-47900
ಚಾಲಿ	24129-42019				

ಕೊಲ್ಲಿ ರಾಷ್ಟ್ರಗಳು, ಜೋರ್ಡನ್ ಮೇಲೆ ಇರಾನ್ ದಾಳಿ: ಸೇನಾ ನೆಲೆಗಳೇ ಗುರಿ

ಸಂಘರ್ಷ ತೀವ್ರ: ಅಮೆರಿಕ ದಾಳಿಗೆ ತಿರುಗೇಟು

ದುಬೈ (ಎಪಿ): ಅಮೆರಿಕ ನಡೆಸಿದ ದಾಳಿಗೆ ಪ್ರತಿಯಾಗಿ ಇರಾನ್ ಸತತ ಎರಡನೇ ದಿನವೂ ಪ್ರತಿದಾಳಿ ನಡೆಸಿದೆ. ಈ ಮೂಲಕ ಕದನ ವಿರಾಮದಿಂದ ಕೆಲದಿನಗಳ ಕಾಲ ಸ್ಥಗಿತಗೊಂಡಿದ್ದ ಕೊಲ್ಲಿ ರಾಷ್ಟ್ರಗಳ ಯುದ್ಧವೂ ಪೂರ್ಣ ಪ್ರಮಾಣದಲ್ಲಿ ಪುನರಾರಂಭಗೊಂಡಿದೆ.

ಕೊಲ್ಲಿ ರಾಷ್ಟ್ರಗಳಲ್ಲಿರುವ ಅಮೆರಿಕದ ಸೇನಾ ನೆಲೆಗಳನ್ನು ಗುರಿಯಾಗಿರಿಸಿಕೊಂಡು ಇರಾನ್ ದಾಳಿ ಮುಂದುವರಿಸಿದೆ.

ಇರಾನ್ ಮೇಲೆ ಅಮೆರಿಕ ಸಹ ಗುರುವಾರ ಬೆಳಿಗ್ಗೆಯವರೆಗೂ ನಡೆಸಿದ ದಾಳಿಯೂ ಈ ಹಿಂದೆಂದಿಗಿಂತಲೂ ಭೀಕರವಾಗಿತ್ತು.

ಅಮೆರಿಕದ ದಾಳಿಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿರುವ ಇರಾನ್, 'ಪ್ರಸ್ತುತ ಪರಿಸ್ಥಿತಿಯಲ್ಲಿ ಕದನ ವಿರಾಮ ಅರ್ಥಹೀನವಾಗಿದೆ' ಎಂದು ತಿಳಿಸಿದೆ.

ರಕ್ಷಣಾ ಕೇಂದ್ರಗಳ ಮೇಲೆ ತೀವ್ರ ದಾಳಿ: 'ಇರಾನ್‌ನ ವಾಯು ರಕ್ಷಣಾ ಕೇಂದ್ರಗಳು, ಸಂವಹನ ವ್ಯವಸ್ಥೆ ಹಾಗೂ ಇರಾನ್‌ನ ಸೇನಾ ಕಣ್ಗಾವಲು ಸಾಮರ್ಥ್ಯಗಳನ್ನು ಗುರಿಯಾಗಿರಿಸಿಕೊಂಡು ದಾಳಿ ನಡೆಸಲಾಗಿದೆ' ಎಂದು ಅಮೆರಿಕ ಸೇನೆಯ ಕೇಂದ್ರ ಕಮಾಂಡ್ ತಿಳಿಸಿದೆ.

ಗುರುವಾರ ಸೂರ್ಯೋದಯಕ್ಕೂ ಮುಂಚೆಯೇ ಇರಾನ್‌ನ ಮೇಲೆ ಈ ದಾಳಿ ನಡೆಸಲಾಗಿದ್ದು, ಆಸ್ತಿ-ಪಾಸ್ತಿ, ಪ್ರಾಣ ಹಾನಿಯ ಕುರಿತಂತೆ ಉಭಯ ರಾಷ್ಟ್ರಗಳು ಮಾಹಿತಿ ನೀಡಿಲ್ಲ.

ಹಿಜ್ಬುಲ್ಲಾ ಬಂಡುಕೋರರನ್ನು ಗುರಿಯಾಗಿರಿಸಿಕೊಂಡು ಇಸ್ರೇಲ್ ನಡೆಸಿದ ವಾಯುದಾಳಿಗೆ ಲೆಬನಾನ್‌ನ ದಕ್ಷಿಣ ಭಾಗದಲ್ಲಿರುವ ಮಾರ್ಜಯೂನ್ ಪಟ್ಟಣದಲ್ಲಿರುವ ಸೇಂಟ್ ಜಾರ್ಜ್ ಚರ್ಚ್ ಚಾವಣಿಯು ಹಾನಿಗೊಳಗಾಗಿದೆ —ಎಪಿ/ಪಿಟಿಐ ಚಿತ್ರ

'ಇರಾನ್ ರಾಜಧಾನಿ ಟೆಹರಾನ್ ಹಾಗೂ ಬಂದರು ನಗರಿ ಬಂದರ್ ಅಬ್ಬಾಸ್, ಕೆಶಮ್ ದ್ವೀಪ, ಹೊರ್ಮುಜ್ ಜಲಸಂಧಿಯನ್ನು ಗುರಿಯಾಗಿಸಿ ಅಮೆರಿಕ ಪಡೆಗಳು ದಾಳಿ ನಡೆಸಿವೆ' ಎಂದು ಇರಾನ್‌ನ ಅರೆಸೇನಾ ಪಡೆ ರೆವಲ್ಯೂಷನರಿ ಗಾರ್ಡ್ ತಿಳಿಸಿದೆ.

ಸೇನಾ ಉಪಕರಣಗಳ ಉತ್ಪಾದನಾ ಸಂಕೀರ್ಣ, ಮಿಲಿಟರಿ ಬ್ಯಾರಕ್, ಸೇನಾ ನೆಲೆಗಳನ್ನು ಗುರಿಯಾಗಿರಿಸಿ ದಾಳಿ ನಡೆಸಲಾಗಿದೆ ಎಂದು ತಿಳಿಸಿದೆ.

ಕುವೈತ್, ಬಹರೇನ್, ಜೋರ್ಡನ್‌ನಲ್ಲಿರುವ ಅಮೆರಿಕ ಸೇನಾ ನೆಲೆಗಳ ಮೇಲೆ ಪ್ರತಿದಾಳಿ ನಡೆಸಲಾಗಿದೆ ಎಂದು ಇರಾನ್ ತಿಳಿಸಿದೆ.

ಕೊಲ್ಲಿ ರಾಷ್ಟ್ರಗಳ ಮೇಲೆ ಇರಾನ್ ಪದೇ ಪದೇ ದಾಳಿ ನಡೆಸಿದ್ದು, ಈ ವಾರದಲ್ಲಿ ಮೂರನೇ ಬಾರಿಯಾಗಿದೆ. ಮೊದಲು ಇರಾನ್– ಇಸ್ರೇಲ್ ನಡುವೆ ದಾಳಿಗಳು ನಡೆದವು. ಇದಾದ ನಂತರ ಅಮೆರಿಕ ಹಾಗೂ ಇರಾನ್ ಎರಡು ಸುತ್ತು ದಾಳಿ, ಪ್ರತಿ ದಾಳಿ ನಡೆಸಿದ್ದವು.

ಕ್ಷಿಪಣಿ ದಾಳಿಗೆ ತಡೆ: 'ಇರಾನ್‌ನ 20 ಕ್ಷಿಪಣಿಗಳನ್ನು ತಡೆಯಲಾಗಿದ್ದು, ಯಾರಿಗೂ ಗಾಯಗಳಾಗಿಲ್ಲ' ಎಂದು ಜೋರ್ಡನ್ ತಿಳಿಸಿದೆ.

ಇರಾನ್ ದಾಳಿಯಿಂದ 11 ವರ್ಷದ ಬಾಲಕಿಗೆ ಗಾಯವಾಗಿದೆ. ಹಲವು ಕಾರು, ಮನೆಗಳಿಗೂ ಹಾನಿಯುಂಟಾಗಿದೆ ಎಂದು ಬಹರೇನ್‌ನ ಆಂತರಿಕ ಸಚಿವಾಲಯವು ತಿಳಿಸಿದೆ.

ಹೊರ್ಮುಜ್ ಸಂಪೂರ್ಣ ಸ್ಥಗಿತ

ಟೆಹರಾನ್ (ಎಎಫ್‌ಪಿ): ಹೊರ್ಮುಜ್ ಜಲಸಂಧಿಯನ್ನು ಸಂಪೂರ್ಣವಾಗಿ ಮುಚ್ಚಲಾಗಿದೆ ಎಂದು ಇರಾನ್‌ನ ಗುರುವಾರ ಘೋಷಿಸಿದೆ.

'ಅಮೆರಿಕ ಪಡೆಗಳ ತೀವ್ರತರದ ದಾಳಿಯಿಂದ ಗುರುವಾರದಿಂದಲೇ ಇರಾನ್ ಸೇನಾ ಪಡೆಯ ಸೂಚನೆಯಂತೆ ಹೊರ್ಮುಜ್ ಜಲಸಂಧಿಯನ್ನು ಮುಚ್ಚಲಾಗಿದೆ' ಎಂದು ಹೊರ್ಮುಜ್ ಜಲಸಂಧಿಯ ಪ್ರಾಧಿಕಾರ ತಿಳಿಸಿದೆ.

'ಪರವಾನಗಿ ಹೊಂದಿರುವವರು ಮುಂದಿನ ಆದೇಶದವರೆಗೂ ಕಾಯಬೇಕು' ಎಂದು ತಿಳಿಸಿದೆ.

ಯುದ್ಧದ ಆರಂಭದಿಂದಲೂ ಈ ಜಲಸಂಧಿಯ ಮೂಲಕ ಸಂಚಾರ ನಿರ್ಬಂಧಿಸಿದ ಕಾರಣ, ಈಗಿನ ನಿರ್ಧಾರದಿಂದ ಉಂಟಾಗಿರುವ ಪರಿಣಾಮದ ಕುರಿತು ಇನ್ನಷ್ಟೇ ತಿಳಿಯಬೇಕಿದೆ. ಜಾಗತಿಕ ಮಟ್ಟದಲ್ಲಿ ಇಂಧನ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿ, ಇಂಧನ ಹಾಗೂ ಆಹಾರ ಉತ್ಪನ್ನಗಳ ಬೆಲೆ ಏರಿಕೆಗೆ ಕಾರಣವಾಗಿರುವ ಇರಾನ್ ಪ್ರಬಲ ಹಿಡಿತ ಹೊಂದಿರುವ 'ಹೊರ್ಮುಜ್ ಜಲಸಂಧಿ'ಯೇ ಮಾತುಕತೆಯ ಕೇಂದ್ರಬಿಂದುವಾಗಿದೆ.

ವೆನೆಜುವೆಲಾ ರೀತಿ ಕಾರ್ಯಾಚರಣೆ: ಟ್ರಂಪ್

'ಇರಾನ್ ಮೇಲೆ ಭೀಕರ ದಾಳಿ ನಡೆಸಲಾಗುವುದು ಮತ್ತು ಅಲ್ಲಿನ ತೈಲ ಹಾಗೂ ಅನಿಲ ಮೂಲಸೌಕರ್ಯಗಳ ಮೇಲೆ ನಾವು ಸದ್ಯದಲ್ಲಿಯೇ ಹಿಡಿತ ಸಾಧಿಸಲಿದ್ದೇವೆ' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ ನೀಡಿದ್ದಾರೆ.

'ಭವಿಷ್ಯದಲ್ಲಿ ನಾವು ಖಾರ್ಗ್ ದ್ವೀಪ ಸೇರಿದಂತೆ ಅನಿಲ ಕೇಂದ್ರಗಳ ಮೇಲೆ ನಿಯಂತ್ರಣ ಸಾಧಿಸುವ ದಿನಗಳು ದೂರವಿಲ್ಲ. ವೆನೆಜುವೆಲಾ ಮಾದರಿಯಲ್ಲಿಯೇ ನಾವು ಇಲ್ಲಿಯೂ ಕೂಡ ಹಿಡಿತ ಸಾಧಿಸಲಿದ್ದೇವೆ' ಎಂದು ಟ್ರೂಥ್ ಸೋಷಿಯಲ್‌ನಲ್ಲಿ ಬರೆದುಕೊಂಡಿದ್ದಾರೆ.

ಶಾಂತಿ ಒಪ್ಪಂದ: ಪಟ್ಟು ಬಿಡದ ಇರಾನ್

ಯುದ್ಧ ಮತ್ತೊಮ್ಮೆ ಆರಂಭಗೊಂಡಿದ್ದರಿಂದ ಅಮೆರಿಕ ಮತ್ತು ಇರಾನ್ ಮಧ್ಯೆ ನಡೆದಿದ್ದ ಕದನ ವಿರಾಮವು ಮುರಿದು ಬಿದ್ದಂತಾಗಿದೆ. ಒಂದೆಡೆ, ಶಾಂತಿ ಒಪ್ಪಂದಕ್ಕೆ ಅಮೆರಿಕವು ತೀವ್ರ ಒತ್ತಡ ಹೇರುತ್ತಿದ್ದರೆ, ಇರಾನ್ ತನ್ನ ಪಟ್ಟು ಬಿಡುತ್ತಿಲ್ಲ. ಶಾಂತಿ ಒಪ್ಪಂದದಲ್ಲಿ ತನ್ನ ಬೇಡಿಕೆಗಳೂ ಪ್ರಮುಖವಾಗಿ ಇರಬೇಕು ಎಂಬುದನ್ನು ಈಗಲೂ ಇರಾನ್ ಪ್ರತಿಪಾದಿಸುತ್ತಿದೆ.

'ಶಾಂತಿ ಒಪ್ಪಂದವನ್ನು ಇರಾನ್ ತಕ್ಷಣವೇ ಒಪ್ಪಿಕೊಳ್ಳಬೇಕು. ಇಲ್ಲದೇ ಇದ್ದರೆ, ದಾಳಿಯನ್ನು ತೀವ್ರಗೊಳಿಸಲಾಗುವುದು' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. 'ಸೇನೆಯ ಮೂಲಕ ಈ ಯುದ್ಧ ಕೊನೆಗೊಳ್ಳುತ್ತಂದೆ ಎಂಬುದು ತಪ್ಪು ಕಲ್ಪನೆ. ಇರಾನ್ ಮೇಲೆ ದಾಳಿ ನಡೆಸಿ, ತನಗೆ ಬೇಕಾದ್ದನ್ನು ಅಮೆರಿಕ ಪಡೆದುಕೊಳ್ಳಲು ಸಾಧ್ಯವಿಲ್ಲ. ಮಾತುಕತೆಯಲ್ಲಿ ಪ್ರಗತಿ ಇದೆ' ಎಂದು ಇರಾನ್ ಮೂಲಗಳು ತಿಳಿಸಿವೆ.

ವಾಯು ಪ್ರದೇಶ ಮುಚ್ಚಿದ ಕುವೈತ್: ಇರಾನ್ ದಾಳಿ ನಡೆಸಿದ ಬೆನ್ನಲ್ಲೇ, ಕುವೈತ್ ತನ್ನ ವಾಯುಪ್ರದೇಶವನ್ನು ಮುಚ್ಚಿದೆ. ಕುವೈತ್‌ನ ನಾಗರಿಕ ವಿಮಾನಯಾನ ನಿರ್ದೇಶನಾಲಯವು ಈ ಘೋಷಣೆ ಮಾಡಿದೆ.

ವಿಮಾನಗಳ ಸಂಚಾರವನ್ನು ಬೇರೆ ವಿಮಾನ ನಿಲ್ದಾಣಗಳಿಗೆ ವರ್ಗಾಯಿಸಲಾಗಿದೆ ಎಂದು ತಿಳಿಸಿದೆ. ಕುವೈತ್‌ನ ವಾಯುಪ್ರದೇಶವನ್ನು ಗುರಿಯಾಗಿರಿಸಿಕೊಂಡು ಇರಾನ್ ಸತತ ದಾಳಿ ನಡೆಸುತ್ತಿವೆ ಎಂದು ಸೇನೆಯು ಘೋಷಿಸಿದ ಬಳಿಕ ಕುವೈತ್‌ಗೆ ಬರಬೇಕಿದ್ದ ಹಲವು ವಿಮಾನಗಳು ದೇಶದ ಹೊರಭಾಗದಲ್ಲಿಯೇ ಸುತ್ತಿದ್ದವು.

ಹಡಗಿನ ಮೇಲೆ ಅಮೆರಿಕ ದಾಳಿ: ಮೂವರು ಭಾರತೀಯರ ಸಾವು

ಒಂದನೇ ಪುಟದಿಂದ...

'ಸೆಟ್ಬೆಲ್ಲೊ' ಹಡಗಿನಲ್ಲಿದ್ದ 24 ಭಾರತೀಯರಲ್ಲಿ 22 ಮಂದಿಯನ್ನು ರಕ್ಷಿಸಲಾಗಿದೆ ಎಂದು ವಿದೇಶಾಂಗ ಸಚಿವಾಲಯ ಹೇಳಿದೆ.

'ಹಡಗುಗಳ ಮೇಲೆ ದಾಳಿ ನಡೆಸುವ ಬದಲು ರಾಜತಾಂತ್ರಿಕತೆ ಮೂಲಕ ಸಂಘರ್ಷಕ್ಕೆ ಶಾಂತಿಯುತ ಪರಿಹಾರ ಕಂಡುಕೊಳ್ಳಬೇಕು' ಎಂದು ಅಮೆರಿಕಕ್ಕೆ ತಿಳಿಸಿದ್ದೇವೆ' ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ.

> **ಅಮೆರಿಕಕ್ಕೆ ತೀವ್ರ ಪ್ರತಿಭಟನೆ ದಾಖಲಿಸಿದ್ದೇವೆ. ಅಂತರರಾಷ್ಟ್ರೀಯ ಕಾನೂನಿನ ಅನ್ವಯ ಹೊರ್ಮುಜ್ ಜಲಸಂಧಿಯಲ್ಲಿ ತೈಲ ಹಡಗುಗಳ ಸಂಚಾರಕ್ಕೆ ಮುಕ್ತ ಅವಕಾಶ ನೀಡಬೇಕು**
>
> **ರಣಧೀರ್ ಜೈಸ್ವಾಲ್,** ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ

₹10 ಲಕ್ಷ ಪರಿಹಾರಕ್ಕೆ ಸೂಚನೆ

'ಸೆಟ್ಬೆಲ್ಲೊ ಹಡಗಿನ ಮೇಲೆ ನಡೆದ ದಾಳಿಯಲ್ಲಿ ಮೃತಪಟ್ಟ ಮೂವರು ಭಾರತೀಯ ಸಿಬ್ಬಂದಿ ಮೃತದೇಹಗಳು ಪತ್ತೆಯಾಗಿವೆ ಎಂದು ಬಂದರು ಸಚಿವ ಸರ್ಬಾನಂದ ಸೋನಾವಾಲ್ ದೃಢಪಡಿಸಿದ್ದಾರೆ.

ಮೃತಪಟ್ಟವರಲ್ಲಿ ಲಖನೌದ ಶಿವಾನಂದ ಚೌರಾಸಿಯಾ (38), ವಿಶಾಖಪಟ್ಟಣದ ಪಟ್ನಾಳ ಸುರೇಶ್ (44), ಹಿಮಾಚಲ ಪ್ರದೇಶದ ಆದಿತ್ಯ ಶರ್ಮಾ (23) ಸೇರಿದ್ದಾರೆ. ಮೃತರಾದ ಮೂವರು ಭಾರತೀಯ ಸಿಬ್ಬಂದಿಗೆ ತಲಾ ₹10 ಲಕ್ಷ ಪರಿಹಾರ ನೀಡುವಂತೆ ಸೂಚಿಸಲಾಗಿದೆ ಎಂದು ಬಂದರು ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಮುಕೇಶ್ ಮಂಗಲ್ ಹೇಳಿದ್ದಾರೆ. 'ಸೆಟ್ಬೆಲ್ಲೊ ಹಡಗಿನಲ್ಲಿ ಭಾರತೀಯ ಸಿಬ್ಬಂದಿ ಜತೆಗಿದ್ದ ಇಬ್ಬರು ಪಾಕಿಸ್ತಾನಿ, ರಷ್ಯಾ ಮತ್ತು ಉಕ್ರೇನ್‌ನ ಒಬ್ಬ ಸಿಬ್ಬಂದಿಯನ್ನು ರಕ್ಷಿಸಲಾಗಿದೆ.

ಭಾರತೀಯ ಹಡಗಲ್ಲ: ಒಮಾನ್ ಕರಾವಳಿಯಲ್ಲಿ ದಾಳಿಗೀಡಾದ ಮೂರೂ ಹಡಗುಗಳು ವಿದೇಶಿ ಧ್ವಜವನ್ನು ಹೊಂದಿದ್ದವು. ಇದರಲ್ಲಿ ಯಾವ ಹಡಗೂ ಭಾರತೀಯ ಮಾಲೀಕತ್ವದ್ದಲ್ಲ. ಮೂರರಲ್ಲೂ ಭಾರತೀಯ ಸಿಬ್ಬಂದಿ ಇದ್ದರು ಎಂದು ವಿದೇಶಾಂಗ ವ್ಯವಹಾರಗಳ ವಕ್ತಾರ ಜೈಸ್ವಾಲ್ ಹೇಳಿದ್ದಾರೆ. ಪಲಾವು ದೇಶದ ಧ್ವಜ ಹೊತ್ತಿದ್ದ, 24 ಮಂದಿ ಭಾರತೀಯ ಸಿಬ್ಬಂದಿ ಇದ್ದ 'ಮರಿವೆಕ್ಸ್' ಹಡಗಿನ ಮೇಲೆ ಜೂನ್ 8ರಂದು ಅಮೆರಿಕ ಪಡೆ ದಾಳಿ ನಡೆಸಿತ್ತು. ಜೂನ್ 10ರಂದು 'ಸೆಟ್ಬೆಲ್ಲೊ' ಹೆಸರಿನ ಮತ್ತೊಂದು ಹಡಗಿನ ಮೇಲೆ ದಾಳಿ ನಡೆದಿತ್ತು.

ಪಿಒಕೆ: 11 ಪ್ರತಿಭಟನಕಾರರ ಸಾವು

ಇಸ್ಲಾಮಾಬಾದ್: 'ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿ (ಪಿಒಕೆ) ಪ್ರತಿಭಟನೆ ಗಳು ತೀವ್ರಗೊಂಡಿದೆ. ಗುರುವಾರ ನಡೆದ ಪ್ರತಿಭಟನೆಯಲ್ಲಿ ಪ್ರತಿಭಟನಕಾರರು ಮತ್ತು ಭದ್ರತಾ ಸಿಬ್ಬಂದಿ ಮಧ್ಯೆ ನಡೆದ ಸಂಘರ್ಷದಲ್ಲಿ 15 ಮಂದಿ ಮೃತಪಟ್ಟಿದ್ದಾರೆ' ಎಂದು ಬಿಬಿಸಿ ಉರ್ದು ವರದಿ ಮಾಡಿದೆ.

11 ಪ್ರತಿಭಟನಕಾರರು ಮತ್ತು ನಾಲ್ಕು ಮಂದಿ ಭದ್ರತಾ ಸಿಬ್ಬಂದಿ ಮೃತಪಟ್ಟಿ ದ್ದಾರೆ. ರಾವಲ್‌ಕೋಟ್‌ನಿಂದ 4 ಕಿ.ಮೀ ದೂರದಲ್ಲಿ ಸುಮಾರು 10,000 ಮಂದಿ (ಸರ್ಕಾರದ ಅಂದಾಜು) ಪ್ರತಿಭಟನಕಾ ರರು ಪಿಒಕೆ ರಾಜಧಾನಿ ಮುಜಾಫರಬಾದ್‌ಗೆ ರ‍್ಯಾಲಿ ಮೂಲಕ ತೆರಳುತ್ತಿದ್ದರು.

ಭದ್ರತಾ ಸಿಬ್ಬಂದಿ ಪ್ರತಿಭಟನಕಾರರನ್ನು ತಡೆಯಲು ಯತ್ನಿಸಿದ ವೇಳೆ ಸಂಘರ್ಷ ನಡೆದಿದೆ. 'ಪ್ರತಿಭಟನಕಾರರ ಮೇಲೆ ಭದ್ರತಾ ಸಿಬ್ಬಂದಿ ಗುಂಡು ಹಾರಿಸಿದ್ದಾರೆ' ಎಂದು ಎನ್‌ಡಿಟಿವಿ ವರದಿ ಮಾಡಿದೆ.

22 ಸೇನಾ ಸಿಬ್ಬಂದಿ ಸಾವು: ಪಿಒಕೆ ರಾಜಧಾನಿ ಮುಜಾಫರಬಾದ್‌ನಲ್ಲಿ ಬುಧವಾರ ಹೆಲಿಕಾಪ್ಟರ್ ಪತನವಾಗಿತ್ತು. ಘಟನೆಯಲ್ಲಿ ಮೂವರು ಸೇನಾ ಅಧಿಕಾರಿಗಳು ಸೇರಿದಂತೆ 22 ಸೇನಾ ಸಿಬ್ಬಂದಿ ಮೃತಪಟ್ಟಿದ್ದಾರೆ ಎಂದು ಬಿಬಿಸಿ ಉರ್ದು ಗುರುವಾರ ವರದಿ ಮಾಡಿದೆ. ಹೆಲಿಕಾಪ್ಟರ್‌ನಲ್ಲಿ ಇದ್ದ ಎಲ್ಲರೂ ಮೃತಪಟ್ಟಿದ್ದಾರೆ ಎಂದು ಸೇನೆ ಬುಧವಾರ ಹೇಳಿತ್ತು. ಆದರೆ, ಸಂಖ್ಯೆಯನ್ನು ಬಹಿರಂಗಪಡಿಸಿರಲಿಲ್ಲ.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS, ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 7795874991

ಕರ್ನಾಟಕದ್ಯಾಂತ ಕಂಪನಿಗಳಿಗೆ ಮನೆಯಿಂದಲೇ ಕೆಲಸಕ್ಕೆ ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ, ಪುರುಷರಿಗೆ ಮೊದಲ ಆದ್ಯತೆ. 19,000 -25,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 7090177446

ವ್ಯಾಪಾರ

Business to Business

Business

ಶೂನ್ಯದಿಂದ ಶೂನ್ಯದವರಿಗೆ. ನೊಂದವರ ಜನ ಸೇವಾ ಟ್ರಸ್ಟ್ (ರಿ) ಶೇಷಾದ್ರಿಪುರಂ ಬೆಂಗಳೂರು. ಗೋಲ್ಡ್ ಚಿಟ್ ಫಂಡ್ 1ಲಕ್ಷದಿಂದ - 5 ಲಕ್ಷ , 10ಲಕ್ಷದವರಿಗೆ ಮತ್ತು 1 ಲಕ್ಷದಿಂದ - 5 ಲಕ್ಷದವರಿಗೆ , ಸ್ವಂತ ಮನೆ, ಮತ್ತು ಬಿಸಿನೆಸ್, ಲೋನ್ ಕೊಡಲಾಗುವುದು. ಸಂಪರ್ಕಿಸಿ : 9036316959

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ವೈಕುಂಠ ಸಮಾರಾಧನೆ

ಬಿ.ಟಿ ರಮೇಶ್ (1953–2026)
ಇಂಜಿನಿಯರ್ ಇನ್ ಚೀಫ್ ಬಿಬಿಎಂಪಿ (ನಿ)

ಇವರು ದಿನಾಂಕ 03.06.2026 ಬುಧವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ

ನುಡಿ ನಮನ ಮತ್ತು ವೈಕುಂಠ ಸಮಾರಾಧನೆಯನ್ನು ನೆರವೇರಿಸಲಾಗುವುದು

ದಿನಾಂಕ : 13.06.2026 ಶನಿವಾರ ಸಮಯ : ಮಧ್ಯಾಹ್ನ 12 ಗಂಟೆಗೆ

ಸ್ಥಳ: ಶ್ರೀ ರಾಜಹಂಸ ಕನ್ವೆನ್ಷನ್ ಹಾಲ್
#10, ಪ್ರಮುಖ್ ಸ್ವಾಮಿ ಮಹಾರಾಜ್ ರಸ್ತೆ, ಅಗ್ನಿಶಾಮಕ ಠಾಣೆಯ ಪಕ್ಕದಲ್ಲಿ, ವೆಸ್ಟ್ ಆಫ್ ಕಾರ್ಡ್ ರೋಡ್, ರಾಜಾಜಿನಗರ, ಬೆಂಗಳೂರು–560010.

ತಾವು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ
ಇಂತಿ ದುಃಖತಪ್ತ : ಕುಟುಂಬ ವರ್ಗದವರು

ವಿಶ್ವಕಪ್ ಟೂರ್ನಿಯ ಉದ್ಘಾಟನಾ ಪಂದ್ಯಕ್ಕೂ ಮುನ್ನ ಮೆಕ್ಸಿಕೊ ಸಿಟಿಯಲ್ಲಿ ಗುರುವಾರ ಜಮಾಯಿಸಿದ್ದ ಅಭಿಮಾನಿಗಳು


ವಿಶ್ವಕಪ್ ಟ್ರೋಫಿ ಮಾದರಿಯ ಸುತ್ತ ಕಲಾವಿದರ ನೃತ್ಯ ಪ್ರದರ್ಶನ

ಮನಸೂರೆಗೊಂಡ ಸಾಂಸ್ಕೃತಿಕ ಕಾರ್ಯಕ್ರಮ

ವಿವಾದದ ನಡುವೆ ವಿಶ್ವಕಪ್ ಆರಂಭ

ಟಿಕೆಟ್ ದರ ದುಬಾರಿ, ಮುಂದುವರಿದ ವೀಸಾ ಗೊಂದಲ
48 ತಂಡಗಳು ಭಾಗಹಿಸುತ್ತಿರುವ ಟೂರ್ನಿಗೆ ವರ್ಣರಂಜಿತ ಚಾಲನೆ

ಮೆಕ್ಸಿಕೊ ಸಿಟಿ (ಎಎಫ್‌ಪಿ): ಸುಮಾರು ಆರು ವಾರಗಳ ಕಾಲ ನಡೆಯಲಿರುವ, 48 ತಂಡಗಳು ಭಾಗಹಿಸುತ್ತಿರುವ ಫಿಫಾ ವಿಶ್ವಕಪ್ ಟೂರ್ನಿಗೆ ಗುರುವಾರ ವರ್ಣರಂಜಿತ ಚಾಲನೆ ದೊರಕಿತು. ಅಮೆರಿಕ, ಕೆನಡಾ, ಮೆಕ್ಸಿಕೊ ರಾಷ್ಟ್ರಗಳ ಆತಿಥ್ಯದಲ್ಲಿ ನಡೆಯುತ್ತಿರುವ ಈ ಟೂರ್ನಿಯು ವಿಶ್ವಕಪ್ ಇತಿಹಾಸದಲ್ಲೇ ಅತಿ ದೊಡ್ಡದೆನಿಸಿದೆ.

ಮೆಕ್ಸಿಕೊ ಸಿಟಿ ಕ್ರೀಡಾಂಗಣದಲ್ಲಿ ದಕ್ಷಿಣ ಆಫ್ರಿಕಾ ಮತ್ತು ಆತಿಥೇಯ ಮೆಕ್ಸಿಕೊ ತಂಡಗಳು ಮುಖಾಮುಖಿಯಾಗುವುದರೊಂದಿಗೆ ಟೂರ್ನಿ ಆರಂಭಗೊಂಡಿತು. ಇದಕ್ಕೂ ಮೊದಲು ಸಾಂಸ್ಕೃತಿಕ ಕಾರ್ಯಕ್ರಮಗಳು ಪ್ರೇಕ್ಷಕರ ಮನಸೂರೆಗೊಂಡವು. ಕ್ರೀಡಾಂಗಣದಲ್ಲಿ 80,000ಕ್ಕೂ ಹೆಚ್ಚು ಕ್ರೀಡಾಭಿಮಾನಿಗಳು ಜಮಾಯಿಸಿದ್ದರು.

ಈ ಟೂರ್ನಿಯು 13 ಶತಕೋಟಿ ಡಾಲರ್ (₹1.24 ಲಕ್ಷ ಕೋಟಿ) ವರಮಾನ ಕ್ರೋಡೀಕರಿಸಬಹುದೆಂದು ಅಂದಾಜು ಮಾಡಲಾಗಿದೆ. ಆದರೆ ಒಂದು ಕಡೆ, ಪಂದ್ಯಗಳ ಟಿಕೆಟ್ ದರ ಅತಿ ದುಬಾರಿಯಾಗಿರುವ ಕಾರಣ ವಿಶ್ವದ ಫುಟ್‌ಬಾಲ್ ಆಡಳಿತ ನಡೆಸುತ್ತಿರುವ ಫಿಫಾ ತೀವ್ರ ಟೀಕೆಗಳನ್ನು ಎದುರಿಸುತ್ತಿದೆ. ಇನ್ನೊಂದು ಕಡೆ ಡೊನಾಲ್ಡ್ ಟ್ರಂಪ್ ಆಡಳಿತದ ವಲಸೆ ನೀತಿಯಿಂದ ಸೊಮಾಲಿಯಾದ ಅಗ್ರಮಾನ್ಯ ರೆಫ್ರಿ,

ವೀಸಾ ಸಿಗುತ್ತಿಲ್ಲ: ಐವರಿಕೋಸ್ಟ್

ಅಬಿದ್‌ಜಾನ್ (ಎಎಫ್‌ಪಿ): ಐವರಿಕೋಸ್ಟ್‌ನ ಫುಟ್‌ಬಾಲ್ ಅಭಿಮಾನಿಗಳಿಗೆ ಅಮೆರಿಕದ ವೀಸಾ ನಿರಾಕರಿಸಲಾಗುತ್ತಿದೆ ಎಂದು ಆ ತಂಡದ ಬೆಂಬಲಿಗರ ಸಮಿತಿ ದೂರಿದೆ. ಆತಿಥ್ಯ ವಹಿಸಿರುವ ಮೂರು ದೇಶಗಳ ಪೈಕಿ ಅಮೆರಿಕವು ಪ್ರಮುಖವಾಗಿದೆ. ಆದರೆ ಆ ದೇಶದ ವೀಸಾ ನೀತಿ ಗೊಂದಲಗಳಿಗೆ ಕಾರಣವಾಗಿದೆ. ಸೊಮಾಲಿಯಾದ ರೆಫ್ರಿ ಒಮರ್ ಅರ್ತನ್ ಅವರಿಗೆ ವೀಸಾ ನಿರಾಕರಿಸಿ ಮಯಾಮಿಯಿಂದ ಭಾನುವಾರ ವಾಪಸು ಕಳುಹಿಸಲಾಗಿತ್ತು.

ರಾಷ್ಟ್ರೀಯ ತಂಡದ ಬೆಂಬಲಿಗರನ್ನು ಪಂದ್ಯಗಳಿಗೆ ಕಳುಹಿಸುವ ವ್ಯವಸ್ಥೆಯನ್ನು ಕ್ರೀಡಾ ಸಚಿವಾಲಯದ ವ್ಯಾಪ್ತಿಯಡಿ ಬರುವ 'ನ್ಯಾಷನಲ್ ಕಮಿಟಿ ಆಫ್ ಎಲಿಫೆಂಟ್ಸ್ ಸಪೋರ್ಟರ್ಸ್' (ಸಿಎನ್‌ಎಸ್‌ಇ) ಮಾಡುತ್ತಿದೆ. ಐವರಿಕೋಸ್ಟ್ ಫುಟ್‌ಬಾಲ್ ತಂಡವನ್ನು 'ಎಲಿಫೆಂಟ್ಸ್' ಎಂದು ಕರೆಯಲಾಗುತ್ತದೆ.

ಅಮೆರಿಕ, ಕೆಲವು ದೇಶಗಳ ಫುಟ್‌ಬಾಲ್ ಪ್ರೇಮಿಗಳನ್ನು ತಡೆಯುತ್ತಿರುವ ಕಾರಣ, ತಂಡದ ಅಭಿಮಾನಿಗಳು ತಮ್ಮ ಪ್ರವಾಸ ರದ್ದುಗೊಳಿಸುತ್ತಿದ್ದಾರೆ ಎಂದು ಸಿಎನ್‌ಎಸ್‌ಇ ಅಧ್ಯಕ್ಷ ಜೂಲಿಯನ್ ಕೌದಿಯೊ ತಿಳಿಸಿದ್ದಾರೆ. 500 ಮಂದಿ ಅಮೆರಿಕಕ್ಕೆ ತೆರಳಲು ಬಯಸಿದ್ದರು.

ಇರಾನ್ ತಂಡದ ಕೆಲವು ನೆರವು ಸಿಬ್ಬಂದಿ, ಅಭಿಮಾನಿಗಳಿಗೆ ವೀಸಾ ನಿರಾಕರಿಸಲಾಗಿದೆ.

ಆದರೆ ಮೆಕ್ಸಿಕೊದಲ್ಲಿ ಬುಧವಾರ ಮಾತನಾಡಿರುವ ಫಿಫಾ ಅಧ್ಯಕ್ಷ ಗಿಯಾನಿ ಇನ್ಫ್ಯಾಂಟಿನೊ ಅವರು ಟಿಕೆಟ್ ದರ ನಿಗದಿಯನ್ನು ಸಮರ್ಥಿಸಿಕೊಂಡಿದ್ದಾರೆ. ವೀಸಾಕ್ಕೆ ಸಂಬಂಧಪಟ್ಟ ಟೀಕೆಗಳನ್ನು ತಳ್ಳಿಹಾಕಿದ್ದಾರೆ.

'ಟಿಕೆಟ್ ದರವನ್ನು ಸೂಕ್ತವಾಗಿ ನಿಗದಿಪಡಿಸಲಾಗಿದೆ. ಪ್ಲೇ ಆಫ್ ಹಂತದ ಪಂದ್ಯಗಳಿಗೆ ಅಮೆರಿಕದ ಯಾವುದೇ ಕ್ರೀಡಾಂಗಣದ ಟಿಕೆಟ್ ದರ ಕನಿಷ್ಠ 60 ಡಾಲರ್‌ಗಳಿಂದ (ಸುಮಾರು ₹5,750) ಶುರುವಾಗುತ್ತದೆ. ಇದು ಅಮೆರಿಕದ ಕ್ರೀಡೆಗಳ ಪೈಕಿ ಅತಿ ಕಡಿಮೆ ಪ್ರವೇಶ ದರ' ಎಂದು ಇನ್ಫ್ಯಾಂಟಿನೊ ವಾದಿಸಿದ್ದಾರೆ. ಜುಲೈ 19ರ ಫೈನಲ್ ಪಂದ್ಯದ ಟಿಕೆಟ್ ದರ ಗರಿಷ್ಠ ₹28 ಲಕ್ಷದವರೆಗೆ ಇದೆ. ಒಟ್ಟಾರೆ ಸರಾಸರಿ ಟಿಕೆಟ್ ದರ ₹48,000 ದಷ್ಟಿದೆ. ಇದೂ ಅಮೆರಿಕದಲ್ಲಿ ಕ್ರೀಡೆಗಳ ಟಿಕೆಟ್ ದರದ ಸರಾಸರಿ ತೆಗೆದುಕೊಂಡರೆ ಕಡಿಮೆಯೇ' ಎಂದೂ ಹೇಳಿದ್ದಾರೆ.

ಎಲ್ಲವನ್ನು ನಿಯಂತ್ರಿಸಲು ಸಾಧ್ಯವಿಲ್ಲ:

ಮೆಕ್ಸಿಕೊ ಸಿಟಿ ಕ್ರೀಡಾಂಗಣದಲ್ಲಿ ಗುರುವಾರ ತಡರಾತ್ರಿ ಮೆಕ್ಸಿಕೊ ಮತ್ತು ದಕ್ಷಿಣ ಆಫ್ರಿಕಾ ನಡುವಿನ ಫಿಫಾ ವಿಶ್ವಕಪ್‌ನ ಉದ್ಘಾಟನಾ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾದ ಡಿಫೆಂಡರ್ ಆಬ್ರೆ ಮೋದಿಬಾ (ಹಳದಿ), ಮೆಕ್ಸಿಕೊದ ಮಿಡ್‌ಫೀಲ್ಡರ್ ರಾಬರ್ಟ್ ಅಲ್ವಾರಾಡೊ (ಹಸಿರು), ದಕ್ಷಿಣ ಆಫ್ರಿಕಾದ ಮಿಡ್‌ಫೀಲ್ಡರ್‌ಗಳಾದ ಸ್ಫೆಲೊ ಸಿಥೋಲ್ ಮತ್ತು ಟೆಬೊಹೊ ಮೊಕೊಯೆನಾ ಚೆಂಡಿಗಾಗಿ ಪೈಪೋಟಿ ನಡೆಸಿದರು
ಎಎಫ್‌ಪಿ ಚಿತ್ರಗಳು

ಸೊಮಾಲಿಯಾದ ರೆಫ್ರಿ ಒಮರ್ ಅರ್ತನ್ ಅವರು ಮಯಾಮಿಗೆ ಬಂದಿಳಿದ ನಂತರ ವೀಸಾ ನಿರಾಕರಿಸಿರುವ ವಿವಾದವನ್ನು ಅವರು ಅಷ್ಟೇನೂ ದೊಡ್ಡದಲ್ಲವೆಂಬಂತೆ ಮಾತನಾಡಿದರು.

ಅರ್ತನ್ ಅವರಿಗೆ ಭಯೋತ್ಪಾದನಾ ಸಂಘಟನೆಗಳ ಶಂಕಿತ ಸದಸ್ಯರೊಂದಿಗೆ ಸಂಪರ್ಕವಿದೆ ಎಂದು ಅಮೆರಿಕದ ಗೃಹ ಇಲಾಖೆ ವೀಸಾ ನಿರಾಕರಿಸಿತ್ತು. ನಂತರ ಅವರ ಹೆಸರನ್ನು ರೆಫ್ರಿಗಳ ಪಟ್ಟಿಯಿಂದ ಫಿಫಾ ಕೈಬಿಟ್ಟಿತ್ತು.

'ಪಶ್ಚಿಮ ಏಷ್ಯಾದಲ್ಲಿ ಸಂಘರ್ಷದ ಹೊರತಾಗಿಯೂ ಇರಾನ್ ತಂಡ ಭಾಗವಹಿಸುತ್ತಿರುವುದು ಫಿಫಾಕ್ಕೆ ಸಂದ ಜಯ' ಎಂದು ಅವರು ಹೇಳಿದರು. 'ಇರಾನ್ ಈ ವಿಶ್ವಕಪ್‌ಗೆ ಬರುವುದಿಲ್ಲ ಎಂದು ಜನರು ಆಡಿಕೊಳ್ಳುತ್ತಿದ್ದರು. ಸವಾಲುಗಳು ಇರುತ್ತವೆ. ಅವುಗಳನ್ನು ಬಗೆಹರಿಸುವುದು ಸುಲಭವಲ್ಲ' ಎಂದರು.

ಡೊನಾಲ್ಡ್ ಟ್ರಂಪ್ ಜೊತೆ ಇನ್ಫ್ಯಾಂಟಿನೊ ಅವರ ನಿಕಟ ಬಾಂಧವ್ಯ ಚರ್ಚೆಗಳಿಗೆ ಕಾರಣವಾಗಿದೆ. ಆದರೆ ಫಿಫಾ ಅಧ್ಯಕ್ಷ ಅಮೆರಿಕದ ಅಧ್ಯಕ್ಷರನ್ನು ಶ್ಲಾಘಿಸಲು ಮರೆಯಲಿಲ್ಲ.

ಅಮೆರಿಕಕ್ಕೆ ಇಂದು ಪರಗ್ವೆ ಎದುರಾಳಿ

ಆರ್ವೆನ್ (ಕ್ಯಾಲಿಫೋರ್ನಿಯಾ), (ಎಎಫ್‌ಪಿ): ಅಮೆರಿಕದ ನೆಲದಲ್ಲಿ ಕುತೂಹಲದಿಂದ ನಿರೀಕ್ಷಿಸಲಾಗುತ್ತಿರುವ ವಿಶ್ವಕಪ್‌ನ ಮೊದಲ ಪಂದ್ಯಕ್ಕೆ ಕ್ಷಣಗಣನೆ ಆರಂಭವಾಗಿದೆ. ಆತಿಥೇಯ ಅಮೆರಿಕ ಆಟಗಾರರ ಪೋಷಾಕಿನ ಬಣ್ಣವಾದ ಕೆಂಪು, ಬಿಳಿ ಮತ್ತು ನೀಲಿ ಛಾಯೆಯು ಲಾಸ್ ಏಂಜಲಿಸ್‌ನ ಸೋಫಿ ಕ್ರೀಡಾಂಗಣದಲ್ಲಿ ಆವರಿಸಲಿದೆ.

ಸ್ಥಳೀಯ ಕಾಲಮಾನ ಶುಕ್ರವಾರ ರಾತ್ರಿ ಡಿ ಗುಂಪಿನ ಪಂದ್ಯದಲ್ಲಿ ಅಮೆರಿಕ ತಂಡವು, ಪರಗ್ವೆ ತಂಡವನ್ನು ಎದುರಿಸಲಿದೆ. ಅಮೆರಿಕ ತಂಡದ ಮ್ಯಾನೇಜರ್ ಮೌರಿಸಿಯೊ ಪೊಚೆಟ್ಟಿನೊ ಅವರು ಅರ್ಜೆಂಟೀನಾದವರು. ಗೋಲು ಗಳಿಸುವ ಫಾರ್ವರ್ಡ್ ಆಟಗಾರ ಫ್ಲೊಲಾರಿನ್ ಬಾಲೊಗನ್ ಅವರು ನ್ಯೂಯಾರ್ಕ್‌ನಲ್ಲಿ ಜನಿಸಿದ ನಂತರ ಇಂಗ್ಲೆಂಡ್‌ನಲ್ಲಿ ಬೆಳೆದವರು. ಆದರೆ ಆಟವನ್ನು ನಿಯಂತ್ರಿಸುವ ಕ್ರಿಸ್ಟಿಯನ್ ಪುಲಿಸಿಕ್ ಅವರು ಅಮೆರಿಕದವರು. ಚಾಕೊಲೇಟ್ ಬಾರ್ ತಯಾರಿಕೆಗೆ ಹೆಸರಾದ ಹರ್ಷೆ (ಪೆನ್ಸಿಲ್ವೇನಿಯಾ)ಯವರು.

ಇದು 32 ವರ್ಷಗಳ ನಂತರ ಅಮೆರಿಕದ ನೆಲದಲ್ಲಿ ನಡೆಯುತ್ತಿರುವ ಮೊದಲ ವಿಶ್ವಕಪ್ ಪಂದ್ಯ. 1994ರ ವಿಶ್ವಕಪ್ ಫೈನಲ್ ಇಲ್ಲಿಗೆ ಸಮೀಪದ ಪಸಡೇನಾದಲ್ಲಿ ನಡೆದಿತ್ತು. ಅಮೆರಿಕ ತಂಡದಲ್ಲಿರುವ 13 ಮಂದಿಗೆ ಈ ಹಿಂದಿನ ವಿಶ್ವಕಪ್‌ನಲ್ಲಿ ಆಡಿದ ಅನುಭವವಿದೆ. ಉಳಿದ 13 ಮಂದಿ ಮೊದಲ ಬಾರಿ ಈ ಜಾಗತಿಕ ಟೂರ್ನಿಯಲ್ಲಿ ಆಡುತ್ತಿದ್ದಾರೆ. ಟಿಮ್ ರೀಮ್ ತಂಡದ ನಾಯಕ. 'ಇದು ಜೀವನದಲ್ಲಿ ಒಮ್ಮೆ ಸಿಗುವ ಅವಕಾಶ. ಹೆಚ್ಚು ನಿರೀಕ್ಷೆ, ಹೆಚ್ಚು ಒತ್ತಡವಿರುತ್ತದೆ. ಅದೇ ವೇಳೆ ನಾವು ಈ ಅವಕಾಶವನ್ನು ಆಸ್ವಾದಿಸಬೇಕು' ಎಂದು 38 ವರ್ಷ ವಯಸ್ಸಿನ ರೀಮ್ ಹೇಳಿದ್ದಾರೆ. ತಂಡದ ಕೋಚ್ ಪೊಚೆಟ್ಟಿನೊ 2002ರ ವಿಶ್ವಕಪ್‌ನಲ್ಲಿ (ಕೊರಿಯಾ–ಜಪಾನ್ ಆತಿಥ್ಯ) ಅರ್ಜೆಂಟೀನಾ ತಂಡದಲ್ಲಿ ಆಡಿದ್ದರು.

ಕ್ಯಾಲಿಫೋರ್ನಿಯಾದ ಆರ್ವೆನ್‌ನಲ್ಲಿರುವ ಗ್ರೇಟ್ ಸ್ಪೋರ್ಟ್ಸ್ ಪಾರ್ಕ್‌ನಲ್ಲಿ ಅಮೆರಿಕ ತಂಡದ ಆಟಗಾರರು ತಾಲೀಮು ನಡೆಸಿದರು

ರಾಹುಲ್ ದ್ರಾವಿಡ್ ಅವರಿಂದ ಮಹಾರಾಜ ಟ್ರೋಫಿ ಅನಾವರಣ
ಟಾಸ್ ಮುನ್ನ 11 ಆಟಗಾರರ ಪಟ್ಟಿ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಆಶ್ರಯದಲ್ಲಿ ನಡೆಯಲಿರುವ ಮಹಾರಾಜ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಆಟದ ನಿಯಮಗಳಲ್ಲಿ ಕೆಲವು ಪರಿಷ್ಕರಣೆ ಮಾಡಲಾಗಿದೆ.

ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಮಾದರಿಯಲ್ಲಿ ನಿಯಮಗಳನ್ನು ರೂಪಿಸಲಾಗಿದೆ. ಇದರಲ್ಲಿ ಪ್ರಮುಖವಾಗಿ ಮೂರು ನಿಯಮಗಳನ್ನು ಪರಿಷ್ಕರಿಸಲಾಗಿದೆ. ಗುರುವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ 'ಮಹಾರಾಜ ಟ್ರೋಫಿ' ಅನಾವರಣ ಕಾರ್ಯಕ್ರಮದಲ್ಲಿ ಈ ನಿಯಮಗಳನ್ನು ಪ್ರಕಟಿಸಲಾಯಿತು.

ಮೊದಲನೇಯದಾಗಿ; ಟಾಸ್ ಹಾಕುವ ಮುನ್ನವೇ ತಂಡಗಳು ತಮ್ಮ ತಂಡದಿಂದ ಕಣಕ್ಕಿಳಿಯುವ 11 ಆಟಗಾರರ ಯಾದಿಯನ್ನು ಸಲ್ಲಿಸುವುದು ಕಡ್ಡಾಯ. ಇದಕ್ಕೆ ಪೂರಕವಾಗಿ ಇಂಪ್ಯಾಕ್ಟ್ ಪ್ಲೇಯರ್ ನಿಯಮವು ಮುಂದುವರಿಯಲಿದೆ.

ಎರಡನೇಯದಾಗಿ; ಬ್ಯಾಟರ್ ಫ್ರೀ ಹಿಟ್ ಎಸೆತದಲ್ಲಿ ಔಟಾದರೆ (ರನ್‌ಔಟ್/ಸ್ಟಂಪಿಂಗ್) ಯಾವುದೇ ರನ್ ನೀಡುವುದಿಲ್ಲ. ಮೂರನೇಯದಾಗಿ ಆನ್‌ಫೀಲ್ಡ್ ಅಂಪೈರ್ ಔಟ್ ತೀರ್ಮಾನವನ್ನು ಅಪೀಲ್‌ನಲ್ಲಿ ಅನೂರ್ಜಿತಗೊಂಡರೆ ಆ ಎಸೆತದಲ್ಲಿ ಗಳಿಕೆಯಾಗಿರುವ ರನ್ ಬ್ಯಾಟರ್‌ಗೆ ನೀಡಲಾಗುತ್ತದೆ.

ಕಾರ್ಯಕ್ರಮದಲ್ಲಿ ಟ್ರೋಫಿ ಅನಾವರಣಗೊಳಿಸಿದ ಭಾರತ ಕ್ರಿಕೆಟ್ ತಂಡದ ಮಾಜಿ ಕೋಚ್ ರಾಹುಲ್ ದ್ರಾವಿಡ್, 'ಈ ಬಾರಿಯ ಟೂರ್ನಿಯು ರಾಜ್ಯದ ಮೂರು ನಗರಗಳಲ್ಲಿ ಆಯೋಜನೆಗೊಳ್ಳುತ್ತಿದೆ. ಇದು ತುಂಬಾ ಉತ್ತಮವಾದ ನಡೆ. ಕ್ರಿಕೆಟ್ ಪ್ರತಿಭೆಗಳ ಆಟವನ್ನು ವೀಕ್ಷಿಸಲು ಆಯಾ ಊರುಗಳ ಜನರಿಗೆ ಅವಕಾಶ ಸಿಗುತ್ತದೆ' ಎಂದರು.

'ನಾನು ಕೂಡ ಐಪಿಎಲ್‌ನಲ್ಲಿ ಬಹಳ ವರ್ಷಗಳವರೆಗೆ ಇದ್ದೆ. ಆದ್ದರಿಂದ ಐಪಿಎಲ್ ಮಾದರಿಯಲ್ಲಿಯೇ ನಡೆಯಲಿರುವ ಈ ಸ್ಥಳೀಯ ಟೂರ್ನಿಯ ಪರಿಣಾಮಗಳು ಯಾವ ರೀತಿ ಇರುತ್ತವೆ ಎಂಬುದರ ಅರಿವು ಇದೆ. ಪ್ರತಿಭಾ ಶೋಧ ನಡೆಸುವವರು ಈ ಪಂದ್ಯಗಳನ್ನು ನೋಡುತ್ತಾರೆ. ಪ್ರತಿಭಾನ್ವಿತ ಆಟಗಾರರ ಸ್ಕೋರ್, ಆಟದ ಕೌಶಲ ಮತ್ತಿತರ ಅಂಶಗಳನ್ನು ಗಮನಿಸುತ್ತಾರೆ. ದತ್ತಾಂಶ ಸಂಗ್ರಹವಾಗುತ್ತದೆ. ಅದರಿಂದ ಉತ್ತಮ ಆಟಗಾರರಿಗೆ ಐಪಿಎಲ್‌ನಲ್ಲಿ ಅವಕಾಶ ಸಿಗುವ ಸಾಧ್ಯತೆಗಳು ಹೆಚ್ಚುತ್ತವೆ. ಈಚೆಗೆ ಐಪಿಎಲ್‌ನಲ್ಲಿ ಮಿಂಚಿದ ಯಶ್ ರಾಜ್ ಪೂಂಜಾ ಅವರು ಉತ್ತಮ ಉದಾಹರಣೆ' ಎಂದರು.

ಈ ಸಂದರ್ಭದಲ್ಲಿ ಕೆಎಸ್‌ಸಿಎ ಅಧ್ಯಕ್ಷ ವೆಂಕಟೇಶ್ ಪ್ರಸಾದ್, ಕಾರ್ಯದರ್ಶಿ ಸಂತೋಷ್ ಮೆನನ್, ಖಜಾಂಚಿ ಬಿ.ಎನ್. ಮಧುಕರ್, ವಕ್ತಾರ ವಿನಯ್ ಮೃತ್ಯುಂಜಯ, ಮಹಾರಾಜ ಟ್ರೋಫಿ ಟೂರ್ನಿಯ ಆಡಳಿತ ಸಮಿತಿಯ ಕೇಶವ್, ಶಶಿಧರ್ ಹಾಜರಿದ್ದರು.

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ಮಾಜಿ ಕ್ರಿಕೆಟಿಗ ರಾಹುಲ್ ದ್ರಾವಿಡ್ ಅವರು 'ಮಹಾರಾಜ ಟ್ರೋಫಿ' ಅನಾವರಣಗೊಳಿಸಿದರು. ಕೆಎಸ್‌ಸಿಎ ಅಧ್ಯಕ್ಷ ವೆಂಕಟೇಶ್ ಪ್ರಸಾದ್ ಹಾಜರಿದ್ದರು
–ಪ್ರಜಾವಾಣಿ ಚಿತ್ರ

ಟಿಕೆಟ್ ಬೆಲೆ ₹100 ರಿಂದ ₹250

ಮಹಾರಾಜ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯಗಳ ಟಿಕೆಟ್‌ಗಳು ಆನ್‌ಲೈನ್‌ನಲ್ಲಿ (ಝೋಮ್ಯಾಟೊ ಡಿಸ್ಟ್ರಿಕ್ಟ್) ಲಭ್ಯವಾಗಲಿವೆ. ಟಿಕೆಟ್‌ಗಳ ಬೆಲೆಯನ್ನು ₹ 100ರಿಂದ ₹ 250ರವರೆಗೆ ನಿಗದಿ ಮಾಡಲಾಗಿದೆ.

ಮೈಸೂರಿನಲ್ಲಿ ನಡೆಯಲಿರುವ ಪಂದ್ಯಗಳ ಟಿಕೆಟ್‌ಗಳು ಇದೇ 12ರಂದು ಮಧ್ಯಾಹ್ನ 3ರಿಂದ ಲಭ್ಯವಾಗಲಿವೆ ಎಂದು ಕೆಎಸ್‌ಸಿಎ ತಿಳಿಸಿದೆ.

ಇದೇ 20ರಿಂದ ಜುಲೈ 12ರವರೆಗೆ ಮಹಾರಾಜ ಟ್ರೋಫಿ ಟೂರ್ನಿಯು ನಡೆಯಲಿದೆ. ಆರು ತಂಡಗಳು ಪೈಪೋಟಿ ನಡೆಸಲಿವೆ. ಮೈಸೂರು, ಹುಬ್ಬಳ್ಳಿ ಮತ್ತು ಬೆಂಗಳೂರಿನಲ್ಲಿ ಪಂದ್ಯಗಳು ಆಯೋಜನೆಯಾಗಲಿವೆ.

ಮಹಿಳಾ ಗಾಲ್ಫ್: ಅಗ್ರಸ್ಥಾನದಲ್ಲಿ ರಿಯಾ

ಮೈಸೂರು: ಇಲ್ಲಿನ ಜಯಚಾಮರಾಜ ಒಡೆಯರ್ ಗಾಲ್ಫ್ ಕ್ಲಬ್ (ಜೆಡಬ್ಲ್ಯುಜಿಸಿ) ಮೈದಾನದಲ್ಲಿ ಗುರುವಾರ ಆರಂಭವಾದ ಹೀರೊ ಮಹಿಳಾ ವೃತ್ತಿಪರ ಗಾಲ್ಫ್ ಟೂರ್ನಿಯ (ಡಬ್ಲ್ಯುಪಿಜಿಟಿ) 7ನೇ ಚರಣದ ಮೊದಲ ದಿನ ಗುರುಗ್ರಾಮದ ಆಟಗಾರ್ತಿ ರಿಯಾ ಜಾದನ್ ಮುನ್ನಡೆ ಕಾಯ್ದುಕೊಂಡರು.

ಮೂರು ದಿನಗಳ ಟೂರ್ನಿಯ ಮೊದಲ ಸುತ್ತಿನಲ್ಲಿ ಅಮೋಘ ಪ್ರದರ್ಶನ ನೀಡಿದ ರಿಯಾ, 3 ಅಂಡರ್-67 ಸ್ಕೋರ್ ಮೂಲಕ ಅಗ್ರಸ್ಥಾನಕ್ಕೇರಿದರು. ಇನ್ನೊಬ್ಬ ಅನುಭವಿ ಆಟಗಾರ್ತಿ ತ್ವೇಸಾ ಮಲಿಕ್ 2 ಅಂಡರ್-68 ಸ್ಕೋರ್‌ನೊಂದಿಗೆ ದ್ವಿತೀಯ ಸ್ಥಾನ ಪಡೆದರು.

ಸ್ಥಳೀಯ ಆಟಗಾರ್ತಿ ವಿಧಾತ್ರಿ ಕೆ. ಅರಸ್ ತವರಿನ ಮೈದಾನದ ಲಾಭವನ್ನು ಉತ್ತಮವಾಗಿ ಬಳಸಿಕೊಂಡರು. ಅವರು 1 ಅಂಡರ್-69 ಸ್ಕೋರ್‌ನೊಂದಿಗೆ ಗುರುಗ್ರಾಮದ ಅನ್ವಿ ದಹಿಯಾ ಅವರೊಂದಿಗೆ ಜಂಟಿಯಾಗಿ ಮೂರನೇ ಸ್ಥಾನ ಹಂಚಿಕೊಂಡರು.

ಅಮನ್‌ದೀಪ್ ದ್ರಾಲ್ ಮತ್ತು ಕರಿಷ್ಮಾ ಗೋವಿಂದ್ (70) ಜಂಟಿ ಐದನೇ ಸ್ಥಾನದಲ್ಲಿದ್ದರೆ, ಅಮೆಚೂರ್ ಆಟಗಾರ್ತಿ ಅನನ್ಯಾ ಸೂದ್, ದುರ್ಗಾ ನಿಟ್ಟೂರ್, ನೇಹಾ ತ್ರಿಪಾಠಿ ಹಾಗೂ ಅನನ್ಯಾ ಗಾರ್ಗ್ ತಲಾ 71 ಸ್ಕೋರ್‌ಗಳೊಂದಿಗೆ ಜಂಟಿ ಏಳನೇ ಸ್ಥಾನ ಪಡೆದಿದ್ದಾರೆ.

ತ್ರಿಕೋನ ಸರಣಿಯ ಪಂದ್ಯದಲ್ಲಿ ಮಳೆಯ ಆಟ
ಅಫ್ಗಾನಿಸ್ತಾನ ಎ ತಂಡಕ್ಕೆ ಜಯ

ದಂಬುಲ್ಲಾ (ಪಿಟಿಐ): ಅಫ್ಗಾನಿಸ್ತಾನ ಎ ತಂಡವು ಮಳೆಯಿಂದಾಗಿ ಮೊಟಕುಗೊಂಡ ತ್ರಿಕೋನ ಸರಣಿ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಗುರುವಾರ ಅನುಭವಿ ಆಟಗಾರರಿಂದ ಕೂಡಿದ ಭಾರತ ಎ ತಂಡವನ್ನು ಡಕ್‌ವರ್ತ್ ಲೂಯಿಸ್ ಸ್ಟರ್ನ್ (ಡಿಎಲ್‌ಎಸ್) ವಿಧಾನದಲ್ಲಿ 4 ರನ್‌ಗಳಿಂದ ಸೋಲಿಸಿತು.

ಭಾರತ ತಂಡವು, ಮಳೆಯ ಕಾರಣ 49 ಓವರುಗಳಿಗೆ ಸೀಮಿತಗೊಂಡ ಇನಿಂಗ್ಸ್‌ನಲ್ಲಿ 9 ವಿಕೆಟ್‌ಗೆ 349 ರನ್‌ಗಳ ದೊಡ್ಡ ಮೊತ್ತ ಗಳಿಸಿತು. ಪ್ರಭಸಿಮ್ರನ್ ಸಿಂಗ್ 69 ಎಸೆತಗಳಲ್ಲಿ 84 ರನ್ ಸಿಡಿಸಿದರೆ, ಉಪನಾಯಕ ಋತುರಾಜ್ ಗಾಯಕವಾಡ್ (66, 73 ಎಸೆತ) ಮತ್ತು ನಾಯಕ ತಿಲಕ್ ವರ್ಮಾ (66, 80 ಎಸೆತ) ಅವರೂ ಅರ್ಧಶತಕಗಳನ್ನು ಬಾರಿಸಿ ಮೊತ್ತ ಬೆಳೆಸಿದರು.

ಅಫ್ಗಾನಿಸ್ತಾನ ತಂಡ ಆಡುವಾಗ ಮಳೆ ಮತ್ತೆ ಮತ್ತೆ ಸುರಿಯಿತು. ಹೀಗಾಗಿ ಗುರಿಯನ್ನು ಡಿಎಲ್‌ಎಸ್ ವಿಧಾನ ಬಳಸಿ 38 ಓವರುಗಳಲ್ಲಿ 294 ರನ್‌ಗಳಿಗೆ ಪರಿಷ್ಕೃತಗೊಳಿಸಲಾಯಿತು.

ನಾಯಕ ಇಮ್ರಾನ್ (ಅಜೇಯ 75, 70 ಎಸೆತ) ಮತ್ತು ಹಸನ್ ಐಸಾಖಿಲ್ (34, 29 ಎಸೆತ) ಅವರು ಅಫ್ಗನ್ ತಂಡ ಹಿಂದೆಬೀಳದಂತೆ ನೋಡಿಕೊಂಡರು. ತಂಡ 25.5 ಓವರುಗಳಲ್ಲಿ 2 ವಿಕೆಟ್‌ಗೆ 177 ರನ್ ಗಳಿಸಿದ್ದಾಗ ಮಳೆ ಮತ್ತೆ ಸುರಿಯತೊಡಗಿ ಪಂದ್ಯ ಮುಂದುವರಿಸಲಾಗಲಿಲ್ಲ. ಈ ವೇಳೆ ಅಫ್ಗಾನಿಸ್ತಾನ ತಂಡವು ಅಗತ್ಯಕ್ಕಿಂತ ನಾಲ್ಕು ರನ್ ಹೆಚ್ಚು ಗಳಿಸಿತ್ತು.

ವೈಭವ್ ಮಿಂಚಿನ ಆಟ: ಬ್ಯಾಟಿಂಗ್‌ಗೆ ಇಳಿಸಲ್ಪಟ್ಟ ಭಾರತ ತಂಡಕ್ಕೆ ಪ್ರಭಸಿಮ್ರನ್ ಮತ್ತು ವೈಭವ್ ಸೂರ್ಯವಂಶಿ ಮಿಂಚಿನ ಆರಂಭ ನೀಡಿ 7 ಓವರುಗಳಲ್ಲಿ 74 ರನ್ ಸೇರಿಸಿದ್ದರು. ಎಡಗೈ ಆಟಗಾರ ಸೂರ್ಯವಂಶಿ 22 ಎಸೆತಗಳಲ್ಲಿ 44 ರನ್ ಬಾರಿಸಿದ್ದು, ಇದರಲ್ಲಿ 9 ಬೌಂಡರಿಗಳಿದ್ದವು. ಒಂದೂ ಸಿಕ್ಸರ್ ಹೊಡೆಯದಿದ್ದರೂ ಅವರು 200ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸಿದ್ದು ವಿಶೇಷ. ಈ ಬುನಾದಿಯ ಮೇಲೆ ಋತುರಾಜ್, ತಿಲಕ್ ವರ್ಮಾ ಮತ್ತು ಸೂರ್ಯಾಂಶ್ ಶೆಡ್ಗೆ ರನ್‌ಸೌಧ ಕಟ್ಟಿದ್ದರು. ಸೂರ್ಯಾಂಶ್ ಶೆಡ್ಗೆ 27 ಎಸೆತಗಳಲ್ಲಿ 40 ರನ್ ಬಾರಿಸಿದರು.

ಸಂಕ್ಷಿಪ್ತ ಸ್ಕೋರು: ಭಾರತ 'ಎ': 49 ಓವರುಗಳಲ್ಲಿ 9 ವಿಕೆಟ್‌ಗೆ 349 (ಪ್ರಭಸಿಮ್ರನ್ ಸಿಂಗ್ 84, ವೈಭವ್ ಸೂರ್ಯವಂಶಿ 44, ಋತುರಾಜ್ ಗಾಯಕವಾಡ್ 66, ತಿಲಕ್ ವರ್ಮಾ 66, ಸೂರ್ಯಾಂಶ್ ಶೆಡ್ಗೆ 40; ಅಬ್ದುಲ್ಲಾ ಅಹಮದ್‌ಝೈ 68ಕ್ಕೆ5, ಫರ್ಮಾನುಲ್ಲಾ ಸಫಿ 85ಕ್ಕೆ3); ಅಫ್ಗಾನಿಸ್ತಾನ 'ಎ': 25.5 ಓವರುಗಳಲ್ಲಿ 2 ವಿಕೆಟ್‌ಗೆ 177 (ಇಮ್ರಾನ್ ಮೀರ್ ಔಟಾಗದೇ 75, ಬಶೀರ್ ಶಾ ಔಟಾಗದೇ 51) ಪಂದ್ಯದ ಆಟಗಾರ: ಇಮ್ರಾನ್.

ಇಮ್ರಾನ್ ಮೀರ್– ಬಶೀರ್ ಶಾ ಜೊತೆಯಾಟ ಎಕ್ಸ್ ಚಿತ್ರ

19 ವರ್ಷದೊಳಗಿನವರ ತಂಡಕ್ಕೆ ಅನ್ವಯ್

ನವದೆಹಲಿ (ಪಿಟಿಐ): ಭಾರತದ ಬ್ಯಾಟಿಂಗ್ ದಿಗ್ಗಜರಲ್ಲಿ ಒಬ್ಬರಾದ ರಾಹುಲ್ ದ್ರಾವಿಡ್ ಅವರ ಕಿರಿಯ ಪುತ್ರ ಅನ್ವಯ್ ದ್ರಾವಿಡ್ ಅವರನ್ನು ಶ್ರೀಲಂಕಾ ಪ್ರವಾಸ ಮಾಡಲಿರುವ ಭಾರತ 19 ವರ್ಷದೊಳಗಿನವರ ಏಕದಿನ ತಂಡಕ್ಕೆ ಆಯ್ಕೆ ಮಾಡಲಾಗಿದೆ.


ಅನ್ವಯ್ ದ್ರಾವಿಡ್

ಭಾರತ ತಂಡವು ಜುಲೈ 4ರಂದು ಶ್ರೀಲಂಕಾ ಪ್ರವಾಸ ಆರಂಭಿಸಲಿದೆ. ಮೂರು ಪಂದ್ಯಗಳ ಏಕದಿನ ಸರಣಿಗೆ ಮತ್ತು ಎರಡು ಬಹುದಿನಗಳ ಅಭ್ಯಾಸ ಪಂದ್ಯಗಳಿಗೆ ಭಾರತ ತಂಡಗಳನ್ನು ಬಿಸಿಸಿಐನ ಜೂನಿಯರ್ ಆಯ್ಕೆ ಸಮಿತಿ ಗುರುವಾರ ಪ್ರಕಟಿಸಿತು. 17 ವರ್ಷ ವಯಸ್ಸಿನ ಅನ್ವಯ್ ಮತ್ತು ರಜತ್ ಬಘೇಲ್ ಅವರು ಏಕದಿನ ತಂಡದಲ್ಲಿರುವ ಇಬ್ಬರು ವಿಕೆಟ್ ಕೀಪರ್‌ಗಳಾಗಿದ್ದಾರೆ.

ವೀನೂ ಮಂಕಡ್ ಟ್ರೋಫಿ ಟೂರ್ನಿಯಲ್ಲಿ ಕರ್ನಾಟಕ ತಂಡವನ್ನು ಮುನ್ನಡೆಸಿದ್ದ ಅನ್ವಯ್ 6 ಪಂದ್ಯಗಳಿಂದ ಅಜೇಯ 82 ರನ್ ಗರಿಷ್ಠ ಸೇರಿದಂತೆ 220 ರನ್ ಕಲೆಹಾಕಿದ್ದರು. ಕರ್ನಾಟಕ ಕ್ವಾರ್ಟರ್‌ಫೈನಲ್ ತಲುಪಿತ್ತು.

ಭಾರತ ಮಹಿಳಾ ತಂಡದಲ್ಲಿ ಕಶ್ವಿ

ಕರ್ನಾಟಕದ ಭರವಸೆಯ ಆಲ್‌ರೌಂಡರ್ ಕಶ್ವಿ ಕಂಡಿಕೊಪ್ಪ ಅವರು ಭಾರತ 19 ವರ್ಷದೊಳಗಿನ ಮಹಿಳಾ ಟಿ20 ಮತ್ತು ಏಕದಿನ ತಂಡಗಳೆರಡರಲ್ಲೂ ಸ್ಥಾನ ಪಡೆದಿದ್ದಾರೆ. ವಿಕೆಟ್ ಕೀಪರ್– ಬ್ಯಾಟರ್ ಭಾವಿಕಾ ಅಹಿರೆ ಅವರು ಎರಡೂ ತಂಡಗಳನ್ನು ಮುನ್ನಡೆಸಲಿದ್ದಾರೆ.

ಬೆಂಗಳೂರಿನಲ್ಲಿ ಅಫ್ಗಾನಿಸ್ತಾನ 19 ವರ್ಷದೊಳಗಿನವರ ತಂಡದ ವಿರುದ್ಧ ನಡೆದ ತ್ರಿಕೋನ ಸರಣಿಯಲ್ಲಿ ಅವರು ಭಾರತ ಬಿ ತಂಡಕ್ಕೆ ಆಡಿದ್ದರು. ಅನ್ವಯ್ ಅಣ್ಣ ಸಮಿತ್, 2024ರಲ್ಲಿ ಪ್ರವಾಸಿ ಆಸ್ಟ್ರೇಲಿಯಾ ವಿರುದ್ಧ 19 ವರ್ಷದೊಳಗಿನವರ ಸರಣಿಯಲ್ಲಿ ಭಾರತ ತಂಡಕ್ಕೆ ಆಯ್ಕೆಯಾಗಿದ್ದರು. ಆದರೆ ಗಾಯಾಳಾದ ಕಾರಣ ತಂಡದಲ್ಲಿ ಸ್ಥಾನ ಪಡೆದಿರಲಿಲ್ಲ.

ಎರಡೂ ಮಾದರಿಗಳಲ್ಲಿ ಯಶವರ್ಧನ್ ಸಿಂಗ್ ಚೌಹಾನ್ ಅವರು ಭಾರತ ತಂಡವನ್ನು ಮುನ್ನಡೆ ಸಲಿದ್ದಾರೆ. ಲಕ್ಷ್ಯ ರಾಯಚಂದಾನಿ ಉಪನಾಯಕರಾಗಿದ್ದಾರೆ.

ವಿಂಬಲ್ಡನ್ ಬಹುಮಾನ ಮೊತ್ತ ಏರಿಕೆ

ಲಂಡನ್ (ಎಎಫ್‌ಪಿ): ಪ್ರತಿಷ್ಠಿತ ವಿಂಬಲ್ಡನ್ ಟೆನಿಸ್ ಟೂರ್ನಿಯ ಬಹುಮಾನ ಮೊತ್ತವನ್ನು ಶೇ 20ರಷ್ಟು ಹೆಚ್ಚಿಸಲಾಗಿದ್ದು, ಈ ಮೊತ್ತ ದಾಖಲೆಯ ₹821 ಕೋಟಿ (64.2 ದಶಲಕ್ಷ ಪೌಂಡ್) ತಲುಪಿದೆ. ಕಳೆದ ಬಾರಿ ಬಹುಮಾನ ಮತ್ತ ₹684 ಕೋಟಿ ಇತ್ತು.

ಆಲ್ ಇಂಗ್ಲೆಂಡ್ ಕ್ಲಬ್ ಮುಖ್ಯಸ್ಥರು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಬಹುಮಾನ ಮೊತ್ತ ಹೆಚ್ಚಳವಾಗಿರುವುದನ್ನು ಪ್ರಕಟಿಸಿದರು. ಸಿಂಗಲ್ಸ್ ಚಾಂಪಿಯನ್ ಆಗುವ ಆಟಗಾರ ಮತ್ತು ಆಟಗಾರ್ತಿ ತಲಾ ₹46 ಕೋಟಿ ಬಹುಮಾನ ಹಣ ತಮ್ಮದಾಗಿಸಿಕೊಳ್ಳಲಿದ್ದಾರೆ.

2025ರಲ್ಲಿ ಇಟಲಿಯ ಯಾನಿಕ್ ಸಿನ್ನರ್ ಪುರುಷರ ಸಿಂಗಲ್ಸ್ ಮತ್ತು ಪೋಲೆಂಡ್‌ನ ಇಗಾ ಶ್ವಾಂಟೆಕ್ ಮಹಿಳಾ ಸಿಂಗಲ್ಸ್ ಚಾಂಪಿಯನ್ ಆಗಿದ್ದರು. ಈ ಬಾರಿಯ ಚಾಂಪಿಯನ್‌ಷಿಪ್ ಜೂನ್ 29ರಂದು ಆರಂಭವಾಗಲಿದೆ. ಮೊದಲ ಸುತ್ತಿನಲ್ಲಿ ಸೋತರೂ ಅಂಥ ಆಟಗಾರನಿಗೆ ₹1.02 ಕೋಟಿಯಷ್ಟು ಸಿಗಲಿದೆ.

ರೋಲ್ಯಾಂಡ್ ಗ್ಯಾರೋಸ್‌ನಲ್ಲಿ ಬಹುಮಾನ ಮೊತ್ತದಲ್ಲಿ ಶೇ 9.5 ರಷ್ಟು ಮಾತ್ರ ಏರಿಕೆ ಮಾಡಿದ್ದನ್ನು ಪ್ರತಿಭಟಿಸಿ ಆಟಗಾರರು ಪ್ರತಿಭಟನೆ ನಡೆಸಿದ್ದರು. ಹತಾಶರಾಗಿದ್ದ ಟೆನಿಸಿಗರು ಮಾಧ್ಯಮ ಚಟುವಟಿಕೆಯನ್ನು ಕೇವಲ 15 ನಿಮಿಷಗಳಿಗೆ ಸೀಮಿತಗೊಳಿಸಿದ್ದರು. ಟೂರ್ನಿಯ ಆದಾಯದಲ್ಲಿ ಶೇ 22ರಷ್ಟನ್ನು ಬಹುಮಾನ ಮೊತ್ತ ಏರಿಸಲು ಮೀಸಲಿಡಬೇಕೆಂದು ಆಟಗಾರರು ಒತ್ತಾಯಿಸಿದ್ದರು ಎನ್ನಲಾಗಿದೆ.

ವಿಂಬಲ್ಡನ್ ಸಿಇಒ ಸ್ಯಾಲಿ ಬೋಲ್ಟನ್ ಅವರು ಬಹುಮಾನ ನಿಧಿ ವಿಷಯ ಚರ್ಚಿಸಲು ಮೇ ತಿಂಗಳಲ್ಲಿ ರೋಲಂಡ್ ಗ್ಯಾರೋಸ್‌ನಲ್ಲಿ ಆಟಗಾರರ ಪ್ರತಿನಿಧಿಗಳಾದ ಲ್ಯಾರಿ ಸ್ಕಾಟ್ ಅವರನ್ನು ಭೇಟಿಯಾಗಿದ್ದರು.

16ರಿಂದ ಹೈದರಾಬಾದ್‌ನಲ್ಲಿ ರಗ್ಬಿ ಪ್ರೀಮಿಯರ್ ಲೀಗ್
ಬೆಂಗಳೂರು ಬ್ರೇವ್‌ಹಾರ್ಟ್ಸ್ ಕಣಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೈದರಾಬಾದ್‌ನ ಗಚ್ಚಿಬೌಲಿ ಕ್ರೀಡಾಂಗಣದಲ್ಲಿ ಇದೇ 16ರಿಂದ 28ರವರೆಗೆ ನಡೆಯುವ ಎರಡನೇ ಆವೃತ್ತಿಯ ರಗ್ಬಿ ಪ್ರೀಮಿಯರ್ ಲೀಗ್‌ನಲ್ಲಿ 'ಬೆಂಗಳೂರು ಬ್ರೇವ್‌ಹಾರ್ಟ್ಸ್' ತಂಡವು ಕಣಕ್ಕಿಳಿಯಲು ಸಜ್ಜಾಗಿದೆ.

'ಹದಿಮೂರು ದಿನ ನಡೆಯುವ ಟೂರ್ನಿಯಲ್ಲಿ ಆರು ಫ್ರ್ಯಾಂಚೈಸಿಗಳ ತಂಡಗಳು ಪ್ರಶಸ್ತಿಗಾಗಿ ಪೈಪೋಟಿ ನಡೆಸಲಿವೆ. ಒಲಿಂಪಿಕ್ ಪದಕ ವಿಜೇತರು, ಅಂತರರಾಷ್ಟ್ರೀಯ ತಾರೆಯರು ಮತ್ತು ದೇಶಿಯ ಆಟಗಾರರ ಸಂಯೋಜನೆಯ ಬೆಂಗಳೂರು ತಂಡವು ಉತ್ತಮ ಪ್ರದರ್ಶನ ನೀಡುವ ವಿಶ್ವಾಸವಿದೆ' ಎಂದು ಫ್ರ್ಯಾಂಚೈಸಿಯ ಸಹ ಮಾಲೀಕ ಸಂಜಿತ್ ಶೆಟ್ಟಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಬ್ರೇವ್‌ಹಾರ್ಟ್ಸ್ ಫ್ರ್ಯಾಂಚೈಸಿಯ ಮಾಲೀಕತ್ವವನ್ನು ರಂಜನ್ ಪೈ (ಮಣಿಪಾಲ ಗ್ರೂಪ್), ಭೂಪಿಂದರ್ ಸಿಂಗ್ (ಇನ್‌ಕ್ರೆಡ್ ಸ್ಥಾಪಕರು) ಮತ್ತು ಸಂಜಿತ್ ಶೆಟ್ಟಿ (ಸೋಹಂ ಇನ್‌ಫ್ರಾಸ್ಟ್ರಕ್ಚರ್ ಅಧ್ಯಕ್ಷ ಮತ್ತು ಮಿರರ್ ಸ್ಥಾಪಕರು) ಸಂಯುಕ್ತವಾಗಿ ಹೊಂದಿದ್ದಾರೆ. 2025ರ ಆವೃತ್ತಿಯಲ್ಲಿ ಬೆಂಗಳೂರು ತಂಡವು 12 ಪಂದ್ಯಗಳ ಪೈಕಿ ಐದರಲ್ಲಿ ಗೆಲುವು ಸಾಧಿಸಿ, ನಾಲ್ಕನೇ ಸ್ಥಾನದೊಂದಿಗೆ ಅಭಿಯಾನ ಮುಗಿಸಿತ್ತು.

'ಆಸ್ಟ್ರೇಲಿಯಾದ ಅನುಭವಿ ಆಟಗಾರ ಹೆನ್ರಿ ಹಚಿಸನ್ ಅವರು ಬೆಂಗಳೂರು ತಂಡವನ್ನು ಮುನ್ನಡೆಸುತ್ತಿದ್ದಾರೆ. ಒಂಬತ್ತು ವಿದೇಶಿ ಮತ್ತು ಐದು ದೇಶಿ ಆಟಗಾರರನ್ನು ಒಳಗೊಂಡ ತಂಡವು ಎಲ್ಲಾ ವಿಭಾಗಗಳಲ್ಲೂ ಬಲಿಷ್ಠವಾಗಿದೆ' ಎಂದು ಸಂಜಿತ್ ಹೇಳಿದರು.

ಬೆಂಗಳೂರು ಬ್ರೇವ್‌ಹಾರ್ಟ್ಸ್ ರಗ್ಬಿ ತಂಡದ ಆಟಗಾರ (ಎಡದಿಂದ) ಆಕಾಶ್ ಬಾಲ್ಮೀಕಿ, ಸ್ಟ್ರೆಂತ್ ಮತ್ತು ಕಂಡೀಷನಿಂಗ್ ಕೋಚ್ ಮ್ಯಾನುವೆಲ್ ಸಿಲೆರೊ (ಸ್ಪೇನ್), ಸಹ ಮಾಲೀಕ ಸಂಜಿತ್ ಶೆಟ್ಟಿ, ಕೋಚ್ ಫ್ರಾನ್ಸಿಸ್ಕೊ ಹರ್ನಂಡೆಜ್ (ಸ್ಪೇನ್), ನಾಯಕ ಹೆನ್ರಿ ಹಚಿಸನ್ (ಆಸ್ಟ್ರೇಲಿಯಾ), ನರೋಹಿ ಮೆಕ್‌ಗಾರ್ವಿ (ನ್ಯೂಜಿಲೆಂಡ್), ರೆಯಾನ್ ಆಪ್ಸ್ (ಇಂಗ್ಲೆಂಡ್), ಗಣೇಶ್ ಮಾಝಿ ಚಿತ್ರದಲ್ಲಿದ್ದಾರೆ

ರೋಚಕ ಪೈಪೋಟಿಯ ನಿರೀಕ್ಷೆ

ಮಹಿಳಾ ಟಿ20 ವಿಶ್ವಕಪ್: ಮೊದಲ ಪಂದ್ಯದಲ್ಲಿ ಇಂಗ್ಲೆಂಡ್–ಶ್ರೀಲಂಕಾ ಮುಖಾಮುಖಿ ಇಂದು

ಬರ್ಮಿಂಗ್‌ಹ್ಯಾಮ್ (ಪಿಟಿಐ): ಹಿಂದೆಂದಿಗಿಂತಲೂ ದೊಡ್ಡಮಟ್ಟದ ಸ್ಪರ್ಧೆ ಇರುವ ಐಸಿಸಿ ಟಿ20 ಮಹಿಳೆಯರ ವಿಶ್ವಕಪ್ ಟೂರ್ನಿಯು ಶುಕ್ರವಾರ ಆರಂಭವಾಗಲಿದೆ. ಆರು ಬಾರಿಯ ಚಾಂಪಿಯನ್ ಆಸ್ಟ್ರೇಲಿಯಾಕ್ಕೆ ಕಠಿಣ ಪೈಪೋಟಿಯೊಡ್ಡುವತ್ತ ಭಾರತ, ಇಂಗ್ಲೆಂಡ್ ಮತ್ತು ದಕ್ಷಿಣ ಆಫ್ರಿಕಾ ತಂಡಗಳು ಭರವಸೆ ಮೂಡಿಸಿವೆ.

ಹಾಲಿ ಚಾಂಪಿಯನ್ ನ್ಯೂಜಿಲೆಂಡ್ ತಂಡವು ಸತತ ಎರಡನೇ ಪ್ರಶಸ್ತಿ ಮೇಲೆ ಕಣ್ಣಿಟ್ಟಿದೆ. ಆದರೆ ಹೋದ ವರ್ಷ ಏಕದಿನ ವಿಶ್ವಕಪ್ ಜಯಿಸಿದ್ದ ಭಾರತ ತಂಡವು ಕಿವೀಸ್ ಮತ್ತು ಏಳನೇ ಕಿರೀಟದತ್ತ ಚಿತ್ತ ಇಟ್ಟಿರುವ ಆಸ್ಟ್ರೇಲಿಯಾ ತಂಡಗಳನ್ನು ಮಣಿಸಿ ವಿಜಯವೇದಿಕೆಯ ಮೇಲೆ ನಿಲ್ಲುವ ಛಲದಲ್ಲಿದೆ. ಆತಿಥೇಯ ಇಂಗ್ಲೆಂಡ್ ತವರಿನಂಗಳದ ಲಾಭವೆತ್ತಿ ಕೊಳ್ಳಲು ಸಿದ್ಧವಾಗಿದೆ. ಕಳೆದ ಮೂರು ಐಸಿಸಿ ಟೂರ್ನಿಗಳಲ್ಲಿ ಫೈನಲ್ ಪ್ರವೇಶಿಸಿದ್ದ ದಕ್ಷಿಣ ಆಫ್ರಿಕಾ ಕೂಡ ತನ್ನ ಸಾಮರ್ಥ್ಯ ಮೆರೆಯುವತ್ತ ಚಿತ್ತ ನೆಟ್ಟಿದೆ. ಈ ಸಲ 12 ತಂಡಗಳು ಕಣದಲ್ಲಿವೆ. ಐರ್ಲೆಂಡ್ ಮತ್ತು ನೆದರ್ಲೆಂಡ್ಸ್ ಕಣಕ್ಕಿಳಿಯಲಿವೆ.

ರೋಚಕ ಸ್ಪರ್ಧೆಯ ನಿರೀಕ್ಷೆ ಹುಟ್ಟುಹಾಕಿರುವ ಈ ಟೂರ್ನಿಯ ಮೊದಲ ಪಂದ್ಯವು ಶುಕ್ರವಾರ ನಡೆಯಲಿದ್ದು ಅತಿಥೇಯ ಇಂಗ್ಲೆಂಡ್ ಮತ್ತು ಶ್ರೀಲಂಕಾ ಮುಖಾಮುಖಿಯಾಗಲಿವೆ. 2009ರಲ್ಲಿ ನಡೆದಿದ್ದ ಚೊಚ್ಚಲ ಟಿ20 ಮಹಿಳಾ ಕ್ರಿಕೆಟ್ ಟೂರ್ನಿಯಲ್ಲಿ ಇಂಗ್ಲೆಂಡ್ ಜಯಿಸಿತ್ತು. ಆಗಲೂ ಆತಿಥ್ಯ ವಹಿಸಿತ್ತು. ಅದರ ನಂತರ ಮತ್ತೆ ಪ್ರಶಸ್ತಿ ಗೆದ್ದಿಲ್ಲ.

ಇಂಗ್ಲೆಂಡ್ ತಂಡದ ಅಲಿಸ್ ಕ್ಯಾಪ್ಸಿ, ಟಿಲಿ ಕಾರ್ಟೀನ್ ಕೊಲ್‌ಮನ್ ಮತ್ತು ಫ್ರೆಯಾ ಕೆಂಪ್ ಅವರ ಮೇಲೆ ನಿರೀಕ್ಷೆಯ ಭಾರ ಇದೆ. ಲಂಕಾ ತಂಡದಲ್ಲಿರುವ ಪ್ರತಿಭಾನ್ವಿತ ಆಟಗಾರ್ತಿಯರಾದ ವಿಷ್ಮಿ ಗುಣರತ್ನೆ, ಇಮೇಷಾ ದುಲಾನಿ, ಕವಿಶಾ ದಿಲ್ಹಾರಿ ಮತ್ತು ಕಾವ್ಯ ಕಾವಿಂದಿ ಅವರು ಇಂಗ್ಲೆಂಡ್ ಎದುರು ಮಿಂಚಬಲ್ಲ ಸಮರ್ಥರು. ನಾಯಕಿ ಚಾಮರಿ ಅಟಪಟ್ಟು ಅವರು ಅನುಭವಿ ಆಟಗಾರ್ತಿಯಾಗಿದ್ದಾರೆ. ಅಚ್ಚರಿ ಫಲಿತಾಂಶವನ್ನು ಕೊಡಬಲ್ಲ ಸಾಮರ್ಥ್ಯ ಈ ತಂಡಕ್ಕೆ ಇದೆ.

ತಂಡಗಳು: ಇಂಗ್ಲೆಂಡ್: ನ್ಯಾಟ್ ಶಿವರ್ ಬ್ರಂಟ್ (ನಾಯಕಿ), ಲಾರೆನ್ ಬೆಲ್, ಅಲಿಸ್ ಕ್ಯಾಪ್ಸಿ, ಟಿಲಿ ಕಾರ್ಟೀನ್ ಕೊಲ್ಮನ್, ಚಾರ್ಲೀ ಡೀನ್, ಸೋಫಿಯಾ ಡಂಕ್ಲಿ, ಸೋಫಿ ಎಕ್ಲೆಲ್‌ಸ್ಟೋನ್, ಲಾರೆನ್ ಫೈಲರ್, ಡ್ಯಾನಿ ಗಿಬ್ಸನ್ ಅಮಿ ಜೋನ್ಸ್, ಫ್ರೆಯಾ ಕೆಂಪ್, ಹೀಥರ್ ನೈಟ್, ಲಿನ್ಸೆ ಸ್ಮಿತ್, ಇಸ್ಸೆ ವಾಂಗ್, ಡ್ಯಾನಿ ವೈಟ್ ಹಾಜ್.

ಶ್ರೀಲಂಕಾ: ಚಮರಿ ಅಟಪಟ್ಟು (ನಾಯಕಿ), ಹಾಸಿನಿ ಪೆರೇರಾ, ವಿಷ್ಮಿ ಗುಣರತ್ನೆ, ಹರ್ಷಿತಾ ಸಮರವಿಕ್ರಮ, ಇಮೆಶಾ ದುಲಾನಿ, ನೀಲಾಕ್ಷಿಕಾ ಸಿಲ್ವಾ, ಕವೀಶಾ ದಿಲ್ಹರಿ, ಹನ್ಸಿಮಾ ಕರುಣಾರತ್ನೆ, ಕೌಶಿನಿ ನುತ್ಯಾಂಗನ, ಸೌಗಂಧಿಕಾ ದಾಸನಾಯಕಾ, ನಿಮಾಶಾ ಮಧುಶಾನಿ, ಕಾವ್ಯಾ ಕಾವಿಂದಿ, ಮಾಲ್ಕಿ ಮದರಾ, ಮಿಥಾಲಿ ಆಯೋಧ್ಯಾ, ಚೇತನಾ ವಿಮುಕ್ತಿ.

ಐಸಿಸಿ
ಮಹಿಳೆಯರ
ಟಿ20 ವಿಶ್ವಕಪ್ 2026

ಟೂರ್ನಿಯಲ್ಲಿರುವ ತಂಡಗಳು	
ಎ ಗುಂಪು	ಬಿ ಗುಂಪು
ಆಸ್ಟ್ರೇಲಿಯಾ	ಇಂಗ್ಲೆಂಡ್
ಬಾಂಗ್ಲಾದೇಶ	ಐರ್ಲೆಂಡ್
ಭಾರತ	ನ್ಯೂಜಿಲೆಂಡ್
ನೆದರ್ಲೆಂಡ್ಸ್	ಸ್ಕಾಟ್ಲೆಂಡ್
ಪಾಕಿಸ್ತಾನ	ಶ್ರೀಲಂಕಾ
ದಕ್ಷಿಣ ಆಫ್ರಿಕಾ	ವೆಸ್ಟ್ ಇಂಡೀಸ್

ಶುಕ್ರವಾರ ಆರಂಭವಾಗುವ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಪಾಲ್ಗೊಳ್ಳುವ 12 ತಂಡಗಳ ನಾಯಕಿಯರು. ಶ್ರೀಲಂಕಾದ ಚಮರಿ ಅಟಪಟ್ಟು, ವೆಸ್ಟ್ ಇಂಡೀಸ್‌ನ ಹೇಲಿ ಮ್ಯಾಥ್ಯೂಸ್, ಬಾಂಗ್ಲಾದೇಶದ ನಿಗರ್ ಸುಲ್ತಾನಾ, ನ್ಯೂಜಿಲೆಂಡ್‌ನ ಅಮೆಲಿಯಾ ಕೆರ್, ಐರ್ಲೆಂಡ್‌ನ ಗ್ಯಾಬಿ ಲೂಯಿಸ್, ಆಸ್ಟ್ರೇಲಿಯಾದ ಸೋಫಿ ಮಾಲಿನೆ, ಪಾಕಿಸ್ತಾನದ ಫಾತಿಮಾ ಸನಾ, ಭಾರತದ ಹರ್ಮನ್‌ಪ್ರೀತ್ ಕೌರ್, ಇಂಗ್ಲೆಂಡ್‌ನ ನ್ಯಾಟ್ ಶಿವರ್ ಬ್ರಂಟ್, ಸ್ಕಾಟ್ಲೆಂಡ್‌ನ ಕ್ಯಾಥರಿನ್ ಬ್ರೈಸ್, ದಕ್ಷಿಣ ಆಫ್ರಿಕಾದ ಲಾರಾ ವೋಲ್ವಾರ್ಟ್ ಮತ್ತು ನೆದರ್ಲೆಂಡ್ಸ್‌ನ ಬಾಬೆಟ್ ಡಿ ಲೀಡ್ ಚಿತ್ರದಲ್ಲಿದ್ದಾರೆ ಐಸಿಸಿ ಎಕ್ಸ್ ಚಿತ್ರ

ಶಫಾಲಿ ವರ್ಮಾ

ವಿಶ್ವಕಪ್ ಮೈಲಿಗಲ್ಲುಗಳು

1216 ನ್ಯೂಜಿಲೆಂಡ್‌ನ ಸೂಜಿ ಬೇಟ್ಸ್ ಅವರು ವಿಶ್ವಕಪ್‌ನ 42 ಇನಿಂಗ್ಸ್‌ಗಳಲ್ಲಿ ಗಳಿಸಿದ ರನ್. ವೆಸ್ಟ್ ಇಂಡೀಸ್‌ನ ಸ್ಟೆಫಾನಿ ಟೇಲರ್ (1014) ನಂತರದ ಸ್ಥಾನದಲ್ಲಿದ್ದಾರೆ

48 ಆಸ್ಟ್ರೇಲಿಯಾದ ಬೌಲರ್ ಮೇಗನ್ ಶುಟ್ ವಿಶ್ವಕಪ್ ಟೂರ್ನಿಯ 29 ಇನಿಂಗ್ಸ್‌ಗಳಲ್ಲಿ ಗಳಿಸಿದ ವಿಕೆಟ್‌ಗಳು. ದಕ್ಷಿಣ ಆಫ್ರಿಕಾದ ಶಬ್ನಿಮ್ ಇಸ್ಮಾಯಿಲ್ (43) ಎರಡನೇ ಸ್ಥಾನದಲ್ಲಿದ್ದಾರೆ

ಟಿ20 ವಿಶ್ವಕಪ್ ನಡೆಯುವ ತಾಣಗಳು

ತಾಣ	ಆಸನ ಸಾಮರ್ಥ್ಯ
ಎಜ್‌ಬಾಸ್ಟನ್	25,000
ಬ್ರಿಸ್ಟಲ್	17,500
ಲೀಡ್ಸ್	18,350
ಲಾರ್ಡ್ಸ್	31,100
ದಿ ಓವಲ್	27,500
ಮ್ಯಾಂಚೆಸ್ಟರ್	26,000
ಸೌತಾಂಪ್ಟನ್	25,000

ಟಿ20 ಮಹಿಳಾ ಟಿ20 ವಿಶ್ವಕಪ್ ವಿಜೇತರು

ವರ್ಷ	ವಿಜೇತರು	ರನ್ನರ್ಸ್ ಅಪ್
2009	ಇಂಗ್ಲೆಂಡ್	ನ್ಯೂಜಿಲೆಂಡ್
2010	ಆಸ್ಟ್ರೇಲಿಯಾ	ನ್ಯೂಜಿಲೆಂಡ್
2012	ಆಸ್ಟ್ರೇಲಿಯಾ	ಇಂಗ್ಲೆಂಡ್
2014	ಆಸ್ಟ್ರೇಲಿಯಾ	ಇಂಗ್ಲೆಂಡ್
2016	ವೆಸ್ಟ್ ಇಂಡೀಸ್	ಆಸ್ಟ್ರೇಲಿಯಾ
2018	ಆಸ್ಟ್ರೇಲಿಯಾ	ಇಂಗ್ಲೆಂಡ್
2020	ಆಸ್ಟ್ರೇಲಿಯಾ	ಭಾರತ
2023	ಆಸ್ಟ್ರೇಲಿಯಾ	ದಕ್ಷಿಣ ಆಫ್ರಿಕಾ
2024	ನ್ಯೂಜಿಲೆಂಡ್	ದಕ್ಷಿಣ ಆಫ್ರಿಕಾ

ಭಾರತ ತಂಡದ ವೇಳಾಪಟ್ಟಿ

ದಿನಾಂಕ	ಎದುರಾಳಿ	ತಾಣ	ಸಮಯ
ಜೂನ್ 14	ಪಾಕಿಸ್ತಾನ	ಎಜ್‌ಬಾಸ್ಟನ್	ಸಂಜೆ 7
ಜೂನ್ 17	ನೆದರ್ಲೆಂಡ್ಸ್	ಲೀಡ್ಸ್	ಸಂಜೆ 7
ಜೂನ್ 21	ದಕ್ಷಿಣ ಆಫ್ರಿಕಾ	ಮ್ಯಾಂಚೆಸ್ಟರ್	ಸಂಜೆ 7
ಜೂನ್ 25	ಬಾಂಗ್ಲಾದೇಶ	ಮ್ಯಾಂಚೆಸ್ಟರ್	ಸಂಜೆ 7
ಜೂನ್ 28	ಆಸ್ಟ್ರೇಲಿಯಾ	ಲಾರ್ಡ್ಸ್	ಸಂಜೆ 7

ಇಂದಿನ ಪಂದ್ಯ

ಇಂಗ್ಲೆಂಡ್ V/s ಶ್ರೀಲಂಕಾ
ಪಂದ್ಯ ಆರಂಭ: ರಾತ್ರಿ 11
ತಾಣ: ಎಜ್‌ಬಾಸ್ಟನ್
ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್

ಆಸ್ಟ್ರೇಲಿಯಾ ಟಿ20 ತಂಡದಲ್ಲಿ ಭಾರತ ಸಂಜಾತ ನಿಖಿಲ್

ಸಿಡ್ನಿ (ಪಿಟಿಐ): ಇಲ್ಲಿನ ನಿವಾಸಿ, ಸ್ಪಿನ್ ಬೌಲಿಂಗ್ ಆಲ್‌ರೌಂಡರ್ ನಿಖಿಲ್ ಚೌಧರಿ ಅವರು ಬಾಂಗ್ಲಾದೇಶ ವಿರುದ್ಧ ಸರಣಿ ಆಡಲಿರುವ ಆಸ್ಟ್ರೇಲಿಯಾ ಟಿ20 ಕ್ರಿಕೆಟ್ ತಂಡಕ್ಕೆ ಆಯ್ಕೆಯಾಗಿದ್ದಾರೆ. ವಿಶೇಷವೆಂದರೆ ಆಸ್ಟ್ರೇಲಿಯಾ ತಂಡಕ್ಕೆ ಅವರು ಆರು ದಶಕಗಳಲ್ಲಿ ಆಯ್ಕೆಯಾದ ಭಾರತ ಸಂಜಾತ ಮೊದಲ ಆಟಗಾರ ಎನಿಸಿದ್ದಾರೆ.

ಮೂರು ಪಂದ್ಯಗಳ ಟಿ20 ಸರಣಿ ಛತ್ತೊಗ್ರಾಮ್‌ನಲ್ಲಿ 17 ರಿಂದ 21ರ ಅವಧಿಯಲ್ಲಿ ನಡೆಯಲಿದೆ. ನಿಖಿಲ್ ಅವರು ಐಪಿಎಲ್‌ನಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡದಲ್ಲಿದ್ದರು.

ಆಸ್ಟ್ರೇಲಿಯಾ ತಂಡದಲ್ಲಿ ಗುರಿಂದರ್ ಸಂಧು ಮತ್ತು ತನ್ವೀರ್ ಸಂಘಾ ಅವರಂತಹ ಭಾರತ ಮೂಲದ ಆಟಗಾರರು ಅಂತರ ರಾಷ್ಟ್ರೀಯ ಪಂದ್ಯ ಆಡಿದ್ದಾರೆ. ಆದರೆ ಭಾರತದಲ್ಲಿ ಜನಿಸಿದ ಆಟಗಾರನೊಬ್ಬ ಆಡುತ್ತಿರುವುದು ಆರು ದಶಕಗಳಲ್ಲಿ ಇದೇ ಮೊದಲು. 1964ರ ಕೋಲ್ಕತ್ತ ಟೆಸ್ಟ್‌ನಲ್ಲಿ ಕಾಂಗರೂ ಪಡೆಯಲ್ಲಿದ್ದ ಲೆಗ್‌ಸ್ಪಿನ್ನರ್ ರೆಕ್ಸ್ ಸೆಲ್ಲರ್ಸ್ ಅವರು ಗುಜರಾತ್‌ನಲ್ಲಿ ಜನಿಸಿದ್ದರು.

ದೆಹಲಿಯಲ್ಲಿ ಜನಿಸಿದ 30 ವರ್ಷ ವಯಸ್ಸಿನ ಚೌಧರಿ ಅವರು ಇನ್ನೂ ಆಸ್ಟ್ರೇಲಿಯಾದ ಪೌರತ್ವ ಪಡೆದಿಲ್ಲ. ಆದರೆ ಸಿಡ್ನಿಯ ಕಾಯಂ ನಿವಾಸಿಯಾಗಿರುವ ಕಾರಣ ಮತ್ತು ತಂಡಕ್ಕೆ ಆಡಲು ಬೇಕಾದ ಅರ್ಹತೆಯನ್ನು ಸಂಪಾದಿಸಿದ್ದು ಅವರಿಗೆ ಅವಕಾಶದ ಬಾಗಿಲು ತೆರೆಯಿತು.



BANGALORE: Indiranagar: 283, 100 Feet Road, HAL 2nd Stage, Ph: 8951914621 | Jayanagar: 3rd Block, 11th Main Road, Ph: 8951914620 | Malleshwaram: 116/5, 11th Cross, Margosa Road, Ph: 8049703080 | Banashankari 3rd stage: 298, 7th Block, 100ft Ring Road, Ph: 8904431212 | HSR Layout: No. 818, 27th Main Road, 1st Sector, Ph: 9108924286 | Kammanahalli: 401/B, Kammanahalli Main Road, HRBR Layout 2nd Block, Near Tanishq Showroom, Ph: 8046014779 | Orion Mall: 116, 2nd Floor, Dr. Rajkumar Road, Ph: 6360703593 | Phoenix Mall of Asia: S-10, Second Floor, Ph: 8068572691 | Sarjapur: No. 60, Plot No 1, Opp Wipro Gate, Ph: 9591934592 | Phoenix Market City: G – 28, Lower Gr. Floor, Mahadevpura, Nr, Krishnarajapura, Ph: 6366944404 | HOSUR: Plot No. 20 (P), Electrical and Electronic Estate, Near Anand Bhavan Hotel, Ph 9884512789

₹10,000^ ವರೆಗೆ ತತ್‌ಕ್ಷಣದ ರಿಯಾಯಿತಿ Powered by pine labs
ROAD SIDE ASSISTANCE ಉಚಿತ 1 ವರ್ಷ**
Hero GoodLife Stand a chance to win Silver Coins and many more assured benefits*
Hero MotoCorp Ltd. Regd. Office: The Grand Plaza, Plot No.2, Nelson Mandela Road, Vasant Kunj Phase - II, New Delhi - 110070, India. | CIN: L35911DL1984PLC017354 | For further information, contact your nearest Hero MotoCorp authorised outlet or visit us on www.HeroMotoCorp.com. World's no.1 disclaimer - Highest sales for any 2 Wheeler Corporate Entity in the world for Calendar Year 2025 Data source: DNA Consult & Advisory's report Assessment of Global Two Wheelers Market(CY25). Accessories and features shown may not be a part of standard fitment. Always wear a helmet while riding a two-wheeler. ^Finance offer is at the sole discretion of the financier, subject to its respective T&Cs. Available at select dealerships. **Online booking offer. *Limited period offer, T&C Apply. #Ex-showroom price of Glamour X Drum variant in Karnataka.
TOLL FREE NO. 1800 266 0018
Authorised Dealers: BENGALURU - LALBAGH ROAD: PRAKASH HERO - PH: 9289922117. PEENYA: SAI HERO - PH: 9289922830. BYATARAYANAPURA: BIMAL HERO - PH: 9289922863. HOSUR ROAD: RT KRISHNA HERO - PH: 9289923177. BANASHANKARI: SAI HERO - PH: 9289922476. RAJAJI NAGAR: MAX HERO - PH: 9289923023. BANASWADI: BHAGATH HERO - PH: 9289922738. MAGADI ROAD: POORNA HERO - PH: 9289923212. MARATHALLI: VAAYURATHA HERO - PH: 9289923811. KAMAKSHIPALYA: POORNA MOTORS – PH: 9606922534. MAHALAKSHMI LAYOUT : MAX MOTORS 8861748886. JP NAGAR: SAI HERO, PH: 99002 36280. KANAKPURA ROAD: SAI HERO - 8904677394. HOSKOTE: BHAGATH HERO - PH: 8884600051. K R PURAM: BHAGATH HERO - PH: 7829488706. JIGANI: RT KRISHNA HERO – PH: 9482788355. RT NAGAR: BIMAL HERO 9535327710. TUMKUR: SAI HERO - PH: 9289922986. B.H.ROAD – SAI HERO, PH. 7022752841. KUNIGAL: SAI HERO - PH: 7022752858. TIPTUR: SAI HERO PH. 9164840456. CHIKKABALLAPUR: MANJUNATH HERO - PH: 9821751332. KOLAR: SAI BALAJI HERO PH. 9821745024. DODDABALLAPURA: BIMAL HERO 9742202125. Associate Dealer: BELATHUR - 9902649569. MADIWALA - 9731660639. BANASHANKARI 3RD STAGE - 9513353864. BANNERGHATTA ROAD - 9845397222. KENGERI - 9739275523. YELAHANKA - 9341025589. MYSORE ROAD: 9611997733. DEVANAHALLI - 9964560599. KANAKAPURA - 9880212346. WHITEFIELD - 9741646466 . BAGEPALLI - 282828. SRINIVASPUR - 9738504002. SIDLAGHATTA - 254827. NELAMANGALA - 27723395. PAVAGADA - 9740324639. MADHUGIRI - 9972278989. VIJAYAPURA: 9449619920. SIRA: 9448417393. CHANDAPURA: 9481329064. VIDYARANYAPURA: 9606934533. MAGADI: 9482090890. GOTTIGERE: 81976 78979. Also Available at: DUNNASANDRA: 8310166369. HSR LAYOUT: 7428893265. MATHIKERE: 9035027951. DOMLUR: 7353919910- J.P.NAGAR: 9035024274. RT NAGAR: 9535327710. ATTIBELE: 8050609104. B NARAYANAPURA: 9945472149. VARTHUR: 9900877227. PAPAREDDYPALYA: 9916678309. ANEKAL: 9739519252. KONANKUNTE: 9886122251. SARJAPUR MAIN ROAD: 8762860999. BIDADI: 9844767719. RAMANAGARA: 9663399909. CHIKKANAYAKANAHALLI: 9880807399. TURUVEKERE: 9448403205. KORATAGERE: 9731713711. PERESANDRA: 9901502049. For Bulk deals/Corporate purchase - "bangalore@heromotocorp.com" & "kiran.kumart@heromotocorp.com For Buy/Sell/Exchange Old any Vehicle contact VV PURAM, Bengaluru Olety Sai Hero Sure: 98450 74491.
FCB INTERFACE/8273/JUNE26/KANNADA